ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗೆದ್ದು ಬೀಗಿದ ಆರ್‌ಸಿಬಿ

ಚೆನ್ನೈ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ 50 ರನ್ ಅಂತರದ ಭರ್ಜರಿ ಗೆಲುವು ದಾಖಲಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ್ದ ಆರ್‌ಸಿಬಿ 196 ರನ್‌ಗಳನ್ನು ಪೇರಿಸಿತ್ತು, ಈ ಗುರಿ ಬೆನ್ನಟ್ಟಿದ ಚೆನ್ನೈ 20 ಓವರ್‌ಗಳಲ್ಲಿ ಎಂಟು ವಿಕೆಟ್ ನಷ್ಟಕ್ಕೆ 146 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಸೊಂಪಾದ ಪುಟಗಳು

2026ರಲ್ಲಿ ನಕ್ಸಲಿಸಂಗೆ ಟಾಟಾ ಬೈ ಬೈ...
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ಫಲಗಳ ರಾಜ ಮಾವು, ಆದರೆ ಅವನು ತರದಿರಲಿ ನೋವು
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ. ಸಾಧನಾ ಶ್ರೀ 7

ದಾರಿದೀಪೋಕ್ತಿ

ಜೀವನದಲ್ಲಿ ನೀವು ಕಲಿಯುವ ಪ್ರತಿಯೊಂದು ಪಾಠಕ್ಕೂ ಸಾಕಷ್ಟು ಬೆಲೆ ತೆತ್ತಿರುತ್ತೀರಿ. ಯಾರಾದರೂ 'ನಾನು ಜೀವನದಲ್ಲಿ ಸಾಕಷ್ಟು ಪಾಠ ಕಲಿತಿದ್ದೇನೆ' ಎಂದು ಹೇಳಿದರೆ, ಅವರು ಸಾಕಷ್ಟು ಬೆಲೆ ತೆತ್ತಿದ್ದಾರೆ ಎಂದರ್ಥ. ಯಾವ ಜೀವನ ಪಾಠವೂ ಉಚಿತವಲ್ಲ. ಬೇರೆಯವರ ಜೀವನ ಪಾಠದಿಂದ ಕಲಿಯುವುದು ಉತ್ತಮ.

ವಕ್ರತುಂಡೋಕ್ತಿ

ಕೆಲವರು ಪ್ರತಿಯೊಂದನ್ನೂ ಚಿಕಿತ್ಸಕ ಬುದ್ಧಿಯಿಂದ ಅಳೆಯುತ್ತಾರೆ. ತಮ್ಮ ಮಾತಿಗೆ ಬೆಲೆ ಇಲ್ಲವೆಂಬುದೂ ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ.

15 ನಿಮಿಷಗಳ ಅಂತರದಲ್ಲಿ ಎರಡು ಬಾರಿ ಭೂಕಂಪದಲ್ಲಿ ರಿಕ್ಟರ್ ಮಾಪಕದಲ್ಲಿ 7.2 ರಿಂದ 7.7ರ ತೀವ್ರತೆ ದಾಖಲು
ಮ್ಯಾನ್ಮಾರ್‌ನಲ್ಲಿ 144, ಬ್ಯಾಂಕಾಕ್‌ನಲ್ಲಿ 25 ಮಂದಿ ಸಾವು

ಭೂಕಂಪಕ್ಕೆ ತತ್ತರಿಸಿದ ಮ್ಯಾನ್ಮಾರ್, ಥಾಯ್ಲೆಂಡ್

ದೆಹಲಿ: ಮ್ಯಾನ್ಮಾರ್ ಮತ್ತು ಥಾಯ್ಲೆಂಡ್‌ನಲ್ಲಿ ಶುಕ್ರವಾರ ಭಾರಿ ಭೂಕಂಪನ ಸಂಭವಿಸಿದೆ. ಮ್ಯಾನ್ಮಾರ್‌ನಲ್ಲಿ 144ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, 700ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಥಾಯ್ಲೆಂಡ್‌ನಲ್ಲಿ 25ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 43 ಜನರು ಕಾಣೆ ಯಾಗಿದ್ದಾರೆ.

15 ನಿಮಿಷಗಳ ಅಂತರದಲ್ಲಿ ಸತತ 2 ಬಾರಿ ಭೂಮಿ ಕಂಪಿಸಿದ್ದು, ರಿಕ್ಟರ್ ಮಾಪಕದಲ್ಲಿ 7.2 ರಿಂದ 7.7 ರ ತೀವ್ರತೆ ದಾಖಲಾಗಿದೆ. ಭೂಕಂಪದ ಕೇಂದ್ರಬಿಂದು ಮ್ಯಾನ್ಮಾರ್‌ನ ಸಾಗೈಂಗ್ ಪ್ರದೇಶ. ಇದು ಭೂಮಿಯಿಂದ ಸುಮಾರು 10 ಕಿಲೋಮೀಟರ್ ಕೆಳಗೆ ಇದೆ. ಭೂಕಂಪದ ತೀವ್ರತೆಗೆ ಬಹುಮಹಡಿ ಕಟ್ಟಡಗಳು ಧರೆಗುರುಳಿದ್ದು, ಜನರು ಭಯಭೀತ ರಾಗಿ ಚೀರಾಡಿ ಓಡಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಕೆಲವೆಡೆ ಕಟ್ಟಡ ಕುಸಿದು ಬೀಳುತ್ತಿರುವುದು ಕಂಡುಬಂದರೆ, ಇನ್ನು ಕೆಲವೆಡೆ ಈಜುಕೊಳದ ನೀರು ಸಮುದ್ರದ ಅಲೆಗಳಂತೆ ಚಲಿಸುತ್ತಿರುವುದು ಕಂಡುಬಂದಿದೆ. ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದ ತೀವ್ರತೆಯು ನೆರೆಯ ರಾಷ್ಟ್ರಗಳಾದ ಬಾಂಗ್ಲಾ ದೇಶ, ಚೀನಾ, ಲಾವೋಸ್ ಮತ್ತು ಥಾಯ್ಲೆಂಡ್ ಹಾಗೂ ಭಾರತಕ್ಕೂ ಮುಟ್ಟಿದೆ. ಮ್ಯಾನ್ಮಾರ್ ಸರಕಾರ ತುರ್ತು ಪರಿಸ್ಥಿತಿ ಘೋಷಿಸಿದೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಕನ್ನಡಿಗರು ಸೇಫ್
ಭೂಕಂಪ ಸಂಭವಿಸಿದ ವೇಳೆ ಬ್ಯಾಂಕಾಕ್‌ನಲ್ಲಿದ್ದ 300ಕ್ಕೂ ಹೆಚ್ಚು ಕನ್ನಡಿಗರಿಗೆ ಯಾವುದೇ ಅಪಾಯವಾಗಿಲ್ಲ ಎಂದು ಹೇಳಲಾಗಿದೆ. ಇವರಲ್ಲಿ ಬೆಂಗಳೂರಿನ 50, ಹಾವೇರಿಯ 22 ಮಂದಿ ಇದ್ದಾರೆ ಎನ್ನಲಾಗಿದೆ.

ಭಾರತದಲ್ಲೂ ಭೂಕಂಪ: ಥಾಯ್ಲೆಂಡ್, ಮ್ಯಾನ್ಮಾರ್‌ನಲ್ಲಿ ಭೂಕಂಪನ ಸಂಭವಿಸಿ ದುರಂತಗಳು ನಡೆಯುತ್ತಿದ್ದಂತೆ ಇತ್ತ ಭಾರತದ ದೆಹಲಿ–ಎನ್‌ಸಿಆರ್ ಪ್ರದೇಶ, ಕೋಲ್ಕತ್ತ, ಇಂಫಾಲ್‌ನಲ್ಲೂ ಶುಕ್ರವಾರ ಮಧ್ಯಾಹ್ನ ಬಲವಾದ ಕಂಪನದ ಅನುಭವವಾಗಿದೆ. ಕಂಪನದಿಂದ ಜನರು ಭಯಭೀತರಾಗಿ ಮನೆಗಳಿಂದ ಹೊರಗೆ ಓಡಿಬಂದಿದ್ದಾರೆ. ಈ ಭೂಕಂಪದ ಪರಿಣಾಮಗಳು ಮೇಘಾಲಯ, ಅಸ್ಸಾಂ ಮತ್ತು ನಾಗಾಲ್ಯಾಂಡ್‌ಗಳಿಗೂ ತಟ್ಟಿದೆ.

ಬಾಂಗ್ಲಾದಲ್ಲೂ ನಡುಗಿದ ಭೂಮಿ: ಬಾಂಗ್ಲಾದೇಶದ ಢಾಕಾ ಮತ್ತು ಚಟ್ಟೋಗ್ರಾಮ ಸೇರಿದಂತೆ ವಿವಿಧ ಭಾಗಗಳಲ್ಲೂ ಶುಕ್ರವಾರ ಪ್ರಬಲ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ ತೀವ್ರತೆ ಪ್ರಮಾಣ 7.3ರಷ್ಟು ದಾಖಲಾಗಿದೆ. ಆದರೆ, ಸಾವುನೋವು ಹಾಗೂ ಆಸ್ತಿಪಾಸ್ತಿ ಹಾನಿಯಾದ ಕುರಿತು ಯಾವುದೇ ವರದಿಯಾಗಿಲ್ಲ.

ಭೂಕಂಪನದಿಂದಾಗಿ ಮ್ಯಾನ್ಮಾರ್‌ನಲ್ಲಿ ಕಟ್ಟಡವೊಂದು ಕುಸಿದಿರುವುದು.

ಸಹಾಯವಾಣಿ
+66 618819218
ಮ್ಯಾನ್ಮಾರ್‌ನಲ್ಲಿರುವ ಭಾರತೀಯರಿಗಾಗಿ ಅಲ್ಲಿರುವ ಭಾರತೀಯ ಧೂತಾವಾಸ ಕಚೇರಿಯು ಸಹಾಯವಾಣಿ ಸಂಖ್ಯೆಗಳನ್ನು ಬಿಡುಗಡೆ ಮಾಡಿದೆ. ಸಹಾಯಕ್ಕಾಗಿ +66 618819218ಗೆ ಸಂಪರ್ಕಿಸುವಂತೆ ಕೋರಲಾಗಿದೆ.

ನೆರವಿಗೆ ಭಾರತ ಸಿದ್ಧ: ಮೋದಿ ಅಭಯ

ದೆಹಲಿ: ಮ್ಯಾನ್ಮಾರ್ ಮತ್ತು ಥಾಯ್ಲೆಂಡ್‌ನಲ್ಲಿ ಸಂಭವಿಸಿದ ಭೀಕರ ಭೂಕಂಪಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ವ್ಯಕ್ತ ಪಡಿಸಿದ್ದು, ಭಾರತ ಎಲ್ಲ ರೀತಿಯ ನೆರವು ನೀಡಲು ಸಿದ್ಧವಿದೆ ಎಂದು ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಮ್ಯಾನ್ಮಾರ್ ಮತ್ತು ಥಾಯ್ಲೆಂಡ್‌ನಲ್ಲಿ ಸಂಭವಿಸಿರುವ ಭೂಕಂಪದಲ್ಲಿ ಎಲ್ಲರೂ ಸುರಕ್ಷಿತವಾಗಿರಲಿ ಎಂದು ಬೇಡಿಕೊಳ್ಳುತ್ತೇನೆ. ಎಲ್ಲ ರೀತಿಯ ನೆರವಿಗೆ ಭಾರತ ಸಿದ್ಧವಿದೆ. ವಿದೇಶಾಂಗ ಸಚಿವಾಲಯವು ಎರಡೂ ದೇಶಗಳ ಸರಕಾರಗಳೊಂದಿಗೆ ಸಂಪರ್ಕದಲ್ಲಿ ಇರಲಿದೆ ಎಂದು ಬರೆದುಕೊಂಡಿದ್ದಾರೆ.

ಜಿ.ಎಂ.ಸಿದ್ದೇಶ್ವರ್ ಮನೆಯಲ್ಲಿ ರೆಬೆಲ್ ನಾಯಕರ ಸಭೆ

ಯತ್ನಾಳ್ ಉಚ್ಚಾಟನೆ ಪರಿಶೀಲನೆಗೆ ಒತ್ತಾಯ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಉಚ್ಚಾಟನೆ ಕ್ರಮವನ್ನು ಕೇಂದ್ರದ ವರಿಷ್ಠರು ಮರುಪರಿಶೀಲನೆ ಮಾಡಬೇಕು ಎಂಬ ಕೂಗು ಹೆಚ್ಚಾಗಿದ್ದು, ಶಿಸ್ತು ಕ್ರಮ ವಿರೋಧಿಸಿ ಬಿಜೆಪಿ ಕಾರ್ಯಕರ್ತರೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ನಡುವೆ ಯತ್ನಾಳ್ ಅವರೊಂದಿಗೆ ನಾವಿದ್ದೇವೆ ಎಂಬ ಸಂದೇಶ ಸಾರಲು ಯತ್ನಾಳ್ ಪರ ಬಣದಾಯ ನಾಯಕರು ಬೆಂಗಳೂರಿನಲ್ಲಿ ಸಭೆ ನಡೆಸಿದ್ದಾರೆ.

ಯತ್ನಾಳ್ ಉಚ್ಚಾಟನೆ ಕ್ರಮ ಪ್ರಶ್ನಿಸಲು ರೆಬೆಲ್ ನಾಯಕರುಗಳು ತಯಾರಿ ನಡೆಸಿದ್ದಾರೆ. ಅಲ್ಲದೆ, ಉಚ್ಚಾಟನೆ ಬಳಿಕ ಯಾರನ್ನೂ ಭೇಟಿ ಮಾಡದ ಯತ್ನಾಳ್ ತಮ್ಮ ಬಣದ ನಾಯಕರ ಜತೆಗೆ ಸಭೆ ಮಾಡಿದ್ದಾರೆ. ಮಾಜಿ ಶಾಸಕ ಕುಮಾರ್ ಬಂಗಾರಪ್ಪ ಅವರ ಸದಾಶಿವ ನಗರದ ನಿವಾಸದಲ್ಲಿ ಸಭೆ ನಡೆಸಲು ತೀರ್ಮಾನಿಸಲಿತ್ತಾದರೂ ಅಂತಿಮ ಹಂತದಲ್ಲಿ ಬೆಂಗಳೂರಿನ ಯು.ಬಿ.ಸಿಟಿಯಲ್ಲಿರುವ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ್ ಅವರ ನಿವಾಸದಲ್ಲಿ ಶುಕ್ರವಾರ ಸಭೆ ನಡೆಸಲಾಗಿದೆ. ಸಭೆಯಲ್ಲಿ ರಮೇಶ್ ಜಾರಕಿಹೊಳಿ, ಜಿ.ಎಂ.ಸಿದ್ದೇಶ್ವರ್, ಕುಮಾರ್ ಬಂಗಾರಪ್ಪ, ಎನ್.ಆರ್.ಸಂತೋಷ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಭೆಯ ಬಳಿಕ ಮಾತನಾಡಿದ ಮಾಜಿ ಸಚಿವ ಕುಮಾರ ಬಂಗಾರಪ್ಪ, 6 ವರ್ಷಗಳ ಯತ್ನಾಳ್ ಉಚ್ಚಾಟನೆ ನೋವು ತರಿಸಿದೆ. ಹಾಗಂತ ವರಿಷ್ಠರ ನಿರ್ಧಾರ ಪ್ರಶ್ನಿಸುವುದಿಲ್ಲ. ಈ ಬಗ್ಗೆ ಎಲ್ಲರೂ ಕೂತು ಚರ್ಚೆ ಮಾಡಿದ್ದೇವೆ. ಶೋಕಾಸ್ ನೋಟಿಸ್‌ಗೆ ಉತ್ತರಿಸಲು ಬಿ.ಪಿ.ಹರೀಶ್ ಅವರಿಗೆ ಇಂದು (ಶುಕ್ರವಾರ) ಅಂತಿಮ ದಿನ. ಅವರು ಹೇಗೆ ಉತ್ತರ ಕೊಡಬೇಕು ಎಂಬ ಬಗ್ಗೆ ಮಾರ್ಗದರ್ಶನ ಮಾಡಲಾಗಿದೆ. ಕಾನೂನು ತಂಡದ ಸಲಹೆ ಜತೆಗೆ ಮಾರ್ಗದರ್ಶನ ಮಾಡಿದ್ದೇವೆ. ನಾವು ಬಹಳಷ್ಟು ಬಾರಿ ವರಿಷ್ಠರಿಗೆ ಹೇಳಿದ್ದೇವೆ. ಆದರೆ ಆಘಾತದ ರೀತಿಯಲ್ಲಿ ಕ್ರಮ ಮಾಡಿದ್ದಾರೆ. ಹೊಸ ಪಕ್ಷ ಸ್ಥಾಪನೆ ಅಥವಾ ಬೇರೆ ಯಾವುದೇ ರೀತಿಯ ಆಲೋಚನೆ ಮಾಡಿಲ್ಲ. ನಾವು ಏನು ಕೇಳಿದ್ದೀವಿ ಅದಕ್ಕೆ ವರಿಷ್ಠರು ಸ್ಪಂದಿಸಿ ಆದಷ್ಟು ಬೇಗ ನಮಗೆ ಒಳ್ಳೆಯ ಸುದ್ದಿ ಕೊಡುವ ನಿರೀಕ್ಷೆ ಇದೆ. ಉಚ್ಚಾಟನೆಯನ್ನು ಹೈಕಮಾಂಡ್ ಮರುಪರಿಶೀಲನೆ ಮಾಡಬೇಕು ಎಂದರು. → 4

ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ

ಬಹುತೇಕ ಹಿಂದೂ ಕಾರ್ಯಕರ್ತರು ಯತ್ನಾಳ್ ಅವರ ವಿರುದ್ಧ ಕ್ರಮ ಕೈಗೊಂಡಿದ್ದಕ್ಕೆ ಬಹಿರಂಗವಾಗಿಯೇ ವಿರೋಧ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಜಾಲತಾಣಗಳ ತಮ್ಮ ತಮ್ಮ ಖಾತೆಗಳಲ್ಲಿ ಈ ವಿಚಾರ ಚರ್ಚಿಸಿ ಪ್ರಶ್ನೆ ಎತ್ತಿರುವ ಬಿಜೆಪಿ ಕಾರ್ಯಕರ್ತರು, ಸ್ವಾಭಿಮಾನಿ ಕಾರ್ಯಕರ್ತರೆಲ್ಲರೂ ಸಾಮೂಹಿಕ ರಾಜೀನಾಮೆ ನೀಡಿ ಹೊರಬರಬೇಕು. ಹಿಂದುತ್ವದ ಪರ ಇರುವ ಬಿಜೆಪಿ ಕಾರ್ಯಕರ್ತರು, ಪದಾಧಿಕಾರಿಗಳು ರಾಜೀನಾಮೆ ನೀಡಿ ಹೊರಬರಬೇಕು ಎಂದು ಆಗ್ರಹಿಸಿದ್ದಾರೆ. ಕರ್ನಾಟಕ ಸಿವಿಲ್ ಎಂಜಿನಿಯರ್ಸ್ ಅಸೋಸಿಯೇಷನ್ ಟ್ವಿಟ್ಟರ್ ಖಾತೆಯಲ್ಲಿ ಯತ್ನಾಳ್ ಅವರನ್ನು ಬೆಂಬಲಿಸಿ ಟ್ವೀಟ್ ಹಾಕಲಾಗಿದೆ. ಅದರಲ್ಲಿ, ವಿದ್ಯಾರ್ಥಿಗಳಿಗೆ ಅನ್ಯಾಯವಾದಾಗ, ಕೆಪಿಎಸ್‌ಸಿ ಭ್ರಷ್ಟರ ವಿರುದ್ಧ ನಮ್ಮ ಜತೆ ನಿಂತಿದ್ದ ಯತ್ನಾಳ್ ಅವರಿಗೆ ನಮ್ಮ ಬೆಂಬಲ ಎಂದೆಂದಿಗೂ ಇದ್ದೇ ಇರುತ್ತದೆ. ಒಂದು ಪಾರ್ಟಿ ನ್ಯಾಯದ ಪರವಾಗಿ, ನಿಲ್ಲುತ್ತಿದ್ದ ನಾಯಕನನ್ನು ಉಚ್ಚಾಟನೆ ಮಾಡಿದರೆ ಬಿಜೆಪಿ ಸರಿಯಿಲ್ಲ ಎಂದು ಎನಿಸುತ್ತಿದೆ. ಹೊಸ ಅಧ್ಯಾಯ ಶುರುವಾಗಲಿ ಬಸನಗೌಡ ಪಾಟೀಲ್ ಅವರದ್ದೇ ಪ್ರತ್ಯೇಕ ಬಿಜೆಪಿ ಎಂದು ಆಗ್ರಹಿಸಿದೆ.

ಹಿಂದೂಗಳಿಂದ ಬಿಜೆಪಿ. ಬಿಜೆಪಿಯಿಂದ ಹಿಂದೂಗಳಲ್ಲ. ಬಸನಗೌಡ ಯತ್ನಾಳ್ ಅವರನ್ನು ಹೊಂದಾಣಿಕೆ ರಾಜಕಾರಣಿಗಳು, ವಂಶಪಾರಂಪರ್ಯ ರಾಜಕಾರಣಿಗಳು ತುಳಿದಿರಬಹುದು. ಆದರೆ ಹಿಂದೂಗಳ ಒಗ್ಗಟ್ಟನ್ನು ತುಳಿಯಲಾಗುವುದಿಲ್ಲ.
ಸನಾತನ ಎಂಬ ಟ್ವಿಟ್ಟರ್ ಖಾತೆಯ ಪೋಸ್ಟ್

ಬಿಜೆಪಿಯಲ್ಲಿ ನಾವೆಲ್ಲರೂ ಒಂದಾಗಿ ಹೋಗಬೇಕು ಎಂಬ ಅಭಿಪ್ರಾಯ ನನ್ನದು. ಪಕ್ಷದ ಹಿರಿಯರು ಕೈಗೊಂಡ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿ ದ್ದೇವೆ. ಯಾರೂ ಪಕ್ಷದ ವಿರುದ್ಧವಾಗಿ ಮಾತಾಡಬಾರದು.
– **ಆರ್.ಅಶೋಕ**, ಪ್ರತಿಪಕ್ಷದ ನಾಯಕ

ನಿವೃತ್ತ ಡಿಜಿಪಿ ಗರುಡಾಚಾರ್ ನಿಧನ

ಬೆಂಗಳೂರು: ನಿವೃತ್ತ ಪೊಲೀಸ್ ಮಹಾನಿರ್ದೇಶಕ ಬಿ.ಎನ್.ಗರುಡಾಚಾರ್ (96) ಅವರು ವಯೋಸಹಜ ಕಾರಣದಿಂದ ಶುಕ್ರವಾರ ಮುಂಜಾನೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರಿಗೆ ಬೆಂಗಳೂರಿನ ಚಿಕ್ಕಪೇಟೆ ಕ್ಷೇತ್ರದ ಶಾಸಕ ಬಿ.ಉದಯ್ ಗರುಡಾಚಾರ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಶನಿವಾರ ಸಂಜೆ 4ಕ್ಕೆ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಸೈಬರ್ ಬೆದರಿಕೆ: ವೃದ್ಧ ದಂಪತಿ ಬಲಿ

ಬೆಳಗಾವಿ: ಸೈಬರ್ ವಂಚಕರ ಮೋಸದ ಜಾಲಕ್ಕೆ ಸಿಲುಕಿ ವೃದ್ಧ ದಂಪತಿ ತಮ್ಮ ಜೀವವನ್ನೇ ಕಳೆದುಕೊಂಡಿರುವ ಘಟನೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಬಿಡಿ ಗ್ರಾಮದಲ್ಲಿ ನಡೆದಿದೆ. ನಿವೃತ್ತ ರೈಲ್ವೆ ಉದ್ಯೋಗಿ ಡಿಯಾಗೋ ನಜರತ್ (83) ಹಾಗೂ ಅವರ ಪತ್ನಿ ಪಾವಿಯಾ ನಜರತ್ (79) ಆತ್ಮಹತ್ಯೆ ಮಾಡಿಕೊಂಡ ವೃದ್ಧ ದಂಪತಿ. ಸೈಬರ್ ವಂಚಕರು ಈ ದಂಪತಿಗೆ ಪದೇ ಪದೆ ವಿಡಿಯೋ ಕಾಲ್ ಮಾಡಿ, ನಿಮ್ಮ ನಗ್ನ ಫೋಟೋಗಳಿವೆ. ಹಣ ಕೊಡದಿದ್ದರೆ ವೈರಲ್ ಮಾಡ್ತೀವಿ ಅಂತ ಬೆದರಿಕೆ ಹಾಕುತ್ತಿದ್ದರು. ಕೊನೆಗೆ ಸೈಬರ್ ವಂಚಕರ ಕಿರುಕುಳ ತಾಳಲಾರದೇ ಪತ್ನಿ ಪಾವಿಯಾ ಜನರತ್ ನಿದ್ದೆ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಪತಿ ಚಾಕುವಿನಿಂದ ಕತ್ತು ಕುಯ್ದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ಪ್ರಧಾನಿ ಭೇಟಿಯಾಗಿ ಆಶೀರ್ವಾದ ಪಡೆದ ಸಂಸದ ಹಾಗೂ ಪತ್ನಿ



ಇತ್ತೀಚೆಗೆ ವೈವಾಹಿಕ ಜೀವನಕ್ಕೆ ಕಾಲಿರಿಸಿದ ಸಂಸದ ತೇಜಸ್ವಿ ಸೂರ್ಯ, ಗಾಯಕಿ ಶಿವಶ್ರೀ ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಶುಕ್ರವಾರ ಭೇಟಿಯಾಗಿ ಆಶೀರ್ವಾದ ಪಡೆದರು.

ಇಂದು ಬಿಬಿಎಂಪಿ ಬಜೆಟ್ ಮಂಡನೆ

ಬೆಂಗಳೂರು: ಸತತ 5ನೇ ವರ್ಷದ ಬಿಬಿಎಂಪಿ ಬಜೆಟ್ ಮಂಡಿಸಲು ಅಧಿಕಾರಿಗಳು ತಯಾರಿ ನಡೆಸಿದ್ದು, ಶನಿವಾರ 18 ಸಾವಿರ ಕೋಟಿಯ ಬಜೆಟ್ ಮಂಡಿಸಲಿದ್ದಾರೆ. 2024–25ರಲ್ಲಿ ಬಿಬಿಎಂಪಿ 12,371.63 ಕೋಟಿ ರು.ಗಳನ್ನು ಬಜೆಟ್ ಮಂಡಿಸಿತ್ತು. ಪ್ರಸಕ್ತ ಸಾಲಿನಲ್ಲಿ ಬಜೆಟ್ ಗಾತ್ರ 18 ಸಾವಿರ ಕೋಟಿ ರು.ಗಿಂತ ಹೆಚ್ಚಾಗುವ ಸಾಧ್ಯತೆಗಳಿವೆ. ಸ್ವಚ್ಛ ಬೆಂಗಳೂರು, ಹಸಿರು ಬೆಂಗಳೂರು, ಆರೋಗ್ಯಕರ ಬೆಂಗಳೂರು, ಶಿಕ್ಷಣ ಬೆಂಗಳೂರು, ಟೆಕ್ ಬೆಂಗಳೂರು, ವೈಬ್ರೆಂಟ್ ಬೆಂಗಳೂರು ಮತ್ತು ಜಲ ಭದ್ರತಾ ಬೆಂಗಳೂರು ಮತ್ತು ಬ್ರ್ಯಾಂಡ್ ಬೆಂಗಳೂರು ಸೇರಿದಂತೆ ಎಂಟು ವಿಭಾಗಗಳಿಗೆ ಬಜೆಟ್ ಹಂಚಿಕೆ ಮಾಡುವ ಸಾಧ್ಯತೆಯಿದೆ.

ಜೆಡಿಎಸ್ ಬೆಂಬಲ ಕೇಳಿಲ್ಲ, ನಮ್ಮ ಗಾಡಿ ಫುಲ್ ಇದೆ: ಜಾರಕಿಹೊಳಿ

2028ರವರೆಗೆ ಕಾಯ್ತೇನೆ: ಸತೀಶ್

ಬೆಂಗಳೂರು: ಸದ್ಯ ಕಾಂಗ್ರೆಸ್ಸಿನ ಗಾಡಿ ಭರ್ತಿಯಾಗಿದೆ. ಆದ್ದರಿಂದ ಜೆಡಿಎಸ್ ಶಾಸಕರನ್ನು ತೆಗೆದುಕೊಂಡು ನಾವೇನು ಮಾಡೋಣ ಎಂದು ಲೋಕೋಪಯೋಗಿ ಇಲಾಖೆ ಸತೀಶ್ ಜಾರಕಿಹೊಳಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಓವರ್ ಲೋಡೆಡ್ ಇದ್ದರೂ ನಮ್ಮದು ಕಾಂಗ್ರೆಸ್ ಪಕ್ಷವೇ. ಕಾಂಗ್ರೆಸ್‌ನಲ್ಲಿ ಈಗಾಗಲೇ 138 ಮಂದಿ ಶಾಸಕರಿದ್ದಾರೆ. ಕರ್ನಾಟಕ ಕಾಂಗ್ರೆಸ್‌ನಲ್ಲಿ ಶಿಂಧೆ, ಅಜಿತ್ ಪವಾರ್ ಯಾರೂ ಇಲ್ಲ, ಆ ಸಾಮರ್ಥ್ಯ ಇಲ್ಲಿ ಯಾರಿಗೂ ಇಲ್ಲ ಎಂದು ತಿರುಗೇಟು ನೀಡಿದರು. ದೆಹಲಿಯಲ್ಲಿ ಯಾವುದೇ ರಾಜಕೀಯ ಚರ್ಚೆ ನಡೆಸಿಲ್ಲ, ಕೇಂದ್ರ ಸಚಿವ ಕುಮಾರಸ್ವಾಮಿ, ಸೋಮಣ್ಣ ಅವರಂತೆ ಪ್ರಲ್ಹಾದ್ ಜೋಶಿ ಅವರನ್ನೂ ಭೇಟಿ ಮಾಡಿ ದ್ದೇನೆ. ಬೆಳಗಾವಿ ವಿಮಾನ ನಿಲ್ದಾಣದ ಕಾಮಗಾರಿ ಸ್ಥಗಿತಗೊಂಡಿದೆ. ಅವುಗಳನ್ನು ಚುರುಕುಗೊಳಿಸುವುದಕ್ಕಾಗಿ ಚರ್ಚೆ ಮಾಡಲಾಗಿದೆ. ಕೇವಲ ಅಭಿವೃದ್ಧಿ ವಿಚಾರಗಳಿಗೆ ಈ ಭೇಟಿ ಸೀಮಿತವಾಗಿದೆ. ಎಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ್ ಜೋಶಿ, ವಿ.ಸೋಮಣ್ಣ ಅವರ ಭೇಟಿ ಪೂರ್ವ ನಿಗದಿಯಾಗಿತ್ತು. ದೇವೇಗೌಡರ ಭೇಟಿ ಆಕಸ್ಮಿಕ. ಸಂಸತ್‌ಗೆ ತೆರಳುವ ಮಾರ್ಗದಲ್ಲಿ ಅವರ ಕಚೇರಿಯಿದ್ದು, ಅವರನ್ನು ಕಂಡಾಗ ಭೇಟಿಯಾಗಿ ಮಾತುಕತೆ ನಡೆಸಿದೆ. ಅವರು ಹಾಸನ ರಸ್ತೆ, ಶಿರಾಡಿ ಘಾಟ್ ರಸ್ತೆ ಬಗ್ಗೆ ಕೇಂದ್ರ ಸಚಿವ ಗಡ್ಕರಿ ಅವರನ್ನು ಭೇಟಿ ಮಾಡಲು ತೆರಳುತ್ತಿದ್ದರು. ರಸ್ತೆ ಬಗ್ಗೆ ನಾನು ಗೌಡರ ಜತೆ ಚರ್ಚೆ ನಡೆಸಿದೆ ಎಂದು ಸ್ಪಷ್ಟಪಡಿಸಿದರು.

ಗುತ್ತಿಗೆದಾರರ ಬಾಕಿ ಬಿಲ್ ಪಾವತಿಯನ್ನು ಹಂತಹಂತವಾಗಿ ಇತ್ಯರ್ಥ ಪಡಿಸಲಾಗುವುದು. ನಮ್ಮ ಇಲಾಖೆಯದ್ದು ಯಾವುದೂ ಪೆಂಡಿಂಗ್ ಇಲ್ಲ. ನಾವು ಎಲ್ಲವನ್ನೂ ಕೊಡುತ್ತಿದ್ದೇವೆ. ಕಾಲಕಾಲಕ್ಕೆ ಎಲ್ಲವನ್ನೂ ಇತ್ಯರ್ಥಪಡಿಸಲಾಗುತ್ತಿದೆ.
– **ಸತೀಶ್ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

ವೇಟಿಂಗ್ ಲಿಸ್ಟ್‌ನಲ್ಲಿದ್ದೇನೆ

ಸದ್ಯಕ್ಕೆ ನಾನು ಸಿಎಂ ಹುದ್ದೆಯ ಆಕಾಂಕ್ಷಿಯಲ್ಲ. ಈಗಾಗಲೇ ಸಿದ್ದರಾಮಯ್ಯ ಅವರು ಆ ಸ್ಥಾನದಲ್ಲಿದ್ದಾರೆ. ನಮ್ಮ ಸರದಿ ಬಹುಶಃ 2028ಕ್ಕೆ. ಆದರೆ ಮೆಜೆಸ್ಟಿಕ್‌ನ ಟ್ರಾಫಿಕ್ ಜಾಮ್‌ನಲ್ಲಿ ನಮಗೆ ಅವಕಾಶ ಸಿಕ್ಕರೂ ಸಿಗಬಹುದು. ನಮ್ಮಲ್ಲಿ ಎಲ್ಲರೂ ಆರ್‌ಎಸಿ ಟಿಕೆಟ್ ಇಟ್ಟುಕೊಂಡೇ ಕಾಯುತ್ತಿದ್ದಾರೆ. ಪಕ್ಷದಲ್ಲಿ ಈಗಾಗಲೇ 138 ಮಂದಿ ಶಾಸಕರಿದ್ದಾರೆ. ಆದ್ದರಿಂದ ಕಾಂಗ್ರೆಸ್ ಗಾಡಿ ಭರ್ತಿಯಾಗಿದೆ. ಹೀಗಿರುವಾಗ ಜೆಡಿಎಸ್‌ನ ಕುಮಾರಸ್ವಾಮಿ ಅವರ ಸಹಕಾರದ ಪ್ರಶ್ನೆಯೇ ಬರುವುದಿಲ್ಲ ಎಂದು ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.

ಉಡುಪಿಯ ಪರ್ಯಾಯ ಮಠಾಧೀಶ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ವಿಶ್ವತೋಮುಖ ವ್ಯಕ್ತಿತ್ವದ ಪರಿಚಯವನ್ನು ಒಳಗೊಂಡಿರುವ ವಿಶ್ವವಾಣಿ ಯುಗಾದಿ ವಿಶೇಷಾಂಕವನ್ನು ಸುಗುಣೇಂದ್ರ ತೀರ್ಥರು ಹಾಗೂ ಕಿರಿಯ ಶ್ರೀಪಾದರಾದ ಸುಶೀಂದ್ರ ತೀರ್ಥರು ಲೋಕಾರ್ಪಣೆಗೊಳಿಸಿದರು. ಈ ವೇಳೆ ವಿಶ್ವವಾಣಿ ಪತ್ರಿಕೆಯ ವ್ಯವಸ್ಥಾಪಕ ನಾಗಾರ್ಜುನ.ಎಂ, ಉಡುಪಿ ವರದಿಗಾರ ರಾಮಚಂದ್ರ ಹಾಗೂ ಜಾಹೀರಾತು ವಿಭಾಗದ ಮಹಮ್ಮದ್ ಅಕ್ರಮ್ ಹಾಗೂ ಮಠದ ದಿವಾನರಾದ ನಾಗರಾಜಾಚಾರ್ಯ, ಅಂತಾರಾಷ್ಟ್ರೀಯ ಕಾರ್ಯದರ್ಶಿ ಪ್ರಸನ್ನಾಚಾರ್ಯ, ಆಪ್ತ ಕಾರ್ಯದರ್ಶಿ ರತೀಶ್ ತಂತ್ರಿ, ಪ್ರಮೋದ್ ಸಾಗರ್, ಅನಂತ ಕೃಷ್ಣ, ರಾಂಪ್ರಿಯ ಇದ್ದರು.

ಕೇಂದ್ರ ಸರಕಾರಿ ನೌಕರರ ಡಿಎ ಹೆಚ್ಚಳ

ದೆಹಲಿ: ಕೇಂದ್ರ ಸರಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಡಿಎ ಮತ್ತು ಡಿಆರ್‌ಅನ್ನು ಎರಡು ಪ್ರತಿಶತದಷ್ಟು ಏರಿಕೆ ಮಾಡುವ ನಿರ್ಧಾರಕ್ಕೆ ಕೇಂದ್ರ ಸಂಪುಟ ಶುಕ್ರವಾರ ಅನುಮೋದನೆ ನೀಡಿದೆ. ಇದರೊಂದಿಗೆ ಕೇಂದ್ರ ಸರಕಾರಿ ನೌಕರರ ಒಟ್ಟು ತುಟ್ಟಿಭತ್ಯೆ ಶೇ.53 ಇದ್ದದ್ದು ಶೇ.55ಕ್ಕೆ ಏರುತ್ತದೆ. ಡಿಎ ಏರಿಕೆಯೊಂದಿಗೆ ಮನೆ ಬಾಡಿಗೆ ಭತ್ಯೆ, ಪ್ರಯಾಣ ಭತ್ಯೆ ಸೇರಿದಂತೆ ಇತರ ಭತ್ಯೆಗಳೂ ಹೆಚ್ಚಲಿವೆ. ಈ ಹೊಸ ಡಿಎ ಮತ್ತು ಡಿಆರ್ ದರಗಳು ಜನವರಿಯಿಂದ ಅನ್ವಯ ಆಗುತ್ತವೆ. ಏಪ್ರಿಲ್‌ನಲ್ಲಿ ಸಿಗಲಿರುವ ಮಾರ್ಚ್ ಸಂಬಳದಲ್ಲಿ ಈ ಏರಿಕೆ ಕಾಣಬಹುದು. ಜನವರಿಯನ್ನೂ ಸೇರಿಸಿ ಒಟ್ಟು ಮೂರು ತಿಂಗಳ ಅರಿಯರ್ಸ್ ಸೇರಿ ಬರುತ್ತದೆ. ಪಿಂಚಣಿದಾರರಿಗೂ ಹೆಚ್ಚಿನ ಪಿಂಚಣಿ ಬರುತ್ತದೆ.

ಗಡಿ ಕನ್ನಡಿಗರ ಸಮಸ್ಯೆ ಪರಿಹಾರಕ್ಕೆ ನಿರ್ಧಾರ

ಬೆಂಗಳೂರು: ಗಡಿಭಾಗದಲ್ಲಿರುವ ಕನ್ನಡಿಗರು ಅನುಭವಿಸುತ್ತಿರುವ ಹತ್ತಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜ್ಯ ಸರಕಾರ ಇದೀಗ ಇಲಾಖಾವಾರು ನೋಡಲ್ ಅಧಿಕಾರಿಗಳನ್ನು ನೇಮಿಸಲು ಮುಂದಾಗಿದೆ. ಈ ಬಗ್ಗೆ ವಿಧಾನಸೌಧದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಈ ವೇಳೆ ರಾಜ್ಯದ ಗಡಿಯಲ್ಲಿರುವ ಹಾಗೂ ಹೊರರಾಜ್ಯದ ಗಡಿಯಲ್ಲಿರುವ ಕನ್ನಡಿಗರಿಗರ ಸಮಸ್ಯೆಯನ್ನು ಪರಿಶೀಲಿಸಲು ಪ್ರತಿ ಇಲಾಖೆಯಿಂದ ಒಬ್ಬ ನೋಡೆಲ್ ಅಧಿಕಾರಿಯನ್ನು ನೇಮಿಸುವಂತೆ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚನೆ ನೀಡಿದರು.

ಬಿಟಿಆರ್ ಹೆದ್ದಾರಿಯಲ್ಲಿ ರಾತ್ರಿ ವಾಹನ ಬಸ್ ಸಂಚಾರಕ್ಕೆ ಅವಕಾಶ ಸಂಭವ | ಕೇರಳದ ಜತೆ ಸೌಹಾರ್ದ ಸಂಬಂಧದ ನೆಪ

ಬಂಡೀಪುರ ರಸ್ತೆ ಪುನಾರಂಭಕ್ಕೆ ಕಸರತ್ತು

ಬೆಂಗಳೂರು: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ (ಬಿಟಿಆರ್) ರಾಷ್ಟ್ರೀಯ ಹೆದ್ದಾರಿ–212 (ಎನ್‌ಎಚ್–766) ಯ ಮೂಲಕ ರಾತ್ರಿ ವೇಳೆ ವಾಹನಗಳ ಸಂಚಾರ ನಿಷೇಧವಿದ್ದರೂ ಎರಡೂ ರಾಜ್ಯ ಸರಕಾರಗಳು ವಾಹನ ಸಂಚಾರಕ್ಕೆ ಉತ್ಸುಕತೆ ತೋರಿವೆ. ಈ ಸಂಬಂಧ ಸುಪ್ರೀಂಕೋರ್ಟ್‌ನ ಸ್ಪಷ್ಟ ಆದೇಶವಿದ್ದರೂ ಕೆಲ ಒತ್ತಡಗಳಿಂದಾಗಿ ಪರ್ಯಾಯ ಪರಿಹಾರಗಳ ಕುರಿತು ಪ್ರತಿ–ಅಫಿಡವಿಟ್ ಸಲ್ಲಿಸಲು ದತ್ತಾಂಶವನ್ನು ಸಂಗ್ರಹಿಸುತ್ತಿರುವ ಮಾಹಿತಿ ಹೊರಬಿದ್ದಿದೆ. ಈ ಮಧ್ಯೆ ರಾತ್ರಿ ಸಂಚಾರ ಸಂಬಂಧ ಕಾನೂನು ತಜ್ಞರ ಅಭಿಪ್ರಾಯ ಪಡೆದು ಸರ್ವಸಮ್ಮತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವರು ಹೇಳಿದ್ದಾರೆ.

ರಾತ್ರಿ ಸಂಚಾರಕ್ಕೆ ನಿಷೇಧ ಹೇರಿ ಸುಪ್ರೀಂಕೋರ್ಟ್ ಹೊರಡಿಸಿದ ನಿಷೇಧ ಆದೇಶ ರದ್ದುಗೊಳಿಸಲು ನಾವು ಬಯಸುವುದಿಲ್ಲ. ಅದನ್ನು ತೆಗೆದುಹಾಕಲು ಅಥವಾ ಪರ್ಯಾಯ ಪರಿಹಾರ ಕಂಡುಹಿಡಿಯಲು ಕೇರಳ ಹಾಗೂ ಕರ್ನಾಟಕ ಸರಕಾರಗಳಿಂದ ಸಾಕಷ್ಟು ಒತ್ತಡವಿದೆ. ಮೀಸಲು ಪ್ರದೇಶದ ಮೂಲಕ ಚಲಿಸುವ ವಾಹನಗಳ ಸಂಖ್ಯೆ ಹೆಚ್ಚಿಸಬಹುದೇ ಎಂಬುದು ನಾವು ಯೋಚಿಸುತ್ತಿರುವ ಪರ್ಯಾಯಗಳಲ್ಲಿ ಒಂದಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದು, ಇದಕ್ಕೆ ಪರಿಸರವಾದಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುಪ್ರೀಂ ಮತ್ತು ಕರ್ನಾಟಕ ಹೈಕೋರ್ಟ್ ಆದೇಶಗಳ ಪ್ರಕಾರ, ಕರ್ನಾಟಕ ಮತ್ತು ಕೇರಳದ ತುರ್ತು ವಾಹನಗಳಿಗೆ ಮಾತ್ರ ರಾತ್ರಿ 9 ರಿಂದ ಬೆಳಿಗ್ಗೆ 6 ರವರೆಗೆ ಈ ಹೆದ್ದಾರಿ ಮೂಲಕ ಸಂಚರಿಸಲು ಅನುಮತಿ ಇದೆ. ಈ ನಿಷೇಧ ತೆಗೆದುಹಾಕುವಂತೆ ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಒತ್ತಡವೂ ಇದ್ದು, ಕಳೆದ ಚುನಾವಣೆಯ ಪ್ರಚಾರ ಸಭೆಯಲ್ಲಿ ವಾಹನ ಸಂಚಾರ ನಿಷೇಧ ತೆಗೆಸಲಾಗುವುದು ಎಂದು ಬಹಿರಂಗ ಹೇಳಿಕೆ ಕೂಡ ನೀಡಿದ್ದರು.

ರಾತ್ರಿ ಸಂಚಾರ ನಿಷೇಧದವಿದ್ದರೂ 2021–24 ರವರೆಗೆ ಈ ಹೆದ್ದಾರಿಯಲ್ಲಿ 29 ಸಾವುಗಳು ಸಂಭವಿಸಿವೆ. ಪ್ರಾಣಿಗಳಲ್ಲಿ ಜಿಂಕೆ, ಕಾಡುಹಂದಿ, ಸಿವೆಟ್ ಬೆಕ್ಕು, ಹುಲಿ ಮತ್ತು ಆನೆ ಇವುಗಳಲ್ಲಿ ಸೇರಿದ್ದು, ಹೆಚ್ಚಿನ ಸಾವುಗಳು ಸಂಜೆ ಮತ್ತು ಬೆಳಗಿನ ಜಾವದಲ್ಲಿ ಸಂಭವಿಸಿವೆ. ಈ ಭಾಗದ ಗೇಟ್‌ಗಳನ್ನು ಮುಚ್ಚುವ ಮೊದಲು ಅಥವಾ ತೆರೆದ ತಕ್ಷಣ ಗಡಿ ದಾಟಲು ಗುರಿಯಾಗಿಟ್ಟುಕೊಂಡು ವಾಹನಗಳು ವೇಗವಾಗಿ ಹೋಗುತ್ತವೆ. → 4

ಬಂಡೀಪುರ ರಾತ್ರಿ ಸಂಚಾರ ನಿರ್ಬಂಧ ವಿಷಯ ಅತ್ಯಂತ ಸೂಕ್ಷ್ಮ. ಮುಖ್ಯಮಂತ್ರಿಯವರೊಂದಿಗೆ ಸಮಾಲೋಚಿಸಿ, ಕಾನೂನು ತಜ್ಞರ ಅಭಿಪ್ರಾಯ ಪಡೆದು ಸರ್ವಸಮ್ಮತ ನಿರ್ಧಾರ ಕೈಗೊಳ್ಳಲಾಗುವುದು. ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದ್ದು, ಪ್ರಸ್ತುತ ರಾತ್ರಿ 9ರಿಂದ ಬೆಳಗ್ಗೆ 6ಗಂಟೆಯವರೆಗೆ ನಿರ್ಬಂಧ ಜಾರಿಯಲ್ಲಿದೆ. ಹೊಸ ಪ್ರಕರಣ ಸಂಬಂಧ ಎರಡೂ ರಾಜ್ಯಗಳ ಬಾಂಧವ್ಯವನ್ನು ಗಮನದಲ್ಲಿಟ್ಟುಕೊಂಡು, ಎಲ್ಲರೊಂದಿಗೆ ಚರ್ಚಿಸಿ ಸೂಕ್ತವಾದ ತೀರ್ಮಾನ ಮಾಡಲು ಕ್ರಮ ವಹಿಸಲಾಗುವುದು.
– **ಈಶ್ವರ ಖಂಡ್ರೆ,** ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ಒಂದೇ ಕುಟುಂಬದ ನಾಲ್ವರ ಭೀಕರ ಹತ್ಯೆ

ಮಡಿಕೇರಿ: ವ್ಯಕ್ತಿಯೊಬ್ಬ ತನ್ನ ಪತ್ನಿ, ಪುತ್ರಿ, ಅತ್ತೆ ಹಾಗೂ ಮಾವನನ್ನು ಭೀಕರವಾಗಿ ಕೊಲೆ ಮಾಡಿ ತಲೆಮರೆಸಿಕೊಂಡಿರುವ ಘಟನೆ ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಕೇರಳ ಮೂಲದ ಗಿರೀಶ್ (35) ಎಂಬಾತ ಕೊಲೆ ಮಾಡಿ, ತಲೆ ಮರೆಸಿಕೊಂಡಿದ್ದಾನೆ. ಈತನ ಮಾವ ಕರಿಯ (75), ಅತ್ತೆ ಗೌರಿ (70), ಪತ್ನಿ ನಾಗಿ(30) ಹಾಗೂ ಪುತ್ರಿ ಕಾವೇರಿ (5) ಹತ್ಯೆಗೀಡಾದವರಾಗಿದ್ದಾರೆ. ಏಳು ವರ್ಷಗಳ ಹಿಂದೆ ಗಿರೀಶ್ ಹಾಗೂ ನಾಗಿ ವಿವಾಹವಾಗಿದ್ದರು. ಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಕಾರ್ಮಿಕರಾಗಿರುವ ದಂಪತಿ ಹಾಗೂ ಪುತ್ರಿ ಇತ್ತೀಚೆಗೆ ಬೇಗೂರಿನ ಮಾವನ ಮನೆಗೆ ಬಂದು ವಾಸವಿದ್ದರು ಎಂದು ಹೇಳಲಾಗಿದೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹಾಗೂ ಪೊನ್ನಂಪೇಟೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿ ಗಿರೀಶ್ ಪತ್ತೆಗೆ ಪೊಲೀಸರು ಕಾರ್ಯಾಚರಣೆ ಕೈಗೊಂಡಿದ್ದಾರೆ.

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 222/2025

[illegible]

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 221/2025

[illegible]

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 184/2025

[illegible]

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:

IN THE COURT OF THE SENIOR CIVIL JUDGE AT MALUR
R.A.No.79/2015

Appellent : Smt. Shylaja
V/s
Respondent : Smt. Venkatamma and others

NOTICE TO RESPONDENT NO.1 UNDER ORDER 5 RULE 20 OF CPC

TO, Smt. Venkatamma D/o Late DoddananjarReddy, W/o K. Malakondaiah, R/at No.E-738, 2nd rediyal Road, ITI Town slip, Dooravani Nagar, Bangalore-16,

Whereas the appellant has filed this appeal against the judgement and decree passed by the Hon'ble 2nd Addl. Civil judge at Malur and for other reliefs. You are hereby summoned to appear in this court in person or by advocate on 28-4-25. at 11-00 A.M. before this court to answer the same, failing which the appeal will be dispose off exparte.

Given under my hand and seal of the court this 26 th day of March 2025.

By order of court,
Chief Ministrial officer,
Senior Civil Judge Court ,Malur.
S.R.Nagesh, Advocate,Kolar.

ಅಖಿಲ ಕರ್ನಾಟಕ ಮಹಿಳಾ ಸರಕಾರಿ ನೌಕರರ ಸಂಘದಿಂದ ನಡೆದ ಮಹಿಳಾ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಸರಕಾರದ ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಕರ್ನಾಟಕ ಮಹಿಳಾ ಸರಕಾರಿ ನೌಕರರ ಸಂಘದ ಅಧ್ಯಕ್ಷೆ ರೋಶಿನಿ ಗೌಡ, ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಡಾ. ವೈಷ್ಣವಿ, ಹೇಮಲತಾ, ಬಲ್ಕಿಸ್ ಬಾನು ಸೇರಿದಂತೆ ಹಲವರಿದ್ದರು.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	(1) ಶ್ರೀ ಆದಿತ್ಯ ಎಸ್ ಜಗದೀಶ್ ಬಿನ್ ಎಸ್ ಎನ್ ಜಗದೀಶ್, (2) ಶ್ರೀ ಎಸ್ ಎನ್ ಜಗದೀಶ್ ಬಿನ್ ನರಸೇಗೌಡ ಇವರಿಬ್ಬರ ವಿಳಾಸ: 1012, 27ನೇ ಎ ಮುಖ್ಯ ರಸ್ತೆ ಜಯನಗರ 9ನೇ ಬ್ಲಾಕ್ ಬೆಂಗಳೂರು 560069. (3) ಶ್ರೀ ಆದಿತ್ಯ ಎಸ್ ಜಗದೀಶ್ ಬಿನ್ ಎಸ್ ಎನ್ ಜಗದೀಶ್, ಸಿಂಧೂರ್ ಡೆವಲಪರ್ಸ್, ಗುಲ್ಮೊಹರ್ ಪಾರ್ಕ್ ನಿವೇಶನ ನಂ 106, ಸರ್ವೆ ನಂ 93/18 ಕಗ್ಗಲಹಳ್ಳಿ ಗ್ರಾಮ ಪಂಚಾಯತ್ ಕನಕಪುರ ತಾಲ್ಲೂಕು, ರಾಮನಗರ–562112. (ಸಾಲಗಾರರು/ಅರ್ಜಿದಾರರು)	ಷೆಡ್ಯೂಲ್ ಆಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.106 ಗುಲ್ಮೊಹರ್ ಪಾರ್ಕ್, ಹೊಸಕೋಟೆ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ–562109 ಕರ್ನಾಟಕ ಮತ್ತು ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ : ಪ್ಲಾಟ್ ಸಂಖ್ಯೆ 105, ಪಶ್ಚಿಮಕ್ಕೆ: ಪ್ಲಾಟ್ ಸಂಖ್ಯೆ 107, ಉತ್ತರಕ್ಕೆ : ಪ್ಲಾಟ್ ಸಂಖ್ಯೆ 85, ದಕ್ಷಿಣಕ್ಕೆ : ರಸ್ತೆ. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್ ಮೊ: 8880041234 ರವರನ್ನು ಸಂಪರ್ಕಿಸಿ.	15.02.2025 ಎನ್‌ಪಿಎ ದಿನಾಂಕ 08.02.2025	Power Home Vanilla BRE Loan A/c No. PHR056107516045 Rs. 15,45,504/- ಒಟ್ಟು ಬಾಕಿ ಮೊತ್ತ ರೂ.14,49,314/– ದಿನಾಂಕ: 14.02.2025 ರಂದು ಇದ್ದಂತೆ
2	[illegible]	[illegible] ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್ ಮೊ: 8880041234 ರವರನ್ನು ಸಂಪರ್ಕಿಸಿ.	14.02.2025 ಎನ್‌ಪಿಎ ದಿನಾಂಕ 08.02.2025	Power Home Vanilla BRE Loan A/c No. PHR000909630790 ಒಟ್ಟು ಬಾಕಿ ಮೊತ್ತ ರೂ.48,90,026/- ದಿನಾಂಕ: 14.02.2025 ರಂದು ಇದ್ದಂತೆ
3	[illegible]	[illegible]	11.02.2025 ಎನ್‌ಪಿಎ ದಿನಾಂಕ 03.01.2025	Power Home Loan A/c No. PHR056100709311 Rs. 27,11,864/- ಒಟ್ಟು ಬಾಕಿ ಮೊತ್ತ ರೂ.12,16,632/- ದಿನಾಂಕ: 07.02.2025 ರಂದು ಇದ್ದಂತೆ
4	[illegible]	[illegible] ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್ ಮೊ: 8880041234 ರವರನ್ನು ಸಂಪರ್ಕಿಸಿ.	15.02.2025 ಎನ್‌ಪಿಎ ದಿನಾಂಕ 04.03.2024	Nature of Loan Power Home Vanilla BRE A/c No. PHR168802739254 Rs. 15,51,057/- ಒಟ್ಟು ಬಾಕಿ ಮೊತ್ತ ರೂ.8,96,943/- ದಿನಾಂಕ: 14.02.2025 ರಂದು ಇದ್ದಂತೆ
5	[illegible]	[illegible] 9620403099	15.02.2025 ಎನ್‌ಪಿಎ ದಿನಾಂಕ 08.02.2025	POWER HOME BRE Loan A/c No. PHR007702267019 Rs. 7,43,000/- ದಿನಾಂಕ: 12.02.2025 ರಂದು ಇದ್ದಂತೆ
6	[illegible]	[illegible] 9610067929	06.02.2025 ಎನ್‌ಪಿಎ ದಿನಾಂಕ 11.01.2025	POWER HOME VANILLA BRE Loan A/c No. PHR007706992299 Rs. 49,04,982/- ಒಟ್ಟು ಬಾಕಿ ಮೊತ್ತ ರೂ. 48,96,598/- ದಿನಾಂಕ: 03.02.2025 ರಂದು ಇದ್ದಂತೆ
7	[illegible]	[illegible] 9620703099	15.02.2025 ಎನ್‌ಪಿಎ ದಿನಾಂಕ 08.02.2025	POWER HOME BRE Loan A/c No. PHR015101715801 Rs. 22,51,334/- ಒಟ್ಟು ಬಾಕಿ ಮೊತ್ತ ರೂ.23,30,856/- ದಿನಾಂಕ: 12.02.2025 ರಂದು ಇದ್ದಂತೆ
8	[illegible]	[illegible] 9620703099	15.02.2025 ಎನ್‌ಪಿಎ ದಿನಾಂಕ 08.02.2025	POWER HOME BRE Loan A/c No. PHR015105766970 Rs. 12,69,974/- ಒಟ್ಟು ಬಾಕಿ ಮೊತ್ತ ರೂ. 12,16,041/- ದಿನಾಂಕ: 12.02.2025 ರಂದು ಇದ್ದಂತೆ
9	[illegible]	[illegible] ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್ ಮೊ: 8880041234 ರವರನ್ನು ಸಂಪರ್ಕಿಸಿ.	28.02.2025 ಎನ್‌ಪಿಎ ದಿನಾಂಕ 08.02.2025	ASSET POWER Loan A/c No. LPR000901084821 Rs. 3,53,56,710/- ಒಟ್ಟು ಬಾಕಿ ಮೊತ್ತ ರೂ.1,31,59,291/- ದಿನಾಂಕ: 17.02.2025 ರಂದು ಇದ್ದಂತೆ
10	(1) ಮೆ॥ ಗವಿಸಿದ್ದೇಶ್ವರ ಅಗ್ರಿ ಸಲ್ಯೂಷನ್ಸ್ ಪ್ರತಿನಿಧಿ ಸುವ ಪಾಲುದಾರರು ಶ್ರೀ.ಸಂಜಯಕುಮಾರ ಸಜ್ಜನ್ ಮತ್ತು ಶ್ರೀಮತಿ.ಪ್ರೀತಿ ಸಂಗ್ರಾಮ್ ಚೌಧರಿ ಸರ್ವೆ ನಂ.91/8, ಪ್ಲಾಟ್ ನಂ.01, ಮುದಗಲ್ ಅಮರಮ್ಮ ಬಸಣ್ಣ ಕಾಂಪ್ಲೆಕ್ಸ್, ಕುಷ್ಟಗಿ, [illegible]	ಈ ಆಸ್ತಿಯು ಶ್ರೀ. ಸಂಜಯಕುಮಾರ ಸಜ್ಜನ್ ಅವರಿಗೆ ಸೇರಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ಓಪನ್ ಪ್ಲಾಟ್ ನಂ.41, ವಿಸ್ತೀರ್ಣ 30*40, ಒಟ್ಟು ವಿಸ್ತೀರ್ಣ 1200 ಚದರ ಅಡಿ, ಈ ಆಸ್ತಿಯು ಭೂಮಿ ಸರ್ವೆ ನಂ.80/1, ಬ್ರಹ್ಮಪುರ ಗ್ರಾಮ, ಗುಲ್ಬರ್ಗ ತಾಲ್ಲೂಕು ಮತ್ತು ಜಿಲ್ಲೆ, ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ಸಂಖ್ಯೆ.42, ಪಶ್ಚಿಮಕ್ಕೆ: ಪ್ಲಾಟ್ ಸಂಖ್ಯೆ.40, ಉತ್ತರಕ್ಕೆ: 20' ಅಗಲದ ರಸ್ತೆ, ದಕ್ಷಿಣಕ್ಕೆ: ಇತರ ಬಡಾವಣೆ. ಯಾವುದೇ ಮಾಹಿತಿಗಾಗಿ ಶ್ರೀ ಸುಹೇಲ್, 8880999288 ರವರನ್ನು ಸಂಪರ್ಕಿಸಿ.	10.03.2025 ಎನ್‌ಪಿಎ ದಿನಾಂಕ 12.10.2024	Over Draft - Kisan Mitra - AVCP Loan A/c No. 921030011002870 Rs. 32,00,000/- ಒಟ್ಟು ಬಾಕಿ ಮೊತ್ತ ರೂ.27,95,186/- ದಿನಾಂಕ: 12.03.2025 ರಂದು ಇದ್ದಂತೆ
11	[illegible]	[illegible]	12.03.2025 ಎನ್‌ಪಿಎ ದಿನಾಂಕ 19.02.2025	Overdraft Loan A/c No. 919030067136944 Rs.46,00,000/- ಒಟ್ಟು ಬಾಕಿ ಮೊತ್ತ ರೂ.48,82,369/- ದಿನಾಂಕ 06.03.2025 ರಂದು ಇದ್ದಂತೆ; Production Credit (Working Capital) Loan A/c No. 919030067139257 Rs.26,260/- ಒಟ್ಟು ಬಾಕಿ ಮೊತ್ತ ರೂ.26,783/- ದಿನಾಂಕ 06.03.2025 ರಂದು ಇದ್ದಂತೆ
12	[illegible]	[illegible] 9916566630	14.03.2025 ಎನ್‌ಪಿಎ ದಿನಾಂಕ 05.03.2025	POWER HOME BRE Loan A/c No. PHR034206 856551 Rs. 13,22,062/- ಒಟ್ಟು ಬಾಕಿ ಮೊತ್ತ ರೂ.13,50,778/- ದಿನಾಂಕ: 12.03.2025 ರಂದು ಇದ್ದಂತೆ
13	[illegible]	[illegible] 9916566630	14.03.2025 ಎನ್‌ಪಿಎ ದಿನಾಂಕ 05.03.2025	POWER HOME BRE Loan A/c No. PHR02250 5765163 Rs.15,00,000/- ಒಟ್ಟು ಬಾಕಿ ಮೊತ್ತ ರೂ.14,90,597/- ದಿನಾಂಕ: 12.03.2025 ರಂದು ಇದ್ದಂತೆ
14	[illegible]	[illegible] 9916566630	19.03.2025 ಎನ್‌ಪಿಎ ದಿನಾಂಕ 24.06.2024	POWER HOME BRE Loan A/c No. PHR01290 5988165 Rs. 23,16,187/- ಒಟ್ಟು ಬಾಕಿ ಮೊತ್ತ ರೂ.26,15,630/- ದಿನಾಂಕ: 18.03.2025 ರಂದು ಇದ್ದಂತೆ
15	[illegible]	[illegible] 9886960484	13.03.2025 ಎನ್‌ಪಿಎ ದಿನಾಂಕ 08.06.2025	ASSET POWER Loan A/c No. LPR02250 1734719 Rs. 83,90,919/- ಒಟ್ಟು ಬಾಕಿ ಮೊತ್ತ ರೂ.1,19,50,957/- ದಿನಾಂಕ: 12.03.2025 ರಂದು ಇದ್ದಂತೆ
16	[illegible]	[illegible] 9886960484	13.03.2025 ಎನ್‌ಪಿಎ ದಿನಾಂಕ 09.08.2021	POWER HOME VANILLA BRE Loan A/c No. PHR0225 04111538 Rs. 33,90,000/- ಒಟ್ಟು ಬಾಕಿ ಮೊತ್ತ ರೂ. 40,78,447/- ದಿನಾಂಕ: 12.03.2025 ರಂದು ಇದ್ದಂತೆ
17	[illegible]	[illegible] ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್ ಮೊ: 8880041234 ರವರನ್ನು ಸಂಪರ್ಕಿಸಿ.	14.02.2025 ಎನ್‌ಪಿಎ ದಿನಾಂಕ 03.02.2025	Power Home Loan A/c No. PHR000900467758 Rs. 2,53,86,250/- ಒಟ್ಟು ಬಾಕಿ ಮೊತ್ತ ರೂ.1,45,18,403/- ದಿನಾಂಕ: 14.02.2025 ರಂದು ಇದ್ದಂತೆ

[illegible]

ದಿನಾಂಕ : 28.03.2025
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

IN THE COURT OF THE PRINCIPAL SENIOR CIVIL JUDGE & JMFC, AT DEVANAHALLI
O.S.No. 530/2024

BETWEEN: SYED IBRAHIM AND ANOTHER .....PLAINTIFFS
AND : VENKATALAKSHMAMMA & OTHERS ... DEFENDANTS

NOTICE TO PROPOSED DEFENDANT Nos.5 to 7, 10, 14:

1. **NAGAMANI,** W/o Nagaraj, Aged about 43 years, R/at. House No.C46/2, ward No.23, Madhavanagara, behind rural Police station, Gowribidanuru town and Taluk, Chikkaballapura district-561 208.
2. **ALAMELAMMA,** D/o Munipapaiah, Aged about 45 years, R/at. No.67, near Anjineya swami temple, 4th cross, Jalahalli, Bengaluru-560 013.
3. **GOVINDARAJU.D.G,** S/o Gangappa, Aged about 45 years, R/at ward No.6, Muthur, Doddaballapura town and talluk, Bengaluru rural district - 561 203.
4. **VENKATALAKSHMAMMA,** W/o Ramesh Babu, Aged about 40 years, R/at Kurgal village, Vemgal hobli, Kolar taluk, Kolar distict-563102.
5. **M.LAKSHMINARAYANA,** S/o V.Muniyappa, Aged about 56 years, R/at No. 191, Balaji street, 5th cross, Ramamurthynagar, Dooravaninagar post, Bengaluru-560 016.

SCHEDULE

All that piece and parcel of the agricultural property in Survey No.82, measuring to an extent of 02 acres 34 guntas and 06 guntas of kharab land, situated at Kempathimmanahalli Village, Kasba Hobli, Devanahalli Taluk, Bangalore Rural District, bounded on the: **East by :** Property belongs to Gangaram, **West by:** Property belongs to Sukkappa, **North by:** Bande, **South by :** Bande,

Whereas the plaintiffs have filed the instant suit for the relief of specific performance of agreement of sale dated 15.06.2023 executed by defendant Nos. 1 to 4. Plaintiffs have field IA No.3 under Order-1 Rule-10(2) read with section 151 of CPC. You are hereby directed to present before Hon'ble principal senior civil judge, at Devanahalli **on 15-04-2025 at 11 A.M** personally or through a pleader duly instructed by you, failing which the matter will be heard in your absence by placing you ex-parte.

Given under my hand and seal of the Court **on this day 28th March 2025**

By order of the court, Chief Ministerial Officer
Sr Civil Judge & JMFC Court Devanahalli

Sri. MOHAMMED SADEER AHMED, Advocate,
No.59/1, OM road, K.R.Puram,
Benglauru-560 036.

ವಿರಾಮ
ಪ್ರತಿ ಭಾನುವಾರ

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 86/2025

[illegible]

ಮಾನ್ಯ ಒಂದನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ.
ಸಿ.ಮಿಸ್ ನಂ. 68/2025.

ಅರ್ಜಿದಾರರು: 1. ಶ್ರೀಮತಿ. ಮಾರಮ್ಮ, ಕೋಂ. ಲೇಟ್ ಹುಚ್ಚೇಗೌಡ ವಯಸ್ಸು 79 ವರ್ಷಗಳು ಗುಳವಾಡಿ ಗ್ರಾಮ ಬಿಜ್ಜಹಳ್ಳಿ ಅಂಚೆ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

[illegible]

ತಕರಾರು ಇಲ್ಲವೆಂದು ಪರಿಗಣಿಸಿ ಲಭ್ಯವಿರುವ ದಾಖಲಾತಿಗಳ ಮೇಲೆ ತೀರ್ಮಾನ ಮಾಡಲಾಗುವುದು ಎಂದೂ ತಿಳಿಯುವುದು. ಈ ದಿನ ಅಂದರೆ 28/ಮಾರ್ಚಿ/2025 ರಂದು ನ್ಯಾಯಾಲಯದ ಆದೇಶ ಮತ್ತು ಮೋಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು.
ಎಸ್.ವಿ.ವೀರಪ್ಪ
ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ.28/3/2025

ಮಾನ್ಯ ಒಂದನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ.
ಸಿ.ಮಿಸ್ ನಂ. 67/2025.

[illegible]

ತಕರಾರು ಇಲ್ಲವೆಂದು ಪರಿಗಣಿಸಿ ಲಭ್ಯವಿರುವ ದಾಖಲಾತಿಗಳ ಮೇಲೆ ತೀರ್ಮಾನ ಮಾಡಲಾಗುವುದು ಎಂದೂ ತಿಳಿಯುವುದು. ಈ ದಿನ ಅಂದರೆ 28/ಮಾರ್ಚಿ/2025 ರಂದು ನ್ಯಾಯಾಲಯದ ಆದೇಶ ಮತ್ತು ಮೋಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು.
ಎಸ್.ವಿ.ವೀರಪ್ಪ
ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ.28/3/2025

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೊರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೊರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **10.09.2021** ರಂದು ಕರೆದು ಸಾಲಗಾರ **ನೀರಜ್ ಕುಮಾರ್ ಸಿಂಗ್ ಮತ್ತು ನೀತಾ ಕುಮಾರಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 28,68,199.29 (ರೂಪಾಯಿ ಇಪ್ಪತ್ತ ಎಂಟು ಲಕ್ಷದ ಅರುವತ್ತ ಎಂಟು ಸಾವಿರದ ಒಂದು ನೂರ ತೊಂಬತ್ತ ಒಂಬತ್ತು ಮತ್ತು ಪೈಸೆ ಇಪ್ಪತ್ತ ಒಂಬತ್ತು ಮಾತ್ರ)** ಸಾಲ ಖಾತೆ ನಂ. **HHLBAN00248843** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60ದಿನಗಳಾಗುವುದರೊಳಗೆ **24.06.2021** ರವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **24.03.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 28,68,199.29 (ರೂಪಾಯಿ ಇಪ್ಪತ್ತ ಎಂಟು ಲಕ್ಷದ ಅರುವತ್ತ ಎಂಟು ಸಾವಿರದ ಒಂದು ನೂರ ತೊಂಬತ್ತ ಒಂಬತ್ತು ಮತ್ತು ಪೈಸೆ ಇಪ್ಪತ್ತ ಒಂಬತ್ತು ಮಾತ್ರ) 24.06.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ. 004, ತಳ ಮಹಡಿ, ಶ್ರೀ ವಾಣಿ ಸಿಂಫೊನಿ, ಹಳೇ ಸರ್ವೆ ನಂ. 30/23, ಹೊಸ ಸರ್ವೆ ನಂ. 30/35, ತಿರುಪಾಳ್ಯ ಗ್ರಾಮ, ಜಿಗಣಿ, ಆನೆಕಲ್, ಬೆಂಗಳೂರು, ಕಾರ್ನಾಟಕ-560099.

ದಿನಾಂಕ: 24.03.2025
ಸ್ಥಳ : ಬೆಂಗಳೂರು

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ರಾಜಾನುಕುಂಟೆಯಲ್ಲಿ ಮಹಿಳಾ ಗ್ರಾಮಸಭೆ, ಸೀಮಂತ ಕಾರ್ಯಕ್ರಮದಲ್ಲಿ ಶಾಸಕರು ಭಾಗಿ

ಮಹಿಳೆಯರಿಗೆ ರಾಷ್ಟ್ರ ಮುನ್ನಡೆಸುವ ಶಕ್ತಿ

ಯಲಹಂಕ: ಮಹಿಳೆಯರು ಅಬಲೆಯರಲ್ಲ, ರಾಷ್ಟ್ರವನ್ನು ಮುನ್ನಡೆಸಬಲ್ಲ ಮನೋಬಲ ಮತ್ತು ಬುದ್ಧಿಬಲ ಅವರಿಗಿದೆ ಅದನ್ನು ಅಭಿವ್ಯಕ್ತಗೊಳಿಸುವ ದಿಸೆಯಲ್ಲಿ ಪ್ರಯತ್ನಿಸಬೇಕು ಎಂದು ಶಾಸಕ ಎಸ್. ಆರ್. ವಿಶ್ವನಾಥ್ ಕರೆ ನೀಡಿದ್ದಾರೆ.

ರಾಜಾನುಕುಂಟೆ ಗ್ರಾ.ಪಂ. ಮತ್ತು ವಿಶ್ವವಾಣಿ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿದ್ದ 2024-25ನೇ ಸಾಲಿನ ಮಹಿಳಾ ಗ್ರಾಮಸಭೆ ಮತ್ತು ಸೀಮಂತ ಕಾರ್ಯಕ್ರಮ ಉದ್ಘಾಟಿಸಿದ ಅವರು 'ಭಾರತೀಯ ಪರಂಪರೆಯಲ್ಲಿ ಅನಾದಿಕಾಲ ದಿಂದಲೂ ಸ್ತ್ರೀಯರಿಗೆ ಅತ್ಯಂತ ಪೂಜ್ಯ ಸ್ಥಾನವಿದೆ. 'ಭಾರತಮಾತೆ, ಶಕ್ತಿದೇವತೆ ಪಾರ್ವತಿ, ವಿದ್ಯಾದೇವತೆ ಸರಸ್ವತಿ, ಸಂಪತ್ತಿನ ಅಧಿದೇವತೆ ಲಕ್ಷ್ಮೀ, ಹರಿಯುವ ಗಂಗೆ, ತುಂಗೆ, ಯಮುನೆ ಹೀಗೆ ಎಲ್ಲವೂ ಸ್ತ್ರೀ ಶಕ್ತಿಯೇ ಆಗಿದೆ ಎಂದು ಬಣ್ಣಿಸಿದರು.

ವೀರ ಮಹಿಳೆಯರನ್ನು ಸ್ಮರಿಸಿಕೊಳ್ಳಿ

ಕೌಟುಂಬಿಕ ನಿರ್ವಹಣೆಯ ಮಹತ್ತರ ಜವಾಬ್ದಾರಿ ಹೊತ್ತಿರುವ ಮಹಿಳೆಯರಿಗೆ ರಾಷ್ಟ್ರವನ್ನು ಮುನ್ನಡೆಸಬಲ್ಲ ಮನೋಬಲ ಮತ್ತು ಆತ್ಮಸ್ಥೈರ್ಯ ಎಲ್ಲವೂ ಇದೆ. ಪುರಾಣಗಳ ಪುಟ ತೆರೆದರೆ ದೈತ್ಯ ರಾಕ್ಷಸರನ್ನು ಸಂಹಾರ ಮಾಡಿರುವುದು ಸ್ತ್ರೀಶಕ್ತಿ ಎಂಬುದು ತಿಳಿಯುತ್ತದೆ. ಆದರೆ ಇತ್ತೀಚಿನ ನಮ್ಮ ಮಹಿಳೆಯರು ಕ್ಷುಲ್ಲಕ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ದುರ್ಬಲ ಮನಸ್ಥಿತಿಗೆ ಒಳಗಾಗುತ್ತಿರುವುದು ದುರ್ದೈವದ ಸಂಗತಿ, ಇಂತಹ ಮನಸ್ಥಿತಿಗೆ ಒಳಗಾಗುವ ಮುನ್ನ ನಮ್ಮ ವೀರ ಮಹಿಳೆಯರಾದ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ಝಾನ್ಸಿರಾಣಿ ಲಕ್ಷ್ಮೀಬಾಯಿ, ರಾಕ್ಷಸರನ್ನು ಸಂಹಾರ ಮಾಡಿರುವ ದುರ್ಗೆಯಂತಹ ಮಹಿಳಾ ಮಹಾಶಕ್ತಿಯನ್ನೊಮ್ಮೆ ಸ್ಮರಿಸಿಕೊಳ್ಳಿ, ಹೆಣ್ಣು ಮಕ್ಕಳಿಗೂ ಸಹ ಇಂತಹ ವೀರ ಮಹಿಳೆಯರ ಕುರಿತು ತಿಳಿಸಿ ಎಂದು ಶಾಸಕ ವಿಶ್ವನಾಥ್ ಸಲಹೆ ನೀಡಿದರು.

ಮಹಿಳಾ ಗ್ರಾಮಸಭೆ, ಮಕ್ಕಳ ಗ್ರಾಮಸಭೆ, ವಿಶೇಷ ಚೇತನರ ಗ್ರಾಮಸಭೆ, ಸೀಮಂತ ಮುಂತಾದ ಕಾರ್ಯಕ್ರಮಗಳನ್ನು ಅರ್ಥಪೂರ್ಣ ರೀತಿಯಲ್ಲಿ ಆಚರಿಸಿದ ರಾಜಾನುಕುಂಟೆ ಗ್ರಾಮ ಪಂಚಾಯ್ತಿ ಸದಸ್ಯರು ಮತ್ತು ಸಿಬ್ಬಂದಿ ಪರಿಶ್ರಮ ಶ್ಲಾಘನೀಯ ಎಂದು ಯಲಹಂಕ ಶಾಸಕರು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ರಾಜಾನುಕುಂಟೆ ಗ್ರಾ.ಪಂ.ಅಧ್ಯಕ್ಷೆ ಭವಾನಿ ಶ್ರೀನಿವಾಸ್, ಮಾಜಿ ಅಧ್ಯಕ್ಷರಾದ ಎಸ್.ಜಿ.ನರಸಿಂಹಮೂರ್ತಿ (ಎಸ್.ಟಿ.ಡಿ.ಮೂರ್ತಿ), ಅದ್ದಿಗಾನಹಳ್ಳಿ ವೀರಣ್ಣ, ಪಿಡಿಒ ನಾಗರಾಜ್, ಗ್ರಾ.ಪಂ.ಸದಸ್ಯರಾದ ಆರ್.ಡಿ.ರಾಜಣ್ಣ, ಸಂತೋಷ್ ಕುಮಾರ್ ಎನ್., ಸಾದೇನಹಳ್ಳಿ ಚಿಕ್ಕಣ್ಣ, ನಾಗೇಶ್, ಹನುಮೇಗೌಡ, ಸುಜಾತಮ್ಮ, ಗೋವಿಂದರಾಜು, ರಘು, ಮಮತಾ ರಮೇಶ್, ಮುತ್ತು ವೇಣು, ತಾಲೂಕು ವೈದ್ಯಾಧಿಕಾರಿ ಡಾ.ಶೈಲಕುಮಾರ್, ಸಮೃದ್ಧಿ ಸಂಜೀವಿನಿ ಅಧ್ಯಕ್ಷೆ ಪ್ರಮಿಳಾ, ಪಂಚಾಯಿತಿ ಕಾರ್ಯದರ್ಶಿ ರಾಕೇಶ್ ಸೇರಿದಂತೆ ಗ್ರಾಮ ಪಂಚಾಯಿತಿಯ ಇತರ ಸದಸ್ಯರಿದ್ದರು.

ರಾಜಾನುಕುಂಟೆಯಲ್ಲಿ ನಡೆದ ಮಹಿಳಾ ಗ್ರಾಮಸಭೆ ಮತ್ತು ಸೀಮಂತ ಕಾರ್ಯಕ್ರಮವನ್ನು ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಉದ್ಘಾಟಿಸಿದರು. ಡಾ.ವಾಣಿಶ್ರೀ ವಿಶ್ವನಾಥ್ ಮೊದಲಾದವರಿದ್ದರು.

ಬಹುಮಾನ ವಿತರಣೆ

ಮಹಿಳಾ ಗ್ರಾಮಸಭೆಯಲ್ಲಿ 77 ಗರ್ಭಿಣಿಯರಿಗೆ ಸೀಮಂತ, ಕ್ರೀಡಾಕೂಟದಲ್ಲಿ ವಿಜೇತ ಮಹಿಳೆರಿಗೆ ಬಹುಮಾನ ವಿತರಣೆ, ಮಹಿಳೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಫ್ಯಾಷನ್ ಶೋ, ಮಹಿಳಾ ಸ್ವಸಹಾಯ ಗುಂಪುಗಳ ಮಹಿಳೆಯರಿಂದ ಮಾಸಿಕ ಸಂತೆ, ಉಡುಗೊರೆ ವಿತರಣೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಮಹಿಳೆಯರೇ ಸಮಾಜದ ಶಿಲ್ಪಿಗಳು

ಕಾರ್ಯಕ್ರಮದಲ್ಲಿ ವಿಶ್ವವಾಣಿ ಫೌಂಡೇಷನ್ ನ ಮುಖ್ಯಸ್ಥೆ ಹಾಗೂ ಆರ್‌ಎಸ್‌ಎಸ್‌ಎನ್ ಬ್ಯಾಂಕ್ ನ ಅಧ್ಯಕ್ಷೆ ಡಾ.ವಾಣಿಶ್ರೀ ವಿಶ್ವನಾಥ್ ಮಾತನಾಡಿ 'ಮಹಿಳೆಯರು ಸಮಾಜದ ನಿಜವಾದ ವಾಸ್ತುಶಿಲ್ಪಿಗಳು, ಕುಟುಂಬ ನಿರ್ವಹಣೆಯ ಜೊತೆಗೆ ಸಾಧನೆಯ ಹಾದಿಯಲ್ಲಿ ದಾಪುಗಾಲಿಡುತ್ತಿರುವ ಮಹಿಳೆಯರ ಕಾರ್ಯಕೌಶಲ್ಯತೆ ಪ್ರಶಂಸನೀಯ. ರಾಜಾನುಕುಂಟೆ ಗ್ರಾಮ ಪಂಚಾಯಿತಿ ಆಯೋಜಿಸಿರುವ ಮಹಿಳಾ ಗ್ರಾಮ ಸಭೆಯ ಈ ವೇದಿಕೆಯಲ್ಲಿ 70ಕ್ಕೂ ಹೆಚ್ಚು ಗರ್ಭಿಣಿ ತಾಯಂದಿರಿಗೆ ಸೀಮಂತ ಮಾಡುತ್ತಿರುವುದು ಸ್ತುತ್ಯರ್ಹ ಕಾರ್ಯವಾಗಿದೆ. ವಿಶ್ವವಾಣಿ ಫೌಂಡೇಶನ್ ಮಹಿಳಾ ಸ್ವಾವಲಂಬನೆಯ ನಿಟ್ಟಿನಲ್ಲಿ ಹಲವಾರು ಸೇವಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿದ್ದು, ಮಹಿಳೆಯರನ್ನು ಆರ್ಥಿಕ ಶಕ್ತಿಯಾಗಿ ರೂಪಿಸುವ ದಿಸೆಯಲ್ಲಿ ಶ್ರಮಿಸುತ್ತಿದೆ ಎಂದರು.

ನ್ಯಾಯಾಂಗ ನಿಂದನೆ ಅರ್ಜಿಗೆ ತಡೆ ಕೋರಿದ್ದ ಮನವಿ ಸುಪ್ರೀಂಕೋರ್ಟ್‌ನಲ್ಲಿ ತಿರಸ್ಕೃತ

ಒತ್ತುವರಿ ತೆರವು ಪ್ರಕರಣ: ಎಚ್‌ಡಿಕೆಗೆ ಹಿನ್ನಡೆ

ಬೆಂಗಳೂರು: ಬಿಡದಿಯ ಕೇತಗಾನಹಳ್ಳಿ ಬಳಿ ಸರಕಾರಿ ಜಮೀನು ಒತ್ತುವರಿ ಪ್ರಕರಣ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ಸಂಕಷ್ಟ ತಂದಿಟ್ಟಿದೆ. ಸಮಾಜ ಪರಿವರ್ತನಾ ಸಮುದಾಯ ದವರ ಎಸ್.ಆರ್.ಹಿರೇಮಠ ದಾಖಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಗೆ ತಡೆ ಕೋರಿ ಕುಮಾರಸ್ವಾಮಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿ ಆದೇಶ ಹೊರಡಿಸಿದೆ.

ಮತ್ತೊಂದೆಡೆ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಾಂಗ ಅರ್ಜಿ ವಿಚಾರಣೆ ಬಾಕಿ ಎಂದು ಕರ್ನಾಟಕ ಹೈಕೋರ್ಟ್‌ನಿಂದ ರಿಲೀಫ್ ಪಡೆದಿದ್ದರು. ಆದರೆ ಇದೀಗ ನ್ಯಾಯಾಂಗ ನಿಂದನೆ ಅರ್ಜಿಗೆ ತಡೆಕೋರಲು ಸಲ್ಲಿಸಿದ್ದ ನ್ಯಾಯಲಯ ನಿರಾಕರಿಸಿದೆ.

ಹೈಕೋರ್ಟ್ ಆದೇಶ: ಮತ್ತೊಂದೆಡೆ ಆರು ಎಕರೆ ಒತ್ತುವರಿ ಸಂಬಂಧ ಸ್ಥಳೀಯ ತಹಸೀಲ್ದಾರ್ ನೀಡಿರುವ ನೋಟಿಸ್ ಪ್ರಶ್ನಿಸಿ ಎಚ್.ಡಿ. ಕುಮಾರಸ್ವಾಮಿ ಸಲ್ಲಿಸಿದ್ದ ಅರ್ಜಿಯೂ ಸೋಮವಾರ ನ್ಯಾ.ಎನ್.ಎಸ್. ಸಂಜಯಗೌಡ ಅವರಿದ್ದ ಏಕಸದಸ್ಯ ಪೀಠದ ಮುಂದೆ ವಿಚಾರಣೆ ನಡೆದಿತ್ತು. ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಉದಯ್ ಹೊಳ್ಳ, ಅಧಿಕಾರ ವ್ಯಾಪ್ತಿ ಇಲ್ಲದಿದ್ದರೂ ತಹಸೀಲ್ದಾರ್ ಅರ್ಜಿದಾರರಿಗೆ ನೋಟಿಸ್ ನೀಡಿದ್ದಾರೆ. 1985ರಲ್ಲಿಯೇ ಕ್ರಯಪತ್ರವಾಗಿರುವ ಜಮೀನಿಗೆ ಈಗ ನೋಟಿಸ್ ನೀಡಲಾಗಿದೆ. ನ್ಯಾಯಾಂಗ ನಿಂದನೆ ಪ್ರಕರಣವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಹಾಗಾಗಿ, ತಹಸೀಲ್ದಾರ್ ನೋಟಿಸ್‌ಗೆ ತಡೆ ನೀಡಬೇಕು ಎಂದು ಕೋರಿದ್ದರು.

ಹೀಗಾಗಿ ಹೈಕೋರ್ಟ್, ಮಾ.27 ರವರೆಗೂ ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಸೂಚಿಸಿ ವಿಚಾರಣೆಯನ್ನು ಮಾ.27ಕ್ಕೆ ನಿಗದಿಪಡಿಸಿತ್ತು. ಆದರೆ ಇದೀಗ ನ್ಯಾಯಾಂಗ ನಿಂದನೆ ಅರ್ಜಿಗೆ ತಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ.

ಹೈಕೋರ್ಟ್ ಆದೇಶ ಪಾಲನೆಯಾಗಿಲ್ಲ

ಎಚ್.ಡಿ. ಕುಮಾರಸ್ವಾಮಿ ಮತ್ತು ಅವರ ಸಂಬಂಧಿ ಡಿ.ಸಿ.ತಮ್ಮಣ್ಣ ಮತ್ತಿತರರು 2014ರಲ್ಲಿ ರಾಮನಗರದ ಬಿಡದಿ ಬಳಿಯ ಕೇತಗಾನಹಳ್ಳಿಯಲ್ಲಿ ವಿವಿಧ ಎಂಟು ಸರ್ವೇ ನಂಬರ್‌ಗಳ ಒಟ್ಟು 14 ಎಕರೆ ಭೂಮಿ ಒತ್ತುವರಿ ಮಾಡಿದ್ದಾರೆಂಬ ಆರೋಪವಿದೆ. ಈ ಸಂಬಂಧ ಲೋಕಾಯುಕ್ತ ನೀಡಿದ್ದ ವರದಿ ಜಾರಿಗೊಳಿಸಲು ಹೈಕೋರ್ಟ್ ಆದೇಶ ನೀಡಿದ್ದರೂ ಅದನ್ನು ಪಾಲನೆ ಮಾಡಿಲ್ಲ ಎಂದು ಆರೋಪಿಸಿ ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್.ಹಿರೇಮಠ ಅವರು ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿದ್ದರು. ಈ ಅರ್ಜಿ ಪರಿಶೀಲಿಸಿದ್ದ ಹೈಕೋರ್ಟ್ ವಿಭಾಗೀಯ ಪೀಠ ಭೂಮಿ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿತ್ತು. ಆನಂತರ ಜಮೀನಿನ ಸರ್ವೇ ಕಾರ್ಯ ನಡೆಸಿದ ಸ್ಥಳೀಯ ತಹಸೀಲ್ದಾರ್, ಎಚ್‌ಡಿಕೆ ಮತ್ತಿತರರಿಗೆ ಕಾನೂನಿನ್ವಯ ನೋಟಿಸ್ ಜಾರಿಗೊಳಿಸಿದ್ದರು. ಅದನ್ನು ಪ್ರಶ್ನಿಸಿ ಎಚ್‌ಡಿಕೆ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಆದರೆ ಇದೀಗ ಸುಪ್ರೀಂಕೋರ್ಟ್‌ನಲ್ಲಿ ಕುಮಾರಸ್ವಾಮಿ ಅರ್ಜಿ ವಜಾಗೊಂಡಿದೆ.

ರಾಜರಾಜೇಶ್ವರಿ ನಗರದಲ್ಲಿರುವ ಲಲಿತ್ ಕ್ಯಾಸಲ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಯುಕೆಜಿ ಪದವಿ ದಿನವನ್ನು ಉತ್ಸಾಹದಿಂದ ಸಂಭ್ರಮಿಸಲಾಯಿತು. ಪದವಿ ಸಮವಸ್ತ್ರವನ್ನು ಧರಿಸಿದ ಪುಟಾಣಿಗಳು ಸಂಭ್ರಮಿಸಿದರು. ಈ ವೇಳೆ ಅಧ್ಯಕ್ಷೆ ಡಾ.ಬಿ.ಎ.ಕಲಾ ಶಂಕರ್ ಮತ್ತು ಹೋಮಿಯೋಪತಿ ಮತ್ತು ಜೀವನ ಶೈಲಿ ತಜ್ಞೆ ಡಾ.ರಮ್ಯಾಶ್ರೀ ಜಿ.ಎಸ್ ಉಪಸ್ಥಿತರಿದ್ದರು.

ಏಳು ದಿನಗಳ ಆನಂದ ನರ್ತನ ಉತ್ಸವ ನಾಳೆ

ಬೆಂಗಳೂರು: ಆನಂದ ನರ್ತನ ಉತ್ಸವ ಕಾರ್ಯಕ್ರಮವು ಮಾ.30 ರಂದು ಸಂಜೆ 7 ಗಂಟೆಗೆ ಯಲಹಂಕದ ಹಾರೋಹಳ್ಳಿಯ ಕಲಾನಿಧಿ ಆರ್ಟ್ಸ್ ಅಕಾಡೆಮಿಯಲ್ಲಿ ನಡೆಯಲಿದೆ. ಕಲಾನಿಧಿ ಆರ್ಟ್ಸ್ ಅಕಾಡೆಮಿ ನೃತ್ಯಗುರು ಪವಿತ್ರ ಶ್ರೀಧರ್ ಆಯೋಜಿಸಿರುವ ಏಳುದಿನಗಳ ಭಕ್ತಿ ಸಮರ್ಪಣೆಯ ನೃತ್ಯೋತ್ಸವ ಕಾರ್ಯಕ್ರಮವನ್ನು ನೂಪುರ ಸ್ಕೂಲ್ ಆಫ್ ಭರತನಾಟ್ಯ ನಿರ್ದೇಶಕಿ ಉದ್ಘಾಟಿಸಲಿದ್ದಾರೆ. ಪವಿತ್ರಾ ಶ್ರೀಧರ್ ಶಿಷ್ಯರಿಂದ ನೃತ್ಯ ಪ್ರಸ್ತುತಿ ನಡೆಯಲಿದೆ. ಆಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ರೀಲ್ಸ್ ಪ್ರಕರಣ: ವಿನಯ್ ಗೌಡ, ರಜತ್‌ಗೆ ಜಾಮೀನು

ಬೆಂಗಳೂರು: ಮಚ್ಚು ಹಿಡಿದು ರೀಲ್ಸ್ ಮಾಡಿದ ಆರೋಪದಡಿ ಬಂಧಿತರಾಗಿರುವ ಕನ್ನಡ ಬಿಗ್‌ಬಾಸ್ ರಿಯಾಲಿಟಿ ಶೋ ಮಾಜಿ ಸ್ಪರ್ಧಿಗಳಾದ ರಜತ್ ಕಿಶನ್ ಹಾಗೂ ವಿನಯ್ ಗೌಡ ಅವರಿಗೆ 24ನೇ ಎಸಿಎಂಎಂ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿ ಆದೇಶಿಸಿದೆ.

ಮೂರು ದಿನಗಳ ಕಾಲ ಪೊಲೀಸ್ ಕಸ್ಟಡಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ಇಂದು ಪೊಲೀಸರು ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರು. ವಾದ ಆರಂಭಿಸಿದ ಸರಕಾರಿ ಅಭಿಯೋಜಕ ಹರೀಶ್ ಗೌಡ, ಆರೋಪಿತರ ವಿಚಾರಣೆ ನಡೆಸಲಾಗಿದೆ. ತನಿಖೆ ದೃಷ್ಟಿಯಿಂದ ಇನ್ನೂ ಕೆಲವು ದಿನ ವಶಕ್ಕೆ ನೀಡಬೇಕು ಎಂದು ಮನವಿ ಮಾಡಿದರು.

ಆರೋಪಿಗಳ ಪರ ಪ್ರಕಾಶ್ ವಾದ ಮಂಡಿಸಿದ ವಕೀಲರು, ಪ್ರಕರಣ ಸಂಬಂಧ ಮೂರು ದಿನಗಳ ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಆರೋಪಿತರಿಗೆ ಯಾವುದೇ ಅಪರಾಧ ಹಿನ್ನೆಲೆಯಿಲ್ಲ. ಪೊಲೀಸ್ ತನಿಖೆಗೆ ಸಹಕರಿಸಿದ್ದಾರೆ. ಹೀಗಾಗಿ, ಜಾಮೀನು ಅರ್ಜಿ ಪುರಸ್ಕರಿಸಬೇಕು ಎಂದು ಕೋರಿದರು. ವಾದ, ಪ್ರತಿವಾದ ಆಲಿಸಿದ ನ್ಯಾಯಾಲಯ, ಇಬ್ಬರು ಆರೋಪಿಗಳಿಗೆ ಜಾಮೀನು ನೀಡಿ ಆದೇಶಿಸಿತು.

ಕೋರ್ಟ್ ಷರತ್ತುಗಳೇನು?

ಸಾಕ್ಷ್ಯನಾಶಕ್ಕೆ ಯತ್ನಿಸಬಾರದು ಮತ್ತು ಇದೇ ರೀತಿಯಾಗಿ ಮತ್ತೆ ಘಟನೆ ಮರುಕಳಿಸಬಾರದು ಎಂದು ಷರತ್ತು ವಿಧಿಸಿ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದ್ದ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಫುಡ್ ಅವಾರ್ಡ್ ಕಾರ್ಯಕ್ರಮದಲ್ಲಿ ಜಯನಗರದ ಮಾತಾಸ್ ಕಾಫಿಗೆ ಬೆಸ್ಟ್ ಫಿಲ್ಟರ್ ಕಾಫಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಾತಾಸ್ ಕಾಫಿ ಮಾಲೀಕ ವಿಶ್ವನಾಥ ಅಡಿಗ ಪ್ರಶಸ್ತಿ ಸ್ವೀಕರಿಸಿದರು.ಫುಡ್ ಲವರ್ಸ್ ಟಿವಿ ಕೃಪಾಲ್ ಅಮ್ಮಣ್ಣ, ಇತಿಹಾಸಕಾರ ಪಿ.ಕೆ.ಮೋಹನಕುಮಾರ್, ಹೋಟೆಲ್ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಹೊಳ್ಳ, ಪಿ.ಸಿ.ರಾವ್, ಅರುಣ್ ಅಡಿಗ ಇದ್ದರು.

ಅರ್ಜಿದಾರ ಕಂಪನಿಗಳ ಇಕ್ವಿಟಿ ಷೇರುದಾರರ ಮತ್ತು ಆಧಾರರಹಿತ ಟ್ರೇಡ್ ಕ್ರೆಡಿಟರುಗಳ ಹಾಗೂ ಅರ್ಜಿದಾರ ಕಂಪನಿ ಸಂ.2/ವರ್ಗಾಯಿತ ಕಂಪನಿಯ ಆಧಾರಸಹಿತ ಕ್ರೆಡಿಟರುಗಳ ಮತ್ತು ಆಧಾರರಹಿತ ಲೋನ್ ಕ್ರೆಡಿಟರುಗಳ ಸಭೆಯನ್ನು ನಡೆಸುವುದರಿಂದ ವಿನಾಯಿತಿ ನೀಡಿದ ಎಂಬುದರ ಬಗ್ಗೆ ಸೂಚನೆ ಜಾಹೀರಾತು.

ನಮೂನೆ ಸಂ.ಸಿಎಎ. 2

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಬೆಂಗಳೂರಿನ ಪೀಠದ ಸಮಕ್ಷಮದಲ್ಲಿ [ಕಂಪನಿಗಳ ಅಧಿನಿಯಮ, 2013ರ ಕಲಮು 230(3) ಮತ್ತು ಕಂಪನಿಗಳ (ರಾಜಿಗಳು, ಒಪ್ಪಂದಗಳು, ಮತ್ತು ವಿಲೀನಗಳು) ನಿಯಮಗಳು, 2016ರ ನಿಯಮಗಳು 6 ಮತ್ತು 7 ರ ಅನ್ವಯ]

ಮತ್ತು

ಈ ವಿಷಯದಲ್ಲಿ: ಕಂಪನಿಗಳ ಅಧಿನಿಯಮ 2013ರ 230 ರಿಂದ 232 ಕಲಮುಗಳ ಮತ್ತು ಅನ್ವಯವಾಗುವ ಇತರ ನಿಯಮಗಳ ಮತ್ತು ಅವುಗಳ ಅಡಿಯಲ್ಲಿ ರಚಿಸಲಾದ ಮತ್ತು ಕಾಲ ಕಾಲಕ್ಕೆ ಜಾರಿಯಲ್ಲಿರುವ ನಿಯಮಾವಳಿ

ಮತ್ತು

ಹ್ಯಾಪಿಯೆಸ್ಟ್ ಮೈಂಡ್ಸ್ ಎಡುಟೆಕ್ ಪ್ರೈವೇಟ್ ಲಿಮಿಟೆಡ್ ಕಂಪನಿಯನ್ನು (ಅರ್ಜಿದಾರ ಕಂಪನಿ ನಂ.1/ವರ್ಗಾಯಿಸಲ್ಪಡುವ ಕಂಪನಿ)

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್ ಕಂಪನಿಯ ಜೊತೆ, (ಅರ್ಜಿದಾರ ಕಂಪನಿ ಸಂ.2/ವರ್ಗಾಯಿತ ಕಂಪನಿ)

ಮತ್ತು

ಅವರವರ ಷೇರುದಾರರನ್ನು ಮತ್ತು ಕ್ರೆಡಿಟರುಗಳನ್ನು ವಿಲೀನಗೊಳಿಸುವ ಯೋಜನೆಯ ವಿಷಯದಲ್ಲಿ.

ಕಂಪನಿ ಅರ್ಜಿ ಸಿಎ(ಸಿಎಎ) ನಂ.48/ಬಿಬಿ/2024

ಹ್ಯಾಪಿಯೆಸ್ಟ್ ಮೈಂಡ್ಸ್ ಎಡುಟೆಕ್ ಪ್ರೈವೇಟ್ ಲಿಮಿಟೆಡ್ (ಮುಂಚೆ 'ಮೆಕ್‌ಮಿಲನ್ ಲರ್ನಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್/ಇಂಟೆಲಸ್ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿತ್ತು) (ಸಿಐಎನ್: **U72200KA2015FTC082947**) ಇದೊಂದು ಕಂಪನಿಗಳ ಕಾಯಿದೆ, 2013ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕಂಪನಿ. ನೋಂದಾಯಿತ ಕಛೇರಿ ವಿಳಾಸ: ಎಸ್‌ಜೆಆರ್ ಇಕ್ವಿನಾಕ್ಸ್, ಸರ್ವೇ ನಂ.47/8, ದೊಡ್ಡತೊಗೂರ್ ಗ್ರಾಮ, ಬೇಗೂರು ಹೋಬ್ಳಿ, ಎಲೆಕ್ಟ್ರಾನಿಕ್ಸ್ ಸಿಟಿ ಫೇಸ್ 1, ಹೊಸೂರು ರಸ್ತೆ, ಎಲೆಕ್ಟ್ರಾನಿಕ್ಸ್ ಸಿಟಿ, ಬೆಂಗಳೂರು, ಕರ್ನಾಟಕ, ಭಾರತ, 560100. **ಪ್ರತಿನಿಧಿ: ಶ್ರೀ ನುಗ್ಗೇಹಳ್ಳಿ ಕೃಷ್ಣಮಾಚಾರ್ಯ ಶ್ರೀರಂಗನಾರಾಯಣನ್, ಅಧಿಕೃತ ಸಹಿದಾರ**	**... ಅರ್ಜಿದಾರ ಕಂಪನಿ ನಂ.1/ವರ್ಗಾಯಿಸಲ್ಪಡುವ ಕಂಪನಿ**
ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್ (ಸಿಐಎನ್: **L72900KA2011PLC057931)** ಇದೊಂದು ಕಂಪನಿಗಳ ಕಾಯಿದೆ, 1956ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕಂಪನಿ. ನೋಂದಾಯಿತ ಕಛೇರಿ ವಿಳಾಸ: #53/1-4, ಹೊಸೂರು ಮುಖ್ಯ ರಸ್ತೆ, ಮಡಿವಾಳ (ಮಡಿವಾಳ ಪೊಲೀಸು ಠಾಣೆ ಪಕ್ಕ), ಬೆಂಗಳೂರು, ಕರ್ನಾಟಕ, ಭಾರತ, 560068. **ಪ್ರತಿನಿಧಿ: ಶ್ರೀ ಪ್ರವೀಣಕುಮಾರ್ ದರ್ಶನ್‌ಕರ್, ಅಧಿಕೃತ ಸಹಿದಾರ**	**... ಅರ್ಜಿದಾರ ಕಂಪನಿ ನಂ.2/ವರ್ಗಾಯಿತ ಕಂಪನಿ**

ಈ ಮೂಲಕ ಸೂಚನೆ ನೀಡುತ್ತಿರುವುದೇನೆಂದರೆ, ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಬೆಂಗಳೂರು ಪೀಠವು (**"ನ್ಯಾಯಮಂಡಳಿ"**) 25ನೇ ಮಾರ್ಚ್, 2025 ರಂದು ಹೊರಡಿಸಿರುವ ಆದೇಶದ ಪ್ರಕಾರ: ಹ್ಯಾಪಿಯೆಸ್ಟ್ ಮೈಂಡ್ಸ್ ಎಡುಟೆಕ್ ಪ್ರೈವೇಟ್ ಲಿಮಿಟೆಡ್ (ಮುಂಚೆ 'ಮೆಕ್‌ಮಿಲನ್ ಲರ್ನಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್/ಇಂಟೆಲಸ್ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿತ್ತು) (ಅರ್ಜಿದಾರ ಕಂಪನಿ ನಂ.1/ವರ್ಗಾಯಿಸಲ್ಪಡುವ ಕಂಪನಿ) ಕಂಪನಿಯನ್ನು ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್ (ಅರ್ಜಿದಾರ ಕಂಪನಿ ನಂ.2/ವರ್ಗಾಯಿತ ಕಂಪನಿ) ಕಂಪನಿಯ ಜೊತೆ ಹಾಗೂ ಅವರವರ ಷೇರುದಾರರನ್ನು ಮತ್ತು ಕ್ರೆಡಿಟರುಗಳನ್ನು ಮೇಲೆ ಹೇಳಿರುವಂತೆ ವಿಲೀನಗೊಳಿಸುವ ಯೋಜನೆಯ ವಿಷಯದಲ್ಲಿ ಅರ್ಜಿದಾರ ಕಂಪನಿಗಳ ಇಕ್ವಿಟಿ ಷೇರುದಾರರ ಮತ್ತು ಆಧಾರರಹಿತ ಟ್ರೇಡ್ ಕ್ರೆಡಿಟರುಗಳ ಮತ್ತು ಅರ್ಜಿದಾರ ಕಂಪನಿ ಸಂ.2/ವರ್ಗಾಯಿತ ಕಂಪನಿಯ ಆಧಾರಸಹಿತವಾದ ಕ್ರೆಡಿಟರುಗಳ ಮತ್ತು ಆಧಾರರಹಿತ ಲೋನ್ ಕ್ರೆಡಿಟರುಗಳ ಸಭೆಯನ್ನು ನಡೆಸುವುದರಿಂದ ವಿನಾಯಿತಿ ದೊರೆತಿದೆ.

ಮೇಲೆ ಹೇಳಿರುವ ಆದೇಶದ ಮತ್ತು ಅದರಲ್ಲಿನ ನಿರ್ದೇಶನದ ಪ್ರಕಾರ, ಈ ಮೂಲಕ ಸೂಚನೆ ನೀಡುತ್ತಿರುವುದೇನೆಂದರೆ: ಮಾನ್ಯ ನ್ಯಾಯಮಂಡಳಿಯು ಅರ್ಜಿದಾರ ಕಂಪನಿಗಳ ಇಕ್ವಿಟಿ ಷೇರುದಾರರ ಮತ್ತು ಆಧಾರರಹಿತ ಟ್ರೇಡ್ ಕ್ರೆಡಿಟರುಗಳ ಮತ್ತು ಅರ್ಜಿದಾರ ಕಂಪನಿ ಸಂ.2/ವರ್ಗಾಯಿತ ಕಂಪನಿಯ ಆಧಾರಸಹಿತ ಕ್ರೆಡಿಟರುಗಳ ಮತ್ತು ಆಧಾರರಹಿತ ಲೋನ್ ಕ್ರೆಡಿಟರುಗಳ ಸಭೆಯನ್ನು ನಡೆಸುವುದರಿಂದ ವಿನಾಯಿತಿ ನೀಡಿ ಆದೇಶಿಸಿದೆ. ಈ ಆದೇಶದಿಂದ ಯಾರಿಗಾದರೂ ತೊಂದರೆಯಾಗಿದ್ದರೆ ಅಂತಹವರು ಎನ್‌ಸಿಎಲ್‌ಟಿ ಗೆ ಮಿಸಲೇನಿಯಸ್ ಅರ್ಜಿಯನ್ನು ಸಲ್ಲಿಸಬಹುದು.

25ನೇ ಮಾರ್ಚ್ 2025ರ ಆದೇಶದ ಪ್ರತಿಯನ್ನು ಮತ್ತು ವಿಲೀನಗೊಳಿಸುವ ಯೋಜನೆಯನ್ನು ಮೇಲೆ ತಿಳಿಸಿರುವ ವಿಳಾಸದಲ್ಲಿರುವ ವರ್ಗಾಯಿತ ಕಂಪನಿಯ ನೋಂದಾಯಿತ ಕಛೇರಿಯಿಂದ ಯಾವುದೇ ಶುಲ್ಕವಿಲ್ಲದೆ ಪಡೆದುಕೊಳ್ಳಬಹುದು.

ಹ್ಯಾಪಿಯೆಸ್ಟ್ ಮೈಂಡ್ಸ್ ಎಡುಟೆಕ್ ಪ್ರೈವೇಟ್ ಲಿಮಿಟೆಡ್ (ಮುಂಚೆ 'ಮೆಕ್‌ಮಿಲನ್ ಲರ್ನಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್/ಇಂಟೆಲಸ್ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿತ್ತು) (ಅರ್ಜಿದಾರ ಕಂಪನಿ ನಂ.1/ವರ್ಗಾವಣೆಗೊಳ್ಳುವ ಕಂಪನಿ) ಗಾಗಿ	**ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್ (ಅರ್ಜಿದಾರ ಕಂಪನಿ ನಂ.2/ವರ್ಗಾಯಿತ ಕಂಪನಿ) ಗಾಗಿ**
ಸಹಿ/- ನುಗ್ಗೇಹಳ್ಳಿ ಕೃಷ್ಣಮಾಚಾರ್ಯ ಶ್ರೀರಂಗನಾರಾಯಣನ್, ಅಧಿಕೃತ ಸಹಿದಾರ	**ಸಹಿ/- ಪ್ರವೀಣಕುಮಾರ್ ದರ್ಶನ್‌ಕರ್, ಅಧಿಕೃತ ಸಹಿದಾರ**

ದಿನಾಂಕ: ಮಾರ್ಚ್ 29, 2025
ಸ್ಥಳ: ಬೆಂಗಳೂರು

This is a public announcement for information purposes only and is not a prospectus announcement and does not constitute an invitation or offer to acquire, purchase or subscribe to securities.Not for release, publication or distribution directly or indirectly, outside India.
INITIAL PUBLIC OFFERING OF EQUITY SHARES ON THE MAIN BOARD OF THE STOCK EXCHANGES IN COMPLIANCE WITH CHAPTER II OF THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("SEBI ICDR Regulations").
PUBLIC ANNOUNCEMENT

(Please scan this QR Code to view the DRHP)

PACE DIGITEK

PACE DIGITEK LIMITED

Our Company was originally incorporated as 'Pace Power Systems Private Limited', at Bengaluru as a private limited company under the provisions of Companies Act, 1956 and received a certificate of incorporation issued by the RoC on March 1, 2007. Thereafter, pursuant to a special resolution passed by the shareholders of our Company in their meeting on July 3, 2020, the name of our Company was changed to 'Pace Digitek Infra Private Limited', and a fresh certificate of incorporation dated July 24, 2020, was issued to our Company by the RoC. Pursuant to a Board resolution dated May 10, 2024 and a special resolution passed by the Shareholders of our Company in their meeting on May 28, 2024, the name of our Company was changed to 'Pace Digitek Private Limited', and a fresh certificate of incorporation dated July 29, 2024, was issued to our Company by the RoC. Subsequently, our Company got converted into a public limited company pursuant to a Board resolution dated October 16, 2024 and a special resolution passed by the Shareholders of our Company on October 16, 2024, and the name of our Company was changed to its present name, 'Pace Digitek Limited', pursuant to a fresh certificate of incorporation dated November 19, 2024 issued to our Company by the RoC. For details of changes in the name and registered office of our Company, see ***'History and Certain Corporate Matters'*** on page 227 of the draft red herring prospectus dated March 27, 2025 (the "**DRHP**" or the "**Draft Red Herring Prospectus**")

Registered Office and Corporate Office: Plot # V 12, Industrial Estate, Kumbalgodu, Bengaluru Mysore Highway, Bengaluru, Karnataka – 560074; **Contact Person:** Meghana M P, Company Secretary and Compliance Officer; **Tel:** 080-29547792; **E-mail:** complianceofficer@pacedigitek.com; **Website:** www.pacedigitek.com; and **Corporate Identification Number:** U31909KA2007PLC041949

OUR PROMOTERS: MADDISETTY VENUGOPAL RAO, PADMA VENUGOPAL MADDISETTY, RAJIV MADDISETTY AND LAHARI MADDISETTY

INITIAL PUBLIC OFFER OF UP TO [•] EQUITY SHARES OF FACE VALUE OF ₹ 2 EACH (EQUITY SHARES) OF PACE DIGITEK LIMITED (COMPANY) FOR CASH AT A PRICE OF ₹ [•] PER EQUITY SHARE (INCLUDING A SHARE PREMIUM OF ₹ [•] PER EQUITY SHARE) (ISSUE PRICE) AGGREGATING UP TO ₹ 9,000.00 MILLION (ISSUE) COMPRISING A FRESH ISSUE OF UP TO [•] EQUITY SHARES AGGREGATING UP TO ₹ [•] BY OUR COMPANY (FRESH ISSUE). THE ISSUE INCLUDES A RESERVATION OF UP TO [•] EQUITY SHARES AGGREGATING UP TO ₹ [•] MILLION (CONSTITUTING [•]% OF OUR POST-ISSUE EQUITY SHARE CAPITAL), FOR SUBSCRIPTIONS BY ELIGIBLE EMPLOYEES (EMPLOYEE RESERVATION PORTION). OUR COMPANY MAY, IN CONSULTATION WITH THE BRLM, OFFER A DISCOUNT OF UP TO [•]% OF THE ISSUE PRICE (EQUIVALENT OF ₹ [•] PER EQUITY SHARE) TO THE ELIGIBLE EMPLOYEES BIDDING IN THE EMPLOYEE RESERVATION PORTION (EMPLOYEE DISCOUNT), SUBJECT TO NECESSARY APPROVALS AS MAY BE REQUIRED. THE ISSUE LESS THE EMPLOYEE RESERVATION PORTIONS IS HEREINAFTER REFERRED TO AS THE 'NET ISSUE'. THE ISSUE AND THE NET ISSUE SHALL CONSTITUTE [•]% AND [•]% OF OUR POST-ISSUE PAID-UP EQUITY SHARE CAPITAL OF OUR COMPANY, RESPECTIVELY.

OUR COMPANY, IN CONSULTATION WITH THE BRLM, MAY CONSIDER A PRE-IPO PLACEMENT OF SPECIFIED SECURITIES, AS MAY BE PERMITTED UNDER APPLICABLE LAW, TO ANY PERSON(S), AGGREGATING UPTO ₹ 1,800.00 MILLION AT ITS DISCRETION, PRIOR TO FILING OF THE RED HERRING PROSPECTUS WITH THE ROC. THE PRE-IPO PLACEMENT, IF UNDERTAKEN, WILL BE AT A PRICE TO BE DECIDED BY OUR COMPANY, IN CONSULTATION WITH THE BRLM. IF THE PRE-IPO PLACEMENT IS COMPLETED, THE ISSUE SIZE WILL BE REDUCED TO THE EXTENT OF SUCH PRE-IPO PLACEMENT, SUBJECT TO THE ISSUE COMPLYING WITH THE MINIMUM ISSUE SIZE REQUIREMENTS PRESCRIBED UNDER RULE 19(2)(B) OF THE SECURITIES CONTRACTS (REGULATION) RULES, 1957. THE PRE-IPO PLACEMENT SHALL NOT EXCEED 20% OF THE SIZE OF THE ISSUE. PRIOR TO THE COMPLETION OF THE ISSUE, OUR COMPANY SHALL APPROPRIATELY INTIMATE THE SUBSCRIBERS TO THE PRE-IPO PLACEMENT, PRIOR TO ALLOTMENT PURSUANT TO THE PRE-IPO PLACEMENT, THAT THERE IS NO GUARANTEE THAT OUR COMPANY MAY PROCEED WITH THE ISSUE, OR THE ISSUE MAY BE SUCCESSFUL AND WILL RESULT INTO LISTING OF THE EQUITY SHARES ON THE STOCK EXCHANGES. FURTHER, RELEVANT DISCLOSURES IN RELATION TO SUCH INTIMATION TO THE SUBSCRIBERS TO THE PRE-IPO PLACEMENT (IF UNDERTAKEN) SHALL BE APPROPRIATELY MADE IN THE RELEVANT SECTIONS OF THE RED HERRING PROSPECTUS AND THE PROSPECTUS.

THE FACE VALUE OF THE EQUITY SHARES IS ₹ 2 EACH AND THE ISSUE PRICE IS [•] TIMES THE FACE VALUE OF THE EQUITY SHARES. THE PRICE BAND, EMPLOYEE DISCOUNT, IF ANY, AND THE MINIMUM BID LOT WILL BE DECIDED BY OUR COMPANY IN CONSULTATION WITH THE BOOK RUNNING LEAD MANAGER (BRLM) AND WILL BE ADVERTISED IN ALL EDITIONS OF THE [•], AN ENGLISH LANGUAGE NATIONAL DAILY WITH WIDE CIRCULATION, ALL EDITIONS OF [•], A HINDI LANGUAGE NATIONAL DAILY WITH WIDE CIRCULATION, AND [•] EDITION OF [•], A KANNADA LANGUAGE NATIONAL DAILY NEWSPAPER (KANNADA BEING THE REGIONAL LANGUAGE OF KARNATAKA WHERE OUR REGISTERED OFFICE IS LOCATED), AT LEAST 2 WORKING DAYS PRIOR TO THE BID/ISSUE OPENING DATE AND SHALL BE MADE AVAILABLE TO THE BSE LIMITED (BSE) AND THE NATIONAL STOCK EXCHANGE OF INDIA LIMITED (NSE, AND TOGETHER WITH THE BSE, THE STOCK EXCHANGES) FOR THE PURPOSE OF UPLOADING ON THEIR RESPECTIVE WEBSITES, IN ACCORDANCE WITH THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED (SEBI ICDR REGULATIONS).

In case of any revision in the Price Band, the Bid/Issue Period will be extended by at least 3 additional Working Days after such revision in the Price Band, subject to the Bid/Issue Period not exceeding 10 Working Days. In cases of force majeure, banking strike or similar circumstances, our Company in consultation with the BRLM, for reasons to be recorded in writing, extend the Bid/Issue Period for a minimum of 1 Working Day, subject to the Bid/Issue Period not exceeding 10 Working Days. Any revision in the Price Band and the revised Bid/Issue Period, if applicable, shall be widely disseminated by notification to the Stock Exchanges, by issuing a press release, and also by indicating the change on the website of the BRLM and at the terminals of the other members of the Syndicate and by intimation to the Designated Intermediaries and the Sponsor Bank(s), as applicable.

The Issue is being made through Book Building Process, in terms of Rule 19(2)(b) of the Securities Contacts (Regulation) Rules, 1957 (**SCRR**), read with Regulation 31 of the SEBI ICDR Regulations. The Issue is being made in accordance with Regulation 6(1) of the SEBI ICDR Regulations, through the Book Building Process wherein not more than 50% of the Net Issue shall be available for allocation on a proportionate basis to Qualified Institutional Buyers (**QIBs**) (such portion referred to as **QIB Portion**), provided that our Company, in consultation with the BRLM may allocate up to 60% of the QIB Portion to Anchor Investors on a discretionary basis in accordance with the SEBI ICDR Regulations (**Anchor Investor Portion**), out of which one-third shall be reserved for domestic Mutual Funds only, subject to valid Bids being received from domestic Mutual Funds at or above the price at which allocation is made to Anchor Investors (**Anchor Investor Allocation Price**), in accordance with the SEBI ICDR Regulations. In the event of under-subscription or non-allocation in the Anchor Investor Portion, the balance Equity Shares shall be added to the Net QIB Portion. Further, 5% of the Net QIB Portion shall be available for allocation on a proportionate basis to Mutual Funds only, and the remainder of the Net QIB Portion shall be available for allocation on a proportionate basis to all QIB Bidders (other than Anchor Investors), including Mutual Funds, subject to valid Bids being received at or above the Issue Price. However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion will be added to the remaining Net QIB Portion for proportionate allocation to all QIBs. Further, not less than 15% of the Net Issue shall be available for allocation on a proportionate basis to Non-Institutional Investors out of which (a) one-third of such portion shall be reserved for applicants with application size of more than ₹ 0.2 million and up to ₹ 1.00 million; and (b) two-third of such portion shall be reserved for applicants with application size of more than ₹ 1.00 million, provided that the unsubscribed portion in either of such sub-categories may be allocated to applicants in the other sub-category of Non-Institutional Investors and not less than 35% of the Net Issue shall be available for allocation to Retail Individual Investors in accordance with the SEBI ICDR Regulations, subject to valid Bids being received at or above the Issue Price. All potential Bidders (except Anchor Investors) are required to mandatorily use the Application Supported by Blocked Amount (**ASBA**) process providing details of their respective ASBA accounts, and UPI ID in case of UPI Bidders, if applicable, in which the corresponding Bid Amounts will be blocked by the SCSBs or by the Sponsor Bank(s) under the UPI Mechanism, as applicable, to the extent of the respective Bid Amounts. Anchor Investors are not permitted to participate in the Issue through the ASBA process. For further details, see ***'Issue Procedure'*** on page 432 of the DRHP.

This public announcement is made in compliance with the provisions of Regulation 26(2) of the SEBI ICDR Regulations to inform the public that our Company is proposing to undertake, subject to applicable statutory and regulatory requirements, receipt of requisite approvals, market conditions and other considerations, to undertake an initial public offering of its Equity Shares pursuant to the Issue and has filed the DRHP.

Pursuant to Regulation 26(1) of the SEBI ICDR Regulations, the DRHP filed with SEBI shall be made available to the public for comments, if any, for a period of at least 21 days, from the date of such publication of this public announcement by hosting it on the website of SEBI at www.sebi.gov.in, on the websites of the Stock Exchanges i.e., BSE at www.bseindia.com, NSE at www.nseindia.com, where the equity shares are proposed to be listed, on the website of the Company at www.pacedigitek.com and the website of the Book Running Lead Manager to the Issue i.e. Unistone Capital Private Limited at www.unistonecapital.com. Our Company hereby invites the public to give comments on the DRHP filed with SEBI and the Stock Exchanges with respect to disclosures made in the DRHP. The public is requested to send a copy of the comments sent to SEBI and/or to the Company Secretary and Compliance Officer of our Company and/or the BRLM at their respective addresses mentioned herein. All comments must be received by SEBI and/or Company and/or the BRLM and/or the Company Secretary and Compliance Officer of our Company in relation to the Offer on or before 5:00 p.m. on the 21st day from the aforesaid date of filing the DRHP with SEBI.

Investments in equity and equity-related securities involves a degree of risk and investors should not invest any funds in the Issue unless they can afford to take the risk of losing their entire investment. Investors are advised to read the risk factors carefully before taking an investment decision in the Issue. For taking an investment decision, investors must rely on their own examination of our Company and the Issue, including the risks involved. The Equity Shares in the Issue have not been recommended or approved by the SEBI, nor does SEBI guarantee the accuracy or adequacy of the contents of the Draft Red Herring Prospectus. Specific attention of the investors is invited to ***'Risk Factors'*** on page 31 of the DRHP.

Any decision to invest in the Equity Shares described in the DRHP may only be made after the red herring prospectus ("**RHP**") has been filed with the RoC and must be made solely on the basis of such RHP as there may be material changes in the RHP from the DRHP. The Equity Shares, when offered, through the RHP, are proposed to be listed on the Stock Exchanges.

The liability of the members of our Company is limited by shares. For details of the main objects of our Company as contained in its memorandum of association, see **"*History and Certain Corporate Matters*"** on page 227 of the DRHP.

For details of the share capital and capital structure of our Company and the names of the signatories to the memorandum of association and the number of shares of our Company subscribed by them, see **"*Capital Structure*"** on page 86 of the DRHP.

BOOK RUNNING LEAD MANAGER	REGISTRAR TO THE ISSUE
UNISTONE	MUFG
Unistone Capital Private Limited A/305, Dynasty Business Park Andheri Kurla Road, Andheri East, Mumbai 400 059, Maharashtra, India. **Tel:** +91 022-46046494; **E-mail:** mb@unistonecapital.com **Website:** www.unistonecapital.com **Investor grievance e-mail:** compliance@unistonecapital.com **Contact person:** Brijesh Parekh **SEBI Registration Number:** INM000012449	**MUFG Intime India Private Limited** *(formerly Link Intime India Private Limited)* C-101, 247 Park L B S Marg, Vikhroli (West), Mumbai, 400 083, Maharashtra, India. **Tel:** +91 810 811 4949; **E-mail:** pacedigitek.ipo@in.mpms.mufg.com **Website:** www.mpms.mufg.com **Investor grievance e-mail:** pacedigitek.ipo@in.mpms.mufg.com **Contact Person:** Shanti Gopalkrishnan **SEBI Registration Number:** INR000004058

All capitalized terms used herein and not specifically defined shall have the same meaning as ascribed to them in the DRHP.

PACE DIGITEK LIMITED
On behalf of the Board of Directors
Sd/-
Meghana M P
Company Secretary and Compliance Officer

Place : Bengaluru
Date : March 28, 2025

PACE DIGITEK LIMITED is proposing, subject to applicable statutory and regulatory requirements, subject to receipt of requisite approvals, market conditions and other considerations, to make an initial public offer of its Equity Shares and has filed the DRHP dated March 27, 2025 with SEBI and Stock Exchanges. The DRHP shall be available on the website of SEBI at www.sebi.gov.in, websites of the Stock Exchanges i.e., BSE at www.bseindia.com and NSE at www.nseindia.com, on website of the Company i.e. www.pacedigitek.com and website of the BRLM, Unistone Capital Private Limited at www.unistonecapital.com. Potential investors should note that investment in equity shares involves a high degree of risk and for details relating to such risks, please see the section entitled **"*Risk Factors*"** on page 31 of the DRHP and the details set out in the RHP, when filed. Potential investors should not rely on the DRHP for making any investment decision.

This announcement is not an offer of securities for sale in the United States or elsewhere. This announcement has been prepared for publication in India only and is not for publication or distribution, directly or indirectly, in or into the United States. The Equity Shares offered in the Offer have not been and will not be registered under the U.S. Securities Act of 1993, as amended ('**U.S. Securities Act**') or any other applicable law of the United States. Accordingly, the Equity Shares are being offered and sold outside of the United States in offshore transactions as defined in and in compliance with Regulation S under the U.S. Securities Act and the applicable laws of the jurisdiction where such offers and sales are made.

CONCEPT

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಗೋಲ್ಡ್‌ಲೋನ್ ಹೆಸರಲ್ಲಿ ಅವ್ಯವಹಾರ: ಮ್ಯಾನೇಜರ್ ಪರಾರಿ

ರಾಯಚೂರು: ರಾಯಚೂರಿನ ಗಾಂಧಿ ಚೌಕ್ ಬಳಿ ಇರುವ ಬ್ಯಾಂಕ್ ಆಫ್ ಮಹಾರಾಷ್ಟ್ರ ಶಾಖೆಯಲ್ಲಿ ಗೋಲ್ಡ್‌ಲೋನ್ ಹೆಸರಿನಲ್ಲಿ ಕೋಟ್ಯಂತರ ರು.ಅವ್ಯವಹಾರ ನಡೆಸಿರುವುದು ಬೆಳಕಿಗೆ ಬಂದಿದೆ. ಬ್ಯಾಂಕ್ ಮ್ಯಾನೇಜರ್ ಕೆ.ನರೇಂದ್ರ ರೆಡ್ಡಿ ಈ ಗೋಲ್ಮಾಲ್ ನಡೆಸಿದ್ದು, ಆತ ಪರಾರಿಯಾಗಿರುವ ಘಟನೆ ನಡೆದಿದೆ. ಈತನ ವಿರುದ್ಧ ಬ್ಯಾಂಕ್ ಆಫ್ ಮಹಾರಾಷ್ಟ್ರದ ರಿಜಿಯನಲ್ ಮ್ಯಾನೇಜರ್ ಸುಚೇತ್ ಎಂಬವರು ಸೈಬರ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರಿನಲ್ಲಿ, ಗ್ರಾಹಕರ ದಾಖಲೆಗಳನ್ನೇ ಬಂಡವಾಳ ಮಾಡಿಕೊಂಡು, ಗೋಲ್ಡ್ ಲೋನ್ ಹೆಸರಿನಲ್ಲಿ ಖಾತೆ ತೆಗೆದು 10.97 ಕೋಟಿ ರು.ಅವ್ಯವಹಾರ ಮಾಡಲಾಗಿದೆ. ಬ್ಯಾಂಕ್ ಮ್ಯಾನೇಜರ್ ಬ್ಯಾಂಕ್‌ಗೆ ಬಂದು ಮೂರು ವರ್ಷಗಳಲ್ಲಿ 105 ನಕಲಿ ಖಾತೆ ಓಪನ್ ಮಾಡಿದ್ದಾರೆ.

ಬಳಿಕ ಗ್ರಾಹಕರಿಗೆ ಗೊತ್ತಿಲ್ಲದೇ ಅವರ ಹೆಸರಿನಲ್ಲಿ ಖಾತೆಗಳನ್ನು ತೆರೆದು ಮೋಸ ಮಾಡಿದ್ದಾರೆ. ನಕಲಿ ಖಾತೆಗಳಿಂದ ಹಣವನ್ನು ಸಂಬಂಧಿಕರ ಖಾತೆಗೆ ವರ್ಗಾವಣೆ ಮಾಡಲಾಗಿದೆ ಎಂದು ದೂರಲಾಗಿದೆ.

ನಾಗರಹೊಳೆ, ಬಂಡೀಪುರ, ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟ, ಕಾಳಿ ಮತ್ತು ಭದ್ರಾ ಪ್ರದೇಶಗಳಲ್ಲಿ ಸಮೀಕ್ಷೆ

ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಕ್ಷೀಣ?

ಬೆಂಗಳೂರು: ಕರ್ನಾಟಕ ರಾಜ್ಯದ ಹುಲಿ ಸಂರಕ್ಷಿತ ಪ್ರದೇಶಗಳ ಹುಲಿಗಳ ಸಮೀಕ್ಷೆ 2024 ವರದಿ ಬಿಡುಗಡೆಯಾಗಿದ್ದು, ರಾಜ್ಯದಲ್ಲಿ 393 ಹುಲಿಗಳಿವೆ. ಹಿಂದಿನ ಸಾಲಿಗೆ ಹೋಲಿಸಿದರೆ ಈ ಬಾರಿ ಹುಲಿ ಸಂಖ್ಯೆ ಕಡಿಮೆಯಾಗಿರುವುದು ಅಚ್ಚರಿ ಮೂಡಿಸಿದೆ.

2023ರ ನವೆಂಬರ್‌ನಿಂದ 2024ರ ಫೆಬ್ರವರಿ ವರೆಗೆ ರಾಜ್ಯದ 5 ಹುಲಿ ಸಂರಕ್ಷಿತ ಪ್ರದೇಶಗಳಾದ ನಾಗರಹೊಳೆ, ಬಂಡೀಪುರ, ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟ, ಕಾಳಿ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಿದಾಗ ಒಟ್ಟು 393 ಹುಲಿಗಳ ಇರುವಿಕೆ ಪತ್ತೆಯಾಗಿದೆ. 2023ಕ್ಕೆ ಹೋಲಿಸಿದರೆ (ಆ ಸಾಲಿನಲ್ಲಿ ಇದೇ ಸಂರಕ್ಷಿತ ಅರಣ್ಯಗಳಲ್ಲಿ 408 ಹುಲಿಗಳ ಇರುವಿಕೆ ಪತ್ತೆಯಾಗಿತ್ತು) 15 ಹುಲಿಗಳ ಸಂಖ್ಯೆ ಕುಸಿದಿದೆ.

ಹುಲಿ ಸಮೀಕ್ಷೆಗಾಗಿ ರಾಜ್ಯದ ಈ 5 ಹುಲಿ ಸಂರಕ್ಷಿತ ಪ್ರದೇಶದಲ್ಲಿ 2,160 ಕ್ಯಾಮೆರಾ ಟ್ರ್ಯಾಪ್ ಅಳವಡಿಸಲಾಗಿದ್ದು, 61 ಲಕ್ಷ ವನ್ಯಜೀವಿ ಚಿತ್ರಗಳನ್ನು ಪಡೆಯಲಾಗಿತ್ತು. ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ತಂತ್ರಾಂಶ

ವರ್ಷ	ಹುಲಿಗಳು	ವರ್ಷ	ಹುಲಿಗಳು
2014	261	2022	417
2018	472	2023	408
2020	403	2024	393

ಮೂಲಕ ಹುಲಿ ಚಿತ್ರಗಳನ್ನು ಪ್ರತ್ಯೇಕಿಸಿ, ಪ್ರತಿ ಹುಲಿ ಪಟ್ಟೆಗಳನ್ನಾಧರಿಸಿ ಹುಲಿಗಳ ಸಂಖ್ಯೆ ಲೆಕ್ಕ ಹಾಕಲಾಗಿದೆ. ಅದರ ಆಧಾರದ ಮೇಲೆ ವಾರ್ಷಿಕ ವರದಿ ಸಿದ್ಧಪಡಿಸಿ, ಬಿಡುಗಡೆ ಮಾಡಲಾಗಿದೆ. 2014ರಿಂದ ಹುಲಿ ಸಮೀಕ್ಷೆ ಮಾಡಲಾಗುತ್ತಿದ್ದು, ವರ್ಷದಿಂದ ವರ್ಷಕ್ಕೆ ಅವುಗಳ ಸಂಖ್ಯೆ ಕಡಿಮೆಯಾಗುತ್ತಿದೆ. 2014ರಲ್ಲಿ 261 ಇದ್ದಂತಹ ಹುಲಿಗಳ ಸಂಖ್ಯೆ 2018ಕ್ಕೆ 472ಕ್ಕೆ ಹೆಚ್ಚಳವಾಗಿತ್ತು. ಅದಾದ ನಂತರದಿಂದ ಹುಲಿಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. 2020ರಲ್ಲಿ 403, 2022ರಲ್ಲಿ 417, 2023ರಲ್ಲಿ 408 ಹುಲಿಗಳು ಪತ್ತೆಯಾಗಿರುವ ಕುರಿತು ವರದಿಯಲ್ಲಿ ತಿಳಿಸಲಾಗಿತ್ತು. ಅದೇ 2024ರಲ್ಲಿ ರಾಜ್ಯದ ಹುಲಿ ಸಂರಕ್ಷಿತ ಪ್ರದೇಶದಲ್ಲಿನ ಹುಲಿಗಳ ಸಂಖ್ಯೆ 393ಕ್ಕೆ ಇಳಿಕೆಯಾಗಿದೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ)ದ ಮಾರ್ಗಸೂಚಿ ಹಾಗೂ ಅಖಿಲ ಭಾರತ ಹುಲಿ ಗಣತಿ ಭಾಗವಾಗಿ ಎಲ್ಲ ರಾಜ್ಯಗಳ ಹುಲಿ ವಾಸಸ್ಥಾನ ಪ್ರದೇಶಗಳಲ್ಲಿ ಪ್ರತಿ 4 ವರ್ಷಕ್ಕೊಮ್ಮೆ ಹುಲಿ, ಆನೆ ಸೇರಿ ಇನ್ನಿತರ ವನ್ಯಜೀವಿಗಳ ಗಣತಿ ನಡೆಸಲಾಗುತ್ತದೆ. ಅದರ ಜತೆಗೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಹುಲಿ ಮತ್ತು ಸಸ್ಯಹಾರಿ ಪ್ರಾಣಿಗಳ ವಾರ್ಷಿಕ ಮೇಲ್ವಿಚಾರಣೆಯ ಭಾಗವಾಗಿ, ಎನ್ಟಿಸಿಎ ಪ್ರತಿವರ್ಷ ಎಲ್ಲ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಲು ಸಲಹೆ ನೀಡಿದೆ.

2023ರಲ್ಲಿ 563 ಹುಲಿಗಳು

ಎನ್‌ಟಿಸಿಎ ಪ್ರತಿ 4 ವರ್ಷಕ್ಕೊಮ್ಮೆ ದೇಶಾದ್ಯಂತ ಹುಲಿ ಗಣತಿ ನಡೆಸುತ್ತದೆ. ಅದರಂತೆ 2023ರಲ್ಲಿ ಬಿಡುಗಡೆಯಾದ ಹುಲಿ ಗಣತಿಯಲ್ಲಿ ಮಧ್ಯಪ್ರದೇಶದಲ್ಲಿ ಅತಿ ಹೆಚ್ಚು 785 ಹುಲಿಗಳಿರುವ ಕುರಿತು ವರದಿಯಾಗಿತ್ತು. ಅದೇ ಸಂರಕ್ಷಿತ ಅರಣ್ಯಗಳು ಸೇರಿ ರಾಜ್ಯದ ಎಲ್ಲ ಅರಣ್ಯ ಪ್ರದೇಶದಲ್ಲಿ 563 ಹುಲಿಗಳಿವೆ ಎಂದು ತಿಳಿಸಲಾಗಿತ್ತು. ಇದು ದೇಶದಲ್ಲೇ 2ನೇ ಅತಿಹೆಚ್ಚು ಹುಲಿಗಳನ್ನು ಹೊಂದಿರುವ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಆದರೆ, ರಾಜ್ಯದ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಾಜ್ಯ ಅರಣ್ಯ ಇಲಾಖೆ ನಡೆಸಿರುವ ಸಮೀಕ್ಷೆಯಲ್ಲಿ ಮಾತ್ರ ಹುಲಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಪತ್ತೆಯಾಗಿದೆ.

ಯತ್ನಾಳ್ ಉಚ್ಚಾಟನೆ: ಮರುಪರಿಶೀಲನೆಗೆ ಒತ್ತಾಯ

← ಮೊದಲಪುಟದಿಂದ

ಮತ ಕೈ ತಪ್ಪುವ ಭೀತಿ: ಪಾಟೀಲ್ ಯತ್ನಾಳ್ ಪ್ರಕರಣದಿಂದ ಬಿಜೆಪಿಗೆ ಭದ್ರ ಬುನಾದಿಯಾಗಿದ್ದ ಪಂಚಮಸಾಲಿ ಸಮುದಾಯದ ಮತಗಳು ಕೈ ತಪ್ಪುವ ಭೀತಿ ಎದುರಾಗಿದೆ. ಚುನಾವಣೆಯಲ್ಲಿ ಅಭ್ಯರ್ಥಿಗಳ ಸೋಲು ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದ ಪಂಚಮಸಾಲಿ ಮತಗಳು ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ, ರಾಯಚೂರು, ಕೊಪ್ಪಳ, ಬಾಗಲಕೋಟೆ, ಬೀದರ್, ವಿಜಯಪುರ, ಕಲಬುರಗಿ, ವಿಜಯನಗರ ಹಾಗೂ ಕಲ್ಯಾಣ ಕರ್ನಾಟಕದ ಹಾವೇರಿ, ಧಾರವಾಡ, ಬೆಳಗಾವಿ ಮಧ್ಯ ಕರ್ನಾಟಕದ ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ ಸೇರಿ ಕೆಲವು ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈಗ ಯತ್ನಾಳ್ ಅವರ ಉಚ್ಚಾಟನೆ ವಿಚಾರ ಮುಂದಿನ ಚುನಾವಣೆಗಳಲ್ಲಿ ಬಿಜೆಪಿಗೆ ದುಬಾರಿಯಾಗಿ ಪರಿಣಮಿಸಲಿದೆಯೇ ಎಂಬ ಚರ್ಚೆ ಆರಂಭವಾಗಿದೆ. ಇದೇ ವೇಳೆ ಯತ್ನಾಳ್ ಉಚ್ಚಾಟನೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರುಗಳ ಚಿತಾವಣೆಯೇ ಪ್ರಮುಖ ಕಾರಣ ಎಂದು ಪಂಚಮಸಾಲಿ ಸಮುದಾಯದ ಸ್ವಾಮೀಜಿ ನೇರ ಆರೋಪ ಮಾಡಿದ್ದಾರೆ. ಸಾಲದ್ದಕ್ಕೆ ನಮ್ಮ ಸಮುದಾಯದ ಶಾಸಕರು ರಾಜೀನಾಮೆ ನೀಡಿ ಬಿಜೆಪಿಯಿಂದ ಹೊರ ಬರುವಂತೆಯೂ ಕರೆ ಕೊಟ್ಟಿದ್ದಾರೆ.

> ಬಿಜೆಪಿ ಕಾರ್ಯಕರ್ತರ ಪಕ್ಷ. ಇಲ್ಲಿ ಯಾರೂ ಹುಲಿ ಇಲ್ಲ. ಹುಲಿ ಎಂದರೆ ಕಾಡಿಗೆ ಕಳುಹಿಸುತ್ತಾರೆ. ಯತ್ನಾಳ್ ಅವರಿಗೆ ತಪ್ಪು ತಿದ್ದಿಕೊಳ್ಳಲು ಅವಕಾಶ ನೀಡಿದ್ದರು. ಇದು ಬೇರೆ ಯವರಿಗೆ ಎಚ್ಚರಿಕೆ ಗಂಟೆ. ಯಾರೂ ಹೈಕಮಾಂಡ್ ನಿರ್ಧಾರ ವಿರೋಧಿಸಬಾರದು. ಯತ್ನಾಳ್ ಪರ ನಾವಿದ್ದೇವೆ ಎಂದು ಹೇಳಬಾರದು. ಹೊಂದಾಣಿಕೆ ರಾಜಕಾರಣಕ್ಕೆ ಹೈಕಮಾಂಡ್ ಬ್ರೇಕ್ ಹಾಕಲಿದೆ.
>
> – ಛಲವಾದಿ ನಾರಾಯಣಸ್ವಾಮಿ, ಪರಿಷತ್ ವಿಪಕ್ಷ ನಾಯಕ

ಬಂಡೀಪುರ ರಸ್ತೆ ಪುನಾರಂಭಕ್ಕೆ ಕಸರತ್ತು

← ಮೊದಲಪುಟದಿಂದ

ಹಗಲಿನ ವೇಳೆಯಲ್ಲಿ ಪ್ರಾಣಿಗಳು ಸಾಮಾನ್ಯವಾಗಿ ರಸ್ತೆಗಳನ್ನು ದಾಟುವುದನ್ನು ತಪ್ಪಿಸುವುದರಿಂದ ಅತಿ ವೇಗ ಮತ್ತು ಪ್ರಾಣಿಗಳಿಗೆ ಡಿಕ್ಕಿ ಹೊಡೆಯುವ ಘಟನೆಗಳು ಕಡಿಮೆಯಾಗುತ್ತವೆ. ರಾತ್ರಿ ಸಂಚಾರ ನಿಷೇಧ ತೆಗೆದು ಹಾಕಿದರೆ ಅಥವಾ ವಾಹನಗಳ ಸಂಖ್ಯೆ ಹೆಚ್ಚಾದರೆ, ರಸ್ತೆ ಅಪಘಾತಗಳಲ್ಲಿ ಸಾಯುವ ಪ್ರಾಣಿಗಳ ಸಂಖ್ಯೆ ಹೆಚ್ಚಾಗುತ್ತದೆ ಎಂದು ಹೆಸರು ಹೇಳಲು ಇಚ್ಛಿಸದ ಅರಣ್ಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ರಾಷ್ಟ್ರೀಯ ಹೆದ್ದಾರಿಯ 766 ರ 24.7 ಕಿಮೀ ವ್ಯಾಪ್ತಿಯಲ್ಲಿ ರಾತ್ರಿ 9 ರಿಂದ ಬೆಳಿಗ್ಗೆ 6 ರವರೆಗೆ ವಾಹನಗಳನ್ನು ನಿಷೇಧಿಸಿ 2019 ರಲ್ಲಿ ಸುಪ್ರೀಂಕೋರ್ಟ್ ಆದೇಶ ನೀಡಿದೆ. ಇದಲ್ಲದೆ ರಾಜ್ಯ ಹೈಕೋರ್ಟ್‌ನ ಸಲಹೆಗಳನ್ನು ಅನುಸರಿಸಿ, ಕರ್ನಾಟಕ ಸರಕಾರ ಮೈಸೂರಿನಿಂದ ವಯನಾಡಿಗೆ ಎನ್‌ಎಚ್–275 (ರಾಜ್ಯ ಹೆದ್ದಾರಿ–90) ಅನ್ನು ವಾಹನಗಳ ನಿರಂತರ ಸಂಚಾರಕ್ಕಾಗಿ ಅಭಿವೃದ್ಧಿಪಡಿಸಿದೆ. ಈ ರಸ್ತೆ ಹುಣಸೂರು, ಗೋಣಿಕೊಪ್ಪ, ಕುಟ್ಟ, ಸುಲ್ತಾನ್ ಬತ್ತೇರಿ ಮತ್ತು ಮೂಲೆಹೊಳೆ ಗಳನ್ನು ವಯನಾಡಿಗೆ ಸಂಪರ್ಕಿಸುತ್ತದೆ ಮತ್ತು ಇದು ಎನ್‌ಎಚ್–766 ಗಿಂತ 35 ಕಿ.ಮೀ ಉದ್ದವಿದೆ.

ಯತ್ನಾಳ್ ಉಚ್ಚಾಟನೆ: ಏಪ್ರಿಲ್‌ನಲ್ಲಿ ಉತ್ತರ

ಬಳ್ಳಾರಿ: ಬಸನಗೌಡ ಪಾಟೀಲ್ ಯತ್ನಾಳ್ ಉಚ್ಚಾಟನೆ ಬಗ್ಗೆ ರಾಷ್ಟ್ರೀಯ ಅಧ್ಯಕ್ಷರು ನಿರ್ಧರಿಸಿದ್ದಾರೆ. ಅದರಂತೆ ನಾವು ನಡೆದುಕೊಳ್ಳುತ್ತೇವೆ ಎಂದು ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯತ್ನಾಳ ಹಿರಿಯರು, ಆತ್ಮೀಯರು. ಅವರೊಂದಿಗೆ ಮಾತನಾಡಿದ್ದೇನೆ. ಪಕ್ಷದಲ್ಲಾದ ಬೆಳವಣಿಗೆ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ವಿವರಿಸುತ್ತಾರೆ. ಪಕ್ಷದಲ್ಲಿನ ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ ಎಂದು ಮಾರ್ಮಿಕವಾಗಿ ನುಡಿದರು.

ಹಿಂದುತ್ವವಾದಿಗಳನ್ನು ಟಾರ್ಗೆಟ್ ಮಾಡಿಲ್ಲ: ಬಿಜೆಪಿಯಲ್ಲಿ ಹಿಂದುತ್ವದ ಬಗ್ಗೆ ಮಾತನಾಡುವವರನ್ನು ಗುರಿಮಾಡಲಾಗುತ್ತಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, ಪಕ್ಷದಲ್ಲಿ ಹಿಂದುತ್ವದ ಬಗ್ಗೆ ಮಾತನಾಡುವ ನಾಯಕರಿಗೆ ಆತಂಕವಿಲ್ಲ. ಯಾರನ್ನೂ ಗುರಿಮಾಡಿಲ್ಲ. ಪಕ್ಷದಲ್ಲಿನ ಎಲ್ಲ ಸಮಸ್ಯೆಗಳು ಶೀಘ್ರದಲ್ಲಿ ಬಗೆ ಹರಿಯುತ್ತದೆ ಎಂದು ರವಿಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು. ಕುಮಾರ್ ಬಂಗಾರಪ್ಪ ಮನೆಯಲ್ಲಿ ಯತ್ನಾಳ ಬಣ ಸಭೆ ನಡೆಸಿದ್ದನ್ನು ಪಕ್ಷದ ವರಿಷ್ಠರು ಗಮನಿಸಿದ್ದಾರೆ. ಎಲ್ಲದಕ್ಕೂ ರಾಜ್ಯಾಧ್ಯಕ್ಷರು ಶೀಘ್ರವೇ ಉತ್ತರ ನೀಡುತ್ತಾರೆ. ರಾಷ್ಟ್ರೀಯ ಅಧ್ಯಕ್ಷರು ಏಪ್ರಿಲ್ ತಿಂಗಳಲ್ಲಿ ಎಲ್ಲದಕ್ಕೂ ಉತ್ತರ ನೀಡುತ್ತಾರೆ ಎಂದು ಅವರು ಸ್ಪಷ್ಟಪಡಿಸಿದರು.

ಬೆಲೆ ಏರಿಕೆಗೆ ಖಂಡನೆ: ಹಾಲಿನ ಬೆಲೆ ಏರಿಕೆ ವಿಚಾರಕ್ಕೆ ಮಾತನಾಡಿದ ರವಿಕುಮಾರ್, ರಾಜ್ಯದಲ್ಲಿ ಎಲ್ಲದಕ್ಕೂ ಬೆಲೆ ಏರಿಕೆ ಮಾಡಲಾಗುತ್ತಿದೆ. ಹಾಲಿನ ಹೆಚ್ಚುವರಿ ದರ ರೈತರಿಗೆ ಕೊಡುತ್ತೇವೆ ಎನ್ನುತ್ತಿದ್ದಾರೆ, ನೋಡಬೇಕು. ಬೇಳೆಕಾಳು, ದವಸಧಾನ್ಯ, ವಿದ್ಯುತ್ ಬಿಲ್ ಎಲ್ಲ ಏರಿಕೆ ಮಾಡಲಾಗುತ್ತಿದೆ. ಈ ಸರಕಾರವನ್ನು ಕಿತ್ತೆಸೆಯಬೇಕಿದೆ. ಈ ಸರಕಾರದಲ್ಲಿ ಗ್ಯಾರಂಟಿ ಇಲ್ಲ, ಬೆಲೆ ಏರಿಕೆ ಖಚಿತ ಎಂದು ಕಿಡಿಕಾರಿದರು.

ಹಿಂಸಾತ್ಮಕವಾಗಿ ಸಾಗಣೆ 2 ಜಾನುವಾರು ಸಾವು

ಮಂಗಳೂರು: ಹಿಂಸಾತ್ಮಕ ರೀತಿಯಲ್ಲಿ ಸಾಗಿಸುತ್ತಿದ್ದ ಜಾನುವಾರುಗಳನ್ನು ರಕ್ಷಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್‌ವಾಲ್ ತಿಳಿಸಿದ್ದಾರೆ. ಮಿನಿ ಗೂಡ್ಸ್ ವಾಹನದಲ್ಲಿ ಜಾನು ವಾರುಗಳ ಸಾಗಣೆ ಮಾಡುತ್ತಿದ್ದ ಬಗ್ಗೆ ದೊರೆತ ಮಾಹಿತಿ ಆಧಾರದಲ್ಲಿ ವಾಹನ ವನ್ನು ಬೆನ್ನಟ್ಟಿ ಸೂರಲ್ಪಾಡಿ ಮಸೀದಿ ಸಮೀಪ ವಶಕ್ಕೆ ಪಡೆಯಲಾಗಿದೆ. ವಾಹನದಲ್ಲಿ 15–20 ಜಾನು ವಾರುಗಳನ್ನು ವಧೆಯ ಉದ್ದೇಶಕ್ಕೆ ಕೆಟ್ಟರೀತಿಯಲ್ಲಿ ಸಾಗಿಸಲಾಗುತ್ತಿತ್ತು ಎಂದು ಅವರು ಮಾಹಿತಿ ನೀಡಿದ್ದಾರೆ. ಪಶುವೈದ್ಯರನ್ನು ಕರೆಸಿ ತಪಾಸಣೆ ಮಾಡಿಸಿದಾಗ ಎರಡು ಜಾನುವಾರು ಗಳು ಗಾಯಗೊಂಡು ಮೃತಪಟ್ಟಿರು ವುದು ದೃಢಪಟ್ಟಿದೆ ಎಂದು ಅವರು ಹೇಳಿದ್ದಾರೆ. ತೌಸಿಫ್ ಪೆರಾಡಿ ಮತ್ತು ಹರ್ಫೈನ್ ಪೆರಾಡಿ ಈ ಕೃತ್ಯದಲ್ಲಿ ಭಾಗಿಯಾಗಿದ್ದು, ಇನ್ನೊಬ್ಬ ಆರೋಪಿಯ ಪತ್ತೆ ಕಾರ್ಯ ಮುಂದುವರಿದಿದೆ.

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91–8431186388, ಇ–ಮೇಲ್: sabvmcri@gmail.com
ಸಂಖ್ಯೆ:SABVMCRI/E-TENDER/SIMULAB/33/2024-25 ದಿನಾಂಕ: 28–03–2025
TENDER No: DME/2024-25/IND1331
ಟೆಂಡರ್ ಅಧಿಸೂಚನೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿನ ಕೌಶಲ್ಯ ಪ್ರಯೋಗಾಲಯಕ್ಕಾಗಿ ಟ್ರಾಮಾ ಅಪ್ಲಿಕೇಶನ್‌ಗಳೊಂದಿಗೆ ಸುಧಾರಿತ ಜೀವನ ಬೆಂಬಲ ತರಬೇತಿ ಸಿಮ್ಯುಲೇಟರ್‌ನ್ನು ಟರ್ನ್‌ಕೀ ಆಧಾರದ ಮೇಲೆ ಪೂರೈಕೆ ಪಡೆಯಲು ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.
1) ಟೆಂಡರ್ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ: 28–03–2025 ರಿಂದ. 2) ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: 07–04–2025 ರ ಸಂಜೆ 5.30 ಗಂಟೆವರೆಗೆ. 3) ಪ್ರಿ–ಬಿಡ್ ಮೀಟಿಂಗ್ ದಿನಾಂಕ: 08–04–2025 ರಂದು ಬೆಳಿಗ್ಗೆ 11.30 ಗಂಟೆಗೆ. 4) ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 15–04–2025 ರ ಸಂಜೆ 5.30 ಗಂಟೆವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 17–04–2025 ರಂದು ಬೆಳಿಗ್ಗೆ 10.30 ಗಂಟೆಗೆ. ವಿವರವಾದ ಮಾಹಿತಿಗಾಗಿ ವೆಬ್‌ಸೈಟ್: https://kppp.karnataka.gov.in ಗೆ ಭೇಟಿನೀಡಿ. ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ವಾಸಾಸಂಇ/ವಾ.ಪ್ರ/5977/ಅಡ್ವಟೋರ್/2024–25

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ
ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ:17/2024–25, ದಿನಾಂಕ: 24.03.2025
2024–25ನೇ ಸಾಲಿನಲ್ಲಿ ಕೋಲಾರ, ಮಾಲೂರು, ಬಂಗಾರಪೇಟೆ, ಕೆ.ಜಿ.ಎಫ್ & ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಿಗೆ ಹಾಗೂ ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಪೂರೈಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಹಾಗೂ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೆಯ ದಿನಾಂಕ: 04.04.2025 ರಂದು 17.30 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್–https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾ.ಕು.ನೀ. ಮತ್ತು ನೈ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:550/ಕೆಎಸ್‌ಎಂಸಿಎ/2024–25

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ದೂ: 080–22341230/35 ಇ–ಮೇಲ್: bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ನಯೋ–1/ಭೂಉಬ/59/2014–15/1913 ದಿನಾಂಕ:27.03.2025
ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]
ಶ್ರೀ ಮಾದೇಗೌಡ ಬಿನ್ ಲೇಟ್ ಸೊತ್ತೇಗೌಡ ಇವರು ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಚಾಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 310/2ರ 0ಎ–24ಗು, 311/2ಎ2ರ 0ಎ–17ಗು, 311/2ಬಿ2ರ 0ಎ–01ಗು, 311/4ರ 0ಎ–08ಗು ಮತ್ತು ಸರ್ವೆ ಸಂಖ್ಯೆ:311/5ರ 0ಎ–01½ಗು ಒಟ್ಟು 01ಎ–11½ಗು ಈಗಾಗಲೇ ಸರ್ಕಾರದಿಂದ ವ್ಯವಸಾಯ ವಲಯದಿಂದ ವಾಣಿಜ್ಯ (ಕಲ್ಯಾಣ ಮಂಟಪ) ವಲಯಕ್ಕೆ ಭೂ ಉಪಯೋಗ ಬದಲಾವಣೆಯಾಗಿ ನಂತರ ಕಂದಾಯ ಇಲಾಖೆಯಿಂದ ಭೂ ಪರಿವರ್ತನೆಯಾಗಿರುವ ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "ವಾಣಿಜ್ಯ" ವಲಯದಿಂದ "ವಸತಿ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
1. ಈ ಜಮೀನಿನಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ.
2. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ.
4. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/– ಸದಸ್ಯ–ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/5964/2024–25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:05/2024–25 ದಿನಾಂಕ: 27.03.2025 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಗಳಲ್ಲಿ ದರ್ಜೆ–III ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಾರದರ್ಶಕ ಕಾಯಿದೆ KW-3ರ ಅನ್ವಯ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು E-Procurement PlatForm (https://kppp.karnataka.gov.in)ನಲ್ಲಿ ಟೆಂಡರ್‌ಗಳನ್ನು, ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿವೆ. (1)ಟೆಂಡರ್ ಪ್ರೊಸೆಸಿಂಗ್ ಫೀ: https://kppp.karnataka.gov.inನಲ್ಲಿ ನೋಡುವುದು(2)E-Procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ: ದಿನಾಂಕ:03–04–2025 ರಿಂದ ದಿನಾಂಕ: 11–04–2025 ವರೆಗೆ ಸಂಜೆ 4.00 ಘಂಟೆವರೆಗೆ(3) ಟೆಂಡರ್ ತೆರೆಯುವ ದಿನಾಂಕ: 15–04–2025 ಬೆಳಿಗ್ಗೆ 11.00 ಘಂಟೆಗೆ(4) ಕಾಮಗಾರಿಗಳ ಸಂಖ್ಯೆ: 07(ಏಳು)(5) ಕೆಲಸದ ಕಾಲಮಿತಿ: 6 ತಿಂಗಳು(ಮಳೆಗಾಲ ಸೇರಿ)(6) ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಮೊತ್ತ: ರೂ.83.86 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (7) ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ: ರೂ.83.72 ಲಕ್ಷಗಳು(ಜಿ.ಎಸ್.ಟಿ ಹೊರತುಪಡಿಸಿ)(8)ಇ.ಎಂ.ಡಿ. ಗರಿಷ್ಠ ಮೊತ್ತ ರೂ. 1.68 ಲಕ್ಷಗಳು(9)ಇ.ಎಂ.ಡಿ. ಕನಿಷ್ಠ ಮೊತ್ತರೂ. 0.84 ಲಕ್ಷಗಳು(10) ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆ ದರ್ಜೆ-III ಮತ್ತು ಮೇಲ್ಪಟ್ಟ ವರ್ಗ. ಸೂಚನೆ: 1. ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2. ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು e-procurement portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ,
ಯಗಚಿ ಯೋಜನಾ ವಿಭಾಗ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/1109/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ–36/ಜೆಇ/2024–25/3700 ದಿನಾಂಕ:– 27.03.2025
ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ
ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–36/ಜೆಇ/2024–25 ದಿನಾಂಕ: 27.03.2025.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ಮತ್ತು ಚನ್ನಗಿರಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ :5054–03–337–0–17–154 ಯೋಜನೆ (ರಾಜ್ಯ ಹೆದ್ದಾರಿ ಸುಧಾರಣೆ) ಯಡಿ ಚನ್ನಗಿರಿ ತಾ: ರಾಜ್ಯ–ಹೆದ್ದಾರಿ–48 ಕುಮಟ–ಕಡಮಡಗಿ ರಸ್ತೆ ಕಿ.ಮೀ 220.00 ರಿಂದ 226.03 ರವರೆಗೆ ರಸ್ತೆ ಅಭಿವೃದ್ಧಿ (ಸಂತೇಬೆನ್ನೂರಿನಿಂದ ಕೆ.ಬಿ ಗ್ರಾಮದ ವರೆಗೆ) (PWD/2024-25/RD/WORK_INDENT19942) ಕಾಮಗಾರಿಗೆ ಮೊತ್ತ ರೂ. 900.00 ಲಕ್ಷ, ಲೆಕ್ಕಶೀರ್ಷಿಕೆ : 5054–04–337–0–01–154 ಯೋಜನೆ (ಜಿಲ್ಲಾ ಮತ್ತು ಇತರೆ ರಸ್ತೆಗಳು ಸುಧಾರಣೆ) ಲೆಕ್ಕಶೀರ್ಷಿಕೆಯಡಿ ದಾವಣಗೆರೆ ತಾಲ್ಲೂಕು ಸಿರಿಗೆರೆ–ಸುಲ್ತಾನಿಪುರ ಮಾರ್ಗ ಚಿನ್ನಸಮುದ್ರ, ಗಂಗನಕಟ್ಟೆ, ನರಗನಹಳ್ಳಿ, ಬಾವಿಹಾಳ್ ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 16.80 ರಿಂದ 22.10 ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (PWD/2024-25/RD/WORK_INDENT 18947) ಕಾಮಗಾರಿಗೆ ರೂ. 500.00 ಲಕ್ಷ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗಳ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 15.04.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 16.04.2025 ಸಂಜೆ 4.30 ಗಂಟೆಯವರೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿವಿಜಿ/882/ಕೆಎಸ್‌ಎಂಸಿಎ/2024–25
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ 19/2024–25 ದಿನಾಂಕ: 26.03.2025
ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" KW-3 & KW-4 ನಲ್ಲಿನ ಷರತ್ತುಗಳಿಗನುಗುಣವಾಗಿ ಒಟ್ಟು 16–ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿ: 26.03.2025 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಟ 563.32 ಲಕ್ಷಗಳು ಮತ್ತು ಕನಿಷ್ಟ 81.64 ಲಕ್ಷಗಳು, ಗರಿಷ್ಟ ಇ.ಎಂ.ಡಿ ರೂ.8,45,000/– ಮತ್ತು ಕನಿಷ್ಟ ರೂ.84,610/– ಗುತ್ತಿಗೆ ಕಾಲಾವಧಿ ಗರಿಷ್ಟ 11–ತಿಂಗಳು ಕನಿಷ್ಟ 3–ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ದಿ: 11.04.2025 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಕಾರಣಗಳಿಂದ ಯಾವುದೇ ಬದಲಾವಣೆಗಳು/ ತಿದ್ದುಪಡಿಗಳು ಉಂಟಾದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
DIPR-DD-MYS/1507/KSMCA-1142/2024-25

ನಗರಸಭಾ ಕಾರ್ಯಾಲಯ
ಚಾಮರಾಜನಗರ
Email : itstaff_ulb_chamarajanagar@yahoo.co.in Website : www.chamarajanagaracity.gov.in
ಸಂಖ್ಯೆ:ನ.ಸ.ಚಾ./ತಾಂ.ವಿ/ಕಿ.ಅ/ಪಿ.ಆರ್54/2024–25 ದಿನಾಂಕ: 25.03.2025
ಮರುಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಾಲ್ ಮುಖಾಂತರ)
ಚಾಮರಾಜನಗರ ನಗರಸಭೆಯ 2024–25 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–3 ನಿಯಮಗಳಿಗನುಸಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಪಬ್ಲಿಕ್–ಪ್ರೊಕ್ಯೂರ್ಮೆಂಟ್ ಪೋರ್ಟಾಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು Kppp.karnataka.gov.in/kppp ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡನ್ನು ಪಬ್ಲಿಕ್–ಪ್ರೊಕ್ಯೂರ್ಮೆಂಟ್ ಪೋರ್ಟಾಲ್ ಮೂಲಕ ಸಲ್ಲಿಸತಕ್ಕದ್ದು. ಪಬ್ಲಿಕ್–ಪ್ರೊಕ್ಯೂರ್ಮೆಂಟ್ ಪೋರ್ಟಾಲ್ ಮೂಲಕ ಆನ್‌ಲೈನ್‌ನಲ್ಲಿ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 09.04.2025 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 11.04.2025 ಬೆಳಗ್ಗೆ 11.30 ಗಂಟೆಗೆ. ಈ ಕೆಳಕಂಡ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ: 90 ದಿನಗಳು

Sl.No.	WORK INDENT NUMBER	Esimated Amount in Lakhs	EMD Rupees
1	DMA/2024-25/OW/WORK_INDENT32365/call-3	65.10	130200.00

ಷರಾ:
1. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಪಬ್ಲಿಕ್–ಪ್ರೊಕ್ಯೂರ್ಮೆಂಟ್ ವೆಬ್‌ಸೈಟ್ kppp.karnataka.gov.in ನಲ್ಲಿ ಲಭ್ಯವಿರುತ್ತದೆ.
ಸಹಿ/– (ಶ್ರೀ ಸುರೇಶ್ ಎಸ್) ಅಧ್ಯಕ್ಷರು ನಗರಸಭೆ, ಚಾಮರಾಜನಗರ
ಸಹಿ/– (ಶ್ರೀಮತಿ ಮಮತ ಹೆಚ್. ಎಸ್.) ಉಪಾಧ್ಯಕ್ಷರು ನಗರಸಭೆ, ಚಾಮರಾಜನಗರ
ಸಹಿ/– (ಶ್ರೀ ಎಸ್. ವಿ. ರಾಮದಾಸ್) ಪೌರಾಯುಕ್ತರು ನಗರಸಭೆ, ಚಾಮರಾಜನಗರ
ಸಂ: ವಾಸಾಸಂಇ/ಚಾನಗರ/725/ 2024–23

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಡಗು ಜಿಲ್ಲೆ, ಮಡಿಕೇರಿ
ಜಿಲ್ಲಾ ನಗರಾಭಿವೃದ್ಧಿ ಕೋಶ
ದೂರವಾಣಿ ಮತ್ತು ಫ್ಯಾಕ್ಸ್:08272–295551
ವೆಬ್ ಸೈಟ್: www.kodagududc.mrc.gov.in
ಈ–ಮೇಲ್: dudc_kdg@yahoo.co.in, : ka.kodagu.dudc@gmail.com
ಸಂಖ್ಯೆ:ಡಿಯುಡಿಸಿ:ನಗರೋತ್ಥಾನ ಹಂತ–4:95:2021-22 ದಿನಾಂಕ:28-03-2025.
ಟೆಂಡರ್ ಪ್ರಕಟಣೆ
ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4ರ ಯೋಜನೆಯಡಿ ನಗರಸಭೆ ಮಡಿಕೇರಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ–2000ರಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರುಗಳಿಂದ ದ್ವಿ–ಲಕೋಟೆ ಪದ್ಧತಿಯ ಕೆ.ಡಬ್ಲ್ಯೂ–1 & ಕೆ.ಡಬ್ಲ್ಯೂ–2 ಟೆಂಡರ್ ದಾಸ್ತಾವೇಜು ಮೂಲಕ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್ ಅಹ್ವಾನಿಸಲಾಗಿದೆ.

1	Indent No:DMA/2024-25/BD/WORK_INDENT37860
2	Indent No:DMA/2024-25/BD/WORK_INDENT37818
3	Indent No:DMA/2024-25/BD/WORK_INDENT37801
4	Indent No:DMA/2024-25/BD/WORK_INDENT37808

ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ ಅಂತರ್ಜಾಲದ ವೆಬ್ ಸೈಟ್ https://kppp.karnataka.gov.in ನಲ್ಲಿರುವ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಕೆಲಸದ ಕುರಿತು ಯಾವುದೇ ವಿವರಗಳನ್ನು ಈ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/–
ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ.

ದಿ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್
ಅರಣ್ಯ ವಿಭಾಗ, ಪೇಪರ್ ಟೌನ್ ಭದ್ರಾವತಿ, –577302 –ಕರ್ನಾಟಕ
CIN L99999KA 1936SGC000173 (03.06.2014)
Ph: +91-8282-270094/- Fax: +91-8282-270937
Email: dirforestsmpm@gmail.com
ಸಂಖ್ಯೆ:ಎಂಪಿಎಂ/ಎಫ್‌ಎಫ್‌ಆರ್/ಡಿಎಫ್/ಟಿಎ/2024–25/013 ದಿ:26.03.2025
ಇ–ಟೆಂಡರ್ ಅಹ್ವಾನ ಪ್ರಕಟಣೆ
ಇ–ಟೆಂಡರ್ ನಂ: MPM/FFR/ DF/TA/24-25/013 date:26.03.2025
ಕಾಮಗಾರಿ ವಿವರ: 2025 ರ ಮರುನೆಡುತೋಪು ನಿರ್ಮಾಣ & 2024 & 2023ರ ನಿರ್ವಹಣಾ ಕಾಮಗಾರಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26.04.2025 at 5.00 p.m ಟೆಂಡರ್ ತೆರೆಯುವ ದಿನಾಂಕ: 29.04.2025 at 11.00 a.m
ಎಂ.ಪಿ.ಎಂ ನ ಅರಣ್ಯದಲ್ಲಿ 2025ರ ಮರುನೆಡುತೋಪು ನಿರ್ಮಾಣ ಮತ್ತು 2024 & 2023ರ ನಿರ್ವಹಣಾ ಕಾಮಗಾರಿಯ ಟೆಂಡರ್‌ಗಳನ್ನು, ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಸಲ್ಲಿಸುವುದು. ಟೆಂಡರ್ ದಸ್ತಾವೇಜು ದರ ಇ–ಪೋರ್ಟಲ್ ನಿಯಮಗಳ ಅನ್ವಯ ಟೆಂಡರ್ ದಸ್ತಾವೇಜುಗಳನ್ನು ದಿ:26.03.2025ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್/ಎಂ.ಪಿ.ಎಂ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸದಿರುವ ಟೆಂಡರ್‌ದಾರರು ನೊಂದಣಿಮಾಡಿಸಿ ಟೆಂಡರ್‌ನಲ್ಲಿ ಭಾಗವಹಿಸಬಹುದು. ಸದರಿ ಟೆಂಡರ್‌ಗೆ ಯಾವುದೇ ಬದಲಾವಣೆಗಳು/ತಿದ್ದುಪಡಿಗಳಿದ್ದಲ್ಲಿ ಅದನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್/ಎಂ.ಪಿ.ಎಂ ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ನಮ್ಮ ವೆಬ್‌ಸೈಟ್ www.mpm.karnataka.gov.in
ಸಹಿ/– ನಿರ್ದೇಶಕರು(ಅರಣ್ಯ) ಪ್ರಭಾರ.
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/24–25/187/03/1965

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE /MI&GWDDD/BGM/TND/AE/2024-25/1720 Date:27-03-2025
ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ–2,3&4)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಗೋಕಾಕ/ಅಥಣಿ ಉಪ ವಿಭಾಗಗಳಡಿಯ ಒಟ್ಟು 06 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.186.00 ಲಕ್ಷಗಳು ಹಾಗೂ ಕನಿಷ್ಠ ರೂ.43.00 ಲಕ್ಷಗಳು. 1.ಕೆ.ಡಬ್ಲ್ಯೂ–4 ಕಾಮಗಾರಿಗಾಗಿ ಪೂರ್ವಟೆಂಡರ ಸಭೆಯು ದಿನಾಂಕ:07–04–2025 ಮುಂ 11.00 ಘಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:08–04–2025 ಸಾಯಂಕಾಲ 4.00 ಗಂಟೆಯವರೆಗೆ, 3. ಟೆಂಡರ ತೆರೆಯುವ ದಿನಾಂಕ: 09–04–2025 ಸಾಯಂಕಾಲ 4.30 ಮುಂದುವರೆದು (ಸಾಧ್ಯವಾದಲ್ಲಿ), 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-2039/KSMCA/2024-25

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರಸ್ತುತ ಎಲ್ಲ ವಸ್ತುಗಳ ಬೆಲೆ ಏರಿಕೆಯಾಗಿರುವ ಕಾರಣ ಸಂಕಷ್ಟಕ್ಕೆ ಒಳಗಾಗಿರುವ ರಾಜ್ಯದ ಹೈನುಗಾರರ ನೆರವಿಗೆ ನಮ್ಮ ಸರಕಾರ ಧಾವಿಸಿದ್ದು,ಗ್ರಾಹಕರಿಗೆ ಹೊರೆಯಾಗದಂತೆ ಹಾಲಿನ ಬೆಲೆ ಏರಿಕೆ ಮಾಡಿದ್ದೇವೆ. ಕೆಎಂಎಫ್‌ನ ನಂದಿನಿ ಹಾಲಿನ ಬೆಲೆಗೆ ಹೋಲಿಸಿದರೆ ಹೊರರಾಜ್ಯಗಳ ಹಾಲು ಒಕ್ಕೂಟಗಳು ಮಾರಾಟ ಮಾಡುವ ದರ ಹೆಚ್ಚಿನದ್ದಾಗಿವೆ. ಏರಿಕೆಯಾದ ಹಾಲಿನ ದರ ನೇರವಾಗಿ ಹೈನುಗಾರರ ಕೈಸೇರುತ್ತಿರುವುದು ಪ್ರೋತ್ಸಾಹಕರವಾಗಿದೆ.

ಮಂಜುನಾಥ್, ಬೆಂಗಳೂರು

ಆಯ್ತು ಸ್ವಾಮಿ, ಇದೇ ಮಾನದಂಡ ಇಟ್ಟುಕೊಂಡು ಯಾವ ಯಾವ ರಾಜ್ಯಗಳಲ್ಲಿ ವಿದ್ಯುತ್, ನೀರಿನ ದರ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ, ರೋಡ್ ಟ್ಯಾಕ್ಸ್, ಪ್ರಾಪರ್ಟಿ ಟ್ಯಾಕ್ಸ್, ಆಸ್ತಿ ನೋಂದಣಿ ಶುಲ್ಕ ಕಡಿಮೆ ಇವೆಯೋ ಅಷ್ಟು ಕಡಿಮೆ ಮಾಡುತ್ತೀರಾ..? ಆಗ ಮಾತ್ರ ನಿಮ್ಮ ಸಮರ್ಥನೆಗೆ ಅರ್ಥ... ಇಲ್ಲದಿದ್ದರೆ ಲೂಟಿ.

ಸಮಾಚಾರ ಸಣ್ಣದಲ್ಲ

ಯತ್ನಾಳ್ ಕಾಂಗ್ರೆಸ್ ಸೇರಿದರೆ ಸ್ವಾಗತ

ಹುಬ್ಬಳ್ಳಿ: ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ನಮ್ಮ ಪಕ್ಷಕ್ಕೆ ಬಂದರೆ ಸ್ವಾಗತಿಸುತ್ತೇವೆ ಎಂದು ಕಾಂಗ್ರೆಸ್ ಶಾಸಕ ರಾಜು ಕಾಗೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ಪಕ್ಷದ ಹೈಕಮಾಂಡ್ ಜತೆಗೆ ಚರ್ಚೆಮಾಡಿ ಕರೆದುಕೊಂಡು ಬನ್ನಿ ಅಂದರೆ ನಾನೇ ಬಸನಗೌಡ ಪಾಟೀಲ್ ಯತ್ನಾಳರನ್ನು ಕಾಂಗ್ರೆಸ್ ಗೆ ಕರೆತರುತ್ತೇನೆ. ನನಗೆ ಜವಾಬ್ದಾರಿ ಕೊಟ್ಟರೆ ಈ ಕೆಲಸ ಖಂಡಿತ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು. ಹಾಲಿನ ಬೆಲೆ ಏರಿಕೆಯಿಂದ ಅಷ್ಟೇನೂ ಹೊರೆ ಆಗೋದಿಲ್ಲ. ನಮಗೂ ಇತಿಮಿತಿ ಇದೆ. ಹೊಸ ಬಸ್‌ನಿಲ್ದಾಣ ನಿರ್ಮಾಣ, ಹೊಸ ಬಸ್ ಖರೀದಿ ಮಾಡುತ್ತಿದ್ದೇವೆ. ಸದ್ಯದ ವ್ಯವಸ್ಥೆ ಸರಿಪಡಿಸಬೇಕು. ಲಾಭ-ನಷ್ಟವಿಲ್ಲದೆ ಸಂಸ್ಥೆ ನಡೆಯಬೇಕು. 5 ಗ್ಯಾರಂಟಿ ಜನರಿಗೆ ಉಪಯೋಗ ಆಗುತ್ತಿದೆ ಎಂದು ರಾಜು ಕಾಗೆ ಬೆಲೆ ಏರಿಕೆ ಬಗ್ಗೆ ವಿವರಣೆ ಕೊಟ್ಟರು.

ಹೆದರುವ ಕಾಲ ಮುಗಿದು ಹೋಗಿದೆ

ಶಿರಸಿ: ನನ್ನನ್ನು ಬಿಜೆಪಿಯಲ್ಲಿ ಇಟ್ಟುಕೊಳ್ಳಬೇಕೇ, ಉಚ್ಚಾಟಿಸಬೇಕೇ ಎಂಬುದನ್ನು ನನಗೆ ನೋಟಿಸ್ ನೀಡಿದವರು ನಿರ್ಧರಿಸಬೇಕು. ರಾಜಕಾರಣದಲ್ಲಿ ನಾನು ಹೆದರುವ ಕಾಲ ಮುಗಿದು ಹೋಗಿದೆ ಎಂದು

ಶಾಸಕ ಶಿವರಾಮ ಹೆಬ್ಬಾರ ಎಚ್ಚರಿಕೆ ಕೊಟ್ಟಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ನನ್ನನ್ನೂ ಒಳಗೊಂಡು ಐವರಿಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ನೋಟೀಸ್ ಜಾರಿಮಾಡಿ 72 ಗಂಟೆಯಲ್ಲಿ ಉತ್ತರ ನೀಡುವಂತೆ ಸೂಚಿಸಲಾಗಿದೆ. ನಾನು ಕೂಡ ನೊಟೀಸ್ ಸ್ವೀಕರಿಸಿ 24 ಗಂಟೆಯಲ್ಲಿ ಸೂಕ್ತ ಉತ್ತರವನ್ನು ಲಿಖಿತವಾಗಿ ಕಳುಹಿಸಿದ್ದೇನೆ. ಕಾಲ ಬಂದಾಗ ಆ ಉತ್ತರ ಏನೆಂದು ಮಾಧ್ಯಮದೆದುರು ತೆರೆದಿಡುತ್ತೇನೆ ಎಂದು ಮಾರ್ಮಿಕವಾಗಿ ನುಡಿದರು. ಬಸನಗೌಡ ಯತ್ನಾಳ ನಂತರ ಉಚ್ಚಾಟನೆಯಾಗುವವರು ಎಸ್.ಟಿ. ಸೋಮಶೇಖರ್ ಹಾಗೂ ಶಿವರಾಮ ಹೆಬ್ಬಾರ್ ಎಂಬ ಹೇಳಿಕೆ ನೀಡಿರುವ ಛಲವಾದಿ ನಾರಾಯಣಸ್ವಾಮಿಗೆ ನನ್ನನ್ನು ಉಚ್ಚಾಟಿಸುವ ಅಧಿಕಾರವಿಲ್ಲ. ಅವರು ವಿಧಾನ ಪರಿಷತ್ ಸಭಾನಾಯಕರಷ್ಟೇ. ನನ್ನನ್ನು ಉಚ್ಚಾಟಿಸುವ ವೇದಿಕೆ ಬೇರೆಯೇ ಇದೆ. ಒಂದೊಮ್ಮೆ ಉಚ್ಚಾಟಿಸಿದರೆ ಆಗ ಅದರ ಬಗ್ಗೆ ಮಾತನಾಡುವೆ ಎಂದು ಸ್ಪಷ್ಟಪಡಿಸಿದರು.

ವರದಕ್ಷಿಣೆ ಕಿರುಕುಳ ಮಹಿಳೆ ಬಲಿ

ಚಿಕ್ಕಮಗಳೂರು: ಎನ್.ಆರ್.ಪುರ ತಾಲೂಕಿನ ಬಾಳೆಹೊನ್ನೂರಿನಲ್ಲಿ ಮಹಿಳೆಯೊಬ್ಬಳು ಸಾವನ್ನಪ್ಪಿದ್ದು, ವರದಕ್ಷಿಣೆಗಾಗಿ ಪತಿ ಹಾಗೂ ಆತನ ಮನೆಯವರು ಕಿರುಕುಳ ನೀಡಿ ನೇಣು ಹಾಕಿದ್ದಾರೆ ಎಂಬ

ಆರೋಪ ಕೇಳಿಬಂದಿದೆ. ಬಾಳೆಹೊನ್ನೂರಿನ ಮಮತಾ ಮೃತ ದುರ್ದೈವಿ. ಆಕೆಯನ್ನು 4 ವರ್ಷಗಳ ಹಿಂದೆ ಅವಿನಾಶ್‌ಗೆ ಮದುವೆ ಮಾಡಿ ಕೊಟ್ಟ ವೇಳೆ,110 ಗ್ರಾಂ ಚಿನ್ನ ನೀಡಲಾಗಿತ್ತು. ಈ ಹಿಂದೆಯೂ ಹಣಕ್ಕಾಗಿ ಗಂಡನ ಮನೆಯವರು ನೀಡಿದ ಮಾನಸಿಕ - ದೈಹಿಕ ಕಿರುಕುಳ ತಾಳಲಾರದೆ ಮಮತಾ ಮಹಿಳೆ ಗಂಡನ ಮನೆ ಬಿಟ್ಟು ತವರು ಸೇರಿದ್ದಳು. ಬಳಿಕ ದೊಡ್ಡವರ ರಾಜಿ ಪಂಚಾಯಿತಿ ಮೂಲಕ ಮತ್ತೆ ಗಂಡನ ಮನೆ ಸೇರಿದ್ದಳು. ಕಳೆದ ವರ್ಷ ತೋಟದ ನಿರ್ವಹಣೆಗಾಗಿ ಅವಿನಾಶ್, ಪತ್ನಿ ಮನೆಯವರಿಂದ 50 ಸಾವಿರ ರು. ಪಡೆದಿದ್ದ. ಮಮತಾಳ ಗಂಡ, ಅತ್ತೆ ಹಾಗೂ ಮಾವನ ವಿರುದ್ಧ ಮೃತ ಮಮತಾ ಅಣ್ಣ ಮಂಜುನಾಥ್ ದೂರು ನೀಡಿದ್ದು, ಬಾಳೆಹೊನ್ನೂರು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠರಿಗೆ ಮೇಲ್ಮನೆ ಸದಸ್ಯ ರಾಜೇಂದ್ರ ದೂರು

ಹನಿಟ್ರ್ಯಾಪ್ ನಡೆದಿಲ್ಲ, ಕೊಲೆಗೆ ಯತ್ನ ನಡೆದಿದೆ

ತುಮಕೂರು: ನನ್ನ ಮೇಲೆ ಕೊಲೆಯತ್ನ ನಡೆದಿದ್ದು, ಕ್ರಮ ಕೈಗೊಳ್ಳುವಂತೆ ಎಸ್ಪಿ ಅಶೋಕ್ ಅವರಿಗೆ ವಿಧಾನ ಪರಿಷತ್ ಸದಸ್ಯ ರಾಜೇಂದ್ರ ದೂರು ಸಲ್ಲಿಸಿದ್ದಾರೆ.

ಬೆಂಗಳೂರಿನಲ್ಲಿ ಡಿಜಿಪಿಗೆ ದೂರು ಸಲ್ಲಿಸಿದ ನಂತರ ಶುಕ್ರವಾರ ಎಸ್‌ಪಿ ಅಶೋಕ್ ಅವರಿಗೆ ಅಧಿಕೃತವಾಗಿ ದೂರು ಸಲ್ಲಿಸಿದ ರಾಜೇಂದ್ರ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. 2024ರ ನವೆಂಬರ್‌ನಲ್ಲಿ ನನ್ನ ಕೊಲೆಗೆ ಸುಪಾರಿ ನೀಡಲಾಗಿತ್ತು. ನಾಲ್ಕು ತಿಂಗಳ ಹಿಂದೆ 5 ಲಕ್ಷಕ್ಕೆ ಸುಪಾರಿ ಪಡೆದು ದುಷ್ಕರ್ಮಿಗಳು ಕೊಲೆಗೆ ಯತ್ನಿಸಿದ್ದರು. ಈ ಬಗ್ಗೆ ತನಿಖೆ ನಡೆಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ಸಲ್ಲಿಸಿದ್ದೇನೆ, ಘಟನೆ ತುಮಕೂರಿನಲ್ಲಿ ನಡೆದಿರುವುದರಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಹನಿಟ್ರ್ಯಾಪ್ ನಡೆದಿಲ್ಲ: ನನ್ನ ಮೇಲೆ ಹನಿಟ್ರ್ಯಾಪ್ ನಡೆದಿಲ್ಲ. ಆದರೆ ಕೊಲೆಗೆ ಯತ್ನ ನಡೆದಿದೆ. ಕಳೆದ ನವೆಂಬರ್ 16 ರಂದು ಕ್ಯಾತಸಂದ್ರದ ಮನೆಯಲ್ಲಿ ನನ್ನ ಪುತ್ರಿಯ ಹುಟ್ಟುಹಬ್ಬ ವಿತ್ತು. ಆ ಕಾರ್ಯಕ್ರಮದ ಹಿಂದಿನ ದಿನ ನ.15 ರಂದು ನಮ್ಮ ಮನೆಗೆ ಶಾಮಿ ಯಾನ ಹಾಕುವ ನೆಪದಲ್ಲಿ ಬಂದ ದುಷ್ಕರ್ಮಿಗಳು ನನ್ನ ಕೊಲೆಗೆ ಯತ್ನಿಸಿದ್ದರು. ಈ ಕೊಲೆ ಯತ್ನದ ಸಂಗತಿ ನನಗೆ ಜನವರಿಯಲ್ಲಿ ಗೊತ್ತಾಯಿತು. ಆಗ ನನಗೆ ಬಾತ್ಮೀದಾರರ ಮೂಲಕ ಒಂದು ವಾಯ್ಸ್ ರೆಕಾರ್ಡ್ ಸಿಕ್ಕಿತು. ಆ ಆಡಿಯೊದಲ್ಲಿ ತುಮಕೂರಿನ ಮೂವರ ಹೆಸರುಗಳು ಉಲ್ಲೇಖವಾಗಿವೆ ಎಂದು ರಾಜೇಂದ್ರ, ಈ ಪ್ರಕರಣದ ವಿವರ ನೀಡಿದರು.

ಕೊಲೆಯತ್ನ ನಡೆದಿದ್ದು, ಕ್ರಮ ಕೈಗೊಳ್ಳುವಂತೆ ತುಮಕೂರು ಎಸ್ಪಿ ಅಶೋಕ್ ಅವರಿಗೆ ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಶುಕ್ರವಾರ ದೂರು ನೀಡಿದರು.

- ಕಳೆದ 2024 ನವೆಂಬರ್ ತಿಂಗಳಿನಲ್ಲಿ ನನ್ನ ಕೊಲೆಗೆ ಸುಪಾರಿ ನೀಡಿಕೆ
- ನಾಲ್ಕು ತಿಂಗಳ ಹಿಂದೆ 5 ಲಕ್ಷಕ್ಕೆ ಸುಪಾರಿ ಪಡೆದು ಕೊಲೆಗೆ ದುಷ್ಕರ್ಮಿಗಳಿಂದ ಯತ್ನ
- ಮೂವರ ಪೈಕಿ ಒಬ್ಬಾತನ ಖಾತೆಗೆ 5 ಲಕ್ಷ ರು. ವರ್ಗಾವಣೆಯಾಗಿದೆ

ಮೂವರ ಪೈಕಿ ಒಬ್ಬಾತನ ಖಾತೆಗೆ 5 ಲಕ್ಷ ರು. ವರ್ಗಾವಣೆಯಾಗಿದೆ. ನನ್ನ ಹತ್ಯೆಗೆ ನೀಡಿದ ಹಣ ಇದಾಗಿದೆ. ಈ ಕೊಲೆ ಯತ್ನದ ಬಗ್ಗೆ ಗೃಹ ಸಚಿವರು ಹಾಗೂ ಮುಖ್ಯಮಂತ್ರಿ ಸೂಚನೆ ಮೇರೆಗೆ ದಾಖಲೆಗಳೊಂದಿಗೆ ಡಿಜಿಪಿಗೆ ದೂರು ಸಲ್ಲಿಸಿದೆ. ಆದರೆ ಆದರೆ ತುಮಕೂರಿನಲ್ಲಿ ಕೃತ್ಯ ನಡೆದಿರುವುದರಿಂದ ಡಿಜಿಪಿ ಸಲಹೆಯಂತೆ ತುಮಕೂರು ಎಸ್‌ಪಿಗೆ ದೂರು ಸಲ್ಲಿಸಿದ್ದೇನೆ.

-ರಾಜೇಂದ್ರ, ವಿಧಾನ ಪರಿಷತ್ ಸದಸ್ಯ

ಪೊಲೀಸ್ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಅಧಿಕಾರಿ

ಹಿರಿಯ ಪೊಲೀಸ್ ಅಧಿಕಾರಿ ಬಿ.ಎನ್ ಗರುಡಾಚಾರ್ ವಿಧಿವಶ

ಬೆಂಗಳೂರು: ಕರ್ನಾಟಕ ಕಂಡ ದಕ್ಷ ಪೊಲೀಸ್ ಅಧಿಕಾರಿ ಬಿ.ಎನ್ ಗರುಡಾಚಾರ್ (90) ಶುಕ್ರವಾರ ಬೆಳಗಿನಜಾವ 3 ಗಂಟೆಗೆ ವಿಧಿವಶರಾಗಿದ್ದಾರೆ.

ಗರುಡಾಚಾರ್ ಅವರು ಪೊಲೀಸ್ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸುವ ಮೂಲಕ ದಕ್ಷತೆ ಮತ್ತು ಪ್ರಾಮಾಣಿಕತೆಯ ರೂಪವಾಗಿದ್ದರು. ಶನಿವಾರ ಸಂಜೆ 4 ಗಂಟೆಗೆ ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ.

ಬಯಲುಸೀಮೆಯ ನಾಗಮಂಗಲ ತಾಲೂಕಿನ ಬಿಂಡಿಗನವಿಲೆ ಬರದ ಬೆಂಗಾಡು. ಈ ಹಳ್ಳಿಯ ಕೃಷಿ ಕುಟುಂಬದಲ್ಲಿ 1929ರಲ್ಲಿ ಹುಟ್ಟಿದ ಬಿ.ಎನ್. ಗರುಡಾಚಾರ್, ಕಷ್ಟವನ್ನು ಬೆನ್ನಿಗೆ ಕಟ್ಟಿಕೊಂಡು ಬಂದವರು. ತಂದೆಯ ಅಕಾಲಿಕ ಮರಣದ ನಂತರ ಕಡುಕಷ್ಟಕ್ಕೆ ಸಿಲುಕಿದ ಕುಟುಂಬಕ್ಕೆ ಅಮ್ಮ ಆಸರೆಯಾದರು. ಬಂಧುಗಳ, ಹಿತೈಷಿಗಳ ನೆರವಿನಲ್ಲಿ ಬೆಳೆದು, ಹಳ್ಳಿಯ ಕೂಲಿಮಠದಲ್ಲಿ ವಿದ್ಯಾಭ್ಯಾಸ ಆರಂಭಿಸಿದ ಬಾಲಕ ಗರುಡಾಚಾರ್, ಗೊರೂರು, ಹಾಸನ, ಮೈಸೂರುಗಳಲ್ಲಿ ಅಲೆದಾಡಿ, ಅವರಿವರ ಮನೆಯಲ್ಲಿ ಆಶ್ರಯ ಪಡೆದು, ಎಂ.ಎ. ಸ್ನಾತಕೋತ್ತರ ಪದವಿ ಪಡೆದರು. ನಂತರ 1953ರಲ್ಲಿ ಐಪಿಎಸ್ ಪಾಸ್ ಮಾಡಿ, ಈ ಸಾಧನೆಗೈದ ಮೊದಲಿಗರೆನಿಸಿಕೊಂಡರು.

ತಿರುನೆಲ್ವೇಲಿಯಲ್ಲಿ ಎಸಿಪಿ: ಓದಿನ ನಂತರ ಸರ್ವೇಯರ್, ಅಬಕಾರಿ ಇನ್ಸ್‌ಪೆಕ್ಟರ್ ಕೆಲಸಕ್ಕೆ ಸೇರಿದರು. ಅಲ್ಲಿಂದ ನೇರವಾಗಿ ಐಪಿಎಸ್ ಮಾಡಿ, ತಿರುನೆಲ್ವೇಲಿಯಲ್ಲಿ ಅಸಿಸ್ಟೆಂಟ್ ಪೊಲೀಸ್ ಕಮೀಷನರ್ ಹುದ್ದೆ ಅಲಂಕರಿಸಿದರು. ಪೊಲೀಸ್ ವೃತ್ತಿಯಲ್ಲಿ ಶಿಸ್ತು ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸಿದ ಗರುಡಾಚಾರ್ ಬಹಳ ಬೇಗ ಉನ್ನತಸ್ಥಾನ ಅಲಂಕರಿಸಿ, ಅಧಿಕಾರಸ್ಥ ರಾಜಕಾರಣಿಗಳ ಕಣ್ಣಿಗೆ ಬಿದ್ದಿದ್ದರು. ಕರ್ನಾಟಕದ ಕೊಪ್ಪಳ, ಹುಮ್ನಾಬಾದ್, ತುಮಕೂರು, ಬಳ್ಳಾರಿ, ಬೆಂಗಳೂರು ಜಿಲ್ಲಾ ಎಸ್ಪಿಯಾಗಿ ಉತ್ತಮ ಸೇವೆ ಸಲ್ಲಿಸಿ ಹೆಸರಾಗಿದ್ದರು.

ತುರ್ತುಪರಿಸ್ಥಿತಿಯಲ್ಲಿ ಖಡಕ್ ನಿರ್ವಹಣೆ

1972ರಲ್ಲಿ ಡಿಐಜಿಯಾಗಿದ್ದಾಗ, 1975ರಲ್ಲಿ ಇಂಟಲಿಜೆನ್ಸ್ ಡಿಐಜಿ ಆದಾಗ, 1976ರಲ್ಲಿ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಆಗಿ ನೇಮಕಗೊಂಡಾಗ ಮುಖ್ಯಮಂತ್ರಿ ದೇವರಾಜ ಅರಸರ ಆಡಳಿತವಿತ್ತು. ಅನಂತರ ಹೆಚ್ಚುವರಿ ಐಜಿ, ಡಿಜಿ ಮತ್ತು ಐಜಿಪಿಯಾಗಿ ನಿವೃತ್ತರಾದರು. ಖಡಕ್ ಅಧಿಕಾರಿ ಎಂದೇ ಹೆಸರು ಪಡೆದ ಗರುಡಾಚಾರ್ ವೀರೇಂದ್ರ ಪಾಟೀಲ್, ದೇವರಾಜ ಅರಸು, ಗುಂಡೂರಾವ್, ಹೆಗಡೆಯವರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. 1975ರ ತುರ್ತು ಪರಿಸ್ಥಿತಿಯಲ್ಲಿ ಗುಪ್ತಚರ ಇಲಾಖೆಯ ಐಜಿಯಾಗಿ, ರಾಷ್ಟ್ರಮಟ್ಟದ ರಾಜಕೀಯ ನಾಯಕರನ್ನು ಬಂಧಿಸಿ, ಜೈಲಿಗೆ ಹಾಕುವ ಮೂಲಕ ರಾಷ್ಟ್ರವ್ಯಾಪಿ ಸುದ್ದಿಯಾಗಿದ್ದರು. ದೇವರಾಜ ಅರಸರನ್ನು 1962ರಿಂದ ಬಲ್ಲವರಾಗಿದ್ದು, ಅವರು ಮುಖ್ಯಮಂತ್ರಿಯಾಗಿದ್ದಾಗ, ಬೆಂಗಳೂರು ನಗರ ಪೊಲೀಸ್ ಕಮೀಷನರ್ ಆಗಿ ನೇಮಕಗೊಂಡು, ನಾಲ್ಕು ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದು, ಪ್ರತಿದಿನ ಅರಸು ಅವರೊಂದಿಗೆ ಮುಖಾಮುಖಿಯಾಗುತ್ತಿದ್ದರು.

ಬಿ.ಎನ್.ಗರುಡಾಚಾರ್ ಅವರು ವಿವಿಧ ಜಿಲ್ಲೆಗಳಲ್ಲಿ ಪೊಲೀಸ್ ವರಿಷ್ಠ ಅಧಿಕಾರಿಯಾಗಿ ಕಾರ್ಯನಿರ್ವಹಿಸಿ, ನಂತರ ಬೆಂಗಳೂರು ಜಿಲ್ಲೆಯ ಎಸ್.ಪಿ ಹಾಗೂ ಬೆಂಗಳೂರು ಮಹಾನಗರದ ಡಿ.ಸಿ.ಪಿ ಯಾಗಿ (8 ವರ್ಷಗಳು) ಮತ್ತು ಪೊಲೀಸ್ ಕಮೀಷನರ್ ಆಗಿ (4 ವರ್ಷ 2 ತಿಂಗಳು), ಪೊಲೀಸ್ ಡಿಜಿ/ಐಜಿಪಿಯಾಗಿ (3 ವರ್ಷ 8 ತಿಂಗಳು) ಸೇವೆ ಸಲ್ಲಿಸಿದರು.

ಗಣ್ಯರ ಸಂತಾಪ: ಹಿರಿಯ ಐಪಿಎಸ್ ಅಧಿಕಾರಿ ಬಿ.ಎನ್.ಗರುಡಾಚಾರ್ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಬೆಂಗಳೂರಿಗೆ ಮೊದಲ ಟ್ರಾಫಿಕ್ ಸಿಗ್ನಲ್ ಅಳವಡಿಸಿದ ಕೀರ್ತಿ

ಬಿ.ಎನ್ ಗರುಡಾಚಾರ್ ಅವರು 1963ರಲ್ಲಿ ಬೆಂಗಳೂರು ನಗರದ ಸಂಚಾರ ಪೊಲೀಸ್ ಉಪ ಆಯುಕ್ತರಾಗಿದ್ದರು. ಆ ಸಮಯದಲ್ಲಿ ಬೆಂಗಳೂರಿನ ಕಾರ್ಪೊರೇಷನ್ ವೃತ್ತದಲ್ಲಿ ಬೆಂಗಳೂರು ನಗರದ ಮೊದಲ ಟ್ರಾಫಿಕ್ ಸಿಗ್ನಲ್ ಪ್ರಾರಂಭಿಸಿದ್ದರು. ಈ ಐತಿಹಾಸಿಕ ಘಟನೆಯ ಸವಿನೆನಪಿಗಾಗಿ, ಈ ಘಟನೆಯನ್ನು ಹೆಸರಿಸುವ ಕಲ್ಲನ್ನು 2021ರ ಮಾರ್ಚ್‌ನಲ್ಲಿ ಖುದ್ದು ಗರುಡಾಚಾರ್ ಅವರೇ ಅಂದಿನ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಕಮಲ್ ಪಂತ್, ಬೆಂಗಳೂರು ನಗರದ ಸಂಚಾರ ಜಂಟಿ ಪೊಲೀಸ್ ಆಯುಕ್ತ ಆರ್.ರವಿಕಾಂತೇಗೌಡ ಜತೆಗೂಡಿ ಉದ್ಘಾಟಿಸಿದ್ದರು. ಅಂದು ಗರುಡಾಚಾರ್ ಅವರನ್ನೂ ಪೊಲೀಸ್ ಇಲಾಖೆಯಿಂದ ಸನ್ಮಾನಿಸಿ ಗೌರವಿಸಲಾಗಿತ್ತು.

ಮುದ್ದಂಡ ಕಪ್ ಹಾಕಿ ಉತ್ಸವಕ್ಕೆ ಚಾಲನೆ

ಮಡಿಕೇರಿ: ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಬೆಳ್ಳಿ ಮಹೋತ್ಸವದ ಮುದ್ದಂಡ ಕಪ್ ಹಾಕಿ ಉತ್ಸವ-2025'ಕ್ಕೆ ಶುಕ್ರವಾರ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ಚಾಲನೆ ದೊರೆಯಿತು.

ವಿರಾಜಪೇಟೆ ಕ್ಷೇತ್ರದ ಶಾಸಕ ಎಸ್.ಪೊನ್ನಣ್ಣ ಹಾಗೂ ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಅವರು ಬೆಳ್ಳಿಯ ಸ್ಟಿಕ್'ನಿಂದ ಬೆಳ್ಳಿಯ ಚೆಂಡು ತಳ್ಳುವ ಮೂಲಕ ತಿಂಗಳ ಕಾಲ ದಾಖಲೆಯ 396 ತಂಡಗಳ ನಡುವೆ ನಡೆಯುವ ಹಾಕಿ ಉತ್ಸವವನ್ನು ಉದ್ಘಾಟಿಸಿದರು.

ಕೊಡವ ಸಂಸ್ಕೃತಿ ಸಂರಕ್ಷಣೆಯ 'ಹೆಜ್ಜೆ': ಕೊಡವ ಕುಟುಂಬಗಳ ಅತ್ಯಂತ ವಿಶಿಷ್ಟವಾದ 'ಐನ್ ಮನೆ' ವಿನ್ಯಾಸದ ಅತ್ಯಾಕರ್ಷಕ ವೇದಿಕೆಯಲ್ಲಿ ಚಾಲನೆ ನೀಡಿದ ಶಾಸಕ ಎ.ಎಸ್.ಪೊನ್ನಣ್ಣ ಅವರು, ಕೊಡವ ಹಾಕಿ ಅಕಾಡೆಮಿ ಸ್ಥಾಪನೆಗೆ ಕಾರಣರಾದ ಪಾಂಡಂಡ ಕುಟ್ಟಪ್ಪ ಅವರು 1997 ರಲ್ಲಿ ಆರಂಭಿಸಿದ 'ಕೊಡವ ಕೌಟುಂಬಿಕ ಹಾಕಿ ನಮ್ಮೆ' ಇದೀಗ ಇಪ್ಪತ್ತೈದು ವಸಂತಗಳನ್ನು ಪೂರೈಸಿದೆ. ಈ ಹಾಕಿ ಉತ್ಸವ ಕೇವಲ ಕ್ರೀಡೆಗೆ ಮಾತ್ರ ಸೀಮಿತವಾದುದಲ್ಲ. ನಮ್ಮ ಕೊಡವ ವಿಶಿಷ್ಟ ಸಂಸ್ಕೃತಿ ಸಂರಕ್ಷಣೆಗಾಗಿ ಇಡುತ್ತಿರುವ ಹೆಜ್ಜೆಗಳೇ ಆಗಿದೆ ಎಂದರು.

ಮುದ್ದಂಡ ಹಾಕಿ ನಮ್ಮೆ ಸ್ಮರಣ ಸಂಚಿಕೆ: ಕೊಡವ ಹಾಕಿ ಉತ್ಸವಕ್ಕೆ ಸಂಬಂಧಿಸಿದ 'ಮುದ್ದಂಡ ಹಾಕಿ ನಮ್ಮೆ' ಸ್ಮರಣ ಸಂಚಿಕೆ ಹಾಗೂ ಬಿದ್ದಂಡ ನಾಣಯ್ಯ ರಚಿತ ಕೊಡವ ಹಾಕಿ ಹಾಡನ್ನು ಇದೇ ಸಂದರ್ಭ ಅತಿಥಿ ಗಣ್ಯರು ಅನಾವರಣಗೊಳಿಸಿದರು. ಮಡಿಕೇರಿ ಶಾಸಕ ಡಾ. ಮಂತರ್ ಗೌಡ ಮಾತನಾಡಿ, ಕ್ರೀಡೆಯಲ್ಲಿ ಸೋಲು ಗೆಲುವಿಗಿಂತ ಭಾಗವಹಿಸುವುದು ಮುಖ್ಯ. ಮುದ್ದಂಡ ಹಾಕಿ ಉತ್ಸವ ದಾಖಲೆಯ ಪುಟಗಳನ್ನು ಸೇರಲೆಂದು ಹಾರೈಸಿದರು.

ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ಕೊಡವ ಆಚಾರ ವಿಚಾರ ಸಂಸ್ಕೃತಿಯ ಸಂರಕ್ಷಣೆ ಮತ್ತು ಕೊಡವ ಸಮುದಾಯಗಳ ಒಗ್ಗಟ್ಟಿಗೆ ಹಾಕಿ ಉತ್ಸವ ಸಹಕಾರಿಯಾಗಿದೆಯೆಂದು ನುಡಿದರು.

ವಿರಾಜಪೇಟೆ ಕ್ಷೇತ್ರದ ಶಾಸಕ ಎಸ್.ಪೊನ್ನಣ್ಣ ಹಾಗೂ ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಅವರುತಿಂಗಳನಡೆಯುವ ಹಾಕಿ ಉತ್ಸವವನ್ನು ಉದ್ಘಾಟಿಸಿದರು.

ವಿಶ್ವದಲ್ಲಿ ಕುಟುಂಬ ಕ್ರೀಡೆ ಪ್ರಥಮ

ಕೊಡುಗು ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಪಂದ್ಯಾವಳಿಗೆ ಶುಭ ಕೋರಿದರು. ಇಡೀ ವಿಶ್ವದಲ್ಲಿ ಕುಟುಂಬ ಕ್ರೀಡೆ ನಡೆಯುತ್ತಿರುವುದು ಕೊಡಗಿನಲ್ಲಿ ಮಾತ್ರ. ಅಲ್ಲದೇ ಕ್ರೀಡಾಕೂಟದ ಜತೆಗೆ ಕೊಡವ ಆಚಾರ, ವಿಚಾರ, ಸಂಸ್ಕೃತಿಯ ಬಗ್ಗೆ ಯುವ ಪೀಳಿಗೆಗೆ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದರು.

ಅನ್ಯಾಯದ ವಿರುದ್ಧ ಹೋರಾಟ: ಪಂಚಮಸಾಲಿ ಶ್ರೀ

ಯತ್ನಾಳ್ ಉಚ್ಚಾಟನೆಗೆ ಷಡ್ಯಂತ್ರ

ವಿಜಯಪುರ: ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಉಚ್ಚಾಟನೆ ವಿರುದ್ಧ ಹೋರಾಟ ನಡೆಸುತ್ತಿದ್ದೇವೆಯೇ ಹೊರತು ಬಿಜೆಪಿ ವಿರುದ್ಧವಲ್ಲ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯ ಮೃತ್ಯುಂಜಯ ಶ್ರೀಗಳು ಸ್ಪಷ್ಟಪಡಿಸಿದ್ದಾರೆ. ವಿಜಯಪುರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ಬಿಜೆಪಿ ವಿರುದ್ಧ ನಾವು ಹೋರಾಟ ಮಾಡುತ್ತಿಲ್ಲ, ಯತ್ನಾಳರ ಉಚ್ಚಾಟನೆಗೆ ಕಾರಣರಾದ ವ್ಯಕ್ತಿಯ ವಿರುದ್ಧ ನಾವು ಹೋರಾಟಕ್ಕೆ ಅಣಿಯಾಗಿದ್ದೇವೆ ಎಂದು ಪ್ರಕಟಿಸಿದರು.

ನಮ್ಮ ಸಮಾಜದ ಶಾಸಕರೊಬ್ಬರಿಗೆ ಅನ್ಯಾಯವಾಗಿದೆ, ಅದರ ವಿರುದ್ಧ ನಾನು ಧ್ವನಿ ಎತ್ತಿದ್ದೇನೆ. ಹೊಟ್ಟೆಕಿಚ್ಚಿನಿಂದ ಕೆಲವರು ಸಮಾಜದ ವಿಚಾರದಲ್ಲಿ ಮೂಗು ತೂರಿಸಿ ಹೇಳಿಕೆ ನೀಡುತ್ತಿದ್ದಾರೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅನ್ಯಾಯವಾದರೆ ನಾನು ಆತನ ನ್ಯಾಯದ ಪರವಾಗಿ ನಿಲ್ಲುವೆ ಎಂದರು.

ಕಾರಣವಿಲ್ಲದೇ ಒಬ್ಬ ಪ್ರಭಾವಿ ನಾಯಕನನ್ನು ಉಚ್ಚಾಟನೆ ಮಾಡಿರುವುದು ಸಮಸ್ತ ಪಂಚಮಸಾಲಿ ಸಮಾಜದ ಜನರ ಭಾವನೆಗಳಿಗೆ ನೋವು ತರಿಸಿದೆ. ಪಂಚಮಸಾಲಿ ಸಮಾಜ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ಏ.10 ರೊಳಗಾಗಿ ಯತ್ನಾಳರ ಉಚ್ಚಾಟನೆ ಆದೇಶ ಹಿಂದಕ್ಕೆ ಪಡೆಯಬೇಕು.

-ಬಸವಜಯ ಮೃತ್ಯುಂಜಯ ಶ್ರೀ, ಕೂಡಲಸಂಗಮ ಪಂಚಮಸಾಲಿ ಪೀಠ

ಯತ್ನಾಳ್ ಕಾಂಗ್ರೆಸ್ ಸೇರುವುದು ವರಿಷ್ಠರಿಗೆ ಬಿಟ್ಟ ವಿಚಾರ

ಹನಿಟ್ರ್ಯಾಪ್ ಅಂದರೆ ನನಗೆ ಗೊತ್ತಿಲ್ಲ

ಹುಬ್ಬಳ್ಳಿ : ಹನಿಟ್ರ್ಯಾಪ್ ಅಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ಮಾಹಿತಿಯೂ ಇಲ್ಲ . ರಾಜ್ಯದಲ್ಲಿ ಬೇಸಿಗೆಯ ಉಷ್ಣತೆ ಜಾಸ್ತಿಯಾಗುತ್ತಿದೆ ಕುಡಿಯುವ ನಿರ್ವಹಣೆ ಅತ್ಯಂತ ಮಹತ್ವದ ಕೆಲಸ ಕುಡಿಯುವ ನಿರ್ವಹಣೆ ಕುರಿತು ಸಂಪುಟ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ಸೂಚ್ಯವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗಮೋಹನದಾಸ್ ವರದಿ ಸಚಿವ ಸಂಪುಟ ಮುಂದೆ ಬಂದಿತ್ತು . ನಾವು ಒಪ್ಪಿದ್ದೇವೆ, ವರದಿ 60 ದಿನಗಳವರೆಗೆ ವಿಸ್ತರಿಸಿದ್ದೇವೆ. 30-40 ದಿನಗಳಲ್ಲಿ ಸಮಿತಿ ಮುಗಿಸಬಹುದು ಎಂದರು.

ಯತ್ನಾಳ ಉಚ್ಚಾಟನೆ ಬಿಜೆಪಿಯ ವಿಚಾರ. ಈ ಬಗ್ಗೆ ಅವರನ್ನೇ ಕೇಳಿ ಎಂದ ಎಚ್.ಕೆ.ಪಾಟೀಲ್, ಯತ್ನಾಳ್ ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವುದು ಪಕ್ಷದ ವರಿಷ್ಠರಿಗೆ ಬಿಟ್ಟ ಸಂಗತಿ. ಈ ಬಗ್ಗೆ ಕೆಪಿಸಿಸಿ ಅಧ್ಯಕ್ಷರನ್ನು ಕೇಳಬೇಕು ಎಂದರು.

ಡಿ.ಕೆ.ಶಿವಕುಮಾರ್ ಸಂವಿಧಾನದ ಬದಲಾವಣೆ ಮಾಡ್ತೀವಿ ಎಂದು ಮಾತನಾಡಿಲ್ಲ,ಕಾಂಗ್ರೆಸ್ ಯಾವಾಗಲೂ ಸಂವಿಧಾನದ ರಕ್ಷಣೆಗೆ ಬದ್ಧವಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಜಲಾಶಯಗಳಿಂದ ನೀರಿನ ಬಿಡುಗಡೆ, ಚರ್ಚೆ: ರಾಜ್ಯದಲ್ಲಿ ಬಿಸಿಲು ಜಾಸ್ತಿಯಾಗಿದೆ. ಕುಡಿಯುವ ನೀರಿನ ನಿರ್ವಹಣೆ ಮಹತ್ವದ ಕೆಲಸ. ಆದ್ದರಿಂದ ಸಚಿವ ಸಂಪುಟದಲ್ಲಿ ರಾಜ್ಯದ ಜಲಾಶಯಗಳಿಂದ ನೀರಿನ ಬಿಡುಗಡೆ ಕುರಿತು ಚರ್ಚೆಯಾಗಿದೆ. ಕುಡಿಯುವ ನೀರಿನ ನಿರ್ವಹಣೆ ಬಗ್ಗೆ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಿ ಒಂದು ವಾರದೊಳಗೆ ಚರ್ಚೆಮಾಡಿ ಸೂಕ್ತ ನಿರ್ದೇಶನ ನೀಡಲಿದ್ದಾರೆ ಎಂದು ಸಚಿವ ಪಾಟೀಲ್ ತಿಳಿಸಿದರು.

ದೇಶದ ಯಾವುದೇ ರಾಜ್ಯ ನೋಡಿ, ನಮ್ಮ ರಾಜ್ಯದಲ್ಲಿ ಹಾಲಿನ ದರ ಐದು ರು. ಕಡಿಮೆ ಇದೆ. ರೈತರ ಬೇಡಿಕೆ ಗಮನಿಸಿ,ಎಷ್ಟು ಕಡಿಮೆ ಸಾಧ್ಯವೋ,ಅಷ್ಟು ಹೆಚ್ಚು ಮಾಡಿದ್ದೇವೆ. ಹೆಚ್ಚಳಗೊಂಡಿರುವ 4 ರು. ರೈತರಿಗೆ ಹೋಗುತ್ತದೆ.

- ಎಚ್.ಕೆ.ಪಾಟೀಲ್, ಸಚಿವ

ಹೈ ಕಮಾಂಡ್ ಆದೇಶಕ್ಕೆ ಎಲ್ಲರೂ ತಲೆಬಾಗಲೇಬೇಕು: ಛಲವಾದಿ

ಯತ್ನಾಳ್ ಉಚ್ಚಾಟನೆ:ಎಚ್ಚರಿಕೆ ಗಂಟೆ

ಮೈಸೂರು: ನಮ್ಮದು ನಾಯಕರ ಪಕ್ಷ ಅಲ್ಲ, ಕಾರ್ಯಕರ್ತರ ಪಕ್ಷ. ಹೈ ಕಮಾಂಡ್ ಆದೇಶಕ್ಕೆ ನಾವೆಲ್ಲರೂ ತಲೆಬಾಗಲೇಬೇಕು ಎಂದು ಹೇಳಿರುವ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಯತ್ನಾಳ್

ರವರು ಇತಿಮಿತಿಯಲ್ಲಿ ಇದ್ದಿದ್ದರೆ ಇದು ಆಗುತ್ತಿರಲಿಲ್ಲ ಎಂದು ಸೂಚ್ಯವಾಗಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿರೋಧ ಪಕ್ಷದವರನ್ನು ವಿರೋಧಿಸುವ ಬದಲು ನಮ್ಮ ಪಕ್ಷವನ್ನೆ ವಿರೋಧಿಸಿದರು. ಇದು ಎಲ್ಲರಿಗೂ ಒಂದು ಪಾಠ. ಛಲವಾದಿ ನಾರಾಯಣಸ್ವಾಮಿ ಇಲ್ಲ ಅಂದರೆ ಬಿಜೆಪಿ ಬಾಗಿಲು ಹಾಕುವುದಿಲ್ಲ. ಯಾರು ಪಕ್ಷಕ್ಕೆ ಅನಿವಾರ್ಯ ಇಲ್ಲ ಪಕ್ಷ ನಮಗೆ ಅನಿವಾರ್ಯ. ಯಾರು ಪಕ್ಷಕ್ಕಿಂತ ದೊಡ್ಡವರಾಗಿ ವರ್ತಿಸುತ್ತಾರೋ ಆಗ ಇಂತಹ ಘಟನೆ ನಡೆಯುತ್ತದೆ ಎಂದು ಹೇಳಿದರು. ಬಿಜೆಪಿ ಪಕ್ಷದಿಂದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಉಚ್ಚಾಟನೆ ಮಾಡಿರುವುದು ಬೇರೆಯವರಿಗೆ ಎಚ್ಚರಿಕೆ ಗಂಟೆ ಎಂದ ಅವರು, ಬಿಜೆಪಿ ಕಾರ್ಯಕರ್ತರ ಪಕ್ಷ. ಇಲ್ಲಿ ಹುಲಿ ಯಾರೂ ಇಲ್ಲ. ಹುಲಿ ಎಂದರೆ ಕಾಡಿಗೆ ಕಳುಹಿಸುತ್ತಾರೆ ಎಂದು ಮಾರ್ಮಿಕವಾಗಿ ನುಡಿದರು.

ಶಾಸಕ ಯತ್ನಾಳ್ ಗೆ ತಪ್ಪು ತಿದ್ದಿಕೊಳ್ಳಲು ಅವಕಾಶ ನೀಡಿದ್ದರು. ಇದು ಬೇರೆಯವರಿಗೆ ಎಚ್ಚರಿಕೆ ಗಂಟೆ. ಯಾರೂ ಹೈಕಮಾಂಡ್ ನಿರ್ಧಾರ ವಿರೋಧಿಸಬಾರದು. ಯತ್ನಾಳ್ ಪರ ನಾವಿದ್ದೇವೆ ಎಂದು ಹೇಳಬಾರದು. ಹೊಂದಾಣಿಕೆ ರಾಜಕಾರಣಕ್ಕೆ ಹೈಕಮಾಂಡ್ ಬ್ರೇಕ್ ಹಾಕಲಿದೆ ಎಂದರು.

ಕಾಂಗ್ರೆಸ್ ಹನಿಟ್ರ್ಯಾಪ್ ಕಂಪನಿ

ಕಾಂಗ್ರೆಸ್ ಅನ್ನುವಂತದ್ದೇ ಒಂದು ಹನಿ ಟ್ರ್ಯಾಪ್ ಕಂಪನಿ. ಯಾರು ಕಾಂಗ್ರೆಸ್ ವಿರೋಧಿಸುತ್ತಾರೊ, ಪ್ರಶ್ನೆ ಮಾಡುತ್ತಾರೋ, ಭ್ರಷ್ಟಾಚಾರ ಹೊರ ತರುತ್ತಾರೋ ಅವರನ್ನು ಟ್ರ್ಯಾಪ್ ಮಾಡುತ್ತಾರೆ. ಹೊರಗಿನವರಿಗಿಂತ ಕಾಂಗ್ರೆಸ್ ನವರನ್ನೆ ಹೆಚ್ಚು ಟ್ರ್ಯಾಪ್ ಮಾಡುತ್ತಾರೆ. ಹನಿಟ್ರ್ಯಾಪ್ ಮಾತ್ರವಲ್ಲ ಫೋನ್ ಟ್ಯಾಪ್ ಕೂಡ ಮಾಡುತ್ತಾರೆ. ಇದೆಲ್ಲದಕ್ಕೂ ಉತ್ತರ ಕೊಡಬೇಕಾದ ಸಿಎಂ ಬಾಯಿಮುಚ್ಚಿ ಕುಳಿತಿದ್ದಾರೆ. ನನಗೆ ಅನುಮಾನ ಇದೆ ಸಿಎಂ ಕೂಡ ಟ್ರ್ಯಾಪ್ ಆಗಿದ್ದಾರೇನೋ.? ಇವೆಲ್ಲಾ ಸತ್ಯ ಆಚೆ ಬಂದರೆ ಕಾಂಗ್ರೆಸ್ ಮರ್ಯಾದೆ ಹೋಗುತ್ತೆ ಅಂತ ಸುಮ್ಮನಿದ್ದಾರೆ. ಮಾಡೋದೆಷ್ಟು ತಪ್ಪೊ ಅದನ್ನು ಮುಚ್ಚಿ ಹಾಕೋದು ತಪ್ಪೇ. ಅದನ್ನು ಮುಚ್ಚಿಡಲು ಬಿಜೆಪಿ ಬಿಡಲ್ಲ ಎಂದು ಹೇಳಿದರು.

ನ್ಯಾಮತಿ ಪೊಲೀಸರ ಯಶಸ್ವಿ ಕಾರ್ಯಾಚರಣೆ

ಬ್ಯಾಂಕ್ ದರೋಡೆ: ಐವರ ಸೆರೆ

ದಾವಣಗೆರೆ: ನ್ಯಾಮತಿಯ ಎಸ್‌ಬಿಐ ಬ್ಯಾಂಕ್ ದರೋಡೆ ಪ್ರಕರಣದಲ್ಲಿ 12.96 ಕೋಟಿ ರು. ಮೌಲ್ಯದ ಚಿನ್ನಾಭರಣ ಕದ್ದೊಯ್ದಿದ್ದ 5 ಆರೋಪಿಗಳನ್ನು ಬಂಧಿಸಿದ್ದಾರೆ.

ತಮಿಳುನಾಡಿನ ಅಜಯ್‌ಕುಮಾರ್, ವಿಜಯ್‌ಕುಮಾರ್, ನ್ಯಾಮತಿಯ ಮಂಜುನಾಥ್, ಹೊನ್ನಾಳಿಯ ಅಭಿಷೇಕ್ ಹಾಗೂ ಚಂದ್ರಶೇಖರ್ ಬಂಧಿತರು. ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಈ ದರೋಡೆ ನಡೆದಿತ್ತು. ಬ್ಯಾಂಕ್ ಕಿಟಕಿಯ ಸರಳನ್ನು ಮುರಿದು, 12.96 ಕೋಟಿ ರು. ಮೌಲ್ಯದ ಚಿನ್ನಾಭರಣ ದೋಚಿದ ದುಷ್ಕರ್ಮಿಗಳು ಬ್ಯಾಂಕ್ ತುಂಬೆಲ್ಲಾ ಖಾರದ ಪುಡಿ ಚೆಲ್ಲಿ ಪರಾರಿಯಾಗಿದ್ದರು.

ಮೂವರು ಸ್ಥಳೀಯರೂ ಭಾಗಿ: ಪೊಲೀಸ್ ಇಲಾಖೆಗೆ ದರೋಡೆಕೋರರನ್ನು ಪತ್ತೆಹಚ್ಚುವುದೇ ದೊಡ್ಡ ತಲೆನೋವಾಗಿತ್ತು. ಎಸ್‌ಪಿ ಉಮಾ ಪ್ರಶಾಂತ್ ಹಾಗೂ ಎಎಸ್ಪಿ ಸ್ಯಾಮ್ ವರ್ಗೀಸ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ, ತನಿಖೆ ನಡೆಸಿದಾಗ ದರೋಡೆಕೋರರ ಪತ್ತೆಯಾಗಿದ್ದು, ಮೂವರು ಸ್ಥಳೀಯರನ್ನು ಸೇರಿ ಐವರು ದರೋಡೆಕೋರರನ್ನು ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವ ತಮಿಳುನಾಡು ಮೂಲದ ಮತ್ತೊಬ್ಬ ಆರೋಪಿ ಪರಮಾನಂದನ ಬಂಧನಕ್ಕೆ ಬಲೆ ಬೀಸಿದ್ದಾರೆ.

ಆರೋಪಿಗಳು ದರೋಡೆ ಮಾಡಲು ನ್ಯಾಮತಿಯಲ್ಲಿ ಬೇಕರಿ ಹಾಕಿಕೊಂಡು ಹಲವು ವರ್ಷಗಳಿಂದ ಸ್ಕೆಚ್ ಹಾಕಿದ್ದರು ಎನ್ನಲಾಗಿದೆ. ಪೊಲೀಸರು ಕೆಲ ತಾಂತ್ರಿಕ ಸಾಕ್ಷ್ಯಗಳ ಜಾಡುಹಿಡಿದು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಈ ದರೋಡೆ ಪ್ರಕರಣ ಹೊರಬಂದಿದೆ.

ಹೊರನಾಡ ಕನ್ನಡಿಗ ವಿದ್ಯಾರ್ಥಿಗಳಿಗೆ ವಸತಿ ಶಾಲೆಯಲ್ಲಿ ಅವಕಾಶ | ಮುಖ್ಯಕಾರ್ಯದರ್ಶಿ ನೇತೃತ್ವದ ಸಭೆಯಲ್ಲಿ ಮಹತ್ವದ ತೀರ್ಮಾನ

ಗಡಿನಾಡ ಕನ್ನಡಿಗರ ಸಮಸ್ಯೆಗೆ ನೋಡಲ್ ಅಧಿಕಾರಿಗಳ ನೇಮಕ

ಬೆಂಗಳೂರು: ಗಡಿಭಾಗದಲ್ಲಿರುವ ಕನ್ನಡಿಗರು ಅನುಭವಿಸುತ್ತಿರುವ ಹತ್ತಾರು ಸಮಸ್ಯೆಗಳಿಗೆ ಪರಿಹಾರವಾಗಿ ರಾಜ್ಯ ಸರಕಾರ ಇದೀಗ ಇಲಾಖಾವಾರು ನೋಡಲ್ ಅಧಿಕಾರಿಗಳನ್ನು ನೇಮಿಸಲು ಮುಂದಾಗಿದ್ದು, ಈ ಮೂಲಕ ಗಡಿನಾಡಿನಲ್ಲಿ ನೆಲೆಸಿರುವ ಕನ್ನಡಿಗರ ಹಲವು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ತೀರ್ಮಾನಿಸಿದೆ.

ಈ ಬಗ್ಗೆ ವಿಧಾನಸೌಧದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಈ ವೇಳೆ ರಾಜ್ಯದ ಗಡಿಯಲ್ಲಿರುವ ಹಾಗೂ ಹೊರರಾಜ್ಯದ ಗಡಿಯಲ್ಲಿರುವ ಕನ್ನಡಿಗರಿಗರ ಸಮಸ್ಯೆಯನ್ನು ಪರಿಶೀಲಿಸಲು ಪ್ರತಿ ಇಲಾಖೆಯಿಂದ ಒಬ್ಬ ನೋಡೆಲ್ ಅಧಿಕಾರಿಯನ್ನು ನೇಮಿಸುವಂತೆ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚನೆ ನೀಡಿದರು.

ಇದರೊಂದಿಗೆ ಗಡಿ ಜಿಲ್ಲೆಗಳಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಗಡಿ ಭಾಗದ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು. ಈ ಎಲ್ಲ ಸಭೆಗಳಿಗೆ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸಬೇಕು. ಗಡಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಡಿ ಸಮಸ್ಯೆಗಳ ಬಗ್ಗೆ ನಿರಂತರವಾಗಿ ಜಿಲ್ಲಾಧಿಕಾರಿಗಳೊಂದಿಗೆ ಸಂಪರ್ಕಿಸಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಮಾತನಾಡಿ, ಹೊರರಾಜ್ಯದ ಕನ್ನಡ ಮಾಧ್ಯಮ ಶಾಲೆಗಳಿಗೆ ಶಿಕ್ಷಕರ ನೇಮಕ, ವಿದ್ಯಾರ್ಥಿಗಳಿಗೆ ಮೊರಾರ್ಜಿ, ರಾಣಿ ಚನ್ನಮ್ಮ ಮುಂತಾದ ವಸತಿನಿಲಯಗಳಿಗೆ ಪ್ರವೇಶ, ಶಾಲಾ ಕೊಠಡಿ, ಗ್ರಂಥಾಲಯ ಹಾಗೂ ಕನ್ನಡ ಭವನ ನಿರ್ಮಾಣ, ಉನ್ನತ ಶಿಕ್ಷಣಗಳಿಗೆ ರಾಜ್ಯದ ವಿದ್ಯಾರ್ಥಿಗಳಂತೆ ಹೊರರಾಜ್ಯದವರಿಗೆ ಸಮಾನ ಅವಕಾಶ, ಹೊರನಾಡ ಕನ್ನಡಿಗರಿಗೆ ಮೀಸಲು ನಿಯಮಗಳ ಪರಿಷ್ಕರಣೆ, ರಾಜ್ಯದ ಶಾಲಾ-ಕಾಲೇಜುಗಳಿಗೆ ಹೊರನಾಡ ಕನ್ನಡಿಗರ ವಿದ್ಯಾರ್ಥಿಗಳು ತೆರಳಲು ರಿಯಾಯಿತಿ ದರದಲ್ಲಿ ಬಸ್ ಪಾಸ್ ವ್ಯವಸ್ಥೆ ಮಾಡುವಂತೆ ಸಂಬಂಧಪಟ್ಟ ಇಲಾಖೆಗಳ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ವಿವಿಧ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಸೋಮಣ್ಣ ಬೇವಿನಮರದ, ಹಾಗೂ ಗಡಿ ಕಾರ್ಯದರ್ಶಿಗಳಾದ ಪ್ರಕಾಶ್ ಮತ್ತೀಹಳ್ಳಿ ಅವರು ಸಭೆಯಲ್ಲಿ ಭಾಗವಹಿಸಿದ್ದರು.

ವಿಧಾನಸೌಧದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಹೊರ ರಾಜ್ಯಗಳಲ್ಲಿರುವ 658 ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಗಡಿ ಭಾಗದ ವಿದ್ಯಾರ್ಥಿಗಳು ಮತ್ತು ಹೊರನಾಡ ಕನ್ನಡಿಗರು ದಿನ ನಿತ್ಯ ಅನುಭವಿಸುವ ಶೈಕ್ಷಣಿಕ, ಔದ್ಯೋಗಿಕ ಹಾಗೂ ಮೂಲಸೌಕರ್ಯಗಳ ಸಮಸ್ಯೆಗಳ ಬಗ್ಗೆ ಗಮನಹರಿಸಬೇಕಿದೆ.

-ಸೋಮಣ್ಣ ಬೇವಿನಮರದ, ಗಡಿನಾಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು

ವಸತಿ ನಿಲಯದಲ್ಲಿ ಅವಕಾಶ

ಗಡಿನಾಡಿನಲ್ಲಿ ವಾಸಿಸುತ್ತಿರುವ ಕನ್ನಡಿಗರ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡಿಸುವ ನಿಟ್ಟಿನಲ್ಲಿ ಸಮಾಜ ಕಲ್ಯಾಣಯ ಸುಪರ್ದಿಯಲ್ಲಿರುವ ರಾಜ್ಯದ ವಿವಿಧ ವಸತಿ ನಿಲಯಗಳ ಪ್ರವೇಶಕ್ಕೆ ಅವಕಾಶ ನೀಡಲು ತೀರ್ಮಾನಿಸಲಾಗಿದೆ. ಇದೇ ರೀತಿ ಕೇರಳ ರಾಜ್ಯದ ಗಡಿ ಕನ್ನಡ ಪ್ರದೇಶಗಳ ಹೆಸರುಗಳನ್ನು ಮಲೆಯಾಳಿಕರಣ ಮಾಡುತ್ತಿರುವ ಬಗ್ಗೆ, ಇರುವ ಕಾನೂನಾತ್ಮಕ ಅವಕಾಶಗಳನ್ನು ಪರಿಶೀಲಿಸಿ, ವರದಿ ನೀಡಲು, ಸಂಸದೀಯ ವ್ಯವಹಾರಗಳ ಇಲಾಖಾ ಕಾರ್ಯದರ್ಶಿಗಳಿಗೆ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

ವಿಶ್ವವಾಣಿ

ಸಂಪಾದಕೀಯ

ರಾಜಕಾರಣವೋ, ದೃಶ್ಯಭೀಷಣವೋ?

ರಾಜ್ಯ ರಾಜಕಾರಣದ ಇಂದಿನ ಸ್ಥಿತಿಗತಿಯನ್ನು ಅವಲೋಕಿಸಿದ ಜನರಿಗೆ ರಾಮರಾಜ್ಯ ಬಂದರೂ ರಾಗಿ ಬೀಸೋದು ತಪ್ಪಲಿಲ್ಲ ಎಂಬ ಮಾತು ನೆನಪಾದರೆ ಅಚ್ಚರಿಯಲ್ಲ. ಒಂದೆಡೆ, ರಾಜ್ಯದ ಅಧಿಕಾರ ಗದ್ದುಗೆಯನ್ನು ಅಪ್ಪಿರುವ ಕಾಂಗ್ರೆಸ್ ಪಕ್ಷದಲ್ಲಿ ಗುಪ್ತಗಾಮಿನಿಯಾಗಿದ್ದ 'ನೀ ಕೊಡೆ, ನಾ ಬಿಡೆ' ಎಂಬ ಹಗ್ಗಜಗ್ಗಾಟವು ಪ್ರಸ್ತುತ ದೆಹಲಿಯ ಅಂಗಳವನ್ನು ತಲುಪಿದ್ದರೆ, ಮತ್ತೊಂದೆಡೆ ಬಿಜೆಪಿಯ ರಾಜ್ಯ ಘಟಕದ ಪರಿಸ್ಥಿತಿ 'ಮನೆಯೊಂದು ಮೂರು ಬಾಗಿಲು' ಎನ್ನುವಂತಾಗಿದೆ. ಹೀಗೆ ಎರಡೂ ಮನೆಗಳು ಮತ್ತು ಅವುಗಳಲ್ಲಿರುವವರ ಮನಗಳು ಮುರಿದಾಗ, ಆಡಳಿತ ಯಂತ್ರವು ಸೂತ್ರಹರಿದ ಗಾಳಿಪಟದಂತಾಗುತ್ತದೆ. ರಾಜ್ಯದ ಜನರಿಗೆ ಪ್ರಸ್ತುತ ಕಾಣುತ್ತಿರುವುದು ರಾಜಕಾರಣವಲ್ಲ, 'ದೃಶ್ಯಭೀಷಣ'. ಜನಕಲ್ಯಾಣಕ್ಕೆ ಆಳುಗರು ದಿನಪೂರ್ತಿ ಸಮಯ ವಿನಿಯೋಗಿಸಿದರೂ ಸಾಲದು ಎಂಬ ಅನಿವಾರ್ಯತೆ ಇರುವಾಗ, ಆಳುಗ ಪಕ್ಷದವರು ಹಾಗೂ ವಿಪಕ್ಷದವರು ತಂತಮ್ಮ ಮನೆಯ ಅಂತಃಕಲಹದ ಬೆಂಕಿಯ ಶಮನಕ್ಕೇ ಬಹುತೇಕ ಸಮಯವನ್ನು ಮೀಸಲಿಡುವಂತಾದರೆ, ಜನಕಲ್ಯಾಣದ ಆಶಯ ಸಾಕಾರಗೊಳ್ಳುವುದೆಂತು? ಕಾಂಗ್ರೆಸ್‌ನಲ್ಲಿ 'ಅಧಿಕಾರ-ಹಸ್ತಾಂತರ' ಎಂಬ 'ಅನಿಶ್ಚಿತ' ಚರ್ಚಾವಿಷಯಕ್ಕೆ ಸಂಬಂಧಿಸಿ ಕೇಳಿಬರುತ್ತಿರುವ ಗುಸುಗುಸು ಮಾತುಗಳು ಹಾಗೂ ಬಿಜೆಪಿಯಲ್ಲಿ ಮೊನ್ನೆಯಷ್ಟೇ ಘಟಿಸಿದ ಪ್ರಮುಖ ನಾಯಕರೊಬ್ಬರ ಉಚ್ಚಾಟನೆ- ಈ ಎರಡೂ ಸಮಸ್ಯೆಗಳಿಗೆ ಪ್ರಜಾಪ್ರತಿನಿಧಿಗಳನ್ನು ಚುನಾಯಿಸಿ ಕಳಿಸಿದ ಜನರಂತೂ ಕಾರಣರಲ್ಲ. ಆದರೆ ತಾವು ಮಾಡದ ತಪ್ಪಿಗೆ ಜನರು ಹೀಗೆ ಪರೋಕ್ಷವಾಗಿ ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂದಿರುವುದು ವಿಪರ್ಯಾಸದ ಪರಮಾವಧಿ. ವಿವೇಚನೆಯಿರುವ ಒಂದಿಷ್ಟು ನಾಯಕರು ಒಂದೆಡೆ ಕಲೆತು ಮುಕ್ತವಾಗಿ ಮಾತನಾಡಿ ಗೊಂದಲಗಳನ್ನು ನಿವಾರಿಸಿಬಿಟ್ಟರೆ, ನಾಲ್ಕು ಗೋಡೆಗಳ ಮಧ್ಯೆಯೇ ಇತ್ಯರ್ಥವಾಗಿಬಿಡುವ ಸಮಸ್ಯೆಗಳು ಎರಡೂ ಪಕ್ಷ-ಪಾಳಯಗಳದ್ದು. ಈ ಸರಳ ಸಂಗತಿಯನ್ನು ಅರಿಯದೆ 'ಹಾದಿರಂಪ-ಬೀದಿರಂಪ' ಮಾಡಿಕೊಂಡರೆ, ಆ ಪ್ರಹಸನಕ್ಕೆ ತೆರಿಗೆದಾರರ ಹಣ ವೆಚ್ಚವಾಗಬೇಕೇ?! ಈ ಪ್ರಶ್ನೆಗೆ ಉತ್ತರಿಸುವವರಾರು?

ಸೊಂಪಾದಕೀಯ

'ಬೇಟಿ'ಗಿಂತ 'ರೋಟಿ' ಮುಖ್ಯ

ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಅಂತಾರೆ. ಅದರ ಜತೆಗೆ, ಒಂದು ಮದುವೆ ಆಗೋದು ಎಷ್ಟು ಕಷ್ಟ ಅಂತನೂ ಇಂದಿನ ನಮ್ಮ ಹುಡುಗರಿಗೆ ಗೊತ್ತು. ಹುಡುಗಿ ಸಿಗ್ತಾ ಇಲ್ಲ ಅಂತ ವಯಸ್ಸು ಮೀರಿ ಹೋದರೂ ಅನೇಕ ಹುಡುಗರು ಪಾಪ ಸಿಂಗಲ್ ಆಗಿಯೇ ಕಾಲ ತಳ್ಳುತ್ತಿದ್ದಾರೆ. ಜೀವನದಲ್ಲಿ ರೋಟಿ, ಕಪಡಾ, ಮಕಾನ್ ಎಲ್ಲ ಮಾಡಿಕೊಂಡು ಸ್ಥಿತಿವಂತರಾಗಿದ್ದರೂ, ರೈತರ ಮಕ್ಕಳು ಅನ್ನೋ ಕಾರಣಕ್ಕೆ ಕೆಲವರಿಗೆ ಹೆಣ್ಣು ಸಿಗುತ್ತಿಲ್ಲ. ಆದರೆ ಇಲ್ಲೊಬ್ಬ ವರ ಮಹಾಶಯ ನಿರಾಯಾಸವಾಗಿ ಪಾಲಿಗೆ ಬಂದ ಪಂಚಾಮೃತವನ್ನು ಕಾಲಿನಿಂದ ಒದ್ದಿದ್ದಾನೆ. ಅದೇನೋ ಹೇಳ್ತಾರಲ್ಲ 'ಹಲ್ಲಿದ್ದವರಿಗೆ ಕಡಲೆ ಇಲ್ಲ, ಕಡಲೆ ಇದ್ದವರಿಗೆ ಹಲ್ಲಿಲ್ಲ' ಅಂತ, ಹಾಗೆ. ಲಖನೌದಲ್ಲಿ ನಡೆಯುತ್ತಿದ್ದ ಮದುವೆಯೊಂದರಲ್ಲಿ ವರ ತೆಗೆದ ವರಾತ ಏನು ಅಂತ ಕೇಳಿದರೆ ನೀವು ಬೆರಗಾಗುತ್ತೀರಿ. ಒಂದು ಕಡೆ ವಧು ಸಿಂಗರಿಸಿಕೊಂಡು ಹಸೆಮಣೆ ಏರಲು ಸಿದ್ಧಳಾಗುತ್ತಿದ್ದರೆ, ಅತ್ತ ಅತ್ತೆ ಮನೆಯ ಊಟದ ಮನೆಯಲ್ಲಿ ಬಾಳೆ ಎಲೆ ಮುಂದೆ ವರ ತನ್ನ ವರಸೆ ತೋರಿಸಿದ್ದಾನೆ. ವರ ಮತ್ತು ಅವನ ಕುಟುಂಬ ವಧುವಿನ ಮನೆಯಲ್ಲಿ ಊಟ ಸೇವಿಸುವಾಗ ರೋಟಿ ಬರೋದು ತಡ ಆಯ್ತು ಅಂತ ಯಾರೋ ತೆಗೆದ ಕ್ಯಾತೆಗೆ ವರ ಕೂಡಾ ಸೇರಿಕೊಂಡಿದ್ದಾನೆ. ನಂತರ ಜಗಳ ದೊಡ್ಡದಾಗಿ ಅದನ್ನೇ ನೆಪವಾಗಿಸಿಕೊಂಡು ಮದುವೆ ಮನೆಯನ್ನೇ ಬಿಟ್ಟು ಹೊರಟಿದ್ದಾನೆ. ಹಾಗಾಗಿ ಮದುವೆ ನಿಂತು ಹೋಗಿದೆ. ಈಗ ವಧುವಿನ ಕುಟುಂಬಕ್ಕೆ 1.5 ಲಕ್ಷ ರುಪಾಯಿ ವರದಕ್ಷಿಣೆ ಸೇರಿದಂತೆ ಒಟ್ಟು 7 ಲಕ್ಷ ರುಪಾಯಿ ಲಾಸ್ ಆಗಿದೆಯಂತೆ. ಇದರಿಂದ ರೊಚ್ಚಿಗೆದ್ದ ವಧುವು, ವರ ಮತ್ತು ಅವನ ಕುಟುಂಬದ ವಿರುದ್ಧ ಕೇಸು ದಾಖಲು ಮಾಡಿ ಎಫ್‌ಐಆರ್ ಕೂಡ ಫೈಲ್ ಮಾಡಿಸಿದ್ದಾಳೆ. ಮದುವೆ ಮನೆಯಲ್ಲಿ ಅತ್ತೆ-ಮಾವ ಕೊಡೋ 'ಬೇಟಿ'ಗಿಂತ 'ರೋಟಿ'ಯೇ ಮುಖ್ಯ ಅನ್ನೋ ವರ, ರಾತ್ರೋರಾತ್ರಿ ಇನ್ನೊಬ್ಬಳನ್ನು ಮದುವೆ ಕೂಡ ಆಗಿದ್ದನ್ನು ನೋಡಿ ಮದುವೆಗೆ ಭೇಟಿ ಕೊಟ್ಟ ನೆಂಟರಿಷ್ಟರು ಮಾತ್ರ 'ಅಯ್ಯೋ ದೇವ್ರೇ, ಹೀಗೂ ಉಂಟೆ' ಅಂತ ಮೂಗಿನ ಮೇಲೆ ಬೆರಳಿಟ್ಟುಕೊಂಡರಂತೆ!

ಸಂಪಾದಕರ ಸದ್ಯಶೋಧನೆ

ಲಗೇಜ್ ನಿರ್ವಹಣೆ

ಜಗತ್ತಿನಲ್ಲಿಯೇ ಪ್ರಯಾಣಿಕರ ಲಗೇಜ್ ನಿರ್ವಹಣೆ (ಹ್ಯಾಂಡ್ಲಿಂಗ್)ಯಲ್ಲಿ ಶ್ರೇಷ್ಠತೆ ಸಾಧಿಸುವವರೆಂದರೆ ಜಪಾನಿಗರು. ಅಲ್ಲಿನ ಯಾವ ವಿಮಾನ ನಿಲ್ದಾಣದಲ್ಲಿಯೂ ಸಿಬ್ಬಂದಿ ಪ್ರಯಾಣಿಕರ ಸೂಟ್‌ಕೇಸುಗಳನ್ನು ಎಸೆಯುವುದಿಲ್ಲ. ಬೇರೆ ವಿಮಾನ ನಿಲ್ದಾಣಗಳಲ್ಲಿ ಲಗೇಜುಗಳ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲದಂತೆ ಎಸೆಯುತ್ತಾರೆ. ಕೆಲವೊಮ್ಮೆ ಈ ಕಾರಣಕ್ಕಾಗಿಯೇ ಸೂಟ್‌ಕೇಸುಗಳು ಒಡೆದು ಹೋಗುತ್ತವೆ, ಗಾಯಗಳಾಗುತ್ತವೆ''- ಹೀಗಂತ ನನಗೆ ಹೇಳಿದವರು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಲಗೇಜ್ ನಿರ್ವಹಣಾ ವಿಭಾಗದಲ್ಲಿ ಕೆಲ ವರ್ಷಗಳಿಂದ ಉನ್ನತ ಹುದ್ದೆಯಲ್ಲಿರುವ ಕನ್ನಡಿಗರಾದ ಸುಂದರರಾಜ್ ಅವರು. ಜಪಾನಿನ ವಿಮಾನ ನಿಲ್ದಾಣಗಳಲ್ಲಿ ಲಗೇಜ್ ಹ್ಯಾಂಡ್ಲಿಂಗ್ ವ್ಯವಸ್ಥೆ, ವಿಶ್ವದ ಇತರ ದೇಶಗಳ ವಿಮಾನ ನಿಲ್ದಾಣಗಳೊಂದಿಗೆ ಹೋಲಿಸಿದಾಗ ಅತ್ಯಂತ ಪರಿಣಾಮಕಾರಿ ಮತ್ತು ನಿಖರವಂತೆ. ಟೋಕಿಯೋ ನಾರಿಟಾ, ಹನೇಡಾ ಮತ್ತು ಕಾನ್ಸಾಯಿ ವಿಮಾನ ನಿಲ್ದಾಣಗಳು ತಮ್ಮ ಉನ್ನತ ಮಟ್ಟದ ಲಗೇಜ್ ಹ್ಯಾಂಡ್ಲಿಂಗ್ ಸೇವೆಗಳಿಗಾಗಿ ಪ್ರಸಿದ್ಧವಾಗಿವೆಯಂತೆ. ಅದರಲ್ಲೂ ಕಾನ್ಸಾಯಿ ವಿಮಾನ ನಿಲ್ದಾಣ ಕಳೆದ 30 ವರ್ಷಗಳಲ್ಲಿ ಪ್ರಯಾಣಿಕರ ಒಂದೇ ಒಂದು ಲಗೇಜ್ ಕಾಣೆಯಾಗದ ದಾಖಲೆಯನ್ನು ಹೊಂದಿದೆ. ಇದು ಲಗೇಜ್ ಹ್ಯಾಂಡ್ಲಿಂಗ್‌ನಲ್ಲಿ ಉನ್ನತ ಮಟ್ಟದ ನಿಖರತೆ ಮತ್ತು ದಕ್ಷತೆಯನ್ನು ತಲುಪಿದೆ. ಆ ವಿಮಾನ ನಿಲ್ದಾಣವು ಲಗೇಜನ್ನು ವಿಮಾನದಿಂದ ಬ್ಯಾಗೇಜ್ ಕ್ಲೈಮ್‌ಗೆ 15 ನಿಮಿಷಗಳ ಒಳಗೆ ತಲುಪಿಸುವ ಗುರಿಯನ್ನು ಹೊಂದಿದೆ. ಈ ಸಾಧನೆಯಿಂದಾಗಿ, ಕಾನ್ಸಾಯಿ ವಿಮಾನ ನಿಲ್ದಾಣವು ಸ್ಕೈಟ್ರಾಕ್ಸ್‌ನ 'ವಿಶ್ವದ ಅತ್ಯುತ್ತಮ ವಿಮಾನ ನಿಲ್ದಾಣ ಲಗೇಜ್ ವಿತರಣೆಗೆ' ಎಂಬ ಪ್ರಶಸ್ತಿಯನ್ನು ಸತತ ಪಡೆಯುತ್ತಲೇ ಇದೆ. ಜಪಾನಿನ ಲಗೇಜ್ ಹ್ಯಾಂಡ್ಲಿಂಗ್ ವ್ಯವಸ್ಥೆಯ ಪ್ರಮುಖ ಲಕ್ಷಣವೆಂದರೆ, ಭದ್ರತೆ, ಸುರಕ್ಷತೆ ಮತ್ತು ನಿಖರತೆಗೆ ನೀಡುವ ಆದ್ಯತೆ. ವಿಮಾನ ನಿಲ್ದಾಣದ ಸಿಬ್ಬಂದಿ ಸೂಕ್ಷ್ಮ ವಸ್ತುಗಳನ್ನು ಕೈಯಾರೆ ವಿತರಿಸುತ್ತಾರೆ ಮತ್ತು ಮಳೆಯಿಂದ ಒದ್ದೆಯಾದ ಲಗೇಜ್‌ಗಳನ್ನು ಒಣಗಿಸುತ್ತಾರೆ, ಇದರಿಂದ ಪ್ರಯಾಣಿಕರಿಗೆ ಅವರ ಲಗೇಜ್ ಸುರಕ್ಷಿತವಾಗಿ ತಲುಪುತ್ತದೆ. ಇತರ ದೇಶಗಳ ವಿಮಾನ ನಿಲ್ದಾಣಗಳೊಂದಿಗೆ ಹೋಲಿಸಿದರೆ, ಜಪಾನಿನ ವಿಮಾನ ನಿಲ್ದಾಣಗಳ ಲಗೇಜ್ ಹ್ಯಾಂಡ್ಲಿಂಗ್ ವ್ಯವಸ್ಥೆ ಹೆಚ್ಚು ಪರಿಣಾಮಕಾರಿ ಮತ್ತು ಪ್ರಯಾಣಿಕರ ಅನುಭವವನ್ನು ಸುಗಮಗೊಳಿಸುತ್ತದೆ. ಉದಾಹರಣೆಗೆ, ಸಿಂಗಾಪುರದ ಚಾಂಗೀ ವಿಮಾನ ನಿಲ್ದಾಣವು ಕೂಡ ಅತ್ಯುತ್ತಮ ಲಗೇಜ್ ಹ್ಯಾಂಡ್ಲಿಂಗ್ ಸೇವೆಗಳನ್ನು ಒದಗಿಸುತ್ತದೆ, ಆದರೆ ಜಪಾನಿನ ವಿಮಾನ ನಿಲ್ದಾಣಗಳ ನಿಖರತೆ ಮತ್ತು ಸೇವಾ ಗುಣಮಟ್ಟ ಅದಕ್ಕಿಂತ ಉತ್ತಮವಾಗಿದೆ. ಬೇರೆ ನಿಲ್ದಾಣಗಳಲ್ಲಿ ಲಗೇಜುಗಳನ್ನು ಎತ್ತಿ ಬಿಸಾಡಿದರೆ, ಜಪಾನಿನಲ್ಲಿ ಅಲ್ಲಿನ ಸಿಬ್ಬಂದಿ ನಾಜೂಕಾಗಿ ಎತ್ತಿ ಇಡುತ್ತಾರೆ. ಯಾವ ಕಾರಣಕ್ಕೂ ಅವರು ಲಗೇಜುಗಳನ್ನು ಜೀವವಿಲ್ಲದ ವಸ್ತು ಎಂದು ಭಾವಿಸುವುದಿಲ್ಲ. ಲಗೇಜುಗಳು ಪ್ರಯಾಣಿಕರ ಒಂದು ಭಾಗ ಎಂದು ಪರಿಗಣಿಸುತ್ತಾರೆ. ಈ ಒಂದು ಗುಣ ಲಗೇಜುಗಳ ಬಗೆಗಿನ ಅವರ ಮನೋಭಾವವನ್ನೇ ಬದಲಿಸಿಬಿಟ್ಟಿದೆ. ಲಗೇಜ್ ಹ್ಯಾಂಡ್ಲಿಂಗ್ ವ್ಯವಸ್ಥೆಯ ಯಶಸ್ಸಿನ ಹಿಂದಿನ ಪ್ರಮುಖ ಕಾರಣಗಳಲ್ಲಿ ನಿರಂತರ ಸುಧಾರಣೆ ಮತ್ತು ತಂತ್ರಜ್ಞಾನ ಅಳವಡಿಕೆ ಮಹತ್ತರ ಪಾತ್ರವನ್ನು ವಹಿಸಿದೆ. ರೊಬೋಟುಗಳ ಬಳಕೆ ಇಡೀ ಚಿತ್ರಣವನ್ನೇ ಬದಲಿಸಲು ಸಹಾಯಕವಾಗಿದೆ. ಅಲ್ಲಿನ ವಿಮಾನ ನಿಲ್ದಾಣಗಳಲ್ಲಿ RFID (Radio Frequency Identification) ತಂತ್ರಜ್ಞಾನವನ್ನು ಪ್ರಯಾಣಿಕರ ಲಗೇಜ್ ಮೇಲೆ ಅಳವಡಿಸಲಾಗುತ್ತದೆ. ಇದರಿಂದ ಲಗೇಜ್ ಹಾದುಹೋಗುವ ಎಲ್ಲ ಹಂತದಲ್ಲೂ ನಿಗಾ ಇರಿಸಲು ಅನುಕೂಲವಾಗಿದೆ. ಸಿಸಿಟಿವಿ ಕೆಮೆರಾ ವ್ಯವಸ್ಥೆ, ಯಾಂತ್ರಿಕ ಸ್ಕ್ಯಾನರ್‌ಗಳು ಮತ್ತು ಸ್ವಯಂಚಾಲಿತ ವಿಂಗಡಣಾ ವ್ಯವಸ್ಥೆ (Automated Sorting System)ಯಿಂದಾಗಿ ಲಗೇಜ್ ಕಳೆದುಹೋಗುವ ಅಥವಾ ವಿಳಂಬವಾಗುವ ಸಮಸ್ಯೆ ಪರಿಹಾರವಾಗಿದೆ. ಈ ತಂತ್ರಜ್ಞಾನವನ್ನು ಜಾಗತಿಕ ಮಟ್ಟದಲ್ಲಿಯೇ ಅಳವಡಿಸಲು ಇತರ ದೇಶಗಳು ಜಪಾನಿನಿಂದ ಸ್ಫೂರ್ತಿ ಪಡೆದಿವೆ. ಜಪಾನಿನ ವಿಮಾನ ನಿಲ್ದಾಣಗಳು Zero Loss Target ಅನ್ನು ಹೊಂದಿವೆ. ಇತರ ದೇಶಗಳಲ್ಲಿ ಬಹಳಷ್ಟು ಲಗೇಜ್ ಕಳೆದುಹೋಗುವ ಪ್ರಕರಣಗಳು ಸಾಮಾನ್ಯವಾಗಿದ್ದರೆ, ಜಪಾನಿನಲ್ಲಿ ಇದು ಅಪರೂಪ ಅಥವಾ ಇಲ್ಲವೇ ಇಲ್ಲ. ಅಮೆರಿಕ ಮತ್ತು ಯುರೋಪಿನಲ್ಲಿ ವಿಮಾನ ನಿಲ್ದಾಣಗಳಲ್ಲಿ ಟ್ರಾನ್ಸಿಟ್ ಸಮಯದಲ್ಲಿ ಲಗೇಜ್ ಕಾಣೆಯಾಗುವುದು ಹೆಚ್ಚು. ಆದರೆ ಇಂಥ ಪ್ರಕರಣಗಳನ್ನು ಜಪಾನಿನಲ್ಲಿ ಕಾಣಲು ಸಾಧ್ಯವೇ ಇಲ್ಲ. ಜಪಾನಿನ ಸಂಸ್ಕೃತಿಯಲ್ಲಿ ಸೇವೆಯ ಮೇಲೆ ಹೆಚ್ಚಿನ ಒತ್ತು ನೀಡಿರುವುದು ಲಗೇಜ್ ಹ್ಯಾಂಡ್ಲಿಂಗ್‌ನಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ನಕ್ಸಲಿಸಂಗೆ 2026ರಲ್ಲಿ ಟಾಟಾ ಬೈ ಬೈ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

1967ರಲ್ಲಿ, ಚಾರು ಮಜುಂದಾರ್, ಕಾನು ಸನ್ಯಾಲ್ ಮತ್ತು ಜಂಗಲ್ ಸಂಥಾಲ್ ನೇತೃತ್ವದ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ (ಮಾರ್ಕ್ಸ್‌ವಾದಿ) ಒಂದು ಬಣವು 'ಸಿಲಿಗುರಿ ಗುಂಪು' ಎಂದು ಕರೆಯಲ್ಪಟ್ಟು, ಚೀನಾದ ಕಮ್ಯುನಿಸ್ಟ್ ಕ್ರಾಂತಿ ಮಾದರಿಯನ್ನು ಭಾರತದಲ್ಲಿ ಜಾರಿಗೆ ತರಲು ಬಯಸಿತ್ತು. ಅಂದು ಮಜುಂದಾರ್ ಬರೆದ 8 ದಾಖಲೆಗಳು ನಕ್ಸಲೈಟ್ ಚಳವಳಿಯ ಅಡಿಪಾಯವಾಗಿತ್ತು ಮತ್ತು ಅವರ ಪಕ್ಷವು ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸುತ್ತಿದ್ದಂಥ ಸಮ್ಮಿಶ್ರ ಸರಕಾರದ ಭಾಗವಾಗಿತ್ತು. ಪಕ್ಷವು ತಮ್ಮ ಸಿದ್ಧಾಂತವನ್ನು ಬೆಂಬಲಿಸುತ್ತದೆ ಎಂದು ಮಜುಂದಾರ್ ನಂಬಿದ್ದರು, ಆದರೆ ಅವರು ಜಾರಿಗೆ ತರಬೇಕೆಂದುಕೊಂಡಿದ್ದ ಸಶಸ್ತ್ರ ದಂಗೆಯನ್ನು ಅವರ ಪಕ್ಷ ಬೆಂಬಲಿಸಲಿಲ್ಲ. ಇದರಿಂದ ಪಕ್ಷದಲ್ಲಿ ಆಂತರಿಕ ಸಂಘರ್ಷ ಪ್ರಾರಂಭವಾಗಿ 1967ರಲ್ಲಿ ನಕ್ಸಲ್ ದಂಗೆ ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ವಿಭಜನೆಯಾಗಿ, ಮಾವೋವಾದಿ ಸಿದ್ಧಾಂತವನ್ನು ಬೆಂಬಲಿಸುವ ವಿವಿಧ ಗುಂಪುಗಳಾದವು.

ಪಶ್ಚಿಮ ಬಂಗಾಳದಲ್ಲಿ ಪ್ರಾರಂಭವಾದ ನಕ್ಸಲ್ ಚಳವಳಿಯು 1980ರ ದಶಕದಲ್ಲಿ ದಕ್ಷಿಣ ಭಾರತಕ್ಕೆ ಕಾಲಿಟ್ಟಿತು. ಆಂಧ್ರಪ್ರದೇಶದ ಕೊಂಡಪಲ್ಲಿ ಸೀತಾರಾಮಯ್ಯ ನೇತೃತ್ವದಲ್ಲಿ 1980ರಲ್ಲಿ ನಕ್ಸಲ್ ಸಂಘಟನೆ ಸ್ಥಾಪನೆಯಾಯಿತು. ಭೂಮಾಲೀಕರನ್ನು ಅಪಹರಿಸಿ ಹಳ್ಳಿಯ ಜನರ ಮುಂದೆ ಕ್ಷಮೆ ಯಾಚಿಸುವಂತೆ ಬಲವಂತ ಮಾಡುವುದು, ಹಣ ನೀಡುವಂತೆ ಒತ್ತಾಯಿಸುವುದು ಅವರ ಚಳವಳಿಯ ನಿತ್ಯದ ಕೆಲಸವಾಗಿತ್ತು. 1985ರಲ್ಲಿ, ವಾರಂಗಲ್ ಜಿಲ್ಲೆಯ ಪೊಲೀಸ್ ನಿರೀಕ್ಷಕರ ಮೇಲೆ ಈತನ ಗುಂಪು ಗೆರಿಲ್ಲಾ ದಾಳಿ ಮಾಡಿ ಬರ್ಬರವಾಗಿ ಕೊಂದಿತು. 2003ರಲ್ಲಿ, ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಚಂದ್ರಬಾಬು ನಾಯ್ಡು ಅವರ ಕಾರಿನ ಮೇಲೆ ತಿರುಪತಿಯಲ್ಲಿ ಬಾಂಬ್ ದಾಳಿ ನಡೆಸಿತು. ಹೋರಾಟದ ಹೆಸರಲ್ಲಿ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡು ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಕೆಲಸವನ್ನು ನಕ್ಸಲ್ ನಾಯಕರು ಮಾಡುತ್ತಾ ಬಂದರು. 2009-2010ರ ನಡುವೆ ನಕ್ಸಲ್ ಚಟುವಟಿಕೆ ತೀವ್ರವಾಗಿ 2100ಕ್ಕೂ ಅಧಿಕ ಜನರ ಸಾವಿಗೆ ಕಾರಣವಾಯಿತು. ನಗರ ಪ್ರದೇಶಗಳಲ್ಲಿ ಇದ್ದುಕೊಂಡು ಮಾವೋವಾದವನ್ನು ಬೆಂಬಲಿಸುತ್ತಿದ್ದ ಎಡಚರ ಪಟಾಲಂ, ನಕ್ಸಲರು ನಡೆಸುತ್ತಿದ್ದ ಕೃತ್ಯಗಳನ್ನು ಬೆಂಬಲಿಸುತ್ತಿತ್ತು.

2010ರಲ್ಲಿ ಛತ್ತೀಸ್‌ಗಢದ ದಾಂತೇವಾಡದಲ್ಲಿ ನಕ್ಸಲರು ನಡೆಸಿದ ಭೀಕರ ದಾಳಿಯಲ್ಲಿ 84 ಸೈನಿಕರು ಮೃತಪಟ್ಟರು. 2009 ಮತ್ತು 2010ರಲ್ಲಿ ನಡೆದ ನಕ್ಸಲ್ ದಾಳಿಯಲ್ಲಿ 998 ನಾಗರಿಕರು ಹಾಗೂ ಭದ್ರತಾ ಪಡೆಯ 586 ಸಿಬ್ಬಂದಿ ಅಸುನೀಗಿದರು. 2019ರಲ್ಲಿ ಅಮಿತ್ ಶಾ ಕೇಂದ್ರದಲ್ಲಿ ಗೃಹ ಸಚಿವರಾದ ನಂತರ, 2026ರ ಮಾರ್ಚ್ ಅಂತ್ಯದ ವೇಳೆಗೆ ಭಾರತವನ್ನು 'ನಕ್ಸಲ್-ಮುಕ್ತ' ದೇಶವನ್ನಾಗಿಸುವ ಪಣ ತೊಟ್ಟರು. ಏಕೆಂದರೆ, ಆ ಕಾಲಘಟ್ಟದಲ್ಲಿ ನಕ್ಸಲ್ ಅಥವಾ ಎಡಪಂಥೀಯ ಉಗ್ರಗಾಮಿ ಸಂಘಟನೆಗಳ ಸಮಸ್ಯೆಯು ಕಾಶ್ಮೀರದ ಸಮಸ್ಯೆಗಿಂತ ದೊಡ್ಡದಾಗಿತ್ತು. ಅಂತೆಯೇ, ಪಡೆಗಳು ನಡೆಸಿದ ಕಾರ್ಯಾಚರಣೆಗಳಲ್ಲಿ ಮಾವೋವಾದಿಗಳ ಸಾವಿನ ಸಂಖ್ಯೆ ಹೆಚ್ಚಾಯಿತು. 2019ರಲ್ಲಿ 154; 2020ರಲ್ಲಿ 134; 2021ರಲ್ಲಿ 128; 2022ರಲ್ಲಿ 66; 2023ರಲ್ಲಿ 57 ಮತ್ತು 2024ರಲ್ಲಿ 255 ಮಾವೋವಾದಿಗಳನ್ನು ಹೊಡೆದುರುಳಿಸಲಾಯಿತು.

ಸ್ವಾತಂತ್ರ್ಯಾನಂತರದಲ್ಲಿ 1990ರ ದಶಕದವರೆಗೆ, ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ವ್ಯವಸ್ಥಿತ ಅಭಿವೃದ್ಧಿ ಸಾಧ್ಯವಾಗಿರಲಿಲ್ಲ. ಪ್ರಗತಿಯ ವಿಷಯದಲ್ಲಿ ಕೆಲವು ಪ್ರದೇಶಗಳು ಹಿಂದುಳಿದಿದ್ದವು. ಇದನ್ನೇ ಮುಂದಿಟ್ಟುಕೊಂಡು ನಕ್ಸಲರು ಆ ಪ್ರದೇಶಗಳಲ್ಲಿ ಜನರನ್ನು ಹಿಂಸಾಚಾರಕ್ಕೆ ಪ್ರಚೋದಿಸಿದರು. ಹಿಂಸಾಚಾರವನ್ನು ದಮನಿಸಿ ಅಭಿವೃದ್ಧಿಯನ್ನು ಮುನ್ನೆಲೆಗೆ ತರಲು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನೇಪಾಳದ ಪಶುಪತಿನಾಥದಿಂದ ಆಂಧ್ರಪ್ರದೇಶದ ತಿರುಪತಿಯವರೆಗೆ ವಿಸ್ತರಿಸಿರುವ 'ರೆಡ್ ಕಾರಿಡಾರ್'ನಲ್ಲಿ 4 ಹಂತದ ತಂತ್ರಗಾರಿಕೆಯನ್ನು ಕೇಂದ್ರ ಸರಕಾರ ರೂಪಿಸಿತು. ನಕ್ಸಲರ ವಿರುದ್ಧದ ಕೇಂದ್ರ ಸರಕಾರ ಕ್ರಿಯಾಯೋಜನೆಯ ಮೊದಲ ಹಂತದಲ್ಲಿ, 'ಬಂದೂಕುಗಳನ್ನು ಕೈಗೆತ್ತಿಕೊಂಡವರ ಮತ್ತು ಹಿಂಸಾಚಾರಕ್ಕೆ ಕಾರಣರಾದವರ ಮೇಲೆ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳುವುದು' ಸೇರಿತ್ತು. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಿಯೋಜಿಸಲಾದ ರಾಜ್ಯ ಪೊಲೀಸ್ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಿಗೆ (CAPF) ತರಬೇತಿಯನ್ನೂ, ಆಕ್ರಮಣಕಾರಿ ರೈಫಲ್‌ಗಳನ್ನೂ, ಹೆಚ್ಚಿನ ವ್ಯಾಪ್ತಿ ಹೊಂದಿರುವ ಆಧುನಿಕ ಶಸ್ತ್ರಾಸ್ತ್ರಗಳನ್ನೂ ನೀಡಲಾಯಿತು. ಎರಡನೇ ಹಂತದಲ್ಲಿ, ಹೆಚ್ಚಿನ ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಭದ್ರತಾ ಉಪಸ್ಥಿತಿಯನ್ನು ಹೆಚ್ಚಿಸಲು, CAPF ಮತ್ತು ರಾಜ್ಯ ಪೊಲೀಸರ ಸಹಯೋಗದೊಂದಿಗೆ ನಕ್ಸಲರ ಪ್ರದೇಶವನ್ನು ತೆರವುಗೊಳಿಸಲು ವ್ಯವಸ್ಥಿತವಾಗಿ ಕೆಲಸ ಮಾಡುವ 'ಫಾರ್ವರ್ಡ್ ಆಪರೇಟಿಂಗ್ ಬೇಸ್' (FOB) ಎಂಬ ಶಿಬಿರಗಳನ್ನು ಹೆಚ್ಚಾಗಿ ಸ್ಥಾಪಿಸಲಾಯಿತು. ಕಳೆದ 5 ವರ್ಷಗಳಲ್ಲಿ 302 ಹೊಸ ಶಿಬಿರಗಳನ್ನು ಸ್ಥಾಪಿಸಲಾಗಿದೆ.

ನಕ್ಸಲರ ಪ್ರದೇಶಗಳನ್ನು ತೆರವುಗೊಳಿಸುತ್ತಿದ್ದಂತೆ ಅವುಗಳನ್ನು ರಾಜ್ಯ ಪೊಲೀಸರಿಗೆ ಹಸ್ತಾಂತರಿಸಿ ಠಾಣೆಗಳನ್ನು ಸ್ಥಾಪಿಸಿ ಮುಂದಕ್ಕೆ ಸಾಗಲಾಗುತ್ತಿತ್ತು. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ 2014ರ ನಂತರ ಹೀಗೆ 612 ಠಾಣೆಗಳನ್ನು ನಿರ್ಮಾಣ ಮಾಡಲಾಗಿದೆ (ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಸ್ಥಾಪಿತವಾಗಿದ್ದು ಕೇವಲ 66 ಠಾಣೆಗಳು). ಈ ಠಾಣೆಗಳಲ್ಲಿ, ಸ್ಥಳೀಯರಿಗೆ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಆಧುನಿಕ ಸಂವಹನ ಸೌಲಭ್ಯ ಮತ್ತು ಸಾಕಷ್ಟು ಸಶಸ್ತ್ರ ಸಿಬ್ಬಂದಿಯನ್ನು ನೇಮಿಸಲಾಗುತ್ತಿದೆ.

ನಕ್ಸಲರ ವಿರುದ್ಧ ಹೋರಾಡುವ ಪಡೆಗಳಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ತರಬೇತಿ ನೀಡಲಾಗಿದೆ. ಡ್ರೋನ್‌ಗಳು, ಉಪಗ್ರಹ ಚಿತ್ರಣ ಮತ್ತು ಕೃತಕ ಬುದ್ಧಿಮತ್ತೆ (ಎಐ) ಸೇರಿದಂತೆ ವಿವಿಧ ತಂತ್ರಜ್ಞಾನವನ್ನು ಬಳಸಿಕೊಂಡು ಗುಪ್ತಚರ ಮಾಹಿತಿ ಸಂಗ್ರಹಣೆಯನ್ನು ಆಧುನೀಕರಿಸಲಾಗಿದೆ. ಇದರಿಂದಾಗಿ, ನಕ್ಸಲೀಯರ ಚಲನವಲನಗಳ ಜಾಡು ಹಿಡಿಯಲು ನಮ್ಮ ಭದ್ರತಾ ಪಡೆಗಳಿಗೆ ಸಾಧ್ಯವಾಗಿದೆ. ಈ ಹಿಂದೆಲ್ಲಾ, ನಕ್ಸಲರ ಹೊಂಚುದಾಳಿಯಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭದ್ರತಾ ಸಿಬ್ಬಂದಿಗಳ ಸಾವು-ನೋವು ಸಂಭವಿಸುತ್ತಿದ್ದವು; ಈಗ ನಕ್ಸಲರು ಎಲ್ಲಿ ಅಡಗಿದ್ದಾರೆ ಎಂಬುದನ್ನು ಡ್ರೋನ್‌ಗಳ ಸಹಾಯದಿಂದ ನೋಡಬಹುದಾಗಿದೆ. ನಕ್ಸಲರ ಸ್ಥಳದ ಟ್ರ್ಯಾಕಿಂಗ್, ಮೊಬೈಲ್ ಫೋನ್ ಚಟುವಟಿಕೆಗಳು, ಕರೆಯ ದಾಖಲೆಗಳು ಮತ್ತು ಸಾಮಾಜಿಕ ಜಾಲತಾಣದ ಚಟುವಟಿಕೆಗಳ ವಿಶ್ಲೇಷಣೆಯ ಮೂಲಕ ಅವರ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸಲು ಸಾಧ್ಯವಾಗಿದೆ. ಭದ್ರತಾ ಸಿಬ್ಬಂದಿಗೆ ನೈತಿಕ ಬಲ ತುಂಬುವ ನಿಟ್ಟಿನಲ್ಲಿ ಕಾರ್ಯಾಚರಣೆಯನ್ನು ಮತ್ತು ತುರ್ತು ಪರಿಸ್ಥಿತಿಯಲ್ಲಿ ವೈದ್ಯಕೀಯ ಸ್ಥಳಾಂತರಿಸುವಿಕೆಯನ್ನು ಸುಗಮಗೊಳಿಸಲು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ.

ಗೃಹ ಇಲಾಖೆಯ ಅವಿರತ ಪ್ರಯತ್ನದಿಂದಾಗಿ ಕಳೆದ 10 ವರ್ಷಗಳಲ್ಲಿ 7500ಕ್ಕೂ ಅಧಿಕ ನಕ್ಸಲರು ಶರಣಾಗಿದ್ದಾರೆ ಮತ್ತು ಮುಂದಿನ ದಿನಗಳಲ್ಲಿ ಕಾಡಿನೊಳಗಿರುವ ಉಳಿದ ನಕ್ಸಲರ ಶರಣಾಗತಿಯ ನಿಟ್ಟಿನಲ್ಲೂ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ. ಇದರ ಜತೆಗೆ ನಕ್ಸಲರ ಉನ್ನತ ಮಟ್ಟದ ನಾಯಕರನ್ನು ಮುಗಿಸುವ ಕೆಲಸವನ್ನು ಭದ್ರತಾ ಪಡೆಗಳು ಮಾಡುತ್ತಿವೆ. ಕಳೆದ 5 ವರ್ಷಗಳಲ್ಲಿ ಇಂಥ 15 ನಾಯಕರ ಕಥೆಯನ್ನು ಮುಗಿಸಲಾಗಿದೆ. ಜತೆಗೆ ರಾಜ್ಯ ನಕ್ಸಲ್ ಸಂಘಟನೆಯ ಇಬ್ಬರು ಸದಸ್ಯರು, ವಲಯ ನಕ್ಸಲ್ ಸಂಘಟನೆಯ 31 ಸದಸ್ಯರು, ಪ್ರದೇಶ ನಕ್ಸಲ್ ಸಂಘಟನೆಯ 59 ಸದಸ್ಯರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ. ನಕ್ಸಲರಿಗೆ ಶರಣಾಗತಿಯನ್ನು ಮೊದಲ ಆದ್ಯತೆಯಾಗಿ ನೀಡಲಾಗುತ್ತದೆ; ಆದರೂ ಶರಣಾಗದೆ ಜನಸಾಮಾನ್ಯರಿಗೆ ತೊಂದರೆ ಕೊಡುವುದನ್ನು ಮುಂದುವರಿಸಿದಾಗ, ಜನರನ್ನು ರಕ್ಷಿಸಲೆಂದು ಭದ್ರತಾ ಪಡೆಗಳು ನಕ್ಸಲರನ್ನು ಹೊಡೆದುರುಳಿಸಿವೆ.

ಮೂರನೆಯ ಹಂತವು, ನಕ್ಸಲರಿಗೆ ಬರುವ ಹಣ ಮತ್ತು ಶಸ್ತ್ರಾಸ್ತ್ರ ಪೂರೈಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದನ್ನು ಒಳಗೊಂಡಿದೆ. ಸುಲಿಗೆಯ ರೀತಿಯಲ್ಲಿ ರಸ್ತೆ ಕಾಮಗಾರಿಯ ಗುತ್ತಿಗೆದಾರರಿಂದ ಅಕ್ರಮವಾಗಿ ಹಣವನ್ನು ವಸೂಲಿ ಮಾಡುವುದು ನಕ್ಸಲರ ಹಣಕಾಸಿನ ಪ್ರಮುಖ ಮೂಲವಾಗಿತ್ತು. ಮೋದಿಯವರು ಅಧಿಕಾರಕ್ಕೆ ಬಂದ ನಂತರ ನಕ್ಸಲರ ಹಣದ ಮೂಲವನ್ನು ತಡೆಯಲು, ಗುತ್ತಿಗೆದಾರರು ಮಾಡಿದ ಕೆಲಸಗಳಿಗೆ ಅವರ ಖಾತೆಗಳಿಗೆ ನೇರವಾಗಿ ಹಣವನ್ನು ವರ್ಗಾವಣೆ ಮಾಡಲಾಯಿತು. ನಂತರ ನಕ್ಸಲರಿಂದ ಹಣ ಸುಲಿಗೆಗೆ ಒಳಗಾಗುವುದನ್ನು ತಡೆಯಲು ಗುತ್ತಿಗೆದಾರರಿಗೆ ಭದ್ರತಾ ಪಡೆಗಳ ರಕ್ಷಣೆಯನ್ನು ನೀಡಲಾಯಿತು. ನಂತರ, ರಾಷ್ಟ್ರೀಯ ತನಿಖಾ ಸಂಸ್ಥೆಯಲ್ಲಿ ಪ್ರತ್ಯೇಕ ವಿಭಾಗವನ್ನು ರಚಿಸಿ, 40 ಕೋಟಿ ರುಪಾಯಿಗಳಿಗಿಂತ ಹೆಚ್ಚು ಮೌಲ್ಯದ ನಕ್ಸಲರ ಆಸ್ತಿಗಳನ್ನು ಇದುವರೆಗೂ ವಶಪಡಿಸಿಕೊಳ್ಳಲಾಗಿದೆ. ಅವರ ಹಣ ವರ್ಗಾವಣೆ ಚಟುವಟಿಕೆಗಳನ್ನು ಜಾರಿ ನಿರ್ದೇಶನಾಲಯವು ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತಿರುತ್ತದೆ ಮತ್ತು ಅದು ಇದುವರೆಗೂ 12 ಕೋಟಿ ರು. ಮೌಲ್ಯದ ಆಸ್ತಿಗಳನ್ನು ವಶಪಡಿಸಿಕೊಂಡಿದೆ. ವಿದೇಶಿ ನೆರವನ್ನು ನಿಯಂತ್ರಿಸಲು, ಶಂಕಿತ ಎನ್‌ಜಿಒಗಳ ಖಾತೆಗಳನ್ನು ಸ್ಥಗಿತಗೊಳಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಇನ್ನು ಕ್ರಿಯಾಯೋಜನೆಯ 4ನೇ ಹಂತದಲ್ಲಿ, ಒಂದು ಪ್ರದೇಶವನ್ನು ನಕ್ಸಲರಿಂದ ಮುಕ್ತಗೊಳಿಸಿದ ನಂತರ ಅಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಯೋಜನೆಗಳ ಪ್ರಯೋಜನವನ್ನು ಪಡೆಯಲು ಪ್ರಾರಂಭಿಸಿದ ನಂತರ, ಜನರು ಹಳ್ಳಿಗಳಲ್ಲಿ ನಕ್ಸಲರ ಪರವಾಗಿ ನಿಲ್ಲುವುದಿಲ್ಲ. ಕೇಂದ್ರ ಸರಕಾರವು ಕಳೆದ 10 ವರ್ಷಗಳಲ್ಲಿ, ನಕ್ಸಲ್ ಪೀಡಿತ ಪ್ರದೇಶಗಳಲ್ಲಿ 11,503 ಕಿ.ಮೀ.ನಷ್ಟು ರಸ್ತೆಗಳನ್ನು ನಿರ್ಮಿಸಿದೆ ಹಾಗೂ ಮುಂಬರುವ ವರ್ಷಗಳಲ್ಲಿ ಹೆಚ್ಚುವರಿಯಾಗಿ 17,589 ಕಿ.ಮೀ.ನಷ್ಟು ರಸ್ತೆಗಳನ್ನು ನಿರ್ಮಿಸಲು 20,815 ಕೋಟಿ ರುಪಾಯಿಗಳನ್ನು ಮೀಸಲಿಟ್ಟಿದೆ. ಸಂವಹನ ಸೌಲಭ್ಯಕ್ಕಾಗಿ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಮೊಬೈಲ್ ಟವರ್‌ಗಳ ಸ್ಥಾಪನೆ ಪ್ರಾರಂಭವಾಗಿದ್ದು, ಮೊದಲ ಸುತ್ತಿನಲ್ಲಿ 4080 ಕೋಟಿ ರು. ವೆಚ್ಚದಲ್ಲಿ 2,343 ಟವರ್‌ಗಳು ಸ್ಥಾಪನೆಯಾಗಿವೆ. ಸರಕಾರಿ ಯೋಜನೆಗಳ ಮೂಲಕ, 4-ಜಿ ವೈಶಿಷ್ಟ್ಯಕ್ಕೆ ಹೊಂದಾಣಿಕೆಯಾಗುವ 8,527 ಟವರ್‌ಗಳನ್ನು ನಿರ್ಮಿಸಲು ಯೋಜನೆ ಸಿದ್ಧವಾಗಿದೆ. ಹೆಚ್ಚು ಪರಿಣಾಮ ಬೀರುವ 90 ಜಿಲ್ಲೆಗಳಲ್ಲಿ 1,007 ಬ್ಯಾಂಕ್ ಶಾಖೆಗಳು ಮತ್ತು 5,731 ಅಂಚೆ ಕಚೇರಿಗಳನ್ನು ಸ್ಥಾಪಿಸಲಾಗಿದೆ. ಅನಿಲ ಸಂಪರ್ಕ, ಶೌಚಾಲಯಗಳು, ಮನೆಗಳು ಮತ್ತು ಆಹಾರ ಧಾನ್ಯಗಳು ಸೇರಿದಂತೆ 300 ಯೋಜನೆಗಳಲ್ಲಿ 112ನ್ನು ಸ್ಥಳೀಯ ಬೇಡಿಕೆಗಳಿಗೆ ಅನುಗುಣವಾಗಿ ಮಾರ್ಪಡಿಸಿ ಜನರಿಗೆ ತಲುಪಿಸಲಾಗಿದೆ. ನಕ್ಸಲ್ ಪೀಡಿತ 48 ಜಿಲ್ಲೆಗಳಲ್ಲಿ ಯುವಕರಿಗೆ ತರಬೇತಿ ನೀಡುವ ಸಲುವಾಗಿ, 495 ಕೋಟಿ ರು. ವೆಚ್ಚದಲ್ಲಿ 48 ಐಟಿಐ ಕೇಂದ್ರಗಳ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ ಹಾಗೂ 61 ಕೌಶಲಾಭಿವೃದ್ಧಿ ಕೇಂದ್ರಗಳನ್ನು ತೆರೆಯಲಾಗಿದೆ.

ಕೇಂದ್ರ ಸರಕಾರದ ಈ ನಾಲ್ಕು ಆಯಾಮದ ಕ್ರಿಯಾಯೋಜನೆಯ ಪರಿಣಾಮವಾಗಿ, 2014ರಲ್ಲಿ 10 ರಾಜ್ಯಗಳಲ್ಲಿ 126ರಷ್ಟಿದ್ದ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆಯು 2025ರಲ್ಲಿ 12ಕ್ಕೆ ಇಳಿದಿದೆ. 2014ರಿಂದ ಈಚೆಗೆ, ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಭದ್ರತಾ ಪಡೆಗಳು ಮತ್ತು ಜನಸಾಮಾನ್ಯರ ಸಾವಿನ ಸಂಖ್ಯೆಯಲ್ಲಿ ಶೇ.70ರಷ್ಟು ಕಡಿಮೆಯಾಗಿದೆ. 2014ರಲ್ಲಿ, ಛತ್ತೀಸ್‌ಗಢ ರಾಜ್ಯದಲ್ಲಿ 18,500 ಚದರ ಕಿ.ಮೀ.ನಷ್ಟಿದ್ದ ನಕ್ಸಲ್ ಪೀಡಿತ ಪ್ರದೇಶವಿಂದು 8,500 ಚದರ ಕಿ.ಮೀ.ಗೆ ಇಳಿದಿದೆ; ಅತಿಹೆಚ್ಚು ನಕ್ಸಲ್ ಪೀಡಿತವಾಗಿದ್ದ ರಾಜ್ಯದ ಬಸ್ತರ್ ಜಿಲ್ಲೆಯಲ್ಲಿ 'ಬಸ್ತರ್ ಒಲಿಂಪಿಕ್' ಆಯೋಜನೆಗೊಳಿಸಿ ಅಲ್ಲಿನ ಜನರ ವಿಶ್ವಾಸ ಗಳಿಸುವ ಮೂಲಕ, 2026ರ ಮಾರ್ಚ್ ಅಂತ್ಯಕ್ಕೆ ಭಾರತವನ್ನು ನಕ್ಸಲರಿಂದ ಮುಕ್ತಗೊಳಿಸುವ ಸ್ಪಷ್ಟ ಸಂದೇಶವನ್ನು ನೀಡಲಾಗಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇವು ಇಷ್ಟವಾದವು...

ತಿಮ್ಮಣ್ಣ ಭಾಗ್ವತ್ ಅವರು ತಮ್ಮ 'ಕಾನೂನ್ ಸೆನ್ಸ್' ಅಂಕಣದಲ್ಲಿ (ಮಾ.25) ಏಕರೂಪದ ನಾಗರಿಕ ಸಂಹಿತೆಯ ಸಾಧಕ-ಬಾಧಕಗಳನ್ನು ಓದುಗರಿಗೆ ಸವಿವರವಾಗಿ ಉಣಬಡಿಸಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಸಲ್ಲಿಸುವೆ. ಸದ್ಯ ಇರುವ, ಹಿಂದೂಗಳು ಅವಿಭಕ್ತ ಕುಟುಂಬದ (HUF) ಸವಲತ್ತುಗಳಿಂದ ವಂಚಿತರಾಗುವ ವಾಸ್ತವವು ಏಕರೂಪದ ನಾಗರಿಕ ಸಂಹಿತೆಯ (UCC) ಪರವಾಗಿ ಇರುವ ಅನೇಕರಿಗೆ ತಿಳಿದಿಲ್ಲವೇನೋ ಎನಿಸುತ್ತದೆ. ಗೋವಾ ರಾಜ್ಯದಲ್ಲಿ ಸ್ಥಿರಾಸ್ತಿ ಕೊಳ್ಳುವಾಗ, ಪತಿ ಮತ್ತು ಪತ್ನಿ ಇಬ್ಬರ ಹೆಸರಲ್ಲೇ ನೋಂದಾಯಿಸುವುದು ಕಡ್ಡಾಯ (ಇದು ಅಲ್ಲಿ ಬ್ಯಾಂಕ್ ಸೇವೆಯಲ್ಲಿ ಇದ್ದಾಗಿನ ನನ್ನ ಅನುಭವ). ಈ ಮಹಿಳಾ ಪರ ಕಾಯ್ದೆಯ ಗತಿ ಏನಾಗುತ್ತದೆ! ಇನ್ನು ಆಸ್ತಿ ಹಕ್ಕುಗಳ ಬಗ್ಗೆ ಈಗ ಇರುವ ಯಾವುದೇ ಒಂದು ಧರ್ಮದ ನಿಯಮಗಳು, ಇನ್ನಾವುದೇ ಧರ್ಮದ ನಿಯಮಗಳಿಗಿಂತ ಮೇಲೆಂದೋ ಅಥವಾ ಕೀಳೆಂದೋ ನಿರ್ಧರಿಸುವುದು ಕಷ್ಟಸಾಧ್ಯ. ಬಹುಶಃ ಬಹುಪತ್ನಿತ್ವದ ಕಾನೂನನ್ನು ಎಲ್ಲ ಧರ್ಮದವರಿಗೂ ಅನ್ವಯಿಸಿ ಜಾರಿಮಾಡಿದರೆ ಸಾಕು; ಏಕರೂಪದ ನಾಗರಿಕ ಸಂಹಿತೆಯ ಬಗ್ಗೆ ಚರ್ಚಿಸಲು ಇದು ಸರಿಯಾದ ಸಮಯವಲ್ಲ!

ಇನ್ನು ವಿಶೇಷ ಪುಟದಲ್ಲಿನ 'ಉಳುವಾ ಯೋಗಿಯ ಇನ್ನಾದರೂ ನೋಡಿಲ್ಲಿ' ಶೀರ್ಷಿಕೆಯ ಬರಹದಲ್ಲಿ, ಅನ್ನದಾತ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನೆಲ್ಲಾ ಎಳೆ ಎಳೆಯಾಗಿ ಬಿಡಿಸಿ ಓದುಗರ ಮುಂದೆ ಇಡಲಾಗಿದೆ. ಕೃಷಿಕರಿಗೆ ವಿವಿಧ ಸಾಲ ಸೌಲಭ್ಯ ಒದಗಿಸುವ ಬ್ಯಾಂಕ್ ಮ್ಯಾನೇಜರ್ ಹುದ್ದೆಯಲ್ಲಿ 8 ವರ್ಷಗಳ ಕಾಲ ಸೇವೆ ಸಲ್ಲಿಸಿರುವ ನಾನು, ರೈತರು ಆ ಸಂದರ್ಭಗಳಲ್ಲಿ ಚರ್ಚಿಸಿರುವ ಸಂಗತಿಗಳನ್ನು ಕಣ್ಣಾರೆ ಕಂಡಿದ್ದೇನೆ. ಹೀಗಾಗಿ ಲೇಖನದಲ್ಲಿ, 'ನೇಣಿಗೆ ಕೊರಳೊಡ್ಡದಿರಲಿ', 'ಅನ್ನದಾತನ ಅನ್ನದ ಬಟ್ಟಲಿಗೇ ಸಂಚಕಾರ ಒದಗುವಂಥ ದುಸ್ಥಿತಿ ಇನ್ನಾದರೂ ಕೊನೆಯಾಗಲಿ' ಎಂಬ ಸಾಲುಗಳನ್ನು ಓದಿದಾಗ, ಅಂಥ ಕೆಲವು ಸಾವುಗಳನ್ನು ಕಂಡಿದ್ದ ನನಗೆ ಕೊರಳ ಸೆರೆ ಉಬ್ಬಿ ಬಂತು...

- ಲಕ್ಷ್ಮಣ್ ಗೋರ್ಲಕಟ್ಟೆ, ಮೈಸೂರು

ದೇವರ ವರದಾನ

ರೂಪಾ ಗುರುರಾಜ್ ಅವರು 'ಒಂದೊಳ್ಳೆ ಮಾತು' ಅಂಕಣದಲ್ಲಿ (ಮಾ.27) ವಿವರಿಸಿದ ಕಥೆ ತುಂಬಾ ಇಷ್ಟವಾಯಿತು. ಈ ಪ್ರಪಂಚದಲ್ಲಿ ದೇವರು ಎಲ್ಲರಿಗೂ ಹುಟ್ಟು ಕರುಣಿಸಿದ ಹಾಗೆಯೇ ಸಾವನ್ನೂ ದಯಪಾಲಿಸಿದ್ದು ನಿಜಕ್ಕೂ ಒಂದು ವರದಾನವೇ ಸರಿ. ತಮಗೆ ಸದಾ ಯೌವನವಿರಬೇಕು, ತಾವು ಅಮರರಾಗಬೇಕು, ಅಖಂಡ ಸುಖ ಅನುಭವಿಸಬೇಕು ಎಂಬೆಲ್ಲ ಚಪಲವಿರುವ ಕೆಲವರಿಗೆ, ಒಂದು ಪಕ್ಷ ಅವು ಸಾಧ್ಯವಾದಲ್ಲಿ ಅವುಗಳಿಂದ ಉಂಟಾಗುವ ತಾಪತ್ರಯಗಳ ಅರಿವಿಲ್ಲ! 'ಸಾವು' ಎಂಬುದೇ ಇಲ್ಲದಿದ್ದರೆ ಏನಾಗುತ್ತಿತ್ತು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. 'ಜಾತಸ್ಯ ಮರಣಂ ಧ್ರುವಂ' ಎಂಬ ಸುಭಾಷಿತ ಹೇಳುವಂತೆ ಪ್ರತಿ ಹುಟ್ಟಿಗೆ ಸಾವು ನಿಶ್ಚಿತ ಎಂಬುದನ್ನು ಮರೆಯದಿರೋಣ.

ನಿಜಕ್ಕೂ ದೇವರು ನಮಗೆ ಕರುಣಿಸಿದ, ಹೆಚ್ಚು ಅಂದರೆ 100 ವರ್ಷಗಳ ಆಯಸ್ಸು ಯೋಗ್ಯವಾಗಿಯೇ ಇದೆ. ಅದನ್ನು ಸದುಪಯೋಗಪಡಿಸಿಕೊಂಡು ತಾನೂ ಬಾಳಿ, ಇನ್ನೊಬ್ಬರಿಗೂ ಬಾಳಲು ಅವಕಾಶ ಕೊಟ್ಟು ಮರೆಯಾಗುವ ಬದುಕೇ ದೊಡ್ಡದು. 'ಆನಂದ್' ಎಂಬ ಹಳೆಯ ಹಿಂದಿ ಚಲನಚಿತ್ರದಲ್ಲಿ ನಾಯಕ ರಾಜೇಶ್ ಖನ್ನ ಹೇಳುವಂತೆ 'ಜೀವನ ದೊಡ್ಡದಾಗಿರಬೇಕು, ಸುದೀರ್ಘವಾಗಿ ಅಲ್ಲ..'. ಸದ್ವಿಚಾರ/ಉಪದೇಶಗಳನ್ನು ಸಣ್ಣ ಸಣ್ಣ ಕಥೆಗಳ ಮೂಲಕ ಮನಮುಟ್ಟುವಂತೆ ತಿಳಿಸುವ ಈ ಅಂಕಣ ನನಗೆ ಆಪ್ತ. ಅಂಕಣಕಾರರಿಗೂ, ಪ್ರಕಟಿಸುವ ಪತ್ರಿಕೆಗೂ ನನ್ನ ನಮನಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಎಪ್ಪತ್ತು ವರ್ಷದ ಅಮ್ಮನನ್ನು ಹೀರೋಯಿನ್ ಮಾಡಿದ ಮಗ!

ಪದಸಾಗರ

ನವೀನ್ ಸಾಗರ್
vveditoped@gmail.com

ಸರಿಯಾಗಿ 2 ವರ್ಷಗಳ ಹಿಂದಿನ ಮಾತು. ಗೆಳೆಯ ಅಭಿ ಶ್ವಾಸಕೋಶದ ಸಮಸ್ಯೆಗೆ ಒಳಗಾಗಿ ಸಾವು ಬದುಕಿನ ಮಧ್ಯ ಹೋರಾಡುತ್ತಿದ್ದ. ಐಸಿಯುದಲ್ಲಿ ಇದ್ದ ಅವನಿಗೆ ಡಾಕ್ಟರ್ ಕೊಟ್ಟ ಭರವಸೆ ಒಂದು ಪರ್ಸೆಂಟ್ ಮಾತ್ರ. ಕರೋನಾ ಸಮಯದಲ್ಲಿ 'ಕೋವಿಡ್ ವಾರಿಯರ್' ಆಗಿ ದುಡಿದಿದ್ದ ಅಭಿಗೆ ಅದೆಲ್ಲ ಮುಗಿದು ವರ್ಷಗಳೇ ಕಳೆದಾದ ನಂತರ ಸಣ್ಣ ಜ್ವರ, ಉಸಿರಾಟದ ಸಮಸ್ಯೆ ಥರ ಕಂಡದ್ದು ಸೀದಾ ಸಾವಿನಮನೆ ಬಾಗಿಲಿಗೆ ಕರೆದೊಯ್ದಿತ್ತು.

ತನ್ನ ಆರ್ಥಿಕ ಮಿತಿಯಲ್ಲೇ ಅತ್ಯಂತ ಪ್ಯಾಶನೇಟ್ ಆಗಿ ಬದುಕುವ ಹುಡುಗ ಅಭಿ. ಪೂರ್ತಿ ಹೆಸರು ಅಭಿಜಿತ್ ಪುರೋಹಿತ್. ಚಿತ್ರನಟನಾಗೋ ಕನಸು ಹೊತ್ತು ಬಂದ ಅವನನ್ನು ಬದುಕಿನ ಅನಿವಾರ್ಯತೆಗಳು ತೆರೆಹಿಂದಿನ ಕೆಲಸಕ್ಕೆ ತಳ್ಳಿದವು. ಹುಡುಗ ಅಲ್ಲೇ ಶ್ರದ್ಧೆಯಿಂದ ದುಡೀತಾ ಬಂದ. ಸಿಕ್ಕ ಅವಕಾಶ ಒಂದನ್ನೂ ಬಿಡಲಿಲ್ಲ. ತನ್ನದೇ ಹತಾಶೆಗಳನ್ನು, ಕನಸುಗಳನ್ನು ಕಥೆಯಾಗಿ ಕಟ್ಟಿ 'ಹೋಪ್' ಅನ್ನೋ ಒಂದು ಕಿರುಚಿತ್ರ ನಿರ್ದೇಶಿಸಿದ. ಅದರಲ್ಲಿ ದ್ವಿಪಾತ್ರದಲ್ಲಿ ನಟಿಸಿದ. ಪ್ರಶಸ್ತಿಯನ್ನೂ ಗಿಟ್ಟಿಸಿದ. ಬೆಳ್ಳಿತೆರೆಯಲ್ಲಿ, ಕಿರುತೆರೆಯಲ್ಲಿ ನಟನೆಗೆ ಅವಕಾಶ ಸಿಕ್ಕದೇ ಹೋದಾಗ, ಬಿಗ್ ಬಾಸ್, ಕೋಟ್ಯಧಿಪತಿ ಮುಂತಾದ ರಿಯಾಲಿಟಿ ಶೋಗಳ ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡಿದ.

ಹೀಗಿದ್ದಾಗ ಜಗತ್ತಿಗೆ ಕೋವಿಡ್ ಅಟಕಾಯಿಸಿಕೊಳ್ತು, ಕೆಲಸ ಇಲ್ಲದಾಯ್ತು. ಆದರೇನಂತೆ, ಕೋವಿಡ್ ವಾರಿಯರ್ ಆಗಿ ದುಡೀತೀನಿ ಅಂತ 20,000 ಸಂಬಳಕ್ಕೆ ರಾಜ್ಯದ ತುಂಬ ಕೆಲಸ ಮಾಡಿದ. ಕರೋನಾ ಸೋಂಕಿತರ ನಡುವೆ ಅಷ್ಟೆಲ್ಲಾ ಓಡಾಡಿದರೂ ಏನೂ ಆಗಿರಲಿಲ್ಲ. ಆದರೆ ಅದ್ಯಾವ ಕೆಟ್ಟ ಗಳಿಗೆಯೋ, ಅಭಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತು. ಐಸಿಯು ಪಾಲಾಗಿಬಿಟ್ಟ. ಆತನ ಗೆಳೆಯನ ಮೂಲಕ ಫೇಸ್‌ಬುಕ್ಕಲ್ಲಿ ಒಂದು ಪೋಸ್ಟ್ ಬಂತು- 'ಅಭಿಜಿತ್ ಆರೋಗ್ಯ ಗಂಭೀರ ಸ್ಥಿತಿಯಲ್ಲಿದೆ. ಆತನನ್ನು ಬದುಕಿಸಿಕೊಳ್ಳೋಕೆ ಚಿಕಿತ್ಸೆಯ ವೆಚ್ಚ ತಿಂಗಳಿಗೆ 18 ಲಕ್ಷ ಆಗಬಹುದು ಅಂತ ಡಾಕ್ಟರ್ ಹೇಳಿದ್ದಾರೆ. ದಯವಿಟ್ಟು ಕೈಲಾದ ಸಹಾಯ ಮಾಡಿ' ಅಂತ.

ಫೇಸ್‌ಬುಕ್ ಒಂದು ಹಣ ಕೀಳುವ ವಂಚನೆಯ ತಾಣ ಆಗಿರೋ ಈ ಸಂದರ್ಭದಲ್ಲಿ, ಕಷ್ಟಕ್ಕೆ ಸ್ಪಂದನೆ ಸಿಗುವುದು ಅಷ್ಟು ಸುಲಭ ಇಲ್ಲ. ಆದರೆ ಅಂತಃಕರಣ, ಕರುಣೆ, ಸಹಾಯ, ಮಾನವೀಯತೆ ಇಂಥ ಪದಗಳು ಇನ್ನೂ ಜೀವಂತ ಇವೆ. ಅಭಿಜಿತ್ ಸಹಾಯಕ್ಕೆ ದೊಡ್ಡ ಸಂಖ್ಯೆಯಲ್ಲಿ ಒಂದು ಸಮೂಹ ನಿಂತುಬಿಟ್ಟಿತು. ಭಾರಿ ಸ್ಪಂದನೆ ಸಿಕ್ಕು ಅಭಿಜಿತ್‌ಗೆ ಎಲ್ಲೆಡೆಯಿಂದ ಧನಸಹಾಯ ಲಭಿಸಿತು. ಸುಮಾರು 2-3 ತಿಂಗಳ ಆಸ್ಪತ್ರೆ ವಾಸದಲ್ಲಿ ಅಭಿ ಗುರುತು ಸಿಗದಷ್ಟು ನಿತ್ರಾಣನಾಗಿದ್ದ. ನಡೆಯೋಕೂ ಶಕ್ತಿ ಇಲ್ಲದಂತಾಗಿದ್ದ. ಐಸಿಯುದಲ್ಲಿ ಮಲಗಿದವನು, 'ಅಮ್ಮನ ತೊಡೆ ಮೇಲೆ ಬಿಟ್ಟುಬಿಡಿ, ನಾನು ಆಕೆಯ ಮಡಿಲಲ್ಲಿ ಸಾಯ್ತೀನಿ' ಅಂತ ಇಲ್ಲದ ಧ್ವನಿಯಲ್ಲೂ ಗೋಗರೆಯುತ್ತಿದ್ದ. 'ಹೋಪ್' ಎಂಬ ಸಿನಿಮಾ ಮಾಡಿದಾತನೇ ಬದುಕಿ ಉಳಿದೇನೆಂಬ 'ಹೋಪ್' ಕಳೆದುಕೊಂಡುಬಿಟ್ಟಿದ್ದ.

ಆದರೆ ಗೆಳೆಯರ ಬಳಗದ ಧನಸಹಾಯ, ಹಾರೈಕೆ, ಆತನ ತಾಯಿ ಮತ್ತು ಕುಟುಂಬದ ಪ್ರಾರ್ಥನೆ, ವೈದ್ಯರ ಪ್ರಯತ್ನ, ದೇವರ ಆಶೀರ್ವಾದ ಎಲ್ಲದರ ಫಲ, ಅಭಿ ಪವಾಡಸದೃಶ ಎಂಬಂತೆ ಬದುಕಿಬಂದುಬಿಟ್ಟ. ಆತನ 'ವಿಲ್ ಪವರ್' ಎಷ್ಟು ಗಟ್ಟಿ ಇತ್ತು.. ಜತೆಗೆ ಜೀವನದ ಅನಿವಾರ್ಯತೆಗಳು ಹೇಗಿದ್ದವು ಅಂದ್ರೆ ಆತ ಆಸ್ಪತ್ರೆಯಿಂದ ಹೊರಬಂದು ಕೆಲವೇ ತಿಂಗಳಲ್ಲಿ ಮತ್ತೆ ದುಡಿಮೆಗೆ ಹೊರಟು ನಿಂತಿದ್ದ. ಆದರೆ ಕೆಲಸ ಅಷ್ಟು ತಕ್ಷಣಕ್ಕೆ ಸುಲಭಕ್ಕೆ ಸಿಕ್ಕಿಬಿಡುತ್ತಾ? ಅಭಿ ಈ ಗ್ಯಾಪಲ್ಲಿ ಮತ್ತೆ ಸೋಷಿಯಲ್ ಮೀಡಿಯಾದಲ್ಲಿ ಸಕ್ರಿಯನಾದ. ಸೆಲ್ಫೀಗಳು ಕಾಣತೊಡಗಿದವು. ಆತನ ಮುಖದಲ್ಲಿ ಆರೋಗ್ಯ, ಲವಲವಿಕೆ ಕಾಣತೊಡಗಿತು. ಆತ ಹೊರಗಡೆ ಓಡಾಡತೊಡಗಿದ. 'ಐ ಯಾಮ್ ಬ್ಯಾಕ್' ಅನ್ನೋದನ್ನು ಪ್ರತಿ ಫೋಟೋ ಮೂಲಕ ಘೋಷಿಸಿಕೊಳ್ಳುತ್ತಿದ್ದ.

ಆತನನ್ನು ಬದುಕಿಸಿಕೊಂಡ ಸಮಾಜಕ್ಕೆ ಇದು ಖುಷಿ ಕೊಡಬೇಕಾಗಿರೋ ವಿಷಯವಾಗಬೇಕು. ಅಬ್ಬಾ, ನಾವು ಮಾಡಿದ ಸಹಾಯ ಒಂದು ಜೀವವನ್ನು ಉಳಿಸಿಬಿಡ್ತು. ಅವನೀಗ ಸುಖವಾಗಿದ್ದಾನೆ ಅನ್ನೋದು ನಮಗೆ ಧನ್ಯತೆಯ ಸಾರ್ಥಕತೆಯ ಭಾವ ಹುಟ್ಟಿಸಬೇಕು. ಹೌದಲ್ವಾ? ಆದರೆ ಕೆಲವು ಮನಸ್ಸುಗಳು ಬೇರೆಯೇ ರೀತಿ ಯೋಚಿಸ್ತವೆ. ಇವನೀಗ ಇಷ್ಟು ಆರಾಮಾಗಿದಾನೆ ಅಂದ್ರೆ, ಇವ್ನಿಗೆ ಎಷ್ಟು ಲಕ್ಷ ಹಣ ಹರಿದುಬಂದಿರಬಹುದು? ಇವನ ಚಿಕಿತ್ಸೆಗೆ ನಿಜಕ್ಕೂ ಅಷ್ಟೊಂದು ಖರ್ಚಾಗಿರೋಕೆ ಸಾಧ್ಯಾನಾ? ಇವ್ನು ಚಿಕಿತ್ಸೆ ಹೆಸರಲ್ಲಿ ಹಣ ಸಂಗ್ರಹ ಮಾಡಿ ಮಜಾ ಮಾಡ್ತಿದಾನೆ... ಇವ್ನಿಗೆ ಕೃತಜ್ಞತೆ ಇಲ್ಲ. ಪರ್ಸನಲೀ ಒಂದು ಥ್ಯಾಂಕ್ಸ್ ಹೇಳಿಲ್ಲ.. ಚಿಕಿತ್ಸೆಗೆ ಹಣ ಇಲ್ಲದವನು ಈಗ ಇಷ್ಟು ಆರಾಮಾಗಿ ಸುತ್ತಾಡ್ಕೊಂಡು ಸೆಲ್ಫೀ ಹಾಕ್ಕೊಂಡು ಎಂಜಾಯ್ ಮಾಡ್ತಿದಾನೆ ಅಂದ್ರೆ .. ಎಲ್ಲ ಮೋಸ...!

ಈ ಥರದ್ದೊಂದು ಜಡ್ಜ್‌ಮೆಂಟ್‌ಗೆ ಬಂದುಬಿಡುತ್ತೆ ಸಮಾಜದ ಒಂದು ವರ್ಗ.

ಎಲ್ಲೋ ಓದಿದ್ದೋ ಅಥವಾ ಸಿನಿಮಾದ ದೃಶ್ಯವೋ ನೆನಪಾಗ್ತಿಲ್ಲ.. ''ಅಲ್ಲ ಗುರೂ, ಕ್ಯಾನ್ಸರ್ ಅಂತ ಸುಳ್ಳು ಹೇಳಿ ಹಣ ಇಸ್ಕೊಂಡನಲ್ಲ ಆತ, ಅವನಿಗೆ ಕ್ಯಾನ್ಸರ್ ಇರೋದೇ ಸುಳ್ಳಂತೆ. ಮೋಸ ಹೋದ್ನಲ್ಲ ಅಂತ ಬೇಜಾರಾಗ್ತಾ ಇಲ್ವಾ ನಿಂಗೆ?'' ಅಂತ ಒಬ್ಬ ತನ್ನ ಗೆಳೆಯನನ್ನು ಕೇಳ್ತಾನೆ. ಅದ್ಕೆ ಗೆಳೆಯ ಹೇಳ್ತಾನೆ, ''ಬೇಜಾರು ಯಾಕೆ? ಅವ್ನಿಗೆ ಕ್ಯಾನ್ಸರ್ ಇಲ್ಲವಲ್ಲ ಅಂತ ನಂಗೆ ಸಂತೋಷ ಆಗ್ತಿದೆ''. ಈ ಉದಾಹರಣೆ ಅತಿ ಒಳ್ಳೆಯತನ ಅನಿಸಬಹುದು. ಆದರೆ ನಾವು ಯಾಕೆ ನಮ್ಮಿಂದ ಸಹಾಯ ಪಡೆದ ವ್ಯಕ್ತಿ ಯಾವತ್ತಿಗೂ ನಮ್ಮ ಋಣದಲ್ಲೇ, ನಮ್ಮೆದುರು ತಗ್ಗಿಬಗ್ಗಿಯೇ ನಡೆಯಬೇಕೆಂದು ಬಯಸುತ್ತೇವೆ? ನಾವ್ಯಾಕೆ ಕಷ್ಟದಲ್ಲಿದ್ದ ವ್ಯಕ್ತಿ ನಮ್ಮ ಕಣ್ಣೆದುರು ಖುಷಿಯಾಗಿದ್ದರೆ ಚಡಪಡಿಸುತ್ತೇವೆ. ಉರಿದುಕೊಳ್ಳುತ್ತೇವೆ? ಆತ ಕಷ್ಟದಲ್ಲಿದ್ದಾಗ ನಾವು ಬಯಸಿದ್ದು ಆತನ ಸುಖವನ್ನೇ ಅಲ್ವಾ?

ಅದೊಮ್ಮೆ ನನ್ನ ಅಜ್ಜಿಗೆ ರಕ್ತದಾನ ಮಾಡೋ ಪುಣ್ಯ ನನಗೆ ಒದಗಿಬಂದಿತ್ತು. ರಕ್ತದಾನ ಮಾಡಿಬಂದಿದ್ದೆ. ಆದರೆ ರಕ್ತದಾನ ಮಾಡಿ ಕೆಲವೇ ದಿನಕ್ಕೆ ಅಜ್ಜಿ ತೀರಿಕೊಂಡರು. ನನ್ನ ರಕ್ತದಾನದಿಂದಲೇ ಅಜ್ಜಿ ಪ್ರಾಣ ಹೋಯಿತಾ ಎಂಬ ಗಿಲ್ಟ್ ಕಾಡಿತ್ತು. ಮುಂದೆ ಯಾರಾದರೂ ರಕ್ತದ ಅಗತ್ಯ ಇದೆ ಅಂದಾಗೆಲ್ಲ ಅಜ್ಜಿಯ ನೆನಪಾಗಿ ರಕ್ತ ಕೊಡೋಕೆ ಹಿಂಜರಿಯುತ್ತಿದ್ದೆ. ಅಜ್ಜಿಗೆ ರಕ್ತ ನೀಡೋ ಮೊದಲು ಹಲವು ಬಾರಿ ರಕ್ತದಾನ ಮಾಡಿದ್ದೆ. ಆಗೆಲ್ಲ ರಕ್ತಪಡೆದವರು ಕ್ಷೇಮದಿಂದಿದ್ದಾರೆ ಎಂಬ ಸುದ್ದಿ ಕೇಳಿ ಸಮಾಧಾನ ಪಡುತ್ತಿದ್ದವನಿಗೆ ಅಜ್ಜಿಯ ಸಾವು ರಕ್ತದಾನ ಮಾಡೋದಕ್ಕೆ ಹಿಂಜರಿಯೋ ಹಾಗೆ ಮಾಡಿತ್ತು. ನಮ್ಮ ಸಹಾಯ ಸಾರ್ಥಕ ಅನಿಸೋದು, ಸಹಾಯ ಪಡೆದವರು ಚೆನ್ನಾಗಾದಾಗಲೇ ಹೊರತು ಅವರ ಥ್ಯಾಂಕ್ಸ್‌ನಿಂದಲ್ಲ. ಅವರ ಮರುಸಹಾಯದಿಂದಲ್ಲ. ಅವರು ನಮ್ಮ ಅಡಿಯಾಳಿನ ಥರ ಬದುಕೋದ್ರಿಂದ ಅಲ್ಲ.

ಸಹಾಯ ಎಂಬುದು ಸಾಂಕ್ರಾಮಿಕವಾಗಬೇಕು. ನಾವು ನಮಗೆ ಸಹಾಯ ಮಾಡಿದೋವ್ರಿಗೇ ಸಹಾಯ ಮಾಡೋದು ಕೇವಲ ಋಣಸಂದಾಯ ಅಷ್ಟೆ. ಆದರೆ ನಾವೊಬ್ಬರಿಂದ ಸಹಾಯ ಪಡೆದು, ಬೆಳೆದು, ಕಷ್ಟದಲ್ಲಿರೋ ಇನ್ಯಾವುದೋ ನಾಲ್ಕು ಮಂದಿಗೆ ಸಹಾಯ ಮಾಡುವಂತಾದರೆ ಅದು ನಿಜವಾದ ಸಾರ್ಥಕತೆ. ಇದನ್ನು 'ಯಾರದೋ ದುಡ್ಡಲ್ಲಿ ಯಲ್ಲಮ್ಮನ ಜಾತ್ರೆ ಮಾಡಿದ' ಅಂತಾನೋ, 'ಅತ್ತೆ ಹತ್ರ ಕಿತ್ಕೊಂಡು ಅಳಿಯಂಗೆ ದಾನ ಮಾಡಿದ' ಅಂತಾನೋ ಅನ್ನೋದಲ್ಲ.



ನಮಗೆ ಸಹಾಯ ಮಾಡಿದ ವ್ಯಕ್ತಿಗೆ ಯಾವತ್ತಿಗೂ ನಮ್ಮ ಬಳಿ ಸಹಾಯ ಕೇಳೋ ಪರಿಸ್ಥಿತಿ ಬಾರದಿರಲಿ ಎಂಬುದು ನಮ್ಮ ಪ್ರಾರ್ಥನೆ ಆಗಿರಬೇಕು. ಆ ಕೈ ಯಾವತ್ತಿಗೂ ಕೊಡುಗೈಯೇ ಆಗಿರಲಿ ಎಂಬುದು ನಮ್ಮ ಹಾರೈಕೆಯಾಗಿರಬೇಕು.

ಪ್ರಾಕ್ಟಿಕಲ್ಲಾಗಿ ಒಂದು ಮಾತು ನಾವು ಯೋಚಿಸಬೇಕು. ಒಬ್ಬ ವ್ಯಕ್ತಿ ತನ್ನ ಜೀವ ಉಳಿಸ್ಕೊಳೋದಕ್ಕೂ ಹಣವಿಲ್ಲದವನಾಗಿ ಆಸ್ಪತ್ರೆ ಸೇರಿದಾಗ ನಾವು ಕೇವಲ ಆತನ ಆಸ್ಪತ್ರೆ ಖರ್ಚಿಗಾಗೋಷ್ಟು ಹಣ ಮಾತ್ರ ಕೊಟ್ಟರೆ ಏನುಪಯೋಗ? ನಾವು ಕೊಟ್ಟ ಹಣವೆಲ್ಲ ಆಸ್ಪತ್ರೆಯಿಂದ ಹೊರಬರೋದ್ರೊಳಗೆ ಖಾಲಿ ಆದರೆ, ಆತ ಹೊರಬಂದು ಬದುಕೋದಾದ್ರೂ ಹೇಗೆ? ಅಲ್ಲಿಂದ ಮುಂದೆ ಆತನ ಬದುಕಿನ ಬಂಡಿ ಮತ್ತೆ ಹಳಿಗೆ ಮರಳೋಕೆ ಒಂದಷ್ಟು ಹಣ ಬೇಡವೇ? ಆಸ್ಪತ್ರೆ ಸೇರಿದಾಗ ನಾವು ಕೊಟ್ಟ ಹಣದಲ್ಲಿ ಒಂದಷ್ಟು ಉಳೀತು ಅಂದ್ರೆ ಅದು ಅವನ ಭವಿಷ್ಯ ರಿಪೇರಿ ಮಾಡ್ಕೊಳೋದಕ್ಕಾಯ್ತು ಅನ್ನೋ ನಿಟ್ಟಿನಲ್ಲಿ ಯೋಚಿಸಬೇಕೇ ಹೊರತು, ಆಸ್ಪತ್ರೆ ಖರ್ಚಿನ ನಂತರ ಮಿಕ್ಕಿದ ಹಣದ ಲೆಕ್ಕ ಕೇಳೋ ಲೆವೆಲ್ಲಿಗೆ ಇಳೀಬಾರ್ದು. ಹಾಗೆ ಮಾಡಿದಲ್ಲಿ ನಾವು ಆತನನ್ನು ಸಾವಿನಿಂದ ಹೊರತಂದು ಬದುಕನ್ನು ನರಕ ಮಾಡ್ತಿದ್ದೇವೆ ಅಂತರ್ಥ.

ಗೆಳೆಯ ಅಭಿಜಿತ್ ಆಸ್ಪತ್ರೆಯಿಂದ ಬದುಕಿ ಬಂದವನು ತನ್ನ ಫೋನ್ ಪೇ, ಗೂಗಲ್ ಪೇ ಇತ್ಯಾದಿಗಳಲ್ಲಿ ಹಣ ಕಳಿಸಿದ ಪ್ರತಿಯೊಬ್ಬರಿಗೂ ಸಂದೇಶ ಕಳಿಸಿ ಥ್ಯಾಂಕ್ಸ್ ಹೇಳಿದ. ಫೇಸ್‌ಬುಕ್ ಪೋಸ್ಟ್ ಮೂಲಕ ಧನ್ಯವಾದ ಅರ್ಪಿಸಿದ. ಪರ್ಸನಲ್ಲಾಗಿ ಕೆಲವರನ್ನು ಭೇಟಿ ಮಾಡಿ ಕೃತಜ್ಞತೆ ಅರ್ಪಿಸಿದ. ಆದರೆ ಅದೆಲ್ಲಕ್ಕಿಂತ ಅದ್ಭುತವಾಗಿ ಆತ ಈ ಸಮಾಜಕ್ಕೆ ಒಂದು ಕಾಣಿಕೆ ನೀಡಿಬಿಟ್ಟ. ಹೌದು. 'ಲಕ್ಷ್ಮೀ' ಎಂಬ ಕಿರುಚಿತ್ರದ ಮೂಲಕ!

ಹತ್ತು ವರ್ಷದ ಹಿಂದೆ ರಾಷ್ಟ್ರಕವಿ ಕುವೆಂಪು ಅವರ ಮನೆಗೆ ಹೋದಾಗ ಅಭಿಗೆ ಕನಸೊಂದು ಶುರುವಾಗಿತ್ತು. ಐಸಿಯುದಲ್ಲಿ ಮಲಗಿದಾಗ, 'ಆ ಕನಸು ನನಸು ಮಾಡಿಕೊಳ್ಳದೇ ಹೋಗಿಬಿಡ್ತೀನೇನೋ..' ಅಂತ ಸಂಕಟ ಪಡ್ತಾ ಇದ್ದ. ತನ್ನ ತಾಯಿಯನ್ನೇ ನಾಯಕಿಯನ್ನಾಗಿಸಿ ಒಂದು ಕಿರುಚಿತ್ರ ನಿರ್ದೇಶಿಸುವ ಆಕಾಂಕ್ಷೆ ಕಮರಿ ಹೋಗಿಬಿಡ್ತು ಅಂತ ಅತ್ತಿದ್ದ. ಆದರೆ ಬದುಕು ಅವನಿಗೆ ಪುನರ್ಜನ್ಮ ನೀಡಿತು. ಇನ್ನೊಂದು ಅವಕಾಶ ಕೊಟ್ಟಾಗ ಅಭಿ ತಡ ಮಾಡಲಿಲ್ಲ. ತನಗಾಗಿ ಸರ್ವಸ್ವವನ್ನೂ ಧಾರೆ ಎರೆದಿದ್ದ ಅಮ್ಮನನ್ನು ಆಕೆಯ 70ನೇ ವಯಸ್ಸಿನಲ್ಲಿ ನಾಯಕಿಯಾಗಿಸಿ ಕಿರುಚಿತ್ರ ನಿರ್ಮಿಸಿಬಿಟ್ಟ. ಯುಟ್ಯೂಬಿನಲ್ಲಿ ಲಕ್ಷಗಟ್ಟಲೆ ಮಂದಿ ಅದನ್ನು ನೋಡಿ ಭಾವುಕರಾದರು. ನಟನೆ ಏನೆಂದು ಗೊತ್ತಿಲ್ಲದ ತಾಯಿ ನಳಿನಿ ಪುರೋಹಿತ್, ಮಗನ ಆಸೆಗೆ ಒತ್ತಾಯಕ್ಕೆ ಮಣಿದು ಕೆಮೆರಾ ಮುಂದೆ ಬಂದರು. ಕಿರುಚಿತ್ರ ಜಗತ್ತಿನಾದ್ಯಂತ ಸುತ್ತಿಬಂತು. 20ಕ್ಕೂ ಹೆಚ್ಚು ಫೆಸ್ಟಿವಲ್‌ಗಳಲ್ಲಿ ಪ್ರದರ್ಶನಗೊಂಡಿತು. ಅಮ್ಮನಿಗೆ 'ಅತ್ಯುತ್ತಮ ನಟಿ' ಅವಾರ್ಡ್ ಬಂದವು. ದೊಡ್ಡದೊಡ್ಡ ವೇದಿಕೆಗಳಲ್ಲಿ ಸನ್ಮಾನಗಳಾದವು. ತಾಯಿಯನ್ನು ಜಗತ್ತಿಗೆ ಹೀಗೆ ಪರಿಚಯಿಸಬೇಕು ಎಂಬ ಅಭಿಯ ಕನಸು ನನಸಾಯ್ತು. ಆ ಅಮ್ಮನಿಗೆ ಇದ್ದದ್ದು ಎರಡು ಆಸೆ. ಹಿಮದಲ್ಲಿ ಆಡಬೇಕು ಅಂತ. ಅದನ್ನೂ ಅಭಿ ಪೂರೈಸಿಬಿಟ್ಟ. ಅಮ್ಮನ ಇನ್ನೊಂದು ಆಸೆ ಏನು ಗೊತ್ತಾ? ಸ್ಟೇಡಿಯಮ್ಮಲ್ಲಿ ಒಂದಾದ್ರೂ ಲೈವ್ ಮ್ಯಾಚ್ ನೋಡಬೇಕು ಅಂತ. ಆ ಆಸೆ ಪೂರೈಸೋ ಪ್ರಯತ್ನದಲ್ಲಿದ್ದಾನೆ ಅಭಿ.

ಇದನ್ನು ಯಾಕೆ ಹೇಳ್ದೆ ಅಂದ್ರೆ .. ಅಭಿ ಇದೆಲ್ಲ ಮಾಡ್ತಿದಾನೆ ಅಂದ್ರೆ 'ಅಯ್ಯೋ ನಮ್ಮ ದುಡ್ಡಲ್ಲಿ ಮಜಾ ಮಾಡ್ತಾ ಇದಾನೆ.. ಸಿನಿಮಾ ತೆಗೆದು, ಅವಾರ್ಡ್ ತಗೊಂಡು ಊರೂರು ಸುತ್ತುತಾ ಇದಾನೆ' ಅಂತ ನಾವು ಉರ್ಕೋಳೋದಲ್ಲ.. ಖುಷಿ ಪಡಬೇಕು. ಸಿಕ್ಕ ಮರುಜನ್ಮವನ್ನು ಸಾರ್ಥಕಗೊಳಿಸಿಕೊಳ್ಳೋದು ಹೀಗೆ ಅಲ್ವಾ? ಆತನಿಂದ ನಮಗೆ ಒಂದು ಅದ್ಭುತ ಕಿರುಚಿತ್ರ ಸಿಕ್ಕಿದೆ, ಫ್ರೀಯಾಗಿ ನೋಡಲಿಕ್ಕೆ. ಆತ ತನಗೆ ಸಿಕ್ಕಿದ ಪುನರ್ಜನ್ಮದಲ್ಲಿ ಕೆಟ್ಟದಾಗಿ ಬದುಕುತ್ತಿಲ್ಲ. ಅರ್ಥಪೂರ್ಣವಾಗಿ ಬದುಕುತ್ತಿದ್ದಾನೆ. ಮಾದರಿ ಜೀವನ ಮಾಡ್ತಿದಾನೆ. ಸಮಾಜದಿಂದ ಗಳಿಸಿಕೊಂಡ ಬದುಕನ್ನು ತನ್ನದೇ ರೀತೀಲಿ ಸಮಾಜಕ್ಕೆ ಕೊಡಲು ತಯಾರಾಗಿದ್ದಾನೆ. ಸಂತಸ ಪಡೋಣ ಅಲ್ವಾ?

ನೀವೊಮ್ಮೆ ಯುಟ್ಯೂಬಲ್ಲಿ 'ಲಕ್ಷ್ಮೀ' ಕಿರುಚಿತ್ರವನ್ನು ನೋಡಿಬನ್ನಿ. ನಳಿನಿಯವರ ಮುಗ್ಧಸಹಜ ಅಭಿನಯ ಕಣ್ಣನ್ನು ತೇವಗೊಳಿಸುತ್ತದೆ. ಅಭಿಜಿತ್‌ನನ್ನು ಬದುಕಿಸಿಕೊಂಡದ್ದು ಸಾರ್ಥಕ ಅನಿಸುತ್ತದೆ.

ಭಟ್ಟರ್ ಸ್ಕಾಚ್

- **ಸಿದ್ದೇಶ ಕೊಟ್ರಬಾಗಿ, ಗುಬ್ಬಿ**
ಭಟ್ರೇ, ನಿದ್ದೆ ಬಂದಾಗ ಯಾರ ಸಾಹಿತ್ಯವನ್ನು ಓದಬೇಕು?
– **ಬರಗೂರರನ್ನು ಓದು, ಸಮಾಧಾನವಾಗದಿದ್ದರೆ ದೇವನೂರರನ್ನು ಓದಬಹುದು!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಯತ್ನಾಳ್ ತಮ್ಮ ಉಚ್ಚಾಟನೆಯಾಗುತ್ತಿದ್ದಂತೆ 'ಸತ್ಯವಂತರಿಗಿದು ಕಾಲವಲ್ಲ...' ಎಂಬ ದಾಸರ ಪದ ಉಲ್ಲೇಖಿಸಿದರು. ಅವರ ವಿರೋಧಿಗಳು ಏನಂದ್ರು?
– **ಅವರೂ ದಾಸರ ಮತ್ತೊಂದು ಹಾಡನ್ನು ಉಲ್ಲೇಖಿಸಿದರು, 'ಆಚಾರವಿಲ್ಲದ ನಾಲಿಗೆ ನಿನ್ನ..'!**

- **ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು**
ಭಟ್ರೇ, ನಾನು ರಾಹುಗ್ರಹದಲ್ಲಿದೀನಿ. ಸ್ಪೇಸ್ ಎಕ್ಸ್ ನೌಕೆ ಬರೋಕೆ 9 ತಿಂಗಳಾಗುತ್ತೆ. ಇಲ್ಲಿಂದಲೇ ವಿಡಿಯೋ ಎಸೀತೀನಿ, ಹಿಡ್ಕೋತೀರಾ?
– **ಈ ಪೆನ್‌ಡ್ರೈವ್, ಹನಿಟ್ರ್ಯಾಪ್ ಕಾಲದಲ್ಲಿ ಅದೇನು ಮಹಾ?!**

- **ವೀರೇಶ ಮಂಗಸೂಳಿ, ಖಾನಾಪುರ**
ಭಟ್ರೇ, ಹನಿಟ್ರ್ಯಾಪ್‌ನ ಯಾವ ಹಂತದಲ್ಲಿ ಸಚಿವರು ಎಚ್ಚೆತ್ತುಕೊಂಡರು ಅಂತ ಹೇಳಿಕೊಂಡಿಲ್ಲವಲ್ಲ?
– **ಎಲ್ಲ ಮುಗಿದ ನಂತರವಂತೂ ಇರಲಿಕ್ಕಿಲ್ಲ!**

- **ವಿದ್ಯಾ ಶ್ರೀಧರ, ತುರುವೇಕೆರೆ**
ಭಟ್ರೇ, ಆಕೆ ಮತ್ತು ಆತ ಇಪ್ಪತ್ತು ವರ್ಷ ಖುಷಿಯಿಂದ ಇದ್ದರು, ನಂತರ ಏನಾಯ್ತು?
– **ನಂತರ ಅವರಿಬ್ಬರಿಗೂ ಮದುವೆ ಯಾಯ್ತು, ಸಮಸ್ಯೆ ಶುರುವಾಯ್ತು!**

- **ವಿಜೇತ್ ಪಂಡಿತ್, (ಇಮೇಲ್ ಮೂಲಕ)**
ಭಟ್ರೇ, ಗಂಡ ಹೆಂಡತಿಯ ಮಾತನ್ನು ಕೇಳಿದರೆ ಏನಾಗುತ್ತದೆ?
– **ಸಂಸಾರದಲ್ಲಿ ನೆಮ್ಮದಿ, ಸಾಮರಸ್ಯ!**

- **ಸುಮಲತಾ ಕೆ., ಗುಡಿಬಂಡೆ**
ಭಟ್ರೇ, ಮದುವೆ ಅಂದ್ರೆ ಪಾರ್ಕಿನಲ್ಲಿ ನಡೆದಂತೆ ಅಂತಾರಲ್ಲ?
– **ನಿಜ, ಜುರಾಸಿಕ್ ಪಾರ್ಕಿನಲ್ಲಿ ಅಂತ ಸೇರಿಸಿಕೊಳ್ಳಿ!**

- **ವಾಸು, ಹೆಬ್ಬಗೋಡಿ**
ಭಟ್ರೇ, ನನ್ನ ಹೆಂಡತಿಯನ್ನು ಕೇಳಿ ಹೇಳ್ತೀನಿ ಅಂತ ಯಾವ ಗಂಡಸೂ ಹೇಳುವುದಿಲವಲ್ಲ?
– **ಗೊತ್ತಿರಲಿ, ಅಸಲಿಗೆ ಹೆಂಡತಿಯನ್ನು ಕೇಳದೇ ಏನನ್ನೂ ಮಾಡುವುದಿಲ್ಲ!**

ಫಲಗಳ ರಾಜ ಮಾವು, ಆದರೆ ಅವನು ತರದಿರಲಿ ನೋವು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಒಮ್ಮೆ, ನಾರದ ಋಷಿಗಳು ಶಿವ ಮತ್ತು ಪಾರ್ವತಿಗೆ ವಿಶೇಷವಾದ ಮಾವಿನ ಹಣ್ಣನ್ನು ಅರ್ಪಿಸಿ, ಅದನ್ನು ತಿಂದವರಿಗೆ ಅಸಾಧಾರಣ ಜ್ಞಾನ ಮತ್ತು ಬುದ್ಧಿವಂತಿಕೆ ಸಿಗುತ್ತದೆ ಎಂದು ಭರವಸೆ ನೀಡಿದರು. ಶಿವ ಮತ್ತು ಪಾರ್ವತಿಯರಿಗೆ ತಮ್ಮ ಮಕ್ಕಳಾದ ಗಣೇಶ ಅಥವಾ ಸುಬ್ರಹ್ಮಣ್ಯರಲ್ಲಿ ಯಾರು ಮಾವಿನ ಹಣ್ಣನ್ನು ಪಡೆಯಬೇಕೆಂದು ನಿರ್ಧರಿಸಲು ಸಾಧ್ಯವಾಗದೆ, ಒಂದು ಸ್ಪರ್ಧೆಯನ್ನು ಪ್ರಸ್ತಾಪಿಸಿದರು– ''ಇಡೀ ಜಗತ್ತನ್ನು ಮೂರು ಬಾರಿ ಸುತ್ತುವರಿದು ಯಾರು ಮೊದಲು ಹಿಂದಿರುಗುವರೋ ಅವರು ಮಾವಿನಹಣ್ಣನ್ನು ಗೆಲ್ಲುತ್ತಾರೆ'' ಎಂದು. ತಕ್ಷಣವೇ ಸುಬ್ರಹ್ಮಣ್ಯನು ತನ್ನ ನವಿಲಿನ ಮೇಲೆ ಏರಿ, ಶೀಘ್ರದಲ್ಲಿಯೇ ಕೆಲಸವನ್ನು ಪೂರ್ಣಗೊಳಿಸಲು ಹೊರಟನು. ತಾನೇ ಮೊದಲು ಹಿಂದಿರುಗುವೆನೆಂಬ ಖಾತ್ರಿ ಅವನಿಗೆ. ಇತ್ತ ಗಣೇಶನು ಒಂದು ಕ್ಷಣ ದೀರ್ಘವಾಗಿ ಯೋಚಿಸಿದನು. ಗಣೇಶನು, ಲೋಕವನ್ನು ಸುತ್ತುವ ಸ್ಪರ್ಧೆಯ ಬದಲು, ತನ್ನ ಹೆತ್ತವರಾದ ಶಿವ ಮತ್ತು ಪಾರ್ವತಿಯ ಸುತ್ತಲೂ ಮೂರು ಬಾರಿ ಪ್ರದಕ್ಷಿಣೆ ಹಾಕಿದನು. ಅವರೇ ತನ್ನ ಇಡೀ ಪ್ರಪಂಚ ಎಂದು ಹೇಳಿದನು. ಇದನ್ನು ಕೇಳಿದ ಶಿವ-ಪಾರ್ವತಿಯರು ಅತ್ಯಂತ ಸಂತುಷ್ಟರಾದರು. ಸುಬ್ರಹ್ಮಣ್ಯನು ಹಿಂದಿರುಗಿದಾಗ, ಗಣೇಶನು ಆಗಲೇ ಸ್ಪರ್ಧೆಯನ್ನು ಗೆದ್ದು ಮಾವಿನ ಹಣ್ಣನ್ನು ಹಿಡಿದಿರುವುದನ್ನು ನೋಡಿ ಆಶ್ಚರ್ಯಚಕಿತನಾದನು. ಅದು ಹೇಗೆ ಸಾಧ್ಯವಾಯಿತು ಎಂದು ಸುಬ್ರಹ್ಮಣ್ಯನು ಕೇಳಿದಾಗ ಪಾರ್ವತಿಯು, ''ಹೆತ್ತವರೇ ತನ್ನ ಇಡೀ ಜಗತ್ತನ್ನು ಪ್ರತಿನಿಧಿಸುತ್ತಾರೆಂದು ಅರ್ಥಮಾಡಿಕೊಳ್ಳುವ ಬುದ್ಧಿವಂತಿಕೆ ಗಣೇಶನಿಗಿದೆ'' ಎಂದು ವಿವರಿಸಿ, ಕುಟುಂಬ ಮತ್ತು ಭಕ್ತಿಯ ಮಹತ್ವವನ್ನು ಒತ್ತಿ ಹೇಳಿದಳು.

ಅರೆ! ಇದೇನಪ್ಪಾ, ಇವತ್ತು ಕಥೆ ಹೇಳ್ತಿದ್ದಾರಲ್ಲಪ್ಪಾ ಅಂತ ಯೋಚನೆ ಬಂತಾ? ವಿಷಯ ಏನಪ್ಪಾ ಅಂದ್ರೆ ನಾರದರು ಮಾವಿನ ಹಣ್ಣನ್ನೇ ಏಕೆ ಆಯ್ಕೆ ಮಾಡಿಕೊಂಡರು? ಜಗತ್ತಿನಲ್ಲಿ ನೂರಾರು ಬಗೆಯ ಹಣ್ಣುಗಳು ಲಭ್ಯವಿವೆ. ಆದರೆ ಮಾವಿನ ಹಣ್ಣನ್ನೇ ಅವರು ತಂದುಕೊಟ್ಟರೆಂದರೆ ಅದರ ಹಿಂದೆ ಏನೋ ವಿಶೇಷತೆ ಇರಬೇಕಲ್ವಾ ?! ಖಂಡಿತ ಇದೆ. ಮಾವಿನ ಹಣ್ಣು, ಹಣ್ಣುಗಳ ರಾಜ. ಕಾರಣ, ಈ ಹಣ್ಣಿಗೆ ಅನೇಕ ಒಳ್ಳೆಯ ಗುಣಗಳಿದ್ದು, ದೇಹವನ್ನಷ್ಟೇ ಅಲ್ಲದೆ ಮನಸ್ಸನ್ನೂ ಉತ್ತಮವಾಗಿ ಪೋಷಿಸುವ ಸಾಮರ್ಥ್ಯ ಇದೆ. ಹಾಗಾಗಿಯೇ ಇದು ನಾರದರ ಆಯ್ಕೆ. ಮತ್ತೆ ಇನ್ನೇನು ಮಾವಿನ ಹಣ್ಣಿನ ಸುಗ್ಗಿ ಪ್ರಾರಂಭವಾಯಿತಲ್ಲವೇ, ಆದ್ದರಿಂದ ಮಾವಿನ ಹಣ್ಣಿನ ವಿಷಯವನ್ನು ಆಯುರ್ವೇದದಲ್ಲಿ ತಿಳಿಸಿರುವ ಹಾಗೆ ಅರ್ಥಮಾಡಿಕೊಂಡು ಉಪಯೋಗಿಸಿದರೆ ಯಾವುದೇ ಆರೋಗ್ಯದ ಸಮಸ್ಯೆಗಳಿಲ್ಲದೆ ಅದರ ರುಚಿಯನ್ನು ಸವಿಯಲು ಸಹಕಾರಿಯಾಗಬಲ್ಲದು. ಆ ಉದ್ದೇಶವಿಟ್ಟುಕೊಂಡೇ ಈ ಲೇಖನವನ್ನು ಸಾದರಪಡಿಸಲಾಗಿದೆ!

'ಮಾವು' ಸುಮಾರು ನಾಲ್ಕು ಸಾವಿರ ವರ್ಷಗಳ ಇತಿಹಾಸವನ್ನು ಭಾರತ ದೇಶದಲ್ಲಿ ಹೊಂದಿದೆ. ಮಾವು ಭಾರತದ ಫಲಗಳ ಪೈಕಿ ಅತ್ಯಂತ ಜನಪ್ರಿಯವಾದದ್ದು. ಇದು ಪ್ರಪಂಚದ ಅತ್ಯುನ್ನತವಾದ ಹಣ್ಣಿನ ಮರಗಳ ಪಂಕ್ತಿಯಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಮಾವು ಪ್ರಧಾನವಾಗಿ ಉಷ್ಣವಲಯದಲ್ಲಿ ಸುಮಾರು 25ರಿಂದ 30 ಡಿಗ್ರಿ ಸೆಲ್ಸಿಯಸ್ ಉಷ್ಣತೆ ಇರುವಂಥ ಹಾಗೂ ವರ್ಷದ ಜೂನ್‌ನಿಂದ ಸೆಪ್ಟೆಂಬರ್ ತಿಂಗಳುಗಳಲ್ಲಿ ಮಾತ್ರ ಮಳೆ ಬೀಳುವಂಥ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಮಾವಿನ ಹೂವು ಅರಳುವ ಸಮಯದಲ್ಲಿ ಮಳೆ, ಗಾಳಿ, ಮಂಜು, ಮೋಡ ಕವಿದ ವಾತಾವರಣ ಇರಬಾರದು. ಹಣ್ಣುಗಳು ಮಾಗುವ ವೇಳೆಯಲ್ಲಿ ಮಳೆ ಬೀಳಬಾರದು. ಮಾವು ಹೆಚ್ಚಿನ ಚಳಿಯನ್ನು ಸಹಿಸದು. ಮಾವಿನ ಮರದಲ್ಲಿ ವರ್ಷಕೊಮ್ಮೆ ಬಹುತೇಕ ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಸುಮಾರು 6ರಿಂದ 8 ವಾರಗಳ ಕಾಲದಲ್ಲಿ ಹೂವು ಅರಳುವುದು. ನಂತರ ಕಾಯಿ ಬಿಟ್ಟು ಹಣ್ಣು ಪಕ್ವ ಸ್ಥಿತಿಗೆ ಬರಲು ಸುಮಾರು ಮೂರರಿಂದ ನಾಲ್ಕು ತಿಂಗಳುಗಳ ಕಾಲ ಅವಶ್ಯಕ. ದಕ್ಷಿಣ ಭಾರತದಲ್ಲಿ, ಫೆಬ್ರವರಿ–ಮಾರ್ಚ್ ತಿಂಗಳಿನಲ್ಲಿ ಮಾವಿನ ಹಣ್ಣಿನ ಸುಗ್ಗಿ ಆರಂಭವಾಗಿ ಮೇ ತಿಂಗಳ ವೇಳೆಗೆ ಮುಗಿಯುತ್ತದೆ. ಇದನ್ನು ವಿವರಿಸುವ ಹಿಂದಿನ ತಾತ್ಪರ್ಯವೆಂದರೆ ಮಾವಿನ ಹಣ್ಣು ವರ್ಷಕೊಮ್ಮೆ ಸಿಗುವ ಹಣ್ಣು. ಹಾಗಾಗಿ ಅದನ್ನು ಆ ಕಾಲದಲ್ಲಿ ತಿನ್ನುವುದು ಸದಾ ಆರೋಗ್ಯಕರ. ಕೃತ್ರಿಮವಾಗಿ ಅದನ್ನು ಸಂಗ್ರಹಿಸಿ, ಅಕಾಲ ಸೇವನೆ ಮಾಡಿದಾಗ ಅದರಿಂದ ತೊಂದರೆ ತಪ್ಪಿದ್ದಲ್ಲ.

ಆಯುರ್ವೇದದಲ್ಲಿ ಮಾವಿನ ಹಣ್ಣಿಗೆ ಬಹಳ ಸುಂದರವಾದ ಸಂಸ್ಕೃತ ಹೆಸರುಗಳನ್ನು ನಾವು ಕಾಣಬಹುದು. ಅವುಗಳಲ್ಲಿ ಮುಖ್ಯವಾದವು:

- ಆಮ್ರಃ– ಎಲ್ಲರಿಗೂ ಇಷ್ಟವಾಗುವ ಹಣ್ಣು;
- ಚೂತಃ– ಮಾವಿನ ಹಣ್ಣು ರಸಭರಿತ ಮತ್ತು ಹಣ್ಣಾಗಿ, ತೊಟ್ಟು ಕಳಚಿ ಮರದಿಂದ ಉದುರುವುದು;
- ರಸಾಲಃ– ಮಾವಿನ ಹಣ್ಣು ಅದರ ಉತ್ತಮವಾದ ರಸಕ್ಕೆ ಪ್ರಸಿದ್ಧ;
- ಅತಿ ಸೌರಭಃ– ಮಾವಿನ ಹೂವು ಮತ್ತು ಹಣ್ಣು ವಿಶಿಷ್ಟವಾದ ಸುಗಂಧದಿಂದ ಕೂಡಿರುತ್ತದೆ;
- ಕಾಮಾಂಗಃ– ಮಾವಿನ ಹಣ್ಣು ವೀರ್ಯವರ್ಧಕವಾಗಿದೆ;
- ಮಧುದೂತಃ– ವಸಂತ ಋತುವಿನ ಆಗಮನದ ಪ್ರತೀಕವಾಗಿದೆ ಮಾವು.

ಇನ್ನು, ಮಾವಿನ ಮರದ ವಿವಿಧ ಭಾಗಗಳ ಉಪಯೋಗಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ:

- **ಮಾವಿನ ಚಿಗುರು:** ಇದು ಒಗರು, ಸಿಹಿ ರುಚಿ ಉಳ್ಳದ್ದು. ಕಫ–ಪಿತ್ತ ದೋಷಗಳನ್ನು ಕಡಿಮೆ ಮಾಡುತ್ತದೆ. ಆದ್ದರಿಂದ ವಸಂತ ಋತುವಿನಲ್ಲಿ ಇದನ್ನು ಉಪಯೋಗಿಸಿ ತಂಬುಳಿ, ಚಟ್ನಿಯನ್ನು ಸೇವಿಸುವುದು ಒಳ್ಳೆಯದು. ಇದು ದೇಹದಲ್ಲಿನ ಉರಿಯನ್ನು ಕಡಿಮೆ ಮಾಡುತ್ತದೆ.
- **ಮಾವಿನ ಹೂವು:** ಇದು ತಂಪಾಗಿಸುವ ಸ್ವಭಾವವನ್ನು ಹೊಂದಿರುವ ಕಾರಣ, ಮಲ–ಮೂತ್ರಗಳನ್ನು ಬಂಧಿಸುವ ಗುಣ ಹೊಂದಿದೆ. ಇದು ವಾತಕರವಾಗಿರುವುದರಿಂದ ದೇಹವನ್ನು ಒಣಗಿಸುತ್ತದೆ. ಮಾವಿನ ಹೂವುಗಳು ಅತಿಸಾರ ಮತ್ತು ಆಮಶಂಕೆಗಳಿಗೆ ಉತ್ತಮ ಔಷಧಿ. ಪ್ರಮೇಹ ರೋಗದಲ್ಲಿಯೂ ಹಿತ. ರಕ್ತದುಷ್ಟಿಯನ್ನು ಸರಿಪಡಿಸುತ್ತದೆ. ಅಡುಗೆಯಲ್ಲಿ ಮಾವಿನ ಹೂವನ್ನು ತುಪ್ಪ ಅಥವಾ ಕೊಬ್ಬರಿ ಎಣ್ಣೆಯಲ್ಲಿ ಹುರಿದು ತಂಬುಳಿ, ಚಟ್ನಿ ಅಥವಾ ಪಳದ್ಯಗಳಲ್ಲಿ ಬಳಸಬಹುದು.
- **ಮಾವಿನ ತೊಗಟೆ:** ಒಗರು ರುಚಿಯ ತೊಗಟೆಯು ರಕ್ತಸ್ರಾವವನ್ನು ತಡೆಯುತ್ತದೆ. ಮುಟ್ಟಿನ ಅತಿಸ್ರಾವ, ರಕ್ತ ಪ್ರವೃತ್ತಿಯುಳ್ಳ ಮೂಲವ್ಯಾಧಿ ಹಾಗೂ ರಕ್ತದುಷ್ಟಿಗಳಲ್ಲಿ ಇದು ಹಿತಕರ. ಗಾಯಗಳನ್ನು ತೊಳೆಯಲು ಔಷಧವಾಗಿ ಬಳಸಲಾಗುತ್ತದೆ.
- **ಮಾವಿನ ಮಿಡಿಗಾಯಿ:** ಒಗರು ಮತ್ತು ಹುಳಿ ರುಚಿ ಹೊಂದಿದ ಕಾರಣ ಇದು ವಾತ–ಪಿತ್ತಗಳನ್ನು ದೇಹದಲ್ಲಿ ಕೆಡಿಸುತ್ತದೆ. ರಕ್ತವನ್ನು ದೂಷಿಸುತ್ತದೆ. ರಕ್ತದ ಒಸರುವಿಕೆ, ಗಂಟಲು ಊತ, ಬಾಯಿಹುಣ್ಣು, ಕುರು, ಮೊಡವೆ ಮುಂತಾದ ತೊಂದರೆಗಳನ್ನು ಕೊಡಬಹುದು. ಹಿತಮಿತವಾಗಿ ಉಪ್ಪಿನಕಾಯಿ, ತಂಬುಳಿ, ಚಿತ್ರಾನ್ನದಂಥ ಅಡುಗೆಗಳಲ್ಲಿ ಬಳಸುವುದು ಕ್ಷೇಮ. ನಿತ್ಯೋಪಯೋಗಕ್ಕಂತೂ ಇದು ಅನಾರೋಗ್ಯಕರ.
- **ಬಲಿತ ಮಾವಿನಕಾಯಿ:** ಇದು ಅತ್ಯಂತ ಹುಳಿ ರುಚಿ ಹೊಂದಿದ ಕಾರಣ ತ್ರಿದೋಷಕಾರಕ, ರಕ್ತದುಷ್ಟಿಕರ ಮತ್ತು ದೇಹವನ್ನು ಒಣಗಿಸುವ ಸ್ವಭಾವ ಇದಕ್ಕಿದೆ. ಇದರ ಉಪ್ಪಿನಕಾಯಿ, ಚಟ್ನಿ, ಚಿತ್ರಾನ್ನಗಳನ್ನು ಸತತವಾಗಿ ಉಪಯೋಗಿಸಿದಾಗ ಹಲವು ರಕ್ತ–ಮೂತ್ರ–ಪಿತ್ತ ರೋಗಗಳನ್ನು ಉಂಟುಮಾಡುತ್ತದೆ. ಹಾಗಾಗಿ, ಮಾವಿನ ಹಣ್ಣಿನ ಕಾಲದಲ್ಲಿ ವಾರಕ್ಕೊಮ್ಮೆ ಇದನ್ನು ಎಣ್ಣೆಯಲ್ಲಿ ಬಾಡಿಸಿ, ತೆಂಗಿನ ತುರಿ/ತೆಂಗಿನ ಹಾಲು ಅಥವಾ ಶುಂಠಿಗಳೊಂದಿಗೆ ಉಪಯೋಗಿಸಬಹುದು. ಆದರೆ ಎಲ್ಲರಿಗೂ ಬಹಳ ಪ್ರಿಯವಾದ ಹಸಿ ಕಾಯಿಯನ್ನು, ಉಪ್ಪು–ಖಾರದೊಂದಿಗೆ ತಿನ್ನುವ ಅಭ್ಯಾಸ ಮಾತ್ರ ಅತ್ಯಂತ ತೊಂದರೆದಾಯಕ. ಇದು ಅತ್ಯಂತ ಪಿತ್ತಕರ ಮತ್ತು ರಕ್ತ ದುಷ್ಟಿಕರ. ಬದಲಿಗೆ, ಅಡುಗೆಯಲ್ಲಿ ಬಳಸುವುದರಿಂದ ಇದು ಅಲ್ಪ ಹಾನಿಕರವಾಗುತ್ತದೆ.
- **ಒಣಗಿಸಿದ ಮಾವಿನಕಾಯಿ:** ಮಾವಿನಕಾಯಿ ಸಿಪ್ಪೆಯನ್ನು ತೆಗೆದು, ಒಣಗಿಸಿ, ಅಡುಗೆಯಲ್ಲಿ ಬಳಸಲಾಗುತ್ತದೆ. ಇದು ರುಚಿಕರ, ಕಫ–ವಾತಹರ ಮತ್ತು ಮಲಭೇದಕ. ಮಿತವಾಗಿ ಬಳಸುವುದು ಸದಾ ಕ್ಷೇಮ.

ಇನ್ನು ಎಲ್ಲರಿಗೂ ಪ್ರಿಯವಾಗಿರುವ ಮಾವಿನ ಹಣ್ಣಿನ ವಿಚಾರಗಳನ್ನು ತಿಳಿದುಕೊಳ್ಳೋಣ.

- **ನೈಸರ್ಗಿಕವಾಗಿ ಕಳಿತ ಮಾವಿನ ಹಣ್ಣು**
ರುಚಿಯಲ್ಲಿ ಸಿಹಿಯಾಗಿದ್ದು, ಸ್ವಲ್ಪ ಒಗರು ರುಚಿಯನ್ನು ಸಹ ಹೊಂದಿರುತ್ತದೆ. ಇದು ಜಿಡ್ಡಿನ ಅಂಶವನ್ನು ಹೊಂದಿರುತ್ತದೆ. ಇದು ಬಲಕರ ಹಾಗೂ ಸಂತೃಪ್ತಿದಾಯಕವಾಗಿದೆ. ಇಂಥ ಮಾವಿನ ಹಣ್ಣಿನ ಜೀರ್ಣಕ್ಕೆ ಹೆಚ್ಚು ಸಮಯ ಬೇಕು. ಇದು ವೀರ್ಯವರ್ಧಕ ಮತ್ತು ಕಾಮೋತ್ತೇಜಕವಾಗಿದೆ. ಇದು ವಾತವನ್ನು ಕಡಿಮೆ ಮಾಡುತ್ತದೆ. ಹೃದಯದ ಆರೋಗ್ಯಕ್ಕೆ ಒಳ್ಳೆಯದು. ಕಾಯಿಗೆ ಹೋಲಿಸಿದರೆ ಹಣ್ಣು ಶೀತಲ ಮತ್ತು ಹೆಚ್ಚಾಗಿ ಪಿತ್ತವನ್ನು ಕೆರಳಿಸದು. ಆದರೆ ಮಾವಿನ ಹಣ್ಣು ಕಫವರ್ಧಕ. ಸಾಮಾನ್ಯವಾಗಿ, 'ಹಸಿದಾಗ ಹಲಸು, ಉಂಡು ಮಾವು' ಎಂಬ ಮಾತನ್ನು ನಾವೆಲ್ಲರೂ ಕೇಳಿಯೇ ಇರುತ್ತೇವೆ. ಆದರೆ ಮಾವಿನ ಹಣ್ಣು ಜೀರ್ಣಕ್ಕೆ ಜಡವಾದ್ದರಿಂದ ಮತ್ತು ಸಿಹಿ ಸ್ವಭಾವ ಉಳ್ಳದ್ದಾಗಿರುವುದರಿಂದ ಆಹಾರದ ಶುರುವಿನಲ್ಲಿ ಮಾವಿನ ಹಣ್ಣನ್ನು ಸೇವಿಸುವುದು ಒಳ್ಳೆಯದು. ಊಟವಾದ ಮೇಲೆ ಮಾವಿನ ಹಣ್ಣನ್ನು ಸೇವಿಸಿದರೆ ಅದು ಸರಿಯಾಗಿ ಜೀರ್ಣವಾಗದೆ ತೊಂದರೆ ಕೊಡಬಹುದು.
- **ಕೃತ್ರಿಮವಾಗಿ ಹಣ್ಣುಮಾಡಿದ ಮಾವಿನ ಗುಣ**
ವಿವಿಧ ರೀತಿಯ ರಾಸಾಯನಿಕ ವಸ್ತುಗಳನ್ನು ಬಳಸಿ ಕೃತ್ರಿಮವಾಗಿ ಹಣ್ಣು ಮಾಡಿದ ಮಾವಿನ ಗುಣಗಳು ಬೇರೆಯದಾಗಿರುತ್ತವೆ. ಕ್ಯಾಲ್ಸಿಯಂ ಕಾರ್ಬೈಡ್/ಎಥಿಲಿನ್ ಗ್ಯಾಸ್ ಮುಂತಾದ ರಾಸಾಯನಿಕಗಳ ಉಪಯೋಗವು ಹಣ್ಣಿನ ಗುಣಮಟ್ಟವನ್ನು ಕಡಿಮೆ ಮಾಡಿ, ಆರೋಗ್ಯಕ್ಕೆ ಹಾನಿಕರವಾಗುವಂತೆ ಮಾಡುತ್ತದೆ. ಈ ರೀತಿಯ ಹಣ್ಣುಗಳು ದೇಹದಲ್ಲಿ ಉಷ್ಣತೆಯನ್ನು ಉಂಟುಮಾಡಿ ಶರೀರಬಾವು, ಉರಿಯೂತ, ಕಣ್ಣಿನ ಉರಿ, ನೀರು ಜಿನುಗುವುದು ಇತ್ಯಾದಿಗಳಲ್ಲದೆ ಕ್ಯಾನ್ಸರ್‌ನಂಥ ರೋಗಗಳಿಗೂ ಕಾರಣವಾಗುತ್ತದೆ. ಆದ್ದರಿಂದ, ಮಾವಿನ ಹಣ್ಣುಗಳನ್ನು ಬೆಳೆದ ರೈತರಿಂದ ನೇರವಾಗಿ ಖರೀದಿಸುವುದು ಸದಾ ಉತ್ತಮ.
- **ಚೂಷಿತಾಮ್ರ– ರಸ ಹೀರಿ ತಿನ್ನುವ ಮಾವಿನ ಹಣ್ಣಿನ ಗುಣ:** ಹಣ್ಣಾದ ಮಾವನ್ನು ಬಾಯಿಯಿಂದ ಕಚ್ಚಿ, ರಸ ಹೀರುತ್ತಾ ಸೇವಿಸುವುದು ಅತ್ಯಂತ ರುಚಿಕರ ಮತ್ತು ಬಲಕರ. ಈ ವಿಧಾನದಲ್ಲಿ ಸೇವಿಸುವುದರಿಂದ ಮಾವಿನ ಹಣ್ಣು ಜೀರ್ಣಕ್ಕೆ ಅತ್ಯಂತ ಹಗುರವಾಗಿ ಪರಿಣಮಿಸಲ್ಪಡುತ್ತದೆ. ಇದು ಶೀತಲವೂ, ವಾತಪಿತ್ತಹರವೂ ಆಗಿದ್ದು ಸುಲಭವಾಗಿ ಮಲ ವಿಸರ್ಜನೆಯಾಗುವಂತೆ ಮಾಡುತ್ತದೆ.

- **ಗಾಲಿತಾಮ್ರ, ರಸ– ಮಾವಿನ ಹಣ್ಣಿನಿಂದ ಹಿಂಡಿ ಸೋಸಿದ ರಸ:** ಚೆನ್ನಾಗಿ ಕಳಿತ ಹಣ್ಣಿನ ರಸವನ್ನು ಹಿಂಡಿ ಸೇವಿಸಿದರೆ ಅದು ಬಲಕಾರಕ. ಆದರೆ ಜೀರ್ಣಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಇದು ಹೃದಯಕ್ಕೆ ಹಿತವಲ್ಲ ಎನ್ನಬಹುದು. ಇದು ಕಫ ದೋಷವನ್ನು ಹೆಚ್ಚಿಸಿ ಪ್ರಮೇಹ, ಅಜೀರ್ಣ, ಉಬ್ಬಸ, ಕೆಮ್ಮುಗಳನ್ನು ಹೆಚ್ಚಿಸುತ್ತದೆ. ಆದರೆ, ಕೃಶವಾಗಿರುವವರು, ದೈಹಿಕ ಶ್ರಮಜೀವಿಗಳು, ಜೀರ್ಣಶಕ್ತಿ ಚೆನ್ನಾಗಿರುವವರು, ಮಕ್ಕಳು, ಯುವಕರು, ಆಹಾರದ ಸಮಯದಲ್ಲಿ ಜೀರ್ಣವಾಗುವಷ್ಟು ಪ್ರಮಾಣದಲ್ಲಿ ಸೇವಿಸಿದರೆ, ತಕ್ಷಣವೇ ಆಯಾಸವು ನಿವಾರಣೆ ಆಗುತ್ತದೆ. ಇನ್ನೂ ಒಳ್ಳೆಯ ಉಪಾಯ ಬೇಕೆಂದರೆ, ಹಣ್ಣಿನ ರಸಕ್ಕೆ ಸ್ವಲ್ಪ ಉಪ್ಪು, ಶುಂಠಿ, ಜೀರಿಗೆ, ಹಿಂಗು, ಸಾಸಿವೆ ಮತ್ತು ಕೊಬ್ಬರಿ ಎಣ್ಣೆಗಳ ಒಗ್ಗರಣೆಯನ್ನು ಕೊಟ್ಟು ಬೆಚ್ಚಗೆ ಮಾಡಿ ಅಡುಗೆಯಂತೆ ಬಳಸುವುದು ಜೀರ್ಣಕ್ಕೆ ಹಗುರ ಮತ್ತು ಹಣ್ಣಿನ ರಸಗಳ ಅವಗುಣಗಳನ್ನು ಕಡಿಮೆ ಮಾಡುತ್ತದೆ.
- **ಆಮ್ರ ಖಂಡ– ತುಂಡರಿಸಿದ ಮಾವಿನ ಹಣ್ಣು:** ಸಿಪ್ಪೆಯನ್ನು ತೆಗೆದು, ತುಂಡುಗಳನ್ನಾಗಿ ಮಾಡಿ, ತಿಂದಾಗ ಅದು ಜೀರ್ಣಕ್ಕೆ ಜಡವಾಗುತ್ತದೆ. ಶರೀರದ ಸ್ಥೂಲತೆಗೆ ಕಾರಣವಾಗುತ್ತದೆ. ಇದು ಬಲಕಾರಕ, ಶೀತಲ ಮತ್ತು ವಾತಹರವಾಗಿದೆ. ಆದ್ದರಿಂದ ಚೆನ್ನಾಗಿ ಹಸಿವಾದಾಗ, ಆಹಾರದ ಮೊದಲು, ಹಣ್ಣಿನ ತುಂಡುಗಳನ್ನು ಸೇವಿಸಿ ನಂತರ ಊಟ ಮಾಡುವುದು ಹಿತಕರ.
- **ಹಾಲು ಮತ್ತು ಮಾವಿನ ಮಿಶ್ರಣ– ಕ್ಷೀರಾಮ್ರ/ದುಗ್ಧಾಮ್ರ/ಸೀಕರಣೆ:**
ಸಿಹಿಸಿಹಿ ಮಾವಿನ ಹಣ್ಣನ್ನು ತಿಂದು, ಹಾಲು ಕುಡಿದರೆ ಅಥವಾ ಹಾಲಿನಲ್ಲಿ ಸಿಹಿಯಾದ ಮಾವಿನ ತುಂಡುಗಳನ್ನು ಬೆರೆಸಿ ಸೀಕರಣೆಯಂತೆ ತಿಂದರೆ ಅಥವಾ ಮಾವಿನ ಹೋಳುಗಳೊಂದಿಗೆ ಹಾಲನ್ನು ಬೆರೆಸಿ ಮಿಲ್ಕ್ ಶೇಕ್ ಮಾಡಿ ಕುಡಿದರೆ, ಅದು ವಾತ–ಪಿತ್ತಹರ, ರುಚಿಕರ, ಬಲವರ್ಧಕ ಹಾಗೂ ಶರೀರದ ಸ್ಥೂಲತೆಗೆ ಕಾರಣ. ಅಂತೆಯೇ ವೀರ್ಯವರ್ಧಕ ಮತ್ತು ವರ್ಣವರ್ಧಕ. ಇದು ಜೀರ್ಣಕ್ಕೆ ಅತ್ಯಂತ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ. ದೇಹಕ್ಕೆ ತಂಪನ್ನು ಕೊಡುತ್ತದೆ. ಸದಾ ಚಟುವಟಿಕೆಯುಳ್ಳವರು, ಕೃಶವಾಗಿರುವವರು ಮತ್ತು ಮಕ್ಕಳಿಗೆ ಇದು ಬೇಸಗೆಯಲ್ಲಿ ಒಳ್ಳೆಯ ಪೋಷಕ ಆಹಾರ. ಬೆಳಗ್ಗಿನ ಉಪಾಹಾರದಲ್ಲಿ ಚಪಾತಿ/ರೊಟ್ಟಿ/ದೋಸೆ/ಪೂರಿಯೊಂದಿಗೆ ಜೀರ್ಣಶಕ್ತಿಗೆ ತಕ್ಕಂತೆ ಸೇವಿಸುವುದು ಹಿತಕರ. ಇದು ಜೀರ್ಣಶಕ್ತಿ ಚೆನ್ನಾಗಿರುವ ವ್ಯಕ್ತಿಗಳಿಗೆ ಮಾತ್ರ ಸೂಕ್ತವಾದ ಆಹಾರ. ಇದನ್ನು ಕ್ರಮ ತಪ್ಪಿ ಬಳಸಿದಾಗ ಕುರು, ತಲೆಭಾರ, ಸಂಧಿಯೂತ, ಬಾವು, ಚರ್ಮ ಕಾಯಿಲೆ, ಪ್ರಮೇಹಗಳನ್ನು ಹೆಚ್ಚಿಸಬಹುದು.

ದುಗ್ಧಾಮ್ರವನ್ನು ಸೇವಿಸುವಾಗ ನೆನಪಿನಲ್ಲಿಡಬೇಕಾದ ಅತ್ಯಂತ ಮುಖ್ಯವಾದ ಅಂಶವೆಂದರೆ– ಹುಳಿ ಇರುವ ಹಣ್ಣನ್ನು ಹಾಲಿನ ಜತೆಗೆ ಮಿಶ್ರಣ ಮಾಡಿ ಬಳಸಿದರೆ, ಅದು ವಿರುದ್ಧ ಆಹಾರವಾಗಿ ಪರಿಣಮಿಸಿ ದೇಹದಲ್ಲಿ ವಿಷವನ್ನು ಉತ್ಪತ್ತಿ ಮಾಡುತ್ತದೆ. ಚರ್ಮರೋಗ, ರಕ್ತದುಷ್ಟಿ ಸೇರಿದಂತೆ ಅನೇಕ ತೊಂದರೆಯನ್ನು ನೀಡುತ್ತದೆ. ಆದ್ದರಿಂದ ನೆನಪಿಡಿ, ಬಳಸುವಾಗ ಮಾವಿನ ಹಣ್ಣು 'ಸಿಹಿ' ಇದ್ದರೆ ಮಾತ್ರ ಹಾಲಿನೊಂದಿಗೆ ಬಳಸಬೇಕು. ಹಣ್ಣು ಸ್ವಲ್ಪ ಹುಳಿ ಮಿಶ್ರಿತವಾಗಿದ್ದರೆ ಹಾಲಿನ ಬದಲು ತೆಂಗಿನಕಾಯಿಯ ಹಾಲನ್ನು ಬಳಸಬಹುದು.

- **ಕೊನೆಯದಾಗಿ ಒಂದು ಕಿವಿಮಾತು:**
ಸ್ನೇಹಿತರೆ, ನಿಮ್ಮ ಹಸಿವೆಯನ್ನು ಗಮನಿಸಿ, ಮಾವಿನ ಹಣ್ಣನ್ನು ಸದಾ ಆಹಾರದ ಕಾಲದಲ್ಲಿ, ಆಹಾರದ ಶುರುವಿನಲ್ಲಿಯೇ ಸೇವಿಸಿದರೆ ಮಾವು ಅಮೃತ ಸಮಾನ! ಹಸಿವೆಯನ್ನು ಗಮನಿಸದೆ, ಮಿತಿಮೀರಿ ಸೇವಿಸಿದರೆ ಮಾವು ಅತ್ಯಂತ ತೊಂದರೆದಾಯಕವಾಗಬಹುದು! ಅತಿಯಾಗಿ ಸೇವಿಸುವ ಮಾವಿನ ಹಣ್ಣಿನಿಂದ ನಮ್ಮ ಜಠರಾಗ್ನಿ ಮಂದವಾಗಿ, ಹೊಟ್ಟೆಭಾರ, ಮೈಭಾರಗಳು ಪ್ರಾರಂಭವಾಗುತ್ತವೆ. ಪದೇಪದೆ ಕಾಡುವ ಜ್ವರಗಳು ಕಾಣಿಸಿಕೊಳ್ಳುತ್ತವೆ. ರಕ್ತದುಷ್ಟಿಗೊಂಡು ಕಾಮಾಲೆ, ಪಾಂಡು ರೋಗ, ಚರ್ಮರೋಗಗಳು ಶುರುವಾಗಬಹುದು. ಮಲಬದ್ಧತೆಯಿಂದ ಹಿಡಿದು ಸಕ್ಕರೆ ಕಾಯಿಲೆ ಮತ್ತು ಕೊಲೆಸ್ಟ್ರಾಲ್‌ಗಳೂ ಹೆಚ್ಚಾಗಬಹುದು. ನಾವು ಮಾವನ್ನು ಅತಿಯಾಗಿ ತಿಂದು ಅದು ಜೀರ್ಣವಾಗದಿದ್ದಾಗ ಆಹಾರವನ್ನು ವರ್ಜಿಸಿ, ಉಪವಾಸದಲ್ಲಿದ್ದು, ಸ್ವಲ್ಪ ಸ್ವಲ್ಪವೇ ಶುಂಠಿಯ ನೀರನ್ನು ಹೀರಿ ಜೀರ್ಣಶಕ್ತಿ ಮೊದಲಿನಂತಾಗುವ ತನಕ ಕಾಯುವುದರಿಂದ ಮುಂಬರುವ ಎಲ್ಲಾ ತೊಂದರೆಗಳನ್ನೂ ನಿವಾರಿಸಬಹುದು. ನೆನಪಿಡಿ ಅತಿಯಾದರೆ ಅಮೃತವೂ ವಿಷವೇ!

ಇನ್ನು ಕೆಲವೇ ವರ್ಷಗಳಲ್ಲಿ ವೀರಶೈವ ಎಂಬ ಪದ ನಿರ್ನಾಮವಾಗಲಿದೆಯೇ?!

ಬಸವ ಮಂಟಪ
ರವಿ ಹಂಜ್
vveditoped@gmail.com

ನಾಡಿನ ಸಾಕ್ಷಿಪ್ರಜ್ಞೆ, ಜಾಗತಿಕ ಲಿಂಗಾಯತ ಮಹಾಸಭಾದ ಪಿತಾಮಹ ಗೊರುಚ ಅವರು ಇತ್ತೀಚೆಗೆ, ''ಇನ್ನು ಕೆಲವೇ ವರ್ಷಗಳಲ್ಲಿ ವೀರಶೈವ ಎಂಬ ಪದ ನಿರ್ನಾಮವಾಗಲಿದೆ'' ಎಂದಿದ್ದಾರೆ. ಇದು ಸಾಧ್ಯವೇ?

ಪ್ರಾಕ್ತನ ಶಾಸ್ತ್ರ, ಗ್ರಂಥಶಾಸ್ತ್ರ, ಉತ್ಖನನ ಆಕರಗಳ ಪ್ರಕಾರ ವೀರಶೈವ (ಲಿಂಗಾಯತ) ಧರ್ಮದ ಕುರಿತಾಗಿ ಸಿಕ್ಕಿರುವ ದಾಖಲೆಗಳೆಲ್ಲವೂ 'ವೀರಶೈವ' ಪದವನ್ನು ಹೊಂದಿವೆಯೇ ಹೊರತು 'ಲಿಂಗಾಯತ' ಪದವನ್ನಲ್ಲ. ಆದರೂ ಗೊರುಚ ಅವರ ಹಿನ್ನೆಲೆ, ವಿದ್ಯಾರ್ಹತೆ, ವೃತ್ತಿ, ಸಾರ್ವತ್ರಿಕ ವ್ಯಕ್ತಿತ್ವವನ್ನು ಗಮನದಲ್ಲಿಟ್ಟುಕೊಂಡು ಈ ವಿಶ್ಲೇಷಣೆಯನ್ನು ಹೀಗಿದ್ದರೆ ಹೇಗೆ ಎಂಬ ವಿಶ್ಲೇಷಣೆಗೆ ಒಳಪಡಿಸಿ ಈ ಹಿರಿಯರ ಅಭಿಪ್ರಾಯಕ್ಕೆ ಗೌರವ ಸಲ್ಲಿಸೋಣ. ಏಕೆಂದರೆ ಎಲ್ಲಾ ಸಂಭಾವ್ಯ ಆಯಾಮಗಳಿಂದಲೂ ವಿಷಯವನ್ನು ತೂಲಿಸುವುದು ಸಂಶೋಧಕನ ಆದ್ಯ ಕರ್ತವ್ಯ. ಹಾಗಾಗಿ ''ಲಿಂಗಾಯತ ಬೇರೆಯದೇ ಆದ ಧರ್ಮ. ಲಿಂಗಾಯತಕ್ಕೂ ವೀರಶೈವಕ್ಕೂ ಯಾವುದೇ ಸಂಬಂಧವಿಲ್ಲ'' ಎನ್ನುವ ಇವರ ಮೂಲಭೂತ ವಾದವನ್ನು ಸದ್ಯಕ್ಕೆ ಒಪ್ಪಿ ಈ ವಿಶ್ಲೇಷಣೆಯನ್ನು ಕೈಗೊಳ್ಳೋಣ. ಇವರ ಸಂಕಥನದಲ್ಲಿ ಬಸವಣ್ಣನು ಲಿಂಗಾಯತ ಧರ್ಮದ ಸಂಸ್ಥಾಪಕನಾಗಿದ್ದು ಕೊರಳಿಗೆ ಲಿಂಗ ಕಟ್ಟುವ ಲಿಂಗದೀಕ್ಷೆ ಪದ್ಧತಿಯನ್ನು ಜಾರಿಗೆ ತಂದಿದ್ದನು ಎನ್ನುತ್ತ ವಚನ ಸಾಹಿತ್ಯವೇ ಇದರ ಪ್ರಮುಖ ಆಧಾರ ಮತ್ತು ಧರ್ಮಗ್ರಂಥ ಎನ್ನುತ್ತಾರೆ. ಲಿಂಗ ಕಟ್ಟಿಕೊಳ್ಳುವ ಪದ್ಧತಿಯ ಕುರಿತು ಕಳೆದ ಅಂಕಣಗಳಲ್ಲಿ ಈಗಾಗಲೇ ಸಾಕ್ಷಿ ಸಮೇತ ಚರ್ಚಿಸಿರುವ ಕಾರಣ ಅದನ್ನು ಬದಿಗಿಟ್ಟು ಕೇವಲ ಮತ್ತು ಕೇವಲ ಈ ಗುಂಪಿನ ಏಕೈಕ ಆಕರವಾದ ವಚನ ಸಾಹಿತ್ಯವನ್ನು ಮಾತ್ರ ಪರಿಗಣಿಸಿ ಸಂಶೋಧನಾ ಶಾಸ್ತ್ರದ ಮೂಲಭೂತ ತಾರ್ಕಿಕ ಅಂಶದಡಿಯಲ್ಲಿ ವಿಶ್ಲೇಷಿಸೋಣ.

ಗೊರುಚ ಅಧ್ಯಕ್ಷರಾಗಿರುವ ಪರಿಷತ್ತಿನ ವಚನ ಸಾಹಿತ್ಯದಲ್ಲಿ ವೀರಶೈವ ಎಂಬ ಪದವನ್ನು 142 ವಚನಗಳಲ್ಲಿ ಒಟ್ಟು 221 ಕಡೆ 30ಕ್ಕೂ ಹೆಚ್ಚು ವಚನಕಾರರು ಬಳಸಿದ್ದಾರೆ. ಆ ವಚನಕಾರರು ಅಕ್ಕಮಹಾದೇವಿ, ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಸಿದ್ಧರಾಮೇಶ್ವರ, ಮೋಳಿಗೆ ಮಾರಯ್ಯ, ಅಮುಗೆ ರಾಯಮ್ಮ, ಅರಿವಿನ ಮಾರಿತಂದೆ, ಆದಯ್ಯ, ಕಾಡಸಿದ್ಧೇಶ್ವರ, ಇಮ್ಮಡಿ ಮುರಿಘಾಗುರುಸಿದ್ದಸ್ವಾಮಿ, ಕುಷ್ಟಗಿ ಕರಿಬಸವೇಶ್ವರ, ಕೂಡಲಸಂಗಮೇಶ್ವರ, ಕೋಲ ಶಾಂತಯ್ಯ, ಗುರುಸಿದ್ಧದೇವರು, ಘಟ್ಟಿವಾಳಯ್ಯ, ಚಂದಿಮರಸ, ಜಕ್ಕಣ್ಣಯ್ಯ, ದೇಶೀಕೇಂದ್ರ ಸಂಗನಬಸವಯ್ಯ, ಶಾಂತವೀರೇಶ್ವರ, ತೋಂಟದ ಸಿದ್ದಲಿಂಗ ಶಿವಯೋಗಿಗಳು, ಪ್ರಸಾದಿ ಭೋಗಣ್ಣ, ಬಹುರೂಪಿ ಚೌಡಯ್ಯ, ಮುಮ್ಮಡಿ ಕಾರ್ಯೇಂದ್ರ, ಹೇಮಗಲ್ಲ ಹಂಪ, ಸ್ವತಂತ್ರ ಸಿದ್ದಲಿಂಗ, ಷಣ್ಮುಖಸ್ವಾಮಿ ಮುಂತಾದವರು.

ಲಿಂಗಾಯತ ಎಂಬ ಪದವನ್ನು ಒಟ್ಟು 10 ವಚನಗಳಲ್ಲಿ 12 ಕಡೆ 8 ವಚನಕಾರರು ಬಳಸಿದ್ದಾರೆ. ಆ ವಚನಕಾರರು ದೇಶೀಕೇಂದ್ರ ಸಂಗನಬಸವಯ್ಯ, ಶಾಂತವೀರೇಶ್ವರ, ಉರಿಲಿಂಗಪೆದ್ದಿ, ಏಲೇಶ್ವರ ಕೇತಯ್ಯ, ಸಿದ್ಧರಾಮೇಶ್ವರ, ಅಕ್ಕಮ್ಮ, ಚೆನ್ನಬಸವಣ್ಣ ಮತ್ತು ಗುರುಸಿದ್ಧದೇವರು. ಪ್ರೊ. ಕಲಬುರ್ಗಿ ಅವರ ಘನ ಅಧ್ಯಕ್ಷತೆಯಲ್ಲಿ ಪ್ರಕಟಿಸಿರುವ ಸಮಗ್ರ ವಚನ ಸಾಹಿತ್ಯದ ಎಲ್ಲಾ ಅಧಿಕೃತ ವಚನಗಳನ್ನು ಪರಿಗಣಿಸಿ ನಾನು ಈ ಸಂಖ್ಯೆಯನ್ನು ಕಂಡುಕೊಂಡಿದ್ದೇನೆ. ಲಿಂಗಾಯತ ಎಂಬುದು ಬೇರೆ ಆಗಿದ್ದರೆ ಮತ್ತು ಬಸವಾದಿ ಶರಣರು ಲಿಂಗಾಯತ ಧರ್ಮ ಪರಿಪಾಲಕರಾದರೆ ಅವರೇಕೆ ವೀರಶೈವ ಪದವನ್ನು 221 ಕಡೆ ಬಳಸಿ ಲಿಂಗಾಯತ ಪದವನ್ನು ಕೇವಲ 12 ಕಡೆ ಬಳಸಿದ್ದಾರೆ?

ಈ ಪ್ರಶ್ನೆಗೆ ಗೊರುಚ, ಡಾ. ವೀರಣ್ಣ ರಾಜೂರ, ಜಾಮದಾರರಾದಿಯಾಗಿ ಜಾಗತಿಕ ಲಿಂಗಾಯತ ಮಹಾಸಭಾದ ಕಟ್ಟಕಡೆಯ ಸದಸ್ಯನೂ ಒಕ್ಕೊರಲಿನಿಂದ, ''ವೀರಶೈವ ಪದವನ್ನು 15ನೇ ಶತಮಾನದಲ್ಲಿ ಸಂಕಲಿಸುವಾಗ ವೀರಶೈವರು ತಿದ್ದಿ ತೀಡಿ ತುರುಕಿದ್ದಾರೆ. ವಚನಗಳು, ಶರಣರು, ಕಲ್ಯಾಣಕ್ರಾಂತಿ ಎಲ್ಲವೂ 300 ವರ್ಷಗಳ ಕಾಲ ಅಜ್ಞಾತವಾಸದಲ್ಲಿದ್ದವು. ಅವನ್ನು ಬೆಳಕಿಗೆ ತಂದದ್ದು 15ನೇ ಶತಮಾನದಲ್ಲಿ'' ಎಂದೂ ಹೇಳುತ್ತಾರೆ. ಸರಿ, ಹೀಗೆ 300 ವರ್ಷಗಳ ಕಾಲ ಅಜ್ಞಾತವಾಸದಲ್ಲಿದ್ದ ಲಿಂಗಾಯತವನ್ನು ವೀರಶೈವರು ಬೆಳಕಿಗೆ ತಂದು ವೀರಶೈವ ಪದವನ್ನು ವಚನಗಳಲ್ಲಿ ತುರುಕಿ, ಸಂಸ್ಕೃತ ಶ್ಲೋಕವಿರುವ ಹೊಸ ವಚನಗಳನ್ನು ಶರಣರ ಹೆಸರಿನಲ್ಲಿ ಸೃಷ್ಟಿಸಿ ವಚನಾಧರಿತ ಶೂನ್ಯ ಸಂಪಾದನೆ, ರಗಳೆ, ಪುರಾಣವನ್ನು ಸೃಜಿಸಿ ಬಸವ ಸಂಕಥನವನ್ನು ಕಟ್ಟಿದರೇಕೆ? ಅದಕ್ಕಿಂತ ಸುಲಭವಾಗಿ ಬಸವಣ್ಣನನ್ನು, ಶರಣರನ್ನು ಅಜ್ಞಾತದಲ್ಲಿಯೇ ಇರಿಸಿ ತಮ್ಮದೇ ರೇವಣಸಿದ್ಧನನ್ನೋ, ರೇಣುಕನನ್ನೋ ಪ್ರತಿಷ್ಠಾಪಿಸಬಹುದಿತ್ತಲ್ಲವೇ?!

ಮೇಲಾಗಿ ಬಸವಣ್ಣ, ಶರಣರು, ಕಲ್ಯಾಣಕ್ರಾಂತಿ, ಲಿಂಗಾಯತ ಧರ್ಮಕ್ಕೆ ಯಾವುದೇ ಐತಿಹಾಸಿಕ ದಾಖಲೆ ಇರದ ಕಾರಣ ವಚನ ಸಾಹಿತ್ಯವನ್ನು ಪುನರ್‌ರಚಿಸಿದ ವೀರಶೈವ ಗುರುವಿರಕ್ತರು ಸುಲಭವಾಗಿ ಇದನ್ನೆಲ್ಲ ಮರೆಮಾಚಿ ತಮ್ಮ (ಸ್ವ) ಸಿದ್ಧಾಂತ ಶಿಖಾಮಣಿಯನ್ನು ವಿಜೃಂಭಿಸಬಹುದಿತ್ತಲ್ಲವೇ?! ಅದರಲ್ಲೂ ಕೊಂಡಗುಳಿ ಕೇಶಿರಾಜನ ಇತಿಹಾಸ ಮತ್ತು ಜೀವನ ಚರಿತ್ರೆಯು ಬಸವಣ್ಣನ ಚರಿತ್ರೆಯ ಪ್ರತಿರೂಪದಂತೆಯೇ ಇದೆ. ಯಾವ ಸಾಕ್ಷಿ ಪುರಾವೆಯಿರದ ಬಸವಣ್ಣನನ್ನು ಬಿಟ್ಟು ಸಾಕ್ಷಿ ಪುರಾವೆ ಇರುವ ಬಸವಣ್ಣನಿಗಿಂತ ಪ್ರಾಚೀನನಾದ ಕೇಶಿರಾಜನನ್ನೇ ಸುಲಭವಾಗಿ ಬಸವಣ್ಣನಂತೆ ವಿಜೃಂಭಿಸಬಹುದಿತ್ತಲ್ಲವೇ? ಹಾಗೇಕೆ ಮಾಡಲಿಲ್ಲ ಎಂಬ ತಾರ್ಕಿಕ ಪ್ರಶ್ನೆಯೊಂದಿಗೆ ಇವರ ಎಲ್ಲಾ ವಾದವು ಅತಾರ್ಕಿಕ ನಿಶ್ಶೂನ್ಯವಾಗುತ್ತದೆ.

ಇನ್ನು ವಚನಗಳಲ್ಲಿ ಹೇರಳವಾಗಿ ಬಳಸಿರುವ ಮಾಹೇಶ್ವರ ಪದವನ್ನು ವೀರಶೈವ ಜಂಗಮಸೂಚಕ ಎಂದೇ ಅರ್ಥೈಸಲಾಗಿದೆ. ಈ 'ಮಾಹೇಶ್ವರ' ಪದವನ್ನು ಒಟ್ಟು 355 ವಚನಗಳಲ್ಲಿ 525 ಕಡೆ 63 ವಚನಕಾರರು ಬಳಸಿದ್ದಾರೆ ಸಹ. ವೀರಶೈವ ಲಿಂಗಾಯತದಂಥ ಸಾಮುದಾಯಿಕ ಪದಗಳಿಗಿಂತ ಮಾಹೇಶ್ವರ ಎಂಬ ಗುರುಜನರನ್ನು ಸಂಬೋಧಿಸಿರುವ ವಚನಗಳೇ ಅತ್ಯಂತ ಹೆಚ್ಚಾಗಿರುವ ಕಾರಣ ವಚನಗಳನ್ನು ವರ್ಗೀಕರಿಸಿ ಸಂಕಲಿಸಿದ ನೂರೊಂದು ವಿರಕ್ತರಿಗೆ, ವೀರಶೈವರಿಗೆ, ಜಂಗಮರಿಗೆ, ಲಿಂಗಿಬ್ರಾಹ್ಮಣರಿಗೆ ಲಿಂಗಾಯತವನ್ನು ನಿರ್ಲಿಂಗಗೊಳಿಸುವುದು ಖಂಡಿತವಾಗಿಯೂ ಕಷ್ಟಸಾಧ್ಯವಾಗಿರಲಿಲ್ಲ. ವಿಭಜಕರ ವಾದದಂತೆ ಅದು ಪ್ರಕ್ಷಿಪ್ತ ಇದು ನಿಕ್ಷೇಪ ಎಂದು ಒಂದೊಂದೇ ವಚನವನ್ನು ಪಚನವಾಗಿಸಿದರೆ ಉಳಿಯುವುದು ಬಹುದೊಡ್ಡ ತೇಗು ಮಾತ್ರ!

ಇವರಂತೂ ಪ್ರಕ್ಷೇಪ ಎನ್ನಲು ಯಾವುದೇ ತಾರ್ಕಿಕ ಉದಾಹರಣೆಯನ್ನು ಕೊಡುವುದಿಲ್ಲ, ಆದರೆ ಈ ಬಗ್ಗೆ ಅಪಾರ ಸಂಶೋಧನೆ ಮಾಡಿರುವ ಎಲ್. ಬಸವರಾಜುರವರು ತಮ್ಮ 'ಅಲ್ಲಮನ ವಚನ ಚಂದ್ರಿಕೆ' ಪೀಠಿಕೆಯಲ್ಲಿ (ಪುಟ 29, 30) ಹೀಗೆ ಹೇಳಿದ್ದಾರೆ: ''ಶೂನ್ಯ ಸಂಪಾದನೆ ಬಗ್ಗೆ ಮತ್ತು ಶೂನ್ಯ ಸಂಪಾದನೆಯಿಂದ ವಚನಗಳನ್ನು ಸಂಗ್ರಹಿಸಿರುವಂತೆ ಕಂಡುಬರುವ ಇತರೆ ವಚನ ಸಂಕಲನ ಗ್ರಂಥಗಳಲ್ಲಿನ ವಚನಗಳ ಬಗ್ಗೆ ಒಂದು ಎಚ್ಚರವಿರಬೇಕು. ಅವುಗಳಲ್ಲೇನಾದರೂ ಸಂಭಾಷಣೆಗೆ ಹೊಂದಿಕೊಳ್ಳುವ ಸಂಬೋಧನೆಗಳೂ, ಆ ಸಂಭಾಷಣೆಗಳ ವಿಷಯವಾದ ಶರಣರ ಹೆಸರುಗಳೂ ಇದ್ದರೆ ಅವು ಮೂಲವಚನಕ್ಕೆ ಸೇರಿದ ಭಾಗಗಳಲ್ಲವೆಂದೂ, ಅವನ್ನು ಆಮೇಲೆ ಶೂನ್ಯಸಂಪಾದನಕಾರರಾದ ಮಹಾದೇವಯ್ಯ ಮುಂತಾದವರು ಸೇರಿಸಿರುವರೆಂದೂ ನೆನಪಿನಲ್ಲಿಡಬೇಕು. ಶರಣರ ನಡುವೆ ನಡೆದಿರಬಹುದಾದ ಸಂಭಾಷಣೆಯ ವಿವರಗಳಲ್ಲಿ ಬಹುಭಾಗ ಶೂನ್ಯ ಸಂಪಾದನಕಾರರ ಕಲ್ಪನೆಯನ್ನು ಮಾತ್ರ ಅವಲಂಬಿಸಿದೆ. ಅವುಗಳಲ್ಲಿ ಔಚಿತ್ಯವಿದ್ದರೂ ಅವು ಚಾರಿತ್ರಿಕವೆನಿಸಿಕೊಳ್ಳುವಷ್ಟು ಯಥಾವತ್ತಾದವುಗಳಲ್ಲ, ಸಂಭಾಷಣೆಗೆ ಹೊಂದಿಕೊಳ್ಳಲು ಬೇಕಾದ ಸಂಬೋಧನೆಗಳು ಮತ್ತು ಆ ಸಂಭಾಷಣೆ ಮಾಡುವಾಗ ಯಾವ ಶರಣನ ಬಾಯಿಂದ ಆ ವಚನ ಹೊರಹೊಮ್ಮಿತೆಂದು ಸಂಪಾದನಕಾರ ಭಾವಿಸಿದ್ದನೋ ಅವರ ಹೆಸರುಗಳೂ ಶೂನ್ಯಸಂಪಾದನಕಾರರಿಂದ ಆ ವಚನಕ್ಕೆ ಸೇರಿಸಲ್ಪಟ್ಟಿರುವುದರಿಂದ ಅವು ಪ್ರಕ್ಷಿಪ್ತಗಳೆನ್ನಲೇಬೇಕು. ಉದಾಹರಣೆಗೆ 'ಕೂಡಲ ಸಂಗಯ್ಯ, ಈ ನಿಮ್ಮನುಭಾವವ ಮಾತಿನ ಮಥನವೆನ್ನಬಹುದೇ' ಎಂಬುದನ್ನು ಶೂನ್ಯಸಂಪಾದನಕಾರ 'ಕೂಡಲಸಂಗಮದೇವ, ನಿಮ್ಮನುಭಾವವ ಮಾತಿನ ಮಥನವೆಂದು ನುಡಿಯಬಹುದೇ ಪ್ರಭುವೆ?' ಎಂದಿರುವುದು. ಹಾಗೆಯೇ 'ಇಂದೆನ್ನ ಮನೆಗೆ ಪ್ರಮಥರು ಬಂದಾರೆಂದು ಗುಡಿ ತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ, ರಂಗವಾಲಿಯನಿಕ್ಕಿ 'ಉಘೇ, ಚಾಂಗು ಭಲಾ' ಎಂದೆಂಬೆ. ಕೂಡಲಸಂಗನ ಶರಣರು ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ' ಎಂಬುದು ಪ್ರಕ್ಷಿಪ್ತವಾಗಿ, 'ಮನೆಯೊಡೆಯ ಮನೆಗೆ ಬಂದರೆ ಕನಕದ ತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ, ರಂಗವಾಲಿಯನಿಕ್ಕಿ 'ಉಘೇ, ಚಾಂಗು ಭಲಾ' ಎಂದೆಂಬೆ ಕೂಡಲಸಂಗಮದೇವ, ನಿಮ್ಮ ಶರಣ ಪ್ರಭುದೇವರು ಬಂದರೆ ಉಬ್ಬಿಕೊಂಡು ನಲಿದಾಡುವೆ' ಎಂದಾಗಿರುವುದು''. ಹೀಗೆ ವಚನಗಳಲ್ಲಿ ಯಾವುದನ್ನು ತಾರ್ಕಿಕವಾಗಿ ಪ್ರಕ್ಷಿಪ್ತವೆಂದು ಗುರುತಿಸಬೇಕು ಎಂಬ ಸ್ಪಷ್ಟತೆಯನ್ನು ಸ್ಥಿತಪ್ರಜ್ಞರಾಗಿ ಎಲ್.ಬಸವರಾಜು ಅವರು ಕಟ್ಟಿಕೊಡುತ್ತಾರೆ. ಈ ಪ್ರಕಾರವಾಗಿ ಅಥವಾ ಸಂಶೋಧನಾತ್ಮಕ ನೆಲೆಯ ಯಾವುದೇ ತಾರ್ಕಿಕ ಪ್ರಕಾರವಾಗಿಯಾಗಲಿ ವಿಭಜಕರು ತುರುಕುವಿಕೆಯನ್ನು ಪ್ರಸ್ತುತಪಡಿಸಿದರೆ ಒಪ್ಪಬಹುದು. ಆದರೆ ಅಂಥ ಯಾವುದೇ ತಾರ್ಕಿಕ ನೆಲೆಯ ವಾದ ಇವರಲ್ಲಿಲ್ಲ. ಇಂಥ ತಾರ್ಕಿಕ ಸ್ಪಷ್ಟತೆಯನ್ನು ಕಲ್ಬುರ್ಗಿಯವರು ಕೊಡದೆ ಸಾರಾಸಗಟಾಗಿ ವೀರಶೈವ ಎಂಬ ವಚನಗಳೆಲ್ಲಾ ಪ್ರಕ್ಷಿಪ್ತ ಎಂದಿದ್ದರು. ಈ ಹಿನ್ನೆಲೆಯಲ್ಲಿ ಕಲ್ಬುರ್ಗಿಯವರ ವೀರಶೈವ ಕುರಿತಾದ ಸಂಶೋಧಕ ಅಭಿಪ್ರಾಯಗಳನ್ನು ಭ್ರಮಾತ್ಮಕ ತೀರ್ಮಾನವೆನ್ನುವ ಬೆಂಗಳೂರು ವಿಶ್ವವಿದ್ಯಾಲಯದ ಪ್ರೊ. ಎಸ್.ವಿದ್ಯಾಶಂಕರ್ ಅವರ 'ವಚನಾನುಶೀಲನ' ಕೃತಿ ಸಹ ಇಲ್ಲಿ ಅತ್ಯಂತ ಉಲ್ಲೇಖನೀಯ. ಎಲ್.ಬಸವರಾಜುರವರ ತರ್ಕದ ಆಧಾರದ ಮೇಲೆಯೇ ಪ್ರಕ್ಷೇಪಗಳನ್ನು ಗುರುತಿಸಿ ವಚನಗಳನ್ನು ಸಂಪಾದಿಸಲಾಗಿದೆ ಎಂಬುದು ಗಮನಾರ್ಹ.

ಓರ್ವ ಸಂಶೋಧಕನಲ್ಲಿರಬೇಕಾದ ಒಂದು ತಟಸ್ಥ ನೀತಿ, ಸ್ಥಿತಪ್ರಜ್ಞತೆ, ನಿರ್ಭಾವನೆಗಳು ಯಾವೊಬ್ಬ ಪ್ರತ್ಯೇಕ ಕೂಗಿಗಳಲ್ಲಿಯೂ ಕಾಣುವುದಿಲ್ಲ. ಉದಾಹರಣೆಗೆ ಲ್ಬುರ್ಗಿ ಅವರ ವಾರಸುದಾರ ಎಂದೇ ಖ್ಯಾತರಾಗಿರುವ ಡಾ. ವೀರಣ್ಣ ರಾಜೂರ ಅವರು ತಮ್ಮ ಒಂದು ಭಾಷಣದಲ್ಲಿ, ''15ನೇ ಶತಮಾನದಲ್ಲಿ ವೀರಶೈವ ಪದವನ್ನು ವಚನಗಳಲ್ಲಿ ತುರುಕಲಾಗಿದೆ. ದಲಿತನಾದ ಉರಿಲಿಂಗಪೆದ್ದಿಯ ವಚನಗಳಲ್ಲಿ ಸಹ ಸಂಸ್ಕೃತ ಶ್ಲೋಕಗಳನ್ನು ತುರುಕಲಾಗಿದೆ'' ಎಂದು ನೆತ್ತಿಯ ಮೇಲೆ ಕುಕ್ಕಿ ಕುಕ್ಕಿ ತಮ್ಮ ಭಾವನಾತ್ಮಕ ಅನಿಸಿಕೆಯನ್ನು ಸಂಶೋಧನೆಯೆಂದು ಮಂಡಿಸುತ್ತಾರೆ. ಆದರೆ ಈ ವಚನಗಳು 12ನೇ ಶತಮಾನದಲ್ಲಿ ಹೇಗಿದ್ದವು ಎಂಬ ಒಂದೇ ಒಂದು ಆಧಾರವನ್ನು ಕೊಡುವುದಿಲ್ಲ. ಖುದ್ದು ಇವರೇ 15ನೇ ಶತಮಾನದಲ್ಲಿ ಹರಿಹರ, ಸೋಮನಾಥ, ತೋಂಟದ ಸಿದ್ದಲಿಂಗ, ನೂರೊಂದು ವಿರಕ್ತರು ವೀರಶೈವ ಪದವನ್ನು ವಚನಗಳಲ್ಲಿ ತುರುಕುವುದನ್ನು ಕಣ್ಣಾರೆ ಕಂಡಂತೆ ಆಜ್ಞಾಪಿಸುತ್ತಾರೆ. ಅಲ್ಲದೆ ಖುದ್ದು ಇವರೇ ಹಿಂದಿನ ಜನ್ಮದಲ್ಲಿ ಉರಿಲಿಂಗಪೆದ್ದಿ ಆಗಿದ್ದರೇನೋ ಎನ್ನುವಂತೆ 'ಅವನಿಗೆ ಸಂಸ್ಕೃತ ಗೊತ್ತಿರಲಿಲ್ಲ' ಎನ್ನುತ್ತಾರೆ! ಅವರ ಪ್ರಕಾರ ದಲಿತನಾದ ಉರಿಲಿಂಗಪೆದ್ದಿ ಸಂಸ್ಕೃತ ಕಲಿಯಲು ಸಾಧ್ಯವೇ ಇರಲಿಲ್ಲ! ಅಂದರೆ ಅಬ್ರಾಹ್ಮಣರಿಗೆ ವರ್ಜ್ಯವಾದ ಸಂಸ್ಕೃತದಲ್ಲಿ ಕಾವ್ಯವನ್ನು ಅಬ್ರಾಹ್ಮಣ ವ್ಯಾಸ, ವಾಲ್ಮೀಕಿ, ಕಾಳಿದಾಸರು ರಚಿಸದೆ ಅವರುಗಳ ಹೆಸರಿನಲ್ಲಿ ಯಾರೋ ಕಿಡಿಗೇಡಿಗಳು ರಾಮಾಯಣ, ಮಹಾಭಾರತ, ಮೇಘದೂತಗಳನ್ನು ಸೃಷ್ಟಿಸಿದ್ದಾರೆ ಎನ್ನಬಹುದೋ? ಹಾಗೊಂದು ವೇಳೆ ಈ ಅಬ್ರಾಹ್ಮಣರ ಹೆಸರಿನಲ್ಲಿ ಸಾಹಿತ್ಯವನ್ನು ಸೃಷ್ಟಿಸುವ ಅನಿವಾರ್ಯತೆ ಕಿಡಿಗೇಡಿ ಬ್ರಾಹ್ಮಣರಿಗೇನಿತ್ತು!? ಎಂಬಲ್ಲಿಗೆ ರಾಜೂರರ ಜೀವಮಾನ ಸಂಶೋಧನಾರ್ಥವು ಪಾರಮಾರ್ಥಿಕ ನಶ್ವರವಾಗುತ್ತದೆ! ಕಲ್ಬುರ್ಗಿ ಮೇಲ್ಪಂಕ್ತಿಯ ಇಂಥ ಚಿಟಿಕೆ ಹೊಡೆದು ಆಟಿಕೆಯಂತೆ ಸೃಷ್ಟಿಸಿದ ಪಿಎಚ್‌ಡಿ ಸಂಶೋಧನೆಗಳು 'ಶೋಧಗಂಗಾ' ಅಂತರ್ಜಾಲ ತಾಣದ ತುಂಬೆಲ್ಲಾ ಇಂದು ಪ್ರವಹಿಸುತ್ತಿವೆ. ಹಾಗಾಗಿಯೇ ಪಿಎಚ್‌ಡಿ ಪಡೆದ ಅಭ್ಯರ್ಥಿಗಳು ನರೇಗಾ ಯೋಜನೆಯ ದಿನಗೂಲಿ ಕೆಲಸಕ್ಕೆ ಹೋಗುತ್ತಿರುವ ಉದಾಹರಣೆಗಳು ಇಂದು ನಮ್ಮ ಮುಂದಿವೆ. ಅಷ್ಟರ ಮಟ್ಟಿಗೆ ಈ ಪಿಎಚ್‌ಡಿ ಪದವಿಗಳ ಗುಣಮಟ್ಟ ಕುಸಿದಿದೆ ಎಂಬುದು ಇಲ್ಲಿನ ಒಂದು ಉಪ ಪ್ರಮೇಯ.

ಕೆ.ಎಸ್.ನರಸಿಂಹಸ್ವಾಮಿಯವರ ಕವನ ಸಂಕಲನ, 'ಮೈಸೂರು ಮಲ್ಲಿಗೆ'ಗೆ ಕಥೆ ಹೆಣೆದು ಸಿನಿಮಾ ಮಾಡಿದಂತೆಯೇ ವಚನ ಸಾಹಿತ್ಯದ ಆಧಾರದಲ್ಲಿ 'ಶೂನ್ಯ ಸಂಪಾದನೆ' ಎಂಬ ಸೃಜನಶೀಲ ಸಂಕಥನ ಸೃಷ್ಟಿಯಾಗಿದೆ. ಈ ಸಂಕಥನಕ್ಕೆ ವಚನಗಳನ್ನು ಬಿಟ್ಟರೆ ಬೇರೆ ಯಾವುದೇ ಆಧಾರಗಳಿಲ್ಲ. ಈವರೆಗೆ ಸಿಕ್ಕಿರುವ ವಚನಗಳ ತಾಳೆಗರಿಗಳು ಸಹ ವೀರಶೈವರು ವಿಂಗಡಿಸಿ, ಸಂಕಲಿಸಿ ತುರುಕಿ, ಸೃಷ್ಟಿಸಿರುವ ವಚನಗಳದ್ದೇ ಹೊರತು 12ನೇ ಶತಮಾನದ ಏಕೈಕ ತಾಳೆಗರಿಯೂ ಇಲ್ಲ. ಹಾಗಿದ್ದಾಗ ಇವರ ಎಲ್ಲಾ ವಾದವೂ ನಿರ್ವಾತ ಶೂನ್ಯಾಧರಿತ ಗಾಳಿ ಗೋಪುರದ ಭಾವುಕ ಮಂಟಪವೆಂದು ಇಂದಿನ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಯಾರು ಬೇಕಾದರೂ ಸಾಬೀತು ಮಾಡಬಹುದು!

ಅದೇ ರೀತಿ 'ವಚನ ಟಿವಿ' ಎಂಬ ಪ್ರತ್ಯೇಕ ಧರ್ಮ ಕೂಗಿಗರ ಮುಖವಾಣಿಯ ಸಂದರ್ಶನವೊಂದರಲ್ಲಿ ಜಾಮದಾರರು, 'ಬಂಚ್ ಆಫ್ ಥಾಟ್ಸ್' ಪುಸ್ತಕವನ್ನು ಉಲ್ಲೇಖಿಸಿ, ಈ ಕೃತಿಯಲ್ಲಿ ವೀರಶೈವ ಮತ್ತು ಲಿಂಗಾಯತ ಬೇರೆ ಬೇರೆ ಎಂದು ಗೋಲ್ವಾಲ್ಕರ್ ಹೇಳಿದ್ದಾರೆ ಎನ್ನುತ್ತಾರೆ. ಆದರೆ ಇದು ಸಂಪೂರ್ಣ ಸುಳ್ಳು!

ಈ ಪುಸ್ತಕದಲ್ಲಿ ಲಿಂಗಾಯತ ಪದ ಬಳಸಿರುವ ಎರಡು ಪ್ಯಾರಗಳು (1968ರ ನಾಲ್ಕನೇ ಮುದ್ರಣ, ಅಧ್ಯಾಯ: Children of the motherland) ಹೀಗಿವೆ:

1. ''The first special characteristic that strikes the eye of an outsider is the bewildering variety of sects and sub&sects like Shaiva, Vaishnava, Shakta, Vaidik, Bouddha, Jain, Sikh, Lingayat, Aryasamaj, etc., existing within the elastic framework of our dharma. The great masters and sponsors of all these upasanaas founded these various forms of worship to suit the diverse mental aptitudes of our people. However, in the final analysis, they all point to the same goal of realizing the Ultimate Truth&variously referred to as Brahma, Atma, Shiva, Vishnu, Ishwara, or even Shoonya or Maha Shoonya'' (Page 101).
ಅನುವಾದ: ''ನೋಡುಗನಿಗೆ ಮೊದಲ ನೋಟಕ್ಕೇ ಗೋಚರಿಸುವ ಸಾಮಾನ್ಯ ಸಂಗತಿಯೆಂದರೆ ನಮ್ಮ ಧರ್ಮದ ಪರಿಧಿಯ ಚೌಕಟ್ಟಿನೊಳಗೇ ಇರುವ ಶೈವ, ವೈಷ್ಣವ, ಶಾಕ್ತ, ವೈದಿಕ, ಬೌದ್ಧ, ಜೈನ, ಸಿಖ್, ಲಿಂಗಾಯತ, ಆರ್ಯಸಮಾಜ ಇತ್ಯಾದಿ ಹಲವಾರು ಪಂಥಗಳು ಮತ್ತು ಉಪಪಂಥಗಳ ಅಸ್ತಿತ್ವ. ಈ ಎಲ್ಲ ಉಪಾಸನೆಗಳ ಗುರುಗಳು ಮತ್ತು ಪ್ರವರ್ತಕರು ಜನರ ವಿವಿಧ ಮಾನಸಿಕ ಪ್ರವೃತ್ತಿಗೆ ಅನುಗುಣವಾಗಿ ವಿವಿಧ ಆರಾಧನಾ ರೂಪಗಳನ್ನು ಸ್ಥಾಪಿಸಿದ್ದಾರೆ ಎಂಬುದು. ಮತ್ತು ಕಡೆಯದಾಗಿ, ಇವೆಲ್ಲವೂ ಅಂತಿಮ ಸತ್ಯವನ್ನು ಅರಿಯುವ ಒಂದೇ ಗುರಿಯನ್ನು ಸೂಚಿಸುತ್ತವೆ– ಇದನ್ನು ಬ್ರಹ್ಮ, ಆತ್ಮ, ಶಿವ, ವಿಷ್ಣು, ಈಶ್ವರ, ಅಥವಾ ಶೂನ್ಯ ಅಥವಾ ಮಹಾಶೂನ್ಯ ಎಂದು ವಿವಿಧ ರೀತಿಯಲ್ಲಿ ಕರೆಯಲಾಗಿದೆ'' (ಪುಟ 102).

2. ''Some of the Sikhs, Jains, Lingayats, and Aryasamajists declare that they are separate from Hindus'' (Page 105).
ಅನುವಾದ: ''ಕೆಲವು ಸಿಖ್ಖರು, ಜೈನರು, ಲಿಂಗಾಯಿತರು ಮತ್ತು ಆರ್ಯಸಮಾಜಿಗಳು ತಾವು ಹಿಂದೂಗಳಿಂದ ಪ್ರತ್ಯೇಕವಾಗಿದ್ದೇವೆಂದು ಘೋಷಿಸುತ್ತಾರೆ'' (ಪುಟ 106).

ಗೋಲ್ವಾಲ್ಕರ್ ಅವರು ಈ ಪಂಥಗಳು ಪ್ರತ್ಯೇಕ ಧರ್ಮಗಳು ಎನ್ನುವುದು ಹೇಗೆ ತಪ್ಪು ಎಂದು ಸಿಖ್ ಪ್ರತ್ಯೇಕ ಧರ್ಮದ ಹೋರಾಟವನ್ನು ಉದಾಹರಿಸುತ್ತ ಲೇಖನವನ್ನು ಮುಂದುವರಿಸಿದ್ದಾರೆಯೇ ಹೊರತು ಜಾಮದಾರರು ಹೇಳುವಂತೆ ವೀರಶೈವ ಮತ್ತು ಲಿಂಗಾಯತ ಬೇರೆ ಬೇರೆ ಎಂದು ಈ ಪುಸ್ತಕದಲ್ಲಿ ಎಲ್ಲಿಯೂ ಹೇಳಿಲ್ಲ. ಈ ಪಂಥಗಳು ಹಿಂದೂ ಧರ್ಮದಿಂದಲೂ ಬೇರೆ ಎಂದೂ ಹೇಳಿಲ್ಲ!

ಇರಲಿ, ಐತಿಹಾಸಿಕ ಸತ್ಯಗಳ ಅನಾವರಣಗಳಿಂದ ಕಂಗೆಟ್ಟಿರುವ ಜಾಮದಾರರು ಈ ಸಂದರ್ಶನದಲ್ಲಿ ಆರಾಧ್ಯರು, ಜಂಗಮರು ಬ್ರಾಹ್ಮಣರು ಆದ ಹರಿಹರ, ಪಾಲ್ಕುರಿಕೆ ಸೋಮನಾಥ, 15ನೇ ಶತಮಾನದ ತೋಂಟದ ಸಿದ್ದಲಿಂಗೇಶ್ವರರಾದಿಯಾಗಿ ಎಲ್ಲರನ್ನೂ ವೀರಶೈವ ಪದ ತುರುಕಿದ ಭ್ರಷ್ಟರು ಎಂದು ಆಪಾದಿಸುತ್ತಾರಲ್ಲದೆ ನಂತರದ ಎಲ್ಲಾ ಮಠಾಧೀಶರೂ ಭ್ರಷ್ಟರು ಎನ್ನುತ್ತಾರೆ. ಹೀಗೆಯೇ ವಿಶ್ವವಾಣಿಯ ತಾರ್ಕಿಕ ಸತ್ಯದ ಅನಾವರಣವಾಗುತ್ತ ನಡೆದರೆ ಲಿಂಗಾಯತ ಸನ್ನಿ ಹಿಡಿದಿರುವ ವಿಭಜಕರು ಮುಂದೆ ಚೆನ್ನಬಸವಣ್ಣ, ಅಲ್ಲಮ ಮತ್ತು ಅಂತಿಮವಾಗಿ ವೀರಮಾಹೇಶ್ವರ ಜಂಗಮಪುರುಷ ಬಸವಣ್ಣನು ಸಹ ಭ್ರಷ್ಟ ಎಂದು ಘೋಷಿಸಿ ಜಾಗತಿಕ ಲಿಂಗಾಹತ ಮಹಾಸಭಾಕ್ಕೆ ಅಂತಿಮ ಮೊಳೆ ಹೊಡೆಯುವ ಕಾಲ ದೂರವಿಲ್ಲ ಎನಿಸುತ್ತದೆ.

ಹೀಗೆ ಜಾಗತಿಕ ಲಿಂಗಾಯತ ಮಹಾಸಭಿಕರು ತಮ್ಮ ಪ್ರತಿಯೊಂದು ನಡೆನುಡಿಯಲ್ಲಿ ತಾವು ಬಸವ ತಾಲಿಬಾನಿಗಳು ಎಂದು ಕನ್ನೇರಿ ಶ್ರೀಗಳ ಮಾತನ್ನು ಪುರಾವೆ ಸಮೇತ ಸಾಬೀತುಪಡಿಸುತ್ತಿದ್ದಾರೆಯೇ ಹೊರತು ತಮ್ಮ ಸಂಕಥನಕ್ಕೆ ಒಂದೇ ಒಂದು ಪುರಾವೆ ಕೊಡುತ್ತಿಲ್ಲ. ಬಸವಣ್ಣನ ''ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ'' ಎಂಬ ಪ್ರಾಥಮಿಕ ಶಿಶುವಿಹಾರದ ಏಕೈಕ ವಚನವನ್ನೇ ಅರ್ಥೈಸಿಕೊಳ್ಳದ ಇವರು ಸ್ನಾತಕೋತ್ತರ ಮಟ್ಟದ ಅಲ್ಲಮ ಚೆನ್ನಬಸವಣ್ಣನ ವಚನಗಳನ್ನು ಅರ್ಥೈಸಿಕೊಳ್ಳಬಲ್ಲರೇ ಎಂಬಲ್ಲಿಗೆ ಸಮಗ್ರ ಲಿಂಗಾಯತ ಪ್ರತ್ಯೇಕ ಧರ್ಮದ ವ್ಯಾಖ್ಯಾನ ಲಿಂಗಾಹತವಾಗುತ್ತದೆ. ಅಂದ ಹಾಗೆ ಯಾವುದು ನಿರ್ನಾಮವಾಗುವುದು ಎಂಬುದು ಸ್ಫಟಿಕದಷ್ಟೇ ಸುಸ್ಪಷ್ಟ.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 74

ಬ್ಯಾಂಕಾಕ್, ಮ್ಯಾನ್ಮಾರ್ ತತ್ತರ: 150ಕ್ಕೂ ಹೆಚ್ಚು ಮಂದಿ ಸಾವು | ಈಶಾನ್ಯ ಭಾರತ, ಚೀನಾ, ಬಾಂಗ್ಲಾದಲ್ಲೂ ನಡುಕ

ಏಕಕಾಲದಲ್ಲಿ 4 ದೇಶಗಳಲ್ಲಿ ನಡುಗಿದ ಭೂಮಿ

ಬ್ಯಾಂಕಾಕ್: ಮ್ಯಾನ್ಮಾರ್ ಮತ್ತು ಥಾಯ್ಲೆಂಡ್‌ನಲ್ಲಿ ಶುಕ್ರವಾರ ಸಂಭವಿಸಿದ ಭೂಕಂಪದಲ್ಲಿ ಸಾವಿನ ಸಂಖ್ಯೆ ಏರುತ್ತಲೇ ಇದೆ. ಮಿಲಿಟರಿ ಆಡಳಿತವಿರುವ ಮ್ಯಾನ್ಮಾರ್‌ನಲ್ಲಿ 140ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಥಾಯ್ಲೆಂಡ್‌ನಲ್ಲಿ 20ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ರಾಜಧಾನಿ ಬ್ಯಾಂಕಾಕ್‌ನಲ್ಲಿ ಕುಸಿದು ಬಿದ್ದ ನಿರ್ಮಾಣ ಹಂತದ ಕಟ್ಟಡಗಳಡಿ 90ಕ್ಕೂ ಹೆಚ್ಚು ಮಂದಿ ಸಿಲುಕಿದ್ದಾರೆ. ಭಾರತ, ಚೀನಾ, ಬಾಂಗ್ಲಾ ದೇಶ ಸೇರಿದಂತೆ ಏಷ್ಯಾದ ಆಗ್ನೇಯ ಭಾಗದಲ್ಲಿ ಕಂಪನ ಕಂಡು ಬಂದಿದೆ. ಆದರೆ ಯಾವುದೇ ಸಾವು ನೋವು ವರದಿಯಾಗಿಲ್ಲ.

ರಿಕ್ಟರ್ ಮಾಪಕದಲ್ಲಿ 7.7ರಷ್ಟು ತೀವ್ರತೆ ದಾಖಲಿಸಿದ ಭೂಕಂಪದಲ್ಲಿ ಎರಡೂ ದೇಶಗಳಲ್ಲಿ ನೂರಾರು ಕಟ್ಟಡಗಳು ನೆಲಕಚ್ಚಿವೆ. ಥಾಯ್ ರಾಜಧಾನಿ ಬ್ಯಾಂಕಾಕ್‌ನಲ್ಲಿ ವಾರಾಂತ್ಯದ ರಜೆಗೆ ಜನರು ಸಿದ್ಧತೆ ನಡೆಸುತ್ತಿರುವಾಗಲೇ ಹತ್ತಾರು ಗಗನಚುಂಬಿ ಕಟ್ಟಡಗಳು ಕುಸಿದು ಬಿದ್ದಿವೆ. ಸೇತುವೆಗಳು ಮುರಿದು ಬಿದ್ದಿವೆ. ಮ್ಯಾನ್ಮಾರ್‌ನ ಮಸೀದಿಗಳಲ್ಲಿ ಶುಕ್ರವಾರದ ಪ್ರಾರ್ಥನೆಗೆ ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದರು. ಮ್ಯಾನ್ಮಾರ್‌ನ ಮಂಡಲೆಯಲ್ಲಿ ಮಸೀದಿಯೊಂದು ಕುಸಿದುಬಿದ್ದು, ಕನಿಷ್ಠ 20 ಜನರು ಸಾವನ್ನಪ್ಪಿದ್ದಾರೆ. ಮ್ಯಾನ್ಮಾರ್‌ನ ಮಂಡಲೆ ವಿಶ್ವವಿದ್ಯಾಲಯದಲ್ಲಿ ಬೆಂಕಿ ಅವಘಡ ಮತ್ತು ಭಾರೀ ಹಾನಿ ಸಂಭವಿಸಿದ ವರದಿಯಾಗಿದೆ. ಆಂಗ್‌ಬಾನ್‌ನಲ್ಲಿ ಹೋಟೆಲ್‌ವೊಂದು ಕುಸಿದು ಬಿದ್ದಿದೆ.

ಭೂಕಂಪನದ ತೀವ್ರತೆ 7.7ರಷ್ಟು ದಾಖಲು: ಮ್ಯಾನ್ಮಾರ್‌ನಲ್ಲಿ ಮಧ್ಯಾಹ್ನ 12.50ಕ್ಕೆ ಭಯ ಭೂಮಿ ಕಂಪಿಸಿದೆ. ಭೂಕಂಪದ ಕೇಂದ್ರಬಿಂದು ಮ್ಯಾನ್ಮಾರ್‌ನ ಸಾಗೈಂಗ್ ಪ್ರದೇಶ ಎಂದು ಹೇಳಲಾಗಿದ್ದು, ಇದು ಭೂಮಿಯಿಂದ ಸುಮಾರು 10 ಕಿಲೋಮೀಟರ್ ಕೆಳಗೆ ಇತ್ತು. ಕಂಪನದ ಪ್ರಮಾಣ ರಿಕ್ಟರ್ ಮಾಪನದಲ್ಲಿ 7.7 ತೀವ್ರತೆಯದ್ದಾಗಿತ್ತು. ಇದರಿಂದ ಮಂಡಲೇ ನಗರದ ಐತಿಹಾಸಿಕ ಅವಾ ಸೇತುವೆ ಕುಸಿದಿದೆ. ಮುಂದಿನ 24 ಗಂಟೆಗಳಲ್ಲಿ ಇನ್ನಷ್ಟು ಭೂಕಂಪ ಸಂಭವಿಸುವ ಸಾಧ್ಯತೆ ಇದೆ ಎಂದು ಅಲ್ಲಿನ ಸರಕಾರ ಎಚ್ಚರಿಕೆ ನೀಡಿದೆ. ಭೂಕಂಪ ಹಿನ್ನೆಲೆಯಲ್ಲಿ ಮ್ಯಾನ್ಮಾರ್‌ನಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಗಿದೆ. ಇಲ್ಲಿನ ಸರಕಾರ ಭೂಕಂಪ ಸಂತ್ರಸ್ತರ ನೆರವಿಗೆ ಧಾವಿಸುವಂತೆ ಅಂತಾರಾಷ್ಟ್ರೀಯ ಸಮುದಾಯಕ್ಕೆ ಮೊರೆ ಇಟ್ಟಿದೆ.

ಬ್ಯಾಂಕಾಕ್‌ನಲ್ಲಿ ವಿಮಾನ ಸೇವೆ, ರೈಲು ಸೇವೆ ಸಂಪೂರ್ಣ ಸ್ಥಗಿತಗೊಂಡಿದೆ. ಷೇರುಪೇಟೆ ವಹಿವಾಟುಗಳನ್ನು ರದ್ದುಪಡಿಸಲಾಗಿದೆ. ನಿರ್ಮಾಣ ಹಂತದಲ್ಲಿದ್ದ ಸ್ಕೈಸ್ಕ್ರಾಪರ್ ಪೂರ್ತಿ ನೆಲಕ್ಕೆ ಕುಸಿದಿದ್ದು, ಹತ್ತಾರು ಮಂದಿ ಕಾರ್ಮಿಕರನ್ನು ರಕ್ಷಿಸಲಾಗಿದೆ. 90ಕ್ಕೂ ಹೆಚ್ಚು ಮಂದಿ ಇನ್ನೂ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದಾರೆ ಎನ್ನಲಾಗಿದೆ. ಕಟ್ಟಡಗಳು ನಡುಗುತ್ತಿದ್ದಂತೆ ಸಾವಿರಾರು ಜನರು ರಸ್ತೆಗೆ ಓಡಿ ಬಂದರು. ಹೋಟೆಲ್‌ಗಳು, ಲಕ್ಸುರಿ ರೆಸಾರ್ಟ್‌ಗಳು ಹಾಗೂ ಸ್ವಿಮ್ಮಿಂಗ್ ಪೂಲ್‌ಗಳಲ್ಲಿ ಆರಾಮಾಗಿ ಕಾಲ ಕಳೆಯುತ್ತಿದ್ದವರು ಉಟ್ಟ ಬಟ್ಟೆಯಲ್ಲೇ ಓಡೋಡಿ ಬಂದರು. ಬೃಹತ್ ಕಟ್ಟಡಗಳು ತೂಗುತ್ತಿದ್ದಂತೆ ಮೇಲಿನ ಸ್ವಿಮ್ಮಿಂಗ್ ಪೂಲ್‌ನಿಂದ ನೀರು ಅತ್ತಿತ್ತ ಚೆಲ್ಲುತ್ತಿದ್ದ ವಿಡಿಯೋ ವೈರಲ್ ಆಗಿದೆ. ಭಾರೀ ಕಟ್ಟಡಗಳು ಕುಸಿದು ಬೀಳುತ್ತಿರುವುದು, ನಡುಗುತ್ತಿರುವುದು, ಜನರು ಗಾಬರಿಯಾಗಿ ಓಡುತ್ತಿರುವ ಹಲವು ವಿಡಿಯೋಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಥಾಯ್ಲೆಂಡ್‌ನಲ್ಲಿ 600ಕ್ಕೂ ಹೆಚ್ಚು ಭಾರತೀಯರ ಸ್ಥಳಾಂತರ

ಬ್ಯಾಂಕಾಕ್: 40ಕ್ಕೂ ಹೆಚ್ಚು ಕನ್ನಡಿಗರು ಸುರಕ್ಷಿತ

ಥಾಯ್ ರಾಜಧಾನಿ ಬ್ಯಾಂಕಾಕ್‌ಗೆ ಪ್ರತಿದಿನ ಸಾವಿರಾರು ಭಾರತೀಯ ಪ್ರವಾಸಿಗಳು ಭೇಟಿ ನೀಡುತ್ತಾರೆ. ಭೂಕಂಪದ ವೇಳೆ ಬ್ಯಾಂಕಾಕ್‌ನಲ್ಲಿದ್ದ 42 ಮಂದಿ ಕನ್ನಡಿಗರು ಸೇರಿದಂತೆ 600ಕ್ಕೂ ಹೆಚ್ಚು ಸುರಕ್ಷಿತವಾಗಿದ್ದಾರೆ ಎಂದು ತಿಳಿದು ಬಂದಿದೆ. ಇಲ್ಲಿನ ಅನಂತಾರಾ ಮತ್ತು ಅವನಿ ಹೊಟೆಲ್‌ನಲ್ಲಿ ಹೆಚ್ಚಿನ ಸಂಖ್ಯೆಯ ಭಾರತೀಯರು ವಾಸ್ತವ್ಯ ಹೂಡಿದ್ದರು. ಕಂಪನದ ತೀವ್ರತೆಗೆ ಅವನಿ ಹೊಟೆಲ್‌ನಲ್ಲಿ ಸ್ವಲ್ಪ ಮಟ್ಟಿಗೆ ಬಿರುಕು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಹೊಟೇಲ್ ಸಿಬ್ಬಂದಿ ಇವರನ್ನು ಬೇರೆಡೆ ಸ್ಥಳಾಂತರಿಸಿದ್ದಾರೆ.

ಹಾವೇರಿಯ 22 ಜನ ಸುರಕ್ಷಿತ: ಐದು ದಿನಗಳ ಹಿಂದೆ ಹಾವೇರಿ ಜಿಲ್ಲೆಯ 22 ಜನರು ಬೆಂಗಳೂರಿನಿಂದ ಬ್ಯಾಂಕಾಕ್‌ಗೆ ತೆರಳಿದ್ದರು. ಶುಕ್ರವಾರ ಸಫಾರಿ ವರ್ಲ್ಡ್‌ಗೆ ಹೋಗಿದ್ದ ವೇಳೆ ಭೂಕಂಪನದ ಅನುಭವವಾಗಿದೆ. ಬಳಿಕ, ಕನ್ನಡಿಗರು ಸುವರ್ಣ ಭೂಮಿ ವಿಮಾನ ನಿಲ್ದಾಣಕ್ಕೆ ತಲುಪಿದ್ದಾರೆ. ಬ್ಯಾಂಕಾಕ್‌ನಲ್ಲಿ ಎಲ್ಲರೂ ಸುರಕ್ಷಿತವಾಗಿ ದ್ದೇವೆ. ವಿಮಾನಗಳನ್ನು ಬಿಡುವ ಸಮಯದಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ ಎಂದು ವಿಮಾನ ನಿಲ್ದಾಣದಿಂದ ಐವರು ಕನ್ನಡಿಗರು ವಿಡಿಯೋ ಮಾಡಿ ಪೋಷಕರಿಗೆ ತಿಳಿಸಿದ್ದಾರೆ. ಹಾಸನದಿಂದ ಬ್ಯಾಂಕಾಕ್ ಪ್ರವಾಸಕ್ಕೆ ತೆರಳಿರುವ ರಾಜಶೇಖರ್ ಎಂಬುವರು ತಾವು ಸುರಕ್ಷಿತವಾಗಿರುವುದಾಗಿ ತಿಳಿಸಿದ್ದಾರೆ.

ಭಾರತ ಸಹಾಯ ಹಸ್ತ

ಭೂಕಂಪನದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ, ಥಾಯ್ಲೆಂಡ್ ಮತ್ತು ಮ್ಯಾನ್ಮಾರ್‌ನ ಜನರ ಸುರಕ್ಷತೆಗಾಗಿ ಪ್ರಾರ್ಥಿಸಿದ್ದಾರೆ. ವಿದೇಶಾಂಗ ಸಚಿವಾಲಯವು ಎರಡೂ ರಾಷ್ಟ್ರಗಳ ಸರಕಾರದ ಜೊತೆಗೆ ಸಂಪರ್ಕದಲ್ಲಿದ್ದು, ಸಾಧ್ಯವಾಗುವ ಎಲ್ಲ ನೆರವನ್ನೂ ಕೊಡಲು ಭಾರತವು ಸಿದ್ಧವಿದೆ ಎಂದಿದ್ದಾರೆ. ಇನ್ನು ಏಪ್ರಿಲ್ 3 ಮತ್ತು 4ರಂದು ಥಾಯ್ಲೆಂಡ್‌ನಲ್ಲಿ ನಿಗದಿಯಾಗಿರುವ ಬಿಮಸ್ಟೆಕ್ ಶೃಂಗದಲ್ಲಿ ಪ್ರಧಾನಿ ಮೋದಿ ಭಾಗಿಯಾಗಲಿದ್ದಾರೆ. ಸಮುದ್ರ ಭಾಗದ ಕಾರ್ಯಾಚರಣೆಗಳು, ಆಮದು-ರಫ್ತು ಹಾಗೂ ಪ್ರವಾಸ ಸೇರಿದಂತೆ ಹಲವು ವಲಯಗಳಲ್ಲಿ ಭಾರತ ಮತ್ತು ಥಾಯ್ಲೆಂಡ್ ನಡುವೆ ಉತ್ತಮ ಬಾಂಧವ್ಯವಿದೆ.

ಕನ್ನಡಿಗರ ಸುರಕ್ಷತೆ ಬಗ್ಗೆ ಮಾಹಿತಿ ಪಡೆದ ಸಿಎಂ

ಮ್ಯಾನ್ಮಾರ್ ಹಾಗೂ ಥಾಯ್ಲೆಂಡ್‌ನಲ್ಲಿ ಪ್ರಬಲ ಭೂಕಂಪ ಸಂಭವಿಸಿದ ಹಿನ್ನೆಲೆಯಲ್ಲಿ ಕನ್ನಡಿಗರ ಸುರಕ್ಷತೆ ಬಗ್ಗೆ ಹಿರಿಯ ಅಧಿಕಾರಿಗಳಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ಪಡೆದಿದ್ದಾರೆ. ಇನ್ನು, ಪ್ರವಾಸಕ್ಕೆ ತೆರಳಿರುವ ಕನ್ನಡಿಗರ ಬಗ್ಗೆ ಸರಕಾರ ಮಾಹಿತಿ ಕಲೆ ಹಾಕುತ್ತಿದ್ದು, ಸುರಕ್ಷತೆಗೆ ಗಮನಹರಿಸಿದೆ.

ಏಕಕಾಲದಲ್ಲಿ ಭೂಕಂಪ ಏಕೆ ?

ಭೂಕಂಪಗಳು ಹಲವಾರು ದೇಶಗಳಲ್ಲಿ ಏಕಕಾಲದಲ್ಲಿ ಸಂಭವಿಸಬಹುದು, ವಿಶೇಷವಾಗಿ ಅವು ಭೌಗೋಳಿಕವಾಗಿ ಸಕ್ರಿಯ ಪ್ರದೇಶಗಳಲ್ಲಿ ನೆಲೆಗೊಂಡಿದ್ದರೆ, ಭೂಕಂಪದ ಕೇಂದ್ರಬಿಂದು ಒಂದೇ ಆಗಿದ್ದರೆ, ಕಂಪನಗಳು ಎಷ್ಟು ದೂರದಲ್ಲಿ ಅನುಭವಿಸಲ್ಪಡುತ್ತವೆ ಎಂಬುದು ಅದರ ತೀವ್ರತೆಯನ್ನು ಅವಲಂಬಿಸಿರುತ್ತದೆ. ಅದೇ ಸಮಯದಲ್ಲಿ, ಒಂದು ಸ್ಥಳದಲ್ಲಿ ಭೂಕಂಪ ಸಂಭವಿಸುವುದು ಮತ್ತು ಅದರ ಕಂಪನವನ್ನು ಬೇರೆ ಬೇರೆ ಸ್ಥಳಗಳಲ್ಲಿ ಅನುಭವಿಸುವುದು ಎರಡು ವಿಭಿನ್ನ ಸಂಗತಿ.

ಭೂಕಂಪನ ಸಾಧ್ಯತೆ ಪ್ರದೇಶ

ಪೆಸಿಫಿಕ್ ಮಹಾಸಾಗರದ ರಿಂಗ್ ಆಫ್ ಫೈರ್ ನಂತಹ ಕೆಲವು ಪ್ರದೇಶಗಳು ಭೂಕಂಪನದಿಂದ ಹೆಚ್ಚು ಸಕ್ರಿಯವಾಗಿವೆ. ಈ ಪ್ರದೇಶಗಳಲ್ಲಿ ಭೂಕಂಪಗಳು ಸಂಭವಿಸುವ ಸಾಧ್ಯತೆ ಹೆಚ್ಚು, ಮತ್ತು ಅವು ಬಹು ದೇಶಗಳ ಮೇಲೆ ಪರಿಣಾಮ ಬೀರಬಹುದು. ಇತ್ತೀಚೆಗೆ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದ ಅನುಭವ ಭಾರತ, ಥೈಲ್ಯಾಂಡ್ ಮತ್ತು ಬಾಂಗ್ಲಾದೇಶದಲ್ಲೂ ಸಂಭವಿಸಿದೆ. ಕಳೆದ ಜನವರಿ 7ರಂದು ಟಿಬೆಟ್‌ನ ಶಿಗಾಟ್ಸೆ ನಗರದ ಬಳಿಯ ಟಿಂಗ್ರಿ ಕೌಂಟಿಯಲ್ಲಿ 7.1 ತೀವ್ರತೆಯ ಭೂಕಂಪ ಸಂಭವಿಸಿದಾಗ ಭಾರತ ಮತ್ತು ನೇಪಾಳದಲ್ಲಿ ಕಂಪನದ ಅನುಭವ ಕಂಡು ಬಂದಿತ್ತು.

ನಡುಗಿದ ಈಶಾನ್ಯ ಭಾರತ

ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿನ ಭೂಕಂಪನದ ಅನುಭವ ಭಾರತದಲ್ಲಿ, ಈಶಾನ್ಯ ರಾಜ್ಯಗಳಾದ ಅಸ್ಸಾಂ,ಮೇಘಾಲಯ, ಮಣಿಪುರ, ಅರುಣಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ಮತ್ತು ಕೋಲ್ಕತ್ತಾ ನಗರದಲ್ಲಿ ಕಂಡುಬಂದಿದೆ. ಇಲ್ಲಿಯೂ ಜನರು ತಮ್ಮ ಮನೆಗಳಿಂದ ಭಯದಿಂದ ಹೊರಬಂದಿದ್ದರು. ಮೇಘಾಲಯದ ಪೂರ್ವ ಗರೊ ಪರ್ವತ ಶ್ರೇಣಿಯಲ್ಲಿ ಕಂಪನದ ಅನುಭವವಾಗಿದೆ. ಮಣಿಪುರದಲ್ಲೂ ಭೂಕಂಪದ ಅನುಭವವಾಗಿದ್ದು, ಜನರು ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಯಾವುದೇ ಹಾನಿಯ ಕುರಿತು ವರದಿಯಾಗಿಲ್ಲ. ಬಾಂಗ್ಲಾದೇಶದ ಢಾಕಾ ಮತ್ತು ಚಟ್ಟೋಗ್ರಾಮ ಸೇರಿದಂತೆ ವಿವಿಧ ಭಾಗಗಳಲ್ಲಿ ಭೂಕಂಪ ಸಂಭವಿಸಿದೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **21.04.2025 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ www.janabank.com ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	47510670000037	ಆನಂದ್ ಬಾಬು ವಿ	286.15
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.140, ಎಲ್, ಹೆಚ್‌ಎಸ್‌ಆರ್ ಲೇಔಟ್ 5ನೇ ಮೈನ್ 6ನೇ ಸೆಕ್ಟರ್, ಬೆಂಗಳೂರು–560034, ಭಾರತ			
2	31838730053756	ಗೀತಾ ಜಿ ಗಂಗಾಧರ್	6
3	31838730053720	ಸರಿತ ಪ್ರಸಾದ್ ಕೃಷ್ಣ ಪ್ರಸಾದ್	4.8
4	31838730053641	ನೂರ್‌ಜಹಾನ್ ನೂರ್‌ಜಹಾನ್ ಸೈಯ್ಯದ್ ಅಮೀರ್	11.8
5	31838730053615	ಗೀತಾ ಜಿ ಗಂಗಾಧರ್	8.5
6	31838730053374	ಶಿವಮ್ಮ	4
7	31838730053309	ವಿಶಾಲಾಕ್ಷಿ ಬಸವರಾಜು	12.7
8	31838730053285	ನಾಗರಾಜು ಡಿ	30.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ದೇನಾ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು–560061.			
9	32568730026290	ಮಂಜೇಶ ವೈ	6.9
10	32568730026110	ಮೀನಾಕ್ಷಿ ಸೌಂದರ್ಯ ರಾಜ್	14.8
11	32568730025614	ಮುನಿರತ್ನಮ್ಮ ಎಸ್	19.3
12	32568730025590	ಪುಷ್ಪಾ ಗಿರೀಶ್	46.1
13	32568730025475	ಜಿ ಯಶವಂತ್	6.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಕೆಸ್‌ಆರ್‌ಟಿಸಿ ಬಸ್ ನಿಲ್ದಾಣ, ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಹತ್ತಿರ ಬೆಂಗಳೂರು–562106.			
14	31138730058177	ಖಾಸಿಂಸಾಬ್ ಶೇಕ್	12.1
15	31138730058151	ಅಪ್ಪಾಸಾಹೇಬ್ ದೆಂಗಣ್ಣನವರ್	2.9
16	31138730057520	ಪಂಕಜ್ ಕಾಳೆ	4.8
17	31138730055511	ಅಬೀದಾ ಶೇಕ್	4.9
18	31138730055307	ರಹಿಮುನ್ನೀಸಾ ಬಗ್ವಾನ್	22.1
19	31138730055283	ಶಬಾನಾ ಉಸ್ಮಾನ್	4.9
20	31138730055244	ಕಿಶನ್ ಕೇತು ಪವಾರ್	5.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ–586101			
21	31128160003568	ನಾಗರತ್ನಮ್ಮ	34.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880–343/342/344, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ–577202.			
22	31988730031605	ಚಿಗದ್ಲಿ ಬಸವರಾಜ	6.4
23	31988730031594	ಜೈನಾಬ್	3.2
24	31988730031571	ಅಬ್ದುಲ್	12.3
25	31988730031440	ಕೆ ಗವಿ ಪ್ರಕಾಶ್	3.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಅಕ್ಷಯ ಸ್ಕ್ವೇರ್, ಗಾಂಧಿ ನಗರ ಮುಖ್ಯ ರಸ್ತೆ, ಸರ್ಕಾರಿ ಆಸ್ಪತ್ರೆ ಎದುರು, ಬಳ್ಳಾರಿ–583103			
26	33818730029818	ಕೆ ಎನ್ ಮಲ್ಲಮ್ಮ	4.1
27	33818730028611	ವೀಣಾ ಗುಡ್ಡಪ್ಪ	4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ–577004			
28	34018730024362	ಸೈಯ್ಯದ್ ಅರ್ಶಿಯ ನಿಡ ಎಸ್	11.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007–ಡಬ್ಲ್ಯು0377–73–1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು–560092			
29	33878730042622	ಅಕ್ವೀಲ್ ಅಹಮದ್	4.1
30	33878730041520	ಶಿಲ್ಪ ಆರ್ ಶಿಲ್ಪ ಆರ್	12
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14–23–33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು–560086.			
31	32508730044082	ಸೈಯ್ಯದ್ ತಬ್ರಿಝ್	7.3
32	32508730043307	ರಾಜೇಶ್ ಎಸ್	9.1
33	32508730043260	ರಾಜೇಶ್ ಎಸ್	17.3
34	32508730043194	ವೆಂಕಟೇಶ್ ಕೆ	31.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ ಬೆಂಗಳೂರು, ಕರ್ನಾಟಕ, ಪಿನ್–560068			
35	30138730033831	ಮೋಹನ್ ಗಾಂಧಿ	2.6
36	30138730033818	ಮುನಿರತ್ನ ತಿಮ್ಮರಾಯಪ್ಪ	2.9
37	30138730033541	ಎ ಜೆನಿತ್ ಪ್ರವೀಣ ಪಡುವೈ ಅಲೆಕ್ಸಾಂಡರ್	5.3
38	30138730032692	ನಸಿಮಾ ಚಾಂದ್ ಬಾಶಾ	12.69
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #5ಸಿ–408, ಯೋಗ ಸ್ಪಂದನ ಕಾಂಪ್ಲೆಕ್ಸ್ 1ನೇ ಮಹಡಿ, ಡಿ ಮಾರ್ಟ್ ಎದುರು, ಎನ್‌ಜಿಇಎಫ್ ಲೇಔಟ್‌ನ ಪೂರ್ವ, ರಾಮಮೂರ್ತಿನಗರ ಮುಖ್ಯ ರಸ್ತೆ. ಬೆಂಗಳೂರು–560016.			
39	33638730058246	ಮಂಜುಳ	6.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, 2/1, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು–560023.			
40	33458730025601	ಕವಿತ ಜೋಹನ್ ಹೊಸ್ವಾ	15.64
41	33458730025548	ವಿಜಯ್ ಎಮ್	4.05
42	33458730025509	ಬಾಂಧವ್ಯ ಎಸ್	12.09
43	33458730024752	ಎಸ್ ವೇಣುಗೋಪಾಲ್	11.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ ಮೈಸೂರು–570017.			
44	32018730006512	ಸದ್ದಾಂಹುಸೇನ್ ಕಲೀಫಾನವರ್	4.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ್, ಬಾಗಲಕೋಟೆ–587101, ದೂ: 08354–225452			
45	30948730020629	ಮಾಲಾ ಗೋವಿಂದ	5
46	30948730020579	ರಮ್ಯ ಕೆ ಡಿ	3.6
47	30948730020566	ಮನೋಜ್ ಎಸ್	6.4
48	30948730020540	ಹರೀಶ್ ಕುಮಾರ್ ಎಮ್ ಆರ್	5.4
49	30948730020501	ಎಸ್ ಸರಸ್ವತಿ	4.4
50	30948730020477	ರಾಜೇಶ್ವರಿ ಎಸ್	33.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು–570009.			
51	46988730035761	ರಘು ಎಮ್	9.4
52	46988730035593	ಜಯಮಾಲಿನಿ ಚಿಕ್ಕ ಹನುಮನಪ್ಪ	12
53	46988730034883	ಮಂಜುನಾಥ ಎಮ್ ಎಲ್	3.5
54	46988730034818	ಮುರಳಿ ವಿ ಸಿ	4
55	46988160004874	ಮಮ್ತಾಜ್ ಶಫಿ	23.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಡೋರ್ ನಂ. 66, ಖಾತಾ ನಂ.865/66 ರೋಜಿಪುರ ಗ್ರಾಮ, ಕಸಬಾ ಹೋಬಳಿ, ನಂದಿನಿ ಆಸ್ಪತ್ರೆ ಹತ್ತಿರ, ದೊಡ್ಡಬಳ್ಳಾಪುರ, ಬೆಂಗಳೂರು–561203			
56	31768730017931	ಪ್ರೇಮ್ ಕುಮಾರ್ ಗಣ್‌ಪತಿ	4.3
57	31768730017740	ಸಾಗರ್ ಎಮ್	3.8
58	31768730017088	ಮಾರುತಿ ಶಂಕರ್ ಶಂಕರ್	9
59	31768160002513	ಜ್ಯೋತಿ ರಾಜು	12.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಲಕ್ಷ್ಮಿ ಇಂಟರ್‌ನ್ಯಾಷನಲ್ ಹೋಟೆಲ್ ಕೆಳಭಾಗ, ಶಿವನಗರ, ಬೀದರ್–585401.			
60	31788730016675	ಶೋಭಾ	6
61	31788730016586	ಕೇಶವಮೂರ್ತಿ	4.31
62	31788730016550	ಸೋಮಶೇಖರ್ ಟಿ ತಿಮ್ಮಯ್ಯ	4.54
63	31788730016521	ಅಮೀನಾ ಹೆಚ್ ಎನ್	3.41
64	31788730015863	ಮುನ್ನೀರ್‌ಬಾನು ಶೇಕ್ ರಶೀದ್	11.09
65	31788160011631	ರವಿ ಎಮ್ ಸಿ	15.08
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8–1–501–66, ವಾರ್ಡ್ ನಂ.8–ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ–573201, ಕರ್ನಾಟಕ.			
66	45488730014912	ಸುಗಮ್ಮ	4.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101, ಭಾರತ			
67	45468730014361	ಸುದರ್ಶನ್ ಬಿ	29.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಹಾಜೀ ಬಾಶಾ ಸಾಬ್ ಆರ್ಕೇಡ್–1, ಆಸ್ತಿ ನಂ.399/707/1786 ವಾರ್ಡ್ ನಂ.27, ಗಂಗೋತ್ರಿ ರಸ್ತೆ, ತುಮಕೂರು–572101.			
68	45458730024782	ಮಲ್ಲಿಕಾರ್ಜುನ್	5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2–907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ– 590003.			
69	45398730005224	ಸಿದ್ದವ್ವ ಸಂತೋಷ್ ದಂಡಾವರ್	10
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಯುನಿಕ್ ಟವರ್ ಬಿಗ್ ಬಜಾರ್ ಹತ್ತಿರ, ಎಕ್ಸಿಸ್ ಬ್ಯಾಂಕ್ ಎದುರು, ಖಾನಾಪುರ ರಸ್ತೆ, ಅಂಗೋಳ್ ಎಕ್ಸ್‌ಟೆನ್ಶನ್ ಬೆಳಗಾವಿ, ಕರ್ನಾಟಕ–590003			
70	45448730005384	ಶೈನಾಜ್‌ಬೇಗಂ ಹವಲ್ದಾರ್	4
71	45448730005319	ಕಸ್ತೂರಿ ಜಿ	3.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮೆಝುನೈನ್ ಮತ್ತು 1ನೇ ಮಹಡಿ, ಡೋರ್ ನಂ.#00 ಉಣಕಲ್ ಗ್ರಾಮ, ವಿದ್ಯಾನಗರ, ಹುಬ್ಬಳ್ಳಿ ತಾಲೂಕು, ಧಾರವಾಡ ಕರ್ನಾಟಕ–580021			
72	30198730037549	ಕೆ ರವಿ	22.4
73	30198730037523	ಸಿಂಧು ಕೆ ಕಾರ್ನಿಕ್ ರಾಜ್	4
74	30190670000011	ಸಗವ್ಯ ಮೇರಿ	136.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು–560027.			
75	46658160002968	ಕರ್ಣ ಕುಮಾರ್ ಡಿ ಎಮ್	28.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735/5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು–562110.			
76	31888730027341	ತಬಸ್ಸುಮ್ ಬಾನು	4.1
77	31888730025421	ಯಾಸ್ಮಿನ್ ತಾಜ್	5.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85–6–22 ಸರ್ವಜ್ಞನಗರ, #01 ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005.			

ಸ್ಥಳ: ಕರ್ನಾಟಕ
ದಿನಾಂಕ: 29.03.2025

ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

156 ಎಲ್‌ಸಿಎಚ್ ಪ್ರಚಂಡ್ ಹೆಲಿಕಾಪ್ಟರ್ ಖರೀದಿಗೆ ಸೇನೆ ಒಪ್ಪಂದ

ಎಚ್‌ಎಎಲ್‌ಗೆ 62,000 ಕೋಟಿ ರು. ಗುತ್ತಿಗೆ

ದೆಹಲಿ: ಭಾರತೀಯ ಸೇನೆ ಮತ್ತು ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್ ನಡುವೆ ಅತೀ ದೊಡ್ಡ ರಕ್ಷಣಾ ಒಪ್ಪಂದ ಏರ್ಪಟ್ಟಿದೆ. ಭಾರತ ಸರ್ಕಾರವು 62,000 ಕೋಟಿ ರು. ಮೌಲ್ಯದ 156 ಎಲ್‌ಸಿಎಚ್ ಪ್ರಚಂಡ್ ಹೆಲಿಕಾಪ್ಟರ್‌ಗಳನ್ನು ಖರೀದಿಸಲು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದೆ, ಆ ಮೂಲಕ ಇದುವರೆಗಿನ ಅತಿದೊಡ್ಡ ರಕ್ಷಣಾ ಒಪ್ಪಂದ ಎಂಬ ಕೀರ್ತಿಗೆ ಇದು ಪಾತ್ರವಾಗಿದೆ.

ಭಾರತವು ಸರಕಾರವು ಶುಕ್ರವಾರ ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್‌ನಿಂದ ಭಾರತೀಯ ಸೇನೆ ಮತ್ತು ವಾಯುಪಡೆಗಾಗಿ 156 ನಿರ್ಮಿತ ಲೈಟ್ ಕಾಂಬ್ಯಾಟ್ ಪ್ರಚಂಡ್ ಹೆಲಿಕಾಪ್ಟರ್‌ಗಳನ್ನು ಖರೀದಿಸಲು ತನ್ನ ಅತಿದೊಡ್ಡ ರಕ್ಷಣಾ ಒಪ್ಪಂದಕ್ಕೆ ಅನುಮೋದನೆ ನೀಡಿದೆ. ಈ ಒಪ್ಪಂದವು 62,000 ಕೋಟಿ ರು. ಮೌಲ್ಯದ್ದಾಗಿದ್ದು, ಸುಕ್ರವಾರ ನಡೆದ ಸಭೆಯಲ್ಲಿ ಭದ್ರತೆ ಕುರಿತ ಸಂಪುಟ ಸಮಿತಿಯು ಈ ನಿರ್ಧಾರವನ್ನು ತೆಗೆದುಕೊಂಡಿದೆ.

ಕರ್ನಾಟಕದಲ್ಲಿ ನಿರ್ಮಾಣ: ಜೂನ್ 2024ರಲ್ಲಿ, ಎಚ್‌ಎಎಲ್ 156 ಲೈಟ್ ಕಾಂಬ್ಯಾಟ್ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಪಡೆದಿತ್ತು. ಈ 156 ಹೆಲಿಕಾಪ್ಟರ್‌ಗಳಲ್ಲಿ 90 ಭಾರತೀಯ ಸೇನೆಗೆ ಮತ್ತು 60 ಭಾರತೀಯ ವಾಯುಪಡೆಗೆ ಹಂಚಿಕೆಯಾಗುತ್ತವೆ, ಈ ಹೆಲಿಕಾಪ್ಟರ್‌ಗಳನ್ನು ಕರ್ನಾಟಕದ ಎಚ್‌ಎಎಲ್‌ನ ತುಮಕೂರು ಘಟಕದಲ್ಲಿ ತಯಾರಿಸಲಾಗುತ್ತದೆ.

156 ಚಾಪರ್‌ಗಳನ್ನು ಚೀನಾ ಮತ್ತು ಪಾಕಿಸ್ತಾನ ಗಡಿಗಳಲ್ಲಿ ಕಾರ್ಯಾಚರಣೆಗಾಗಿ ಭಾರತೀಯ ಸೇನೆ ಮತ್ತು ಭಾರತೀಯ ವಾಯುಪಡೆಯ ನಡುವೆ ವಿಂಗಡಿಸಲಾಗುವುದು ಮತ್ತು ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ದೇಶದೊಳಗೆ ಏರೋಸ್ಪೇಸ್ ಪರಿಸರ ವ್ಯವಸ್ಥೆಯನ್ನು ವಿಸ್ತರಿಸುವ ಪ್ರಮುಖ ಹೆಜ್ಜೆಯಾಗಿದೆ ಎಂದು ರಕ್ಷಣಾ ಮೂಲಗಳು ತಿಳಿಸಿವೆ.

ಸಿಯಾಚಿನ್, ಲಡಾಖ್‌ನಲ್ಲಿ ಹಾರಾಟ ಸಾಮರ್ಥ್ಯ

ಎಲ್‌ಸಿಹೆಚ್‌ಲೈಟ್ ಕಾಂಬ್ಯಾಟ್ ಪ್ರಚಂಡ್ ಹೆಲಿಕಾಪ್ಟರ್‌ಗಳು 5,000ರಿಂದ 16,400 ಅಡಿ ಎತ್ತರದಲ್ಲಿ ಇಳಿಯುವ ಮತ್ತು ಟೇಕ್ ಆಫ್ ಮಾಡುವ ಸಾಮರ್ಥ್ಯವಿರುವ ಏಕೈಕ ದಾಳಿ ಹೆಲಿಕಾಪ್ಟರ್‌ಗಳಾಗಿದ್ದು, ಸಿಯಾಚಿನ್ ಹಿಮನದಿ ಮತ್ತು ಪೂರ್ವ ಲಡಾಖ್‌ನ ಎತ್ತರದ ಪ್ರದೇಶಗಳಲ್ಲಿ ಕಾರ್ಯಾಚರಣೆಗೆ ಸೂಕ್ತವಾಗಿದೆ. ಈ ಹೆಲಿಕಾಪ್ಟರ್‌ಗಳು ಆಕಾಶದಿಂದ ನೆಲಕ್ಕೆ ಮತ್ತು ಆಕಾಶದಲ್ಲಿಯೇ ಕ್ಷಿಪಣಿಗಳನ್ನು ಹಾರಿಸುವ ಸಾಮರ್ಥ್ಯವನ್ನು ಕೂಡ ಹೊಂದಿದೆ. ಅವುಗಳನ್ನು ಡೇಟಾ ಚಿಪ್‌ಗಳೊಂದಿಗೆ ಸಂಯೋಜಿಸಲಾಗಿದ್ದು, ಇದು ನೆಟ್‌ವರ್ಕ್ ಕೇಂದ್ರಿತ ಕಾರ್ಯಾಚರಣೆಗಳಲ್ಲಿ ಭಾಗವಹಿಸುವ ಸಾಮರ್ಥ್ಯವನ್ನು ನೀಡುತ್ತದೆ.

ಬಂಗಾಳಕ್ಕೆ ಬಂದು ಚುನಾವಣೆ ಎದುರಿಸಿ ಎಂದ ಮಮತಾ

ಲಂಡನ್‌ನಲ್ಲಿ ದೀದಿ ಭಾಷಣಕ್ಕೆ ಅಡ್ಡಿ

ಹೊಸದಿಲ್ಲಿ: 2023ರ ಸ್ಥಳೀಯ ಚುನಾವಣೆ ವೇಳೆ ಟಿಎಂಸಿ ನಡೆಸಿರುವ ಹಿಂಸಾಚಾರದಲ್ಲಿ 60 ಜನರು ಸಾವನ್ನಪ್ಪಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಹೆಣ್ಮಕ್ಕಳಿಗೆ ರಕ್ಷಣೆ ಇಲ್ಲ, ಆರ್.ಜಿ.ಕರ್ ಕಾಲೇಜಿನ ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತರಿಗೆ ನ್ಯಾಯ ದೊರೆತಿಲ್ಲ , ಬಂಗಾಳಕ್ಕೆ ಹಿಂತಿರುಗಿ ಎಂದು ಪೋಸ್ಟರ್ ಹಿಡಿದು ಲಂಡನ್‌ನಲ್ಲಿ ಮಮತಾ ಬ್ಯಾನರ್ಜಿ ಭಾಷಣಕ್ಕೆ ವಿದ್ಯಾರ್ಥಿಗಳು ಅಡ್ಡಿಪಡಿಸಿದ ಘಟನೆ ನಡೆದಿದೆ.

ಲಂಡನ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಕೆಲ್ಲಾಗ್ ಕಾಲೇಜಿನಲ್ಲಿ ಸಿಎಂ ಮಮತಾ ಬ್ಯಾನರ್ಜಿ 'ಬಂಗಾಳದಲ್ಲಿ ಮಹಿಳಾ ಸಬಲೀಕರಣ ಮತ್ತು ಅದರ ಯಶಸ್ಸು' ವಿಚಾರದ ಮೇಲೆ ಭಾಷಣ ಮಾಡುತ್ತಿದ್ದರು. ಈ ಮಧ್ಯೆ ಪೋಸ್ಟರ್ ಹಿಡಿದು ಎದ್ದು ನಿಂತು ವಿದ್ಯಾರ್ಥಿಗಳು ಘೋಷಣೆ ಕೂಗಿದರು. ಎಷ್ಟೇ ಗದ್ದಲ ಎಬ್ಬಿಸಿದರೂ, ಕ್ಯಾರೆ ಎನ್ನದೇ ತಮ್ಮ ಭಾಷಣವನ್ನು ಮುಂದುವರಿಸಿದರು. ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ ಮತ್ತು ಬಿಸಿಸಿಐನ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಸಹ ಸಭೆಯಲ್ಲಿದ್ದರು.ಈ ವಿಡಿಯೋ ಸೋಶಿಯಲ್ ಮೀಡಿಯಾಗಳಲ್ಲಿ ಭಾರೀ ಸದ್ದು ಮಾಡುತ್ತಿದೆ.

ರಾಜ್ಯಕ್ಕೆ ಬಂದು ರಾಜಕೀಯ ಮಾಡಿ: ಪ್ರತಿಭಟನಾಕಾರರು ಜಾದವ್‌ಪುರ ವಿಶ್ವವಿದ್ಯಾಲ ಯದ ಘಟನೆಯ ಬಗ್ಗೆಯೂ ಪ್ರಸ್ತಾಪಿಸಿದರು. ' ಇದಕ್ಕೆ ಭಾಷಣದಲ್ಲಿಯೇ ಉತ್ತರ ನೀಡಿದ ಮಮತಾ, ನನ್ನನ್ನು ಅವಮಾನಿಸುವ ಮೂಲಕ ನಿಮ್ಮ ಸಂಸ್ಥೆಗೆ ಅವಮಾನ ಮಾಡಬೇಡಿ. ನಾನು ದೇಶದ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿದ್ದೇನೆ. ನಿಮ್ಮ ದೇಶ ವನ್ನು ಅವಮಾನಿಸಬೇಡಿ. ಆರ್‌ಜಿ ಕರ್ ಕಾಲೇಜಿನ ಕೇಸ್ ಕೇಂದ್ರ ಸರಕಾರದ ಕೈಲಿದೆ. ನಮ್ಮ ಕೈಲಿ ಏನು ಇಲ್ಲ'ಎಂದು ಪ್ರತಿಭಟನಾಕಾರರಿಗೆ ಹೇಳಿದರು.

ಇಲ್ಲಿ ರಾಜಕೀಯ ಮಾಡಬೇಡಿ. ಇದು ರಾಜಕೀಯ ವೇದಿಕೆಯಲ್ಲ, ನನ್ನ ರಾಜ್ಯಕ್ಕೆ ಬಂದು ನನ್ನೊಂದಿಗೆ ರಾಜಕೀಯ ಮಾಡಿ. ಬಂಗಾಳಕ್ಕೆ ಬಂದು ನಿಮ್ಮ ಪಕ್ಷ ಬಲಪಡಿಸಿಕೊಂಡು ಹೋರಾಟ ಮುಂದುವರೆಸಿ, ಆಗ ನೀವು ನಮ್ಮೊಂದಿಗೆ ಹೋರಾ ಡಬಹುದು ಎಂದು ಮಮತಾ ಸವಾಲೆಸೆದರು.

ಪ್ರತಿಭಟನಾಕಾರರನ್ನು ಹೊರಗಡೆ ಕಳುಹಿಸಿ, ಅನಿರೀಕ್ಷಿತ ಘಟನೆಗೆ ಆಯೋಜಕರು ಮುಖ್ಯಮಂತ್ರಿಯವರಿಗೆ ವಿಷಾದ ವ್ಯಕ್ತಪಡಿಸಿದರು. ಆನಂತರ ಮಾತನಾಡಿದ ಮಮತಾ ಬ್ಯಾನರ್ಜಿ 'ನನ್ನನ್ನು ಮತ್ತೆ ಮತ್ತೆ ಇಲ್ಲಿಗೆ ಬರಲು ಪ್ರೋತ್ಸಾಹಿಸಿದ್ದೀರಿ. ನೆನಪಿಡಿ, ದೀದಿಗೆ ಯಾರ ಬಗ್ಗೆಯೂ ಭಯವಿಲ್ಲ, ದೀದಿ ರಾಯಲ್ ಬೆಂಗಾಲ್ ಟೈಗರ್‌ನಂತೆ ನಡೆಯುತ್ತಾಳೆ. ಸಾಧ್ಯವಾದರೆ ನನ್ನನ್ನು ಹಿಡಿಯಲು ಪ್ರಯತ್ನಿಸಿ' ಎಂದು ಹೇಳಿದರು.

ಸಾಯುವ ಮೊದಲು ಏಕತೆ ನೋಡ ಬಯಸುವೆ

ಮಮತಾ ಬ್ಯಾನರ್ಜಿ ಆಡಳಿತದಲ್ಲಿ ತಾರತಮ್ಯ ಇರುವುದಿಲ್ಲ, ಸಮಾಜದ ಎಲ್ಲಾ ವರ್ಗಗಳ ಕಲ್ಯಾಣಕ್ಕೆ ಆದ್ಯತೆ ನೀಡಲಾಗುತ್ತದೆ. ನಾನು ಸಾಯುವ ಮೊದಲು ಏಕತೆಯನ್ನು ನೋಡಲು ಬಯಸುತ್ತೇನೆ. ಏಕತೆ ನಮ್ಮ ಶಕ್ತಿ, ಮತ್ತು ವಿಭಜನೆ ನಮ್ಮ ಪತನಕ್ಕೆ ಕಾರಣವಾಗುತ್ತದೆ ಹೀಗೆಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಏಕತೆಯನ್ನು ಕಾಪಾಡಿಕೊಳ್ಳುವುದು ಕಷ್ಟದ ಕೆಲಸ. ನಾನು ಕುರ್ಚಿಯಲ್ಲಿದ್ದಾಗ, ಸಮಾಜವನ್ನು ವಿಭಜಿಸಲು ಸಾಧ್ಯವಿಲ್ಲ, ನಾವು ಎಲ್ಲಾ ಧರ್ಮಗಳು, ಜಾತಿಗಳು ಮತ್ತು ಪಂಥಗಳಿಗಾಗಿ ಒಟ್ಟಾಗಿ ಕೆಲಸ ಮಾಡಬೇಕು ಎಂದು ಭಾಷಣದ ಮಧ್ಯೆಮಮತಾ ಹೇಳಿದರು.

ವಿಮೋಚನಾ ದಿನದಂದೇ ಚೀನಾಗೆ ಬಾಂಗ್ಲಾ ಪ್ರಧಾನಿ

ಢಾಕಾ: ಬಾಂಗ್ಲಾದೇಶದ ವಿಮೋಚನಾ ದಿನದಂದು ಶುಭ ಹಾರೈಸಿ ಪ್ರಧಾನಿ ಮೋದಿ ಅಲ್ಲಿನ ಹಂಗಾಮಿ ಪ್ರಧಾನಿ ಮಹಮದ್ ಯೂನಸ್ ಪತ್ರ ಬರೆದ ಬೆನ್ನಲ್ಲೇ, ಯೂನಸ್ ಈ ದಿನವನ್ನು ಕಡೆಗಣಿಸಿ ಚೀನಾಕ್ಕೆ ತೆರಳಿ ದ್ದಾರೆ. ಈ ಮೂಲಕ ವಿಮೋಚನಾ ಚಳ ವಳಿಯಲ್ಲಿ ಭಾರತದ ನೆರವನ್ನು ಧಿಕ್ಕರಿಸಿ ಚೀನಾ ಪರ ನಿಲ್ಲುವ ಸೂಚನೆ ನೀಡಿದೆ. ಯೂನಸ್ ದಾವೋಸ್, ಅಮೆರಿಕ ಮತ್ತು ಕೈರೋ ಪ್ರವಾಸದ ಬಳಿಕ ಚೀನಾಗೆ ತೆರಳಿದ್ದಾರೆ. ಚೀನಾ ಅಧ್ಯಕ್ಷ ಕ್ಷಿ ಜಿನ್‌ಪಿಂಗ್ ಅನ್ನು ಈ ವೇಳೆ ಮಹಮದ್ ಯೂನಸ್ ಭೇಟಿಯಾಗಲಿದ್ದು, ವಿದೇಶಾಂಗ ವ್ಯವಹಾರಗಳು, ವಿದ್ಯುತ್, ಇಂಧನ, ಖನಿಜ, ರಸ್ತೆ ಸಾರಿಗೆ ಮತ್ತು ಸೇತುವೆಗಳು ಮತ್ತು ರೈಲ್ವೆ ಸಂಬಂಧ ಭಾರೀ ಒಪ್ಪಂದಗಳು ನಡೆಯುವ ಸಾಧ್ಯತೆ ದಟ್ಟವಾಗಿದೆ. ಬೀಜಿಂಗ್ ಕಳುಹಿಸಿದ ಚೀನಾದ ಚಾರ್ಟರ್ಡ್ ವಿಮಾನದಲ್ಲಿ ಮುಹಮ್ಮದ್ ಯೂನಸ್ ಚೀನಾಗೆ ತೆರಳಿರುವುದು ಉಭಯ ದೇಶಗಳ ನಡುವಿನ ಸಂಬಂಧ ಬೆಳೆಯುತ್ತಿರುವ ಸ್ಪಷ್ಟ ಸಂದೇಶವಾಗಿದೆ.

ಕಮ್ರಾಗೆ ಜಾಮೀನು

ಚೆನ್ನೈ: ಮಹಾರಾಷ್ಟ್ರ ಉಪ ಮುಖ್ಯ ಮಂತ್ರಿ ಏಕನಾಥ್ ಶಿಂಧೆ ವಿರುದ್ಧ ನಿಂದನಾ ತ್ಮಕ ಹೇಳಿಕೆ ನೀಡಿದ ಆರೋಪ ಎದುರಿಸುತ್ತಿ ರುವ ಸ್ಟ್ಯಾಂಡಪ್ ಕಮಿಡಿಯನ್ ಕುನಾಲ್ ಕಮ್ರಾ ಅವರಿಗೆ ಮದ್ರಾಸ್ ಹೈಕೋರ್ಟ್ ಶುಕ್ರವಾರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಕಮ್ರಾ ವಿರುದ್ಧ ಮುಂಬಯಿನಲ್ಲಿ ಎಫ್‌ಐಆರ್ ದಾಖಲಾಗಿದೆ.

ತೆರಿಗೆ ಪಾವತಿಗೆ ಅವಕಾಶ

ಬೆಂಗಳೂರು: ವಾಣಿಜ್ಯ ತೆರಿಗೆ ಪಾವತಿಸಲು ಮಾ.30 ಮತ್ತು 31 ರಂದು ವಾಣಿಜ್ಯ ತೆರಿಗೆ ಇಲಾಖೆ ವಿಶೇಷ ಅವಕಾಶ ಕಲ್ಪಿಸಿಕೊಟ್ಟಿದೆ. ಆರ್ಥಿಕ ವರ್ಷಾಂತ್ಯದ ಸದರಿ ದಿನಗಳು ಸಾರ್ವತಿಕ ರಜಾಗಳಾಗಿದ್ದರೂ ತೆರಿಗೆ ಪಾವತಿದಾರರಿಗೆ ಅನುಕೂಲ ಮಾಡಿಕೊಡಲು ವಾಣಿಜ್ಯ ತೆರಿಗೆ ಇಲಾಖೆಯ ಎಲ್ಲಾ ಕಚೇರಿಗಳು ಕಾರ್ಯನಿರ್ವಹಿಸಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕಡ್ಡಾಯ ಶುಲ್ಕ ವಸೂಲಿ ಸಲ್ಲ: ದೆಹಲಿ ಹೈಕೋರ್ಟ್ ಮಹತ್ವದ ತೀರ್ಪು

ಹೋಟೆಲ್‌ಗಳಲ್ಲಿ ಸೇವಾ ಶುಲ್ಕಕ್ಕೆ ಬ್ರೇಕ್

ಹೊಸದಿಲ್ಲಿ: ದೇಶಾದ್ಯಂತ ಯಾವುದೇ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರಿಗೆ ಒತ್ತಾಯಪೂರ್ವಕವಾಗಿ ಸೇವಾ ಶುಲ್ಕ ವಿಧಿಸುವಂತಿಲ್ಲ ಎಂದು ದೆಹಲಿ ಹೈಕೋರ್ಟ್ ಶುಕ್ರವಾರ ಮಹತ್ವದ ತೀರ್ಪು ನೀಡಿದೆ. ಮೂಲಕ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ಎತ್ತಿ ಹಿಡಿದಿದೆ.

ಹೋಟೆಲ್‌ಗಳಲ್ಲಿ ಮತ್ತು ರೆಸ್ಟೋರೆಂಟ್‌ಗಳಲ್ಲಿ ವಿಧಿಸಲಾಗುತ್ತಿದ್ದ ಸೇವಾ ಶುಲ್ಕ ನಿಷೇಧಿಸಿ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ 2019ರ ಕಾನೂನಿನ ಅನ್ವಯ ಈ ಹಿಂದೆ ಮಾರ್ಗಸೂಚಿ ಹೊರಡಿಸಿತ್ತು. ಆದರೆ, ನ್ಯಾಷನಲ್ ರೆಸ್ಟೋರೆಂಟ್ ಅಸೋಸಿಯೇಷನ್ ಆಫ್ ಇಂಡಿಯಾ ಮತ್ತು ಫೆಡರೇಶನ್ ಆಫ್ ಹೋಟೆಲ್, ರೆಸ್ಟೋರೆಂಟ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಘಟನೆಗಳು ಇದನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದವು.

ಇದರ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್, ಸಿಸಿಪಿಎ ಹೊರಡಿಸಿದ ಮಾರ್ಗಸೂಚಿಯನ್ನು ಎತ್ತಿ ಹಿಡಿದು ತೀರ್ಪು ಪ್ರಕಟಿಸಿದೆ. ಅಲ್ಲದೇ, ಹೋಟೆಲ್-ರೆಸ್ಟೋರೆಂಟ್ ಅಸೋಸಿಯೇಷನ್‌ಗೆ ದಂಡ ಸಹ ವಿಧಿಸಿದೆ.ಸ್ವಯಂಪ್ರೇರಿತ ಟಿಪ್ಸ್ , ಸಿಬ್ಬಂದಿ ಭಕ್ಷೀಸು, ಸಿಬ್ಬಂದಿ ಕಲ್ಯಾಣ ನಿಧಿ ಅಥವಾ ಇದೇ ರೀತಿಯ ಪದಗಳನ್ನು ನಾವು ಅನುಮತಿಸಬಹುದು. ಆದರೆ 'ಸರ್ವೀಸ್ ಚಾರ್ಜ್' ಎಂಬ ಪದ ಬಳಕೆ ತಪ್ಪು ಅರ್ಥವನ್ನು ಮೂಡಿಸುತ್ತದೆ. ಗ್ರಾಹಕರು ಇದನ್ನು ಸರ್ಕಾರವು ವಿಧಿಸಿ ವಸೂಲು ಮಾಡುವ ಸೇವಾ ತೆರಿಗೆ ಅಥವಾ ಜಿಎಸ್ಟಿ ಅಥವಾ ಇನ್ನಾವುದೇ ತೆರಿಗೆ ಎಂದು ಗೊಂದಲಕ್ಕೆ ಒಳಗಾಗುವ ಸಾಧ್ಯತೆಯಿದೆ ಎಂದು ನ್ಯಾಯಾಲಯವು ಉಲ್ಲೇಖಿಸಿದೆ.

ಸ್ವ ಪ್ರೇರಣೆಯಿಂದ ಕೊಟ್ಟರಷ್ಟೇ ತೆಗೆದುಕೊಳ್ಳಿ: ಹೈಕೋರ್ಟ್ ತೀರ್ಪಿನ ಬಳಿಕ ಈ ಬಗ್ಗೆ ಪ್ರತಿಕ್ರಿಯಿಸಿರುವ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು, ಹೈಕೋರ್ಟ್ ತೀರ್ಪಿನ ಅನ್ವಯ ಇನ್ನು ಮುಂದೆ ದೇಶದ ಯಾವುದೇ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರಿಗೆ ಕಡ್ಡಾಯವಾಗಿ ಅಥವಾ ಒತ್ತಾಯಪೂರ್ವಕವಾಗಿ ಸೇವಾ ಶುಲ್ಕ ವಿಧಿಸುವಂತಿಲ್ಲ. ಗ್ರಾಹಕರೇ ಸ್ವಯಂ ಪ್ರೇರಣೆಯಿಂದ ನೀಡಿದರೆ ಮಾತ್ರ ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

ಸಮಸ್ಯೆಗಳ ಸುಳಿಯಲ್ಲಿ ಯತ್ನಾಳ್ ಸಮಾನ ಮನಸ್ಕರು, ಮಾಜಿ ಸಿಎಂಗಳಿಗೆ ತಲೆ ಬಿಸಿ

ಬಿಜೆಪಿಯ ಅತೃಪ್ತರಿಗೆ ಅತಂತ್ರದ ಆತಂಕ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ಬಿಜೆಪಿಯ ಹಿರಿಯ ಮುಖಂಡ, ಮಾಜಿ ಸಚಿವ ಬಸನಗೌಡ ಯತ್ನಾಳ್ ಉಚ್ಚಾಟನೆ ನಂತರ ಕಮಲ ಪಕ್ಷದಲ್ಲಿ ಮಳೆ ಬಂದು ನಿಂತಿರುವ ವಾತಾವರಣವಿದೆ. ಅತೃಪ್ತರ ವಲಯದಲ್ಲಿ ಈಗ ಆವೇಶದ ಹವಾ ಮಾಯವಾಗಿ, ಅವಸರ, ಆತಂಕ ಹಾಗೂ ಅತಂತ್ರದ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಪಕ್ಷದಲ್ಲಿ ಸದ್ಯ ಮಾತಿನ ಬಿರುಗಾಳಿ, ಟೀಕೆಗಳ ಸುರಿಮಳೆ, ಕೌಟುಂಬಿಕ ನಿಂದನೆಗಳ ಸಿಡಿಲು, ಜಾತಿ, ಉಪ ಜಾತಿ ಮಾತುಗಳ ಮಿಂಚಿನ ಮಾತುಗಳು ಸ್ಥಬ್ದವಾಗಿದೆ.

ಸುದೀರ್ಘ ಕಾಲದ ಪಕ್ಷದೊಳಗಿನ ಈಗ ಅತೃಪ್ತಿ ಹೋರಾಟದ ಹಿಂದಿನ ರೂವಾರಿಗಳ ತೆರೆಮರೆಯ ಆರ್ಭಟ ಕೂಡ ಸದ್ದಡಗಿದ್ದು, ಅವರಲ್ಲೂ ಆತಂಕ ಶುರುವಾಗಿದೆ. ಅಂದಹಾಗೆ ಯತ್ನಾಳ್‌ಗೆ ಸಂಬಂಧಿಸಿದ ಬೆಳವಣಿಗೆಗೆ ನೈಜ ಕಾರಣವೇನು ಎನ್ನುವ ಚರ್ಚೆ ತೀವ್ರವಾಗಿದೆ. ಉಚ್ಚಾಟನೆಗೆ ನಿಜಕ್ಕೂ ಆರೋಪ, ಪ್ರತ್ಯಾರೋಪಗಳ ಹುಚ್ಚು ಆಟ ಕಾರಣವೋ ಅಥವಾ ಮೆಚ್ಚುವಂತೆ ಕಾಣುತ್ತಿದ್ದ ಬಿಚ್ಚು ಮಾತುಗಳು ಕಾರಣವೋ ಎನ್ನುವುದು ಈಗ ಅತೃಪ್ತರರಿಗೆ ಅರ್ಥವೇ ಆಗುತ್ತಿಲ್ಲ ಎನ್ನಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧದ ಸಮರ ಸಾರಿದ್ದ ಅತೃಪ್ತರು ಈಗ ಸಂಪೂರ್ಣ ಸೋತಿದ್ದಾರೆಯಾದರೂ, ಜಯ ಸಾಧಿಸಿದ ವಿಜಯೇಂದ್ರಗೆ ಶರಣಾಗತಿ ಸಿದ್ಧರಿಲ್ಲ. ಹೀಗಾಗಿ ಯತ್ನಾಳ್ ಬಣ ಈಗ ಬಿಜೆಪಿಯಲ್ಲೂ ಉಳಿಯುಂತಿಲ್ಲ. ಕಾಂಗ್ರೆಸ್ ಸೇರುವಂತೆಯೂ ಇಲ್ಲದ ಆತಂತ್ರದ ಸ್ಥಿತಿಯಲ್ಲಿದ್ದಾರೆ. ಹಾಗಂತ ಅತಂತ್ರ ತಪ್ಪಿಸಿಕೊಳ್ಳಲು ಅವಸರದಲ್ಲಿ ರಾಜೀನಾಮೆಯನ್ನೂ ನೀಡಲಾಗದ ಅನಿಶ್ಚಿತತೆಯೂ ಅವರಲ್ಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಈ ಮಧ್ಯೆ, ವಿಜಯೇಂದ್ರ ವಿರುದ್ಧ ಗುಟುರು ಹಾಕುತ್ತಲೇ ಇರುವ ಯತ್ನಾಳ್, ಪಕ್ಷದ ಹೈಕಮಾಂಡ್ ಬಳಿ ಉಚ್ಚಾಟನೆ ಪುನರ್ ಪರಿಶೀಲನೆಗೆ ಒತ್ತಡ ಹಾಕುತ್ತಿದ್ದಾರೆ. ಜತೆಗೆ ಈತನಕ ಈ ಸಮರಕ್ಕೆ ಹಿಂಬದಿಯಿಂದ ನೀರೆರೆದರು ಎನ್ನಲಾದ ನಾಯಕರು ಕೂಡ ಉಚ್ಚಾಟನೆ ಹಿಂತೆಗೆತಕ್ಕೆ ಯತ್ನಿಸುತ್ತಿದ್ದಾರೆ ಎಂದು ತಿಳಿದುಬಂದಿದೆ. ಹಾಗೆಯೇ ಪಕ್ಷ ಹಿರಿಯ ನಾಯಕರಾದ ಬಸವರಾಜ ಬೊಮ್ಮಾಯಿ, ಸದಾನಂದ ಗೌಡ, ಸಿ.ಟಿ.ರವಿ, ಜಗದೀಶ್ ಶೆಟ್ಟರ್, ಮುರುಗೇಶ್ ನಿರಾಣಿ ಸೇರಿದಂತೆ ಅನೇಕರಿಗೆ ಇದರ ಬಿಸಿ ತಟ್ಟಿದ್ದು, ಅವರೂ ಉಚ್ಚಾಟನೆ ರದ್ದುಗೊಳಿಸುವ ಪ್ರಯತ್ನದಲ್ಲಿದ್ದಾರೆ ಎನ್ನಲಾಗಿದೆ. ಆದರೆ ಈ ಬೆಳವಣಿಗೆಯಿಂದ ಕೇಂದ್ರ ಸಚಿವ ವಿ. ಸೋಮಣ್ಣ ಹಾಗೂ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರಿಗೆ ತೀರಾ ಬೇಸರ ಉಂಟಾಗಿದೆ ಎನ್ನಲಾಗಿದ್ದು, ಇದನ್ನು ಹೇಗಾದರೂ ಸರಿಪಡಿಸಬೇಕೆನ್ನುವ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.



ಸಮಾನ ಮನಸ್ಕರಿಗೆ ಸಮಸ್ಯೆ ನೂರು

ಯತ್ನಾಳ್ ಮಾತಿಗೆ ಸದಾ ದನಿಗೂಡಿಸುತ್ತಿದ್ದ 10ಕ್ಕೂ ಹೆಚ್ಚು ಸಮಾನ ಮನಸ್ಕರು ಕಾಂಗ್ರೆಸ್ ಸೇರಲು ಅನೇಕ ಅಡ್ಡಿ, ಅತಂಕಗಳಿವೆ. ಕುಮಾರ ಬಂಗಾರಪ್ಪ ಕಾಂಗ್ರೆಸ್ ಸೇರಲು ಸಚಿವ ಮಧು ಬಂಗಾರಪ್ಪ ಅವರದೇ ಅಪಸ್ವರ ಸಾಧ್ಯತೆ ಇದೆ. ಇನ್ನು ರಮೇಶ್ ಜಾರಕಿಹೊಳಿಗೆ ಕೆಪಿಸಿಸಿ ಅಧ್ಯಕ್ಷರೇ ಬಾಗಿಲು ಮುಚ್ಚುವ ಸಂಭವ ಇದೆ. ಬಿ.ಪಿ.ಹರೀಶ್‌ಗೆ ದಾವಣಗೆರೆಯಲ್ಲಿ ಶ್ಯಾಮನೂರು ಕುಟುಂಬವೇ ಕಿಡಿಕಾರುತ್ತದೆ. ಇನ್ನು ಜಿ.ಎಂ.ಸಿದ್ದೇಶ್ವರ್, ಅಣ್ಣಾ ಸಾಹೇಬ್ ಜೊಲ್ಲೆ, ಪ್ರತಾಪ್ ಸಿಂಹ ಅವರಿಗೂ ಇದೇ ಮಾದರಿಯ ಸಮಸ್ಯೆಗಳು ಎದುರಾಗಬಹುದು. ಇವರ ಪೈಕಿ ಅರವಿಂದ ಲಿಂಬಾವಳಿ ಅವರಿಗೆ ಅಡ್ಡಿಗಳು ಕಡಿಯಾಗದೂ ಅವರು ಹೋಗುವ ಮನಸ್ಥಿತಿಯವರಲ್ಲ ಎಂದು ಗೊತ್ತಾಗಿದೆ.

ಅತೃಪ್ತರಿಗೆ ಕಾಂಗ್ರೆಸ್ ಬಾಗಿಲು ಬಂದ್?

ಬಿಜೆಪಿಯ ಬಂಡಾಯ ಗುಂಪಿನ ನಾಯಕ ಯತ್ನಾಳ್ ಹಾಗೂ ಅವರ ಸಮಾನ ಮನಸ್ಕರು ಈ ಬೆಳವಣಿಗೆ ನಂತರ ಕಾಂಗ್ರೆಸ್ ಕದ ತಟ್ಟುತ್ತಾರೆ ಎಂಬ ಗುಮಾನಿ ರಾಜಕೀಯ ವಲಯದಲ್ಲಿ ವಿಪರೀತವಾಗಿದೆ. ಇದಕ್ಕೆ ಕಾಂಗ್ರೆಸ್‌ನ ಶಾಸಕ ರಾಜು ಕಾಗೆ ತುಪ್ಪ ಸುರಿದ್ದಾರೆ. ಆದರೆ ಬಿಜೆಪಿಯ ಈ ಅತೃಪ್ತರಿಗೆ ಸದ್ಯಕ್ಕೆ ಕಾಂಗ್ರೆಸ್ ಬಾಗಿಲು ಮುಚ್ಚಿದಂತಾಗಿದೆ. ಅಂದರೆ ಯತ್ನಾಳ್ ಮತ್ತು ಸಮಾನ ಮನಸ್ಕರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಲು ಕೈ ಪಕ್ಷದ ಮುಖಂಡರು ಸಿದ್ದರಿಲ್ಲ. ಯತ್ನಾಳ್ ಕಾಂಗ್ರೆಸ್ ಸೇರಬೇಕೆಂದರೆ ಬಿಜೆಪಿಯ ಎಲ್ಲ ವೇಷ ಭೂಷಣಗಳನ್ನು ಕಳಚಬೇಕು. ಅದನ್ನು ಕಾಂಗ್ರೆಸ್ ಒಪ್ಪಿಕೊಳ್ಳಬೇಕು. ಈವರೆಗಿನ ಅಲ್ಪಸಂಖ್ಯಾತರ, ಕಾಂಗ್ರೆಸ್ ನಾಯಕರ ವಿರುದ್ಧದ ಆರೋಪಗಳು, ಪಕ್ಷದ ವರಿಷ್ಠ ರಾಹುಲ್ ಗಾಂಧಿ ವಿರುದ್ಧ ಟೀಕೆಗಳನ್ನು ಮರೆಯಬೇಕು. ಇದು ಕಷ್ಟ ಸಾಧ್ಯ ಎನ್ನುತ್ತಾರೆ ಪಕ್ಷದ ಹಿರಿಯ ನಾಯಕರು. ಇನ್ನು ಯತ್ನಾಳ್ ಸಮಾನ ಮನಸ್ಕರ ಕಾಂಗ್ರೆಸ್ ಪ್ರವೇಶಕ್ಕೆ ಸ್ಥಳೀಯ ನಾಯಕರದೇ ತೀವ್ರ ವಿರೋಧವಿದೆ. ಹೀಗಾಗಿ ಅತೃಪ್ತರ ಮುಂದಿನ ಹಾದಿ ದುರ್ಗಮ ಎನ್ನುತ್ತಾರೆ ಪಕ್ಷದ ಹಿರಿಯರು.



ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಖುಷಿ ಫರ್ಟಿಲಿಟಿ ಮತ್ತು ಐವಿಎಫ್ ಸೆಂಟರ್ ಸ್ಥಾಪಕಿ ಮತ್ತು ಕ್ಲಿನಿಕಲ್ ನಿರ್ದೇಶಕಿ ಡಾ.ರಶ್ಮಿ ಯೋಗೀಶ್ ಅವರಿಗೆ 2025ರ ಕರ್ನಾಟಕ ಇನ್‌ಸ್ಪೈರಿಂಗ್ ವಿಮೆನ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಚಿವ ದಿನೇಶ್ ಗುಂಡೂರಾವ್, ಐಎಎಸ್ ಅಧಿಕಾರಿ ಅರ್ಚನಾ, ನಟಿ ಮೇಘನಾ ಗಾಂವಕರ್, ಕ್ಲಬ್‌ನ ಅಧ್ಯಕ್ಷ ಆರ್.ಶ್ರೀಧರ, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬೇಡ

ಹೊಸದಿಲ್ಲಿ: ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಾಕಾರಿ ಪೋಸ್ಟ್ ಮಾಡಿದ ಆರೋಪದ ಮೇಲೆ ಕಾಂಗ್ರೆಸ್ ಸಂಸದ ಇಮ್ರಾನ್ ಪ್ರತಾಪ್ ಗಢಿ ವಿರುದ್ಧ ಗುಜರಾತ್ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಅನ್ನು ಸುಪ್ರೀಂ ಕೋರ್ಟ್ ಶುಕ್ರವಾರ ರದ್ದುಗೊಳಿಸಿದೆ.

ಏ ಖೂಂ ಕೆ ಪ್ಯಾಸೆ ಬಾತ್ ಸುನೋ' (ಓ ರಕ್ತಪಿಪಾಸು.. ನನ್ನ ಮಾತು ಕೇಳು) ಎಂಬ ಕವನ ಬಳಸಿಕೊಂಡು ಗುಜರಾತ್ ಸರಕಾರವನ್ನು ಟೀಕಿಸಿದ್ದ ಪ್ರತಾಪ್ ಗಢಿ, ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಈ ಸಂಬಂಧ ದಾಖಲಾದ ಎಫ್‌ಐಆರ್ ರದ್ದುಗೊಳಿಸಲು ಗುಜರಾತ್ ಹೈಕೋರ್ಟ್ ನಿರಾಕರಿಸಿತ್ತು.

ಪ್ರತಾಪ್ ಗಢಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ, ಉಜ್ಜಲ್ ಭುಯಾನ್ ನೇತೃತ್ವದ ದ್ವಿಸದಸ್ಯ ಪೀಠ, ಅಭಿವ್ಯಕ್ತಿ ಸ್ವಾತಂತ್ರ್ಯ ಸುಸಂಸ್ಕೃತ ಹಾಗೂ ಆರೋಗ್ಯ ಸಮಾಜದ ಅವಿಭಾಜ್ಯ ಅಂಗ. ಪ್ರತಾಪ್ ಗಢಿ ಯಾವುದೇ ಅಪರಾಧ ಮಾಡಿಲ್ಲ. ಎಫ್‌ಐಆರ್ ದಾಖಲಿಸುವ ಮೊದಲು ಪೋಸ್ಟ್ ಮಾಡಲಾದ ಹಾಡಿನ ಪದಗಳ ಸಾರವನ್ನು ಪೊಲೀಸರು ಅರ್ಥಮಾಡಿಕೊಳ್ಳಬೇಕಿತ್ತು,'' ಎಂದು ಅಭಿಪ್ರಾಯ ವ್ಯಕ್ತಪಡಿಸಿತು.

- ಕೆಲ ಎಸಿ, ತಹಸೀಲ್ದಾರ್ ಆಮೆಗತಿ ಕಾರ್ಯವೈಖರಿಗೆ ಅಸಮಾಧಾನ | ಭೂ ದಾಖಲೆ ಸ್ಕ್ಯಾನಿಂಗ್ ಬಗ್ಗೆಯೂ ಅಸಮಾಧಾನ | ಕೋರ್ಟ್ ಕೇಸ್ ಪ್ರಗತಿ ಕಾಯ್ದುಕೊಳ್ಳಲು ತಾಕೀತು

ಬಡವರ ಕೆಲಸಕ್ಕೆ ಇನ್ನಷ್ಟು ಚುರುಕು ನೀಡಿ: ಸಚಿವ ಕೃಷ್ಣಬೈರೇಗೌಡ

ಬೆಂಗಳೂರು: ಬಗರ್ ಹುಕುಂ ಸೇರಿದಂತೆ ಹಲವು ಕಾರ್ಯಗಳನ್ನು ಮಾಡಿಸಿಕೊಳ್ಳಲು ಬಡವರು ಬರುತ್ತಾರೆ. ಈ ವಿಷಯದಲ್ಲಿ ಅನೇಕ ತಹಸೀಲ್ದಾರರು ಉತ್ತಮ ಕಾರ್ಯ ನಡೆಸುತ್ತಿದ್ದರೂ, ನಿರೀಕ್ಷಿಯ ಮಟ್ಟದಲ್ಲಿ ಕಾರ್ಯವಾಗುತ್ತಿಲ್ಲ. ಮಂದಗತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಸಿ ಹಾಗೂ ತಹಸೀಲ್ದಾರರು ವೇಗ ನೀಡಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಶುಕ್ರವಾರ ವಿಕಾಸಸೌಧದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ತಹಸೀಲ್ದಾರರೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ಬಗರ್ ಹುಕುಂ ಕೆಲಸಗಳಿಗೆ ಚುರುಕು ಮುಟ್ಟಿಸಬೇಕು ಎಂಬ ಕಾರಣದಿಂದಲೇ ನಾನು ಕಳೆದ ಎರಡು ವರ್ಷಗಳಿಂದ ವೈಯಕ್ತಿಕವಾಗಿ ಎಲ್ಲಾ ಜಿಲ್ಲೆಗಳಿಗೂ ಪ್ರವಾಸ ಕೈಗೊಂಡು ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿದ್ದೇನೆ. ರಾಜ್ಯದ ಎಲ್ಲಾ ತಹಸೀಲ್ದಾರರ ಜತೆ ಪ್ರತಿ ತಿಂಗಳೂ ವಿಡಿಯೊ ಕಾನ್ಫರೆನ್ಸ್ ಮೂಲಕವೂ ಸಭೆ ನಡೆಸಿ ಪ್ರಗತಿ ಪರಿಶೀಲಿಸುತ್ತಿದ್ದೇನೆ. ಆದರೂ ಕೆಲವು ಅಧಿಕಾರಿಗಳು ಬಡವರ ಕೆಲಸದ ಬಗ್ಗೆ ಅಸಡ್ಡೆ ಧೋರಣೆ ತೋರುತ್ತಿದ್ದು, ಅವರೂ ಸಹ ಶೀಘ್ರ ಎಚ್ಚೆತ್ತುಕೊಳ್ಳಬೇಕಿದೆ ಎಂದು ಎಚ್ಚರಿಸಿದರು.

ಪೋಡಿ ದುರಸ್ಥಿಗೂ ಚುರುಕು ಮುಟ್ಟಿಸಲು ಸೂಚನೆ

ರಾಜ್ಯಾದ್ಯಂತ ಪೋಡಿ ದುರಸ್ತಿ ಅಭಿಯಾನಕ್ಕೆ ಚಾಲನೆ ನೀಡಿದ್ದರೂ ಈ ಕೆಲಸ ನಿರೀಕ್ಷಿತ ವೇಗ ಪಡೆದಿಲ್ಲ. ದಶಕದ ಹಿಂದೆಯೇ ಸರಕಾರ ಬಡ ರೈತರಿಗೆ ಜಮೀನು ಮಂಜೂರು ಮಾಡಿದೆ. ಆದರೆ, ನಾನಾ ಕಾರಣಗಳಿಂದ ಜಮೀನು ದುರಸ್ಥಿಯಾಗದೆ ಲಕ್ಷಾಂತರ ರೈತರು ಸಂಕಷ್ಟಕ್ಕೆ ಒಳಗಾಗಬೇಕಾದ ಸ್ಥಿತಿ ಇದೆ. ರೈತರು ತಮ್ಮ ಪಾಲಿನ ಜಮೀನು ಇದ್ದರೂ ಸಹ ಅದರ ಪೋಡಿಯಾಗದೆ ಸರಕಾರಿ ಕಚೇರಿಗಳಿಗೆ ಸುತ್ತುವುದು ಪರಿಪಾಟವಾಗಿದೆ. ಹೀಗಾಗಿಯೇ ಪೋಡಿ ಅಭಿಯಾನಕ್ಕೆ ಚಾಲನೆ ನೀಡುವ ಮೂಲಕ ನಮೂನೆ 1-5 ಹಾಗೂ 6-10 ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲಾಗಿತ್ತು. ನಿಯಮದಂತೆ ತಹಸೀಲ್ದಾರರು ನಿಗದಿತ ಜಮೀನಿಗೆ ಸಂಬಂಧಿಸಿದ ನಮೂನೆ 1-5 ದಾಖಲೆಯನ್ನು ಸಿದ್ದಪಡಿಸಿ ಮುಂದಿನ ಹಂತಕ್ಕೆ ನಮೂನೆ 6-10 ಕೆಲಸಕ್ಕಾಗಿ ಭೂ ಮಾಪನ ಇಲಾಖೆಗೆ ಕಡತ ಕಳುಹಿಸಬೇಕು. ಆದರೆ, ಬಹುತೇಕ ಜಿಲ್ಲೆಗಳಲ್ಲಿ ಈ ಸಂಖ್ಯೆ ಸಮಾಧಾನಕರವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೋರ್ಟ್ ಕೇಸ್ ಪ್ರಗತಿ ಕಾಯ್ದುಕೊಳ್ಳಿ: ನಿಗದಿತ ಸಮಯದೊಳಗೆ ತಹಸೀಲ್ದಾರ್ ನ್ಯಾಯಾಲಯಗಳಲ್ಲಿರುವ ಪ್ರಕರಣಗಳನ್ನು ಇತ್ಯರ್ಥಗೊಳಿ ಪ್ರಗತಿಯನ್ನು ಕಾಯ್ದುಕೊಳ್ಳಿ. ತಕರಾರು ಪ್ರಕರಣಗಳನ್ನು ತಹಸೀಲ್ದಾರ್ ನ್ಯಾಯಾಲಯಗಳು 90 ದಿನಗಳಲ್ಲಿ ಇತ್ಯರ್ಥಪಡಿಸಬೇಕು ಎಂಬ ನಿಯಮವಿದೆ. ಆದರೆ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಅವಧಿ ಮೀರಿದ 10,774 ಪ್ರಕರಣಗಳಿದ್ದವು. ಪ್ರಸ್ತುತ ಈ ಸಂಖ್ಯೆಯನ್ನು 369ಕ್ಕೆ ಇಳಿಸಲಾಗಿದೆ. ಈ ಹಿಂದೆ ಪ್ರತಿ ಪ್ರಕರಣಗಳ ಇತ್ಯರ್ಥಕ್ಕೆ ತಹಸೀಲ್ದಾರ್ ನ್ಯಾಯಾಲಯಗಳಲ್ಲಿ ಸರಾಸರಿ ಏಳು ತಿಂಗಳಿಗಿಂತ ಹೆಚ್ಚು ಸಮಯ ವ್ಯಯವಾಗುತ್ತಿತ್ತು. ಕಳೆದ ಎರಡು ವರ್ಷಗಳಿಂದ ಸತತ ಪ್ರಯತ್ನದಿಂದ ಈ ಅವಧಿಯನ್ನು 64 ದಿನಕ್ಕೆ ಇಳಿಸಲಾಗಿತ್ತು. ಆದರೆ, ಇದೀಗ ಈ ಅವಧಿ ಮತ್ತೆ 73 ದಿನಕ್ಕೆ ಏರಿದೆ ಎಂದರು.

ಯುದ್ಧಕ್ಕೆ ಸಿದ್ಧವಾದ

ಅಜೇಯ್

ಈವರೆಗೂ ಪ್ರೀತಿ-ಪ್ರೇಮದ ಕಥೆ ಹೇಳಿ, ಪ್ರೇಮಿಗಳ ಹಾಟ್ ಫೇವರಿಟ್ ಆಗಿದ್ದ ಸ್ಯಾಂಡಲ್‌ವುಡ್ ಕೃಷ್ಣ ಅಜೇಯ್ ರಾವ್, ಇದೀಗ ಹೊಸ ಯುದ್ಧಕ್ಕೆ ಸಜ್ಜಾಗಿದ್ದಾರೆ. ಈ ಬಾರಿ ಕಪ್ಪು ಕೋಟ್ ಧರಿಸಿ ನೊಂದವರ ಪರ ಹೋರಾಟ ಮಾಡಲು ರೆಡಿಯಾಗಿದ್ದಾರೆ. ಹೌದು, ಅಜೇಯ್ ರಾವ್ ಅತ್ಯಾಚಾರ ಸಂತ್ರಸ್ತೆಯರ ಬೆನ್ನಿಗೆ ನಿಂತು ನ್ಯಾಯಕ್ಕೆ ಹೋರಾಡಲು ಮುಂದಾಗಿರುವುದು ಹೊಸ ಬೆಳವಣಿಗೆ. ಅಜಯ್ ರಾವ್ ಯುದ್ಧಕಾಂಡ ಚಿತ್ರದಲ್ಲಿ ನಟಿಸಿದ್ದಾರೆ. ಈ ಸಿನಿಮಾ ಒಂದಷ್ಟು ಕಂಟೆಂಟ್ ಮೂಲಕ ಸದ್ದು ಮಾಡುತ್ತಿದೆ.

ಸದ್ಯ ಬಿಡುಗಡೆಯಾಗಿರುವ ಭುವಿಯಲ್ಲಿ... ಎಂಬ ಹಾಡು ಚಿತ್ರದ ಥೀಮ್ ಸಾಂಗ್ ಆಗಿದ್ದು, ಕುತೂಹಲ ಮೂಡಿಸಿದೆ. ಯುದ್ಧಕಾಂಡ ಸಿನಿಮಾದಲ್ಲಿ ಸದ್ಯ ಸದ್ದು ಮಾಡುತ್ತಿರುವ ಸೌಜನ್ಯ ಕೇಸ್ ಬಳಸಿಕೊಂಡಿದ್ದಾರಾ ಎಂಬ ಮಾತು ಎಲ್ಲೆಡೆ ಕೇಳಿಬರುತ್ತಿದೆ. ಆದರೆ ಈ ಬಗ್ಗೆ ಚಿತ್ರತಂಡದಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಸುಮಾರು ಹತ್ತು ವರ್ಷಗಳ ಹಿಂದೆ ಕೃಷ್ಣಲೀಲಾ ಕಮಾಲ್ ಮಾಡಿದ್ದ ಅಜಯ್ ಈಗ ಇದೀಗ ಮತ್ತೊಮ್ಮೆ ತಮ್ಮದೇ ಶ್ರೀಕೃಷ್ಣ ಆರ್ಟ್ಸ್ ಆಂಡ್ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಯುದ್ಧಕಾಂಡ ಚಿತ್ರವನ್ನು ನಿರ್ಮಿಸಿದ್ದಾರೆ. ವಿಶೇಷ ಎಂದರೆ ಯುದ್ಧಕಾಂಡ ಚಿತ್ರದ ಎರಡನೇ ಭಾಗ ಬಿಡುಗಡೆಯಾಗಲಿದ್ದು, ಆ ಬಳಿಕ ಮೊದಲ ಭಾಗ ತೆರೆಗೆ ಬರಲಿದೆಯಂತೆ. ಕೆಜಿಎಫ್ ಖ್ಯಾತಿಯ ಅರ್ಚನಾ ಜೋಯಿಸ್, ಪ್ರಕಾಶ್ ಬೆಳವಾಡಿ ಹಾಗೂ ನಾಗಾಭರಣ ಸೇರಿದಂತೆ ಹಲವು ಖ್ಯಾತ ಕಲಾವಿದರು ಈ ಚಿತ್ರದ ತಾರಾಗಣದಲ್ಲಿದ್ದಾರೆ.





ಅಬ್ಬರಿಸುತ್ತಾ ಬಂದ

ವಾಮನಮನ

ಧನ್ವೀರ್ ಗೌಡ ವಾಮನನ ಅವತಾರ ತಾಳಿದ್ದು ಭರ್ಜರಿಯಾಗಿ ತೆರೆಗೆ ಬರಲು ರೆಡಿಯಾಗಿದ್ದಾರೆ. ಹಾಡುಗಳ ಮೂಲಕ ಸದ್ದು ಮಾಡಿದ್ದ ವಾಮನ ಈಗ ಟ್ರೇಲರ್‌ನಲ್ಲಿ ಹೊಸ ಹವಾ ಸೃಷ್ಟಿಸಿದೆ. ನಟ ದರ್ಶನ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಟ್ರೇಲರ್ ಮಾಸ್ ಕ್ಲಾಸ್ ಆಗಿ ಮೂಡಿಬಂದಿದೆ. ಶಂಕರ್‌ರಾಮನ್ ನಿರ್ದೇಶನದ ಈ ಚಿತ್ರವನ್ನು ಇಕ್ವಿನಾಕ್ಸ್ ಗ್ಲೋಬಲ್ ಎಂಟರ್ ಟೇನ್‌ಮೆಂಟ್ ಬ್ಯಾನರ್‌ನಲ್ಲಿ ಚೇತನ್ ಗೌಡ ಅದ್ದೂರಿಯಾಗಿ ನಿರ್ಮಿಸಿದ್ದಾರೆ. ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತಲೂ ಧನ್ವೀರ್ ಮಾಸ್ ಆಗಿ ಮಿಂಚಿದ್ದಾರೆ. ರೀಷ್ಮಾ ನಾಣಯ್ಯ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ತಾರಾ ಅನುರಾಧಾ, ಸಂಪತ್ ರಾಜ್, ಚಿತ್ಕಲಾ ಬಿರಾದಾರ್, ಕೋಟೆ ಪ್ರಭಾಕರ್, ಪೆಟ್ರೋಲ್ ಪ್ರಸನ್ನ, ಕಾಕ್ರೋಜ್ ಸುಧಿ ಮುಂತಾದವರು ತಾರಾಗಣದಲ್ಲಿದ್ದಾರೆ. ವಾಮನ ತಾಯಿ - ಮಗನ ಬಾಂಧವ್ಯದ ಕಥೆಯನ್ನು ಹೊತ್ತುಬಂದಿದೆ. ಇದರೆ ಜತೆಗೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿದೆ. ಎಲಲ್ಲರಿಗೂ ಸಿನಿಮಾ ಇಷ್ಟವಾಗುತ್ತದೆ ಎಂದು ನಿರ್ದೇಶಕ ಶಂಕರ್ ರಾಮನ್ ತಿಳಿಸಿದರು. ಈ ಚಿತ್ರದಲ್ಲಿ ನನ್ನ ಪಾತ್ರ ತುಂಬಾ ಚೆನ್ನಾಗಿದೆ. ಚಿತ್ರತಂಡ ಎಲ್ಲರ ಶ್ರಮ ಟ್ರೇಲರ್‌ನಲ್ಲಿ ಕಾಣಿಸುತ್ತಿದೆ ಎಂದು ರೀಷ್ಮಾ ನಾಣಯ್ಯ ಸಂತಸದಿಂದ ನುಡಿದರು. ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ ಹಾಡುಗಳಿಗೆ ಸಾಹಿತ್ಯ ರಚಿಸಿದ್ದು, ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ. ನಾಗಭೂಷಣ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

ಬದುಕಿನ ಮೌಲ್ಯ ಸಾರಿದ ಸುಂದರ ಪ್ರೇಮಕಥನ

ಚಿತ್ರ : ಮನದ ಕಡಲು
ನಿರ್ದೇಶನ : ಯೋಗರಾಜ್ ಭಟ್
ನಿರ್ಮಾಣ : ಇ.ಕೃಷ್ಣಪ್ಪ
ತಾರಾಗಣ : ಸುಮುಖ, ರಾಶಿಕಾ, ಅಂಜಲಿ, ರಂಗಾಯಣ ರಘು, ದತ್ತಣ್ಣ ಮುಂತಾದವರು
ರೇಟಿಂಗ್ : ★★★½

ಮನದ ಕಡಲು ಶೀರ್ಷಿಕೆಯಲ್ಲಿಯೇ ಮನಗೆದ್ದಿತ್ತು. ಅದಕ್ಕೂ ಮಿಗಿಲಾಗಿ ಇದು ಯೋಗರಾಜ್ ಭಟ್ ನಿರ್ದೇಶನದ ಸಿನಿಮಾ ಎಂಬ ಕಾರಣಕ್ಕೂ ಬಲು ಕುತೂಹಲ ಮೂಡಿಸಿತ್ತು. ಅದ್ದೂರಿಯಾಗಿ ತೆರೆಗೆ ಬಂದ ಮನದ ಕಡಲು ಚಿತ್ರವನ್ನು ಪೇಕ್ಷಕರು ಕಣ್ತುಂಬಿಕೊಂಡಿದ್ದು ಸಂತಸಗೊಂಡಿದ್ದಾರೆ. ಹೊಸತನದ ಪ್ರೇಮಕಥೆ, ಬದುಕಿನ ಮೌಲ್ಯದ ಸುಂದರ ಕಥನಾ ಸಿನಿಪ್ರಿಯರನ್ನು ಸೆಳೆದಿದೆ. ನಾಯಕ ರಂಗಕಲಾವಿದ, ತನ್ನ ನಟನೆಯಲ್ಲಿ ಖ್ಯಾತಿ ಪಡೆದ ನಾಯಕ ಎಲ್ಲರ ಅಚ್ಚುಮೆಚ್ಚು. ಈ ಹೊತ್ತಿನಲ್ಲಿಯೇ ಕಡಲ ತಡಿಯಲ್ಲಿ ನಾಯಕಿ ರಾಶಿಕಾ ಭೇಟಿಯಾಗುತ್ತದೆ. ಮೊದಲ ನೋಟದಲ್ಲಿಯೇ ಮನದ ಕಡಲಿಲಿ ಪ್ರೀತಿ ಮೂಡುತ್ತದೆ. ಇನ್ನು ನಾಯಕ ಬಯಸಿದಂತೆಯೇ ಆಗುತ್ತದೆ ಎಂದುಕೊಳ್ಳುವಾಗಲೇ ಅಲ್ಲೊಂದು ಟ್ವಿಸ್ಟ್. ನಾಯಕಿ ಆತನಿಂದ ದೂರಾಗುತ್ತಾಳೆ. ಈ ನೋವಲ್ಲಿದ್ದ ನಾಯಕನಿಗೆ ಅಂಜಲಿ ಪರಿಚಿತಳಾಗುತ್ತಾಳೆ. ರಾಶಿಕಾಳ ಮಾತಿನಂತೆ ಅಂಜಲಿ ನಾಯಕನ ಜತೆಗೆ ಪ್ರೀತಿಯ ನಾಟಕವಾಡುತ್ತಾಳೆ. ಆದರೆ ಅವಳಿಗೆ ಅರಿವಿಲ್ಲದಂತೆ ಪ್ರೀತಿಗೆ ಬೀಳುತ್ತಾಳೆ. ಈ ನಡುವೆ ರಾಶಿಕಾ ದೂರಾಗಿದ್ದೇಕೆ ಎಂಬ ಪ್ರಶ್ನೆಗೆ ಉತ್ತರ ಸಿಗುತ್ತದೆ. ಅನಾರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದ ರಾಶಿಕಾ ಗುಣಮುಖಳಾಗಿ ನಾಯಕನ ಬಳಿಗೆ ಬರುತ್ತಾಳೆ. ಈಗ ರಾಶಿಕಾ, ಅಂಜಲಿ ಇಬ್ಬರೂ ಒಬ್ಬನನ್ನೇ ಪ್ರೀತಿಸುತ್ತಿರುತ್ತಾರೆ. ಹಾಗಾದರೆ ಈ ಇಬ್ಬರಲ್ಲಿ ನಾಯಕ ಯಾರನ್ನು ವರಿಸುತ್ತಾನೆ, ಆತನ ಆಯ್ಕೆ ಯಾವುದು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಹೀಗೆ ಮನದ ಕಡಲು ಟ್ವಿಸ್ಟ್ ಮೇಲೆ ಟ್ವಿಸ್ಟ್ ಪಡೆದುಕೊಳ್ಳುತ್ತಾ ಸಾಗುತ್ತದೆ. ಪ್ರೇಕ್ಷಕರನ್ನು ಸೀಟಿ ತುದಿಯಲ್ಲಿ ಹಿಡಿದು ಕೂರಿಸುತ್ತದೆ.

ಯೋಗರಾಜ್ ಭಟ್ ಅವರ ಸಿನಿಮಾ ಎಂದಾಕ್ಷಣ ಲವ್ ಸ್ಟೋರಿಯ ಸಿನಿಮಾ ಎಂದುಕೊಳ್ಳುತ್ತಾರೆ, ಅಂತೆಯೇ ಇಲ್ಲಿ ಮನಕಾಡುವ ಪ್ರೇಮಕಥೆಯೂ ಇದೆ. ಇಲ್ಲಿ ಭಟ್ಟರು ಸಿದ್ಧ ಸೂತ್ರದಿಂದ ಹೊರಬಂದು ಹೊಸತನದ ಪ್ರೇಮಕಥೆಯನ್ನು ಕಟ್ಟಿಕೊಟ್ಟಿದ್ದಾರೆ. ಪ್ರೀತಿಗಿಂತ ಬದುಕಿನ ಮೌಲ್ಯವೇ ದೊಡ್ಡದು ಎಂಬುದನ್ನು ಸಾರಿ ಹೇಳಿದ್ದಾರೆ. ಇನ್ನು ಮನದ ಕಡಲಿನ ಮಿಂದೆದ್ದ ಸುಮುಖ ಅದ್ಭುತವಾಗಿ ನಟಿಸಿದ್ದಾರೆ, ತಮ್ಮ ಪಾತ್ರಕ್ಕೆ ಅಕ್ಷರಶಃ ಜೀವತುಂಬಿದ್ದಾರೆ. ಸುಮುಖನಿಗೆ ಈ ಚಿತ್ರ ಬಿಗ್ ಬ್ರೇಕ್ ನೀಡುವುದು ಖಚಿತ. ಅಂಜಲಿ ಅನೀಶ್ ಹಾಗೂ ರಾಶಿಕಾ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಹಿರಿಯ ನಟ ರಂಗಾಯಣ ರಘು ಅವರು ಈ ಹಿಂದೆ ಎಂದು ಕಂಡಿರದ ಪಾತ್ರದಲ್ಲಿ ಕಂಗೊಳಿಸಿದ್ದಾರೆ. ಹಿರಿಯ ನಟ ದತ್ತಣ್ಣ ತಮ್ಮ ಪಾತ್ರದಲ್ಲಿ ಜೀವಿಸಿದ್ದಾರೆ. ಅವರ ಪಾತ್ರ ಸಿನಿಮಾ ನೋಡಿ ಹೊರಬಂದ ಮೇಲೂ ಮನಸಲ್ಲಿ ಉಳಿಯುತ್ತದೆ. ಚಿತ್ರದ ಹಾಡುಗಳು ಮನದಲ್ಲಿ ಗುನುಗುನಿಸುತ್ತವೆ. ಚಿತ್ರದ ಹಾಡುಗಳು, ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಮನದ ಕಡಲು ಒಂದು ಸುಂದರ ದೃಶ್ಯ ಕಾವ್ಯವಾಗಿ ಮೂಡಿಬಂದಿದ್ದು ಎಲ್ಲರ ಮನಸಿಗೆ ನಾಟಲಿದೆ.

ಚಿತ್ತವಿಹಾರ

ಸಂತಸಕ್ಕೆ ಸರಳ ಸೂತ್ರಗಳು

● ಮಹಾದೇವ ಬಸರಕೋಡ

ಬದುಕಿನಲ್ಲಿ ನಮ್ಮ ನಮ್ಮದೇ ಆದ ಕಷ್ಟ-ನಷ್ಟಗಳು ಇರುವುದು ಸಹಜವೇ. ಇಂತಹದೊಂದು ವಾಸ್ತವಿಕತೆಯನ್ನು ಅರಿತು ಕೂಡ ನಾವೆಲ್ಲ ಅದ ರಿಂದ ತಪ್ಪಿಸಿಕೊಳ್ಳುವುದರತ್ತ ಯೋಚಿಸುತ್ತೇವೆ. ಕಾಯಿಲೆಗಳು ನಮ್ಮನ್ನು ಕಾಡಿದರೆ, ಕೆಟ್ಟ ಮಾತುಗಳು ಬಂದರೆ, ನಾವು ಅವುಗಳಿಂದ ಜಾರಿಕೊಳ್ಳದೇ ನಮ್ಮ ಮನೋಸ್ಥಿತಿಯನ್ನು ಕೆಟ್ಟದಾಗಿಸಿಕೊಳ್ಳದೇ ಅವುಗಳನ್ನು ಸಹಜವಾಗಿ ಎದುರುಗೊಳ್ಳುವತ್ತ ನಮ್ಮ ಗಮನವನ್ನು ಕೇಂದ್ರಿಕರಿಸಬೇಕು. ಅಮೆರಿಕದ ಒಬ್ಬ ಪ್ರವಾಸಿ ಪೋಲೆಂಡಿನ ಯಹೂದಿ ಧರ್ಮಶಾಸ್ತ್ರಜ್ಞನಾದ ಹೋಫೆಟ್ಜ್ ಚೈಮ್‌ರನ್ನು ಒಮ್ಮೆ ಭೇಟಿ ಮಾಡಿದ. ಪುಸ್ತಕಗಳಿಂದ ತುಂಬಿದ ಅವರ ಕೊಠಡಿಯನ್ನು ಅವನು ಗಮನಿಸಿದ. ಬೇರೆ ಎಲ್ಲಡೆಯೂ ಅವನು ಹುಡುಕಿದ. ಅವನಿಗೆ ಕೊಠಡಿಯಲ್ಲಿ ಪುಸ್ತಕ ಮತ್ತು ಒಂದು ಬೆಂಚು, ಮೇಜು ಇವುಗಳ ಹೊರತಾಗಿ ಅವನಿಗೆ ಇನ್ನೇನೂ ಕಾಣಲಿಲ್ಲ. ಧರ್ಮಶಾಸ್ತ್ರಜ್ಞನ ಮನೆ ಇಷ್ಟೇ ಎಂಬುದು ಅವನಿಗೆ ಖಚಿತವಾಯಿತು.

'ಗುರುಗಳೇ ನಿಮ್ಮ ಉಳಿದ ವಸ್ತುಗಳು, ಪೀಠೋಪಕರಣಗಳು ಎಲ್ಲಿಯೂ ಕಾಣುತ್ತಿಲ್ಲವಲ್ಲ?' ಎಂದ. ಅವರು ನಿನ್ನದೆಲ್ಲಿ? ಎಂದು ಪ್ರಶ್ನಿಸಿದರು ಸಹಜವಾಗಿ. ಗುರುಗಳೇ ನನ್ನದೇ? ಎಂದಾಗ ಹೌದು ನಿನ್ನವು ಎಲ್ಲಿ? ಎಂದು ಮತ್ತೆ ಪ್ರಶ್ನಿಸಿದರು. 'ನಾನು ಈಗ ಪ್ರಯಾಣ ಮಾಡುತ್ತಿರುವೆ ಎಂಬುದು ತಮಗೆ ತಿಳಿದಿದೇ ಇದೆ ಅಲ್ಲವೇ?' ಗುರುಗಳು ತುಂಬ ಸಹಜವಾಗಿಯೇ ಉತ್ತರಿಸಿದರು: ನಾನು ಕೂಡ ಹಾಗೆಯೇ. ಇದು ನಾವು ಬದುಕನ್ನು ಭಾವಿಸುವ ರೀತಿಯಾಗಬೇಕು.

ವಾಸ್ತವದಲ್ಲಿ ಎಲ್ಲ ಸಂಗತಿಗಳು ನಮ್ಮನ್ನು ದುಃಖಕ್ಕೀಡು ಮಾಡುತ್ತವೆ. ನಾವು ಬಯಸಿದ ವಸ್ತುಗಳು ನಮಗೆ ದೊರೆತಾಗ ಅವುಗಳು ಕೆಲವು ದಿನಗಳ ಕಾಲ ಸಂತೋಷಕ್ಕೆ ಕಾರಣವಾದರೆ ನಂತರದ ಕಾಲಘಟ್ಟದಲ್ಲಿ ಅವುಗಳು ಖಂಡಿತವಾಗಿಯೂ ನಮ್ಮಿಂದ ದೂರಾಗುತ್ತವೆ. ಬದಲಾವಣೆಗೆ ಒಳಪಡುತ್ತವೆ. ಇದು ಮತ್ತೆ ನಮ್ಮನ್ನು ಸಂತಸದಿಂದ ದೂರಕ್ಕೆ ಸರಿಸುತ್ತದೆ. ಇನ್ನು ನಮ್ಮ ನಿರೀಕ್ಷೆಗಳು ಫಲಿಸದೇ ಹೋದರೆ ಅವುಗಳು ಆ ಕ್ಷಣದಿಂದಲೇ ನಮ್ಮ ಅಸಂತೃಪ್ತಿ, ಅಸಂತೋಷಕ್ಕೆ ಕಾರಣವಾಗುತ್ತವೆ. ಅಂತೆಯೇ ನಾವು ಬದುಕಿನಲ್ಲಿ ಅತಿಯನ್ನು ನಿರೀಕ್ಷಿಸಿದೇ ವಾಸ್ತವವನ್ನು ಅರಿಯಬೇಕು. ಕಾಯಿಲೆಗಳು ನಮ್ಮನ್ನು ಕಾಡತೊಡಗಿದರೆ ಅವುಗಳನ್ನು ಅನುಭವಿಸಬೇಕು. ಅಪಮಾನ, ಅಪನಿಂದೆಗಳು ಬಂದರೆ, ಸಮಚಿತ್ತ ಭಾವ, ವಿನಯಶೀಲತೆ ತೋರಬೇಕು. ಬೇಸರವಾಯಿತೆಂದರೆ ಅದನ್ನು ಮತ್ತೊಬ್ಬರ ಮೇಲೆ ಹಾಕಿ ಅವರ ಮನಸ್ಥಿತಿಯನ್ನು ಕೆಡಿಸುವುದರ ಬದಲಾಗಿ ಒಂದಷ್ಟು ಕಾಲ ನಮ್ಮಷ್ಟಕ್ಕೆ ನಾವೇ ಮೌನವಾಗಿರುವುದು ಒಳಿತನ್ನುಂಟು ಮಾಡಬಲ್ಲದು. ಬಂದಿದ್ದೆಲ್ಲ ಬರಲಿ ಶಿವನ ದಯೆಯೊಂದಿರಲಿ ಎಂಬ ನಂಬಿಕೆಯೊಂದನ್ನು ಊರುಗೋಲಾಗಿಸಿಕೊಂಡು ಮುನ್ನಡೆಯಬೇಕು. ಅನಗತ್ಯವಾಗಿ ಸಮಸ್ಯೆಗಳನ್ನು ಸಂಕೀರ್ಣಗೊಳಿಸಿಕೊಳ್ಳದೇ ಸಹಜವಾಗಿ ಸ್ವೀಕರಿಸಿದರೆ ಅದು ಬದುಕಿನ ಹಾದಿಯನ್ನು ಸರಳಗೊಳಿಸಬಲ್ಲದು.



ಮತ್ತೊಮ್ಮೆ ಬರುತಿದೆ ಯುಗಾದಿ! ಮನೆಯವರೆಲ್ಲಾ ಮುದಗೊಂಡು ಸಿದ್ಧರಾಗಿದ್ದಾರೆ ಯುಗಾದಿಯನ್ನು ಸ್ವಾಗತಿಸಲು! ಒಳಾಂಗಣವನ್ನು ಒಪ್ಪ ಮಾಡಿ, ಒಬ್ಬಟ್ಟು ಮಾವಿನ ಕಾಯಿ ಚಿತ್ರಾನ್ನ ಮತ್ತಿತರ ತಿನಿಸುಗಳನ್ನು ಮನೆಯಲ್ಲೇ ತಯಾರಿಸಲು ಉತ್ಸುಕತೆಯಲ್ಲಿದ್ದಾರೆ. ಬನ್ನಿ, ಸ್ವಾಗತಿಸೋಣ ಯುಗಾದಿಯನ್ನು.

ವರುಷಕೊಂದು ಹೊಸತು ಜನ್ಮ

● ಸಿದ್ಧವನಹಳ್ಳಿ ವೀರೇಶ್ ಕುಮಾರ್

ದ.ರಾ. ಬೇಂದ್ರೆಯವರ ಯುಗಾದಿಯನ್ನು ಕುರಿತು ಬರೆದ ಕವಿತೆ 'ಯುಗ ಯುಗಾದಿ ಕಳೆದರು ಯುಗಾದಿ ಮರಳಿ ಬರುತಿದೆ /ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ' ಬಹು ಪ್ರಸಿದ್ಧ.

ಬಹುಶಹ ಯುಗಾದಿಗೆ ಸಂಬಂಧಪಟ್ಟಂತೆ ಇಂತಹ ಮತ್ತೊಂದು ಕವಿತೆ ಇರಲಾರದು. ಯುಗ ಎಂದರೆ ಸೃಷ್ಟಿಯ ಕಾಲಮಾನ; ಆದಿ ಎಂದರೆ ಆರಂಭ : ಅಂದರೆ ಒಂದು ಹೊಸ ಕಾಲಮಾನ ಆರಂಭ. ಭಾರತೀಯರು ಕೇವಲ ಕ್ಯಾಲೆಂಡರ್ ಬದಲಾಗುತ್ತದೆ ಅನ್ನೋ ಕಾರಣಕ್ಕೆ, ಯಾರೂ ಹುಟ್ಟಿದರೂ, ಯಾರೋ ಸಾವಿಗೀಡಾದರು, ಅನ್ನುವ ಕಾರಣಕ್ಕೆ ಹಬ್ಬಗಳನ್ನು ಆಚರಿಸುವುದಿಲ್ಲ. ಭಾರತದ ಪುರಾತನ ಆಚರಣೆಗಳು ಪ್ರಕೃತಿಯ ಜೊತೆಗೆ ತಾಳ ಹಾಕಿಕೊಂಡಿವೆ.

ಈ ಹಬ್ಬವು ಚೈತ್ರ ಮಾಸದ ಶುಕ್ಲ ಪಕ್ಷ ಪಾಡ್ಯದಲ್ಲಿ ಬರುತ್ತದೆ. ಬ್ರಹ್ಮದೇವನು ಚೈತ್ರ ಮಾಸದ ಪಾಡ್ಯದ ಸೂರ್ಯೋದಯವಾಗುತ್ತಿರುವಾಗ ಇಡೀ ವಿಶ್ವದ ಸೃಷ್ಟಿಯನ್ನ ಸೃಷ್ಟಿಸನೆಂದು ಈ ವಿಶ್ವದ ಕಾಲಗಳೊಂದಿಗೆ ಗ್ರಹ, ನಕ್ಷತ್ರ, ಋತು, ವರ್ಷಗಳನ್ನು ಆರಂಭಿಸಿದನೆಂದು ಪುರಾಣಗಳಲ್ಲಿ ಉಲ್ಲೇಖವಿದೆ. ಸಂವತ್ಸರವನ್ನು ಆಧರಿಸಿ ಚೈತ್ರ ಮಾಸದ ಹೊಸ ವರ್ಷದ ಪ್ರಾರಂಭದ ಸಂಕೇತವಾಗಿ ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ.

ಚಂದ್ರಮಾನ ಯುಗಾದಿ ಹಾಗೂ ಸೂರ್ಯಮಾನ ಯುಗಾದಿ ಎಂದು ಎರಡು ಹಬ್ಬಗಳು ನಮ್ಮಲ್ಲಿವೆ! ಚಂದ್ರನ ಚಲನೆಯನ್ನು ಆಧರಿಸಿ ಚಂದ್ರಮಾನ ಯುಗಾದಿ ಹಾಗೂ ಸೂರ್ಯ ಮೇಷ ರಾಶಿ ಪ್ರವೇಶಿಸುವ ದಿನದಿಂದ ಸೌರಮಾನ ಯುಗಾದಿ. ನಮ್ಮ ರಾಜ್ಯದ ಕರಾವಳಿಯಲ್ಲಿ, ಕೇರಳದಲ್ಲಿ, ತಮಿಳುನಾಡಿನಲ್ಲಿ ಸೌರಮಾನ ಯುಗಾದಿಯ ಸಂಭ್ರಮ ಜೋರು.

ಯುಗಾದಿ ಹಬ್ಬದಂದು ಸೇವಿಸುವ ಬೇವು ಮತ್ತು ಬೆಲ್ಲ ಮನುಷ್ಯ ಜೀವನದ ಕತ್ತಲು ಬೆಳಕು, ನೋವು ನಲಿವು, ಕಷ್ಟ ಸುಖ, ಹಾಗೂ ಲಾಭ ನಷ್ಟಗಳ ಪ್ರತೀಕ. ಬದುಕಿನಲ್ಲಿ ಎದುರಾಗುವ ಎಲ್ಲಾ ಸನ್ನಿವೇಶಗಳನ್ನು ಸಮಾನವಾಗಿ ತೆಗೆದುಕೊಂಡು ಜೀವನವನ್ನು ಸಾಗಿಸಬೇಕೆಂಬುದು ಸಾರ. ಇನ್ನು ಆರೋಗ್ಯ ದೃಷ್ಟಿಯಿಂದ ನೋಡುವುದಾದರೆ ಬೇವು ರೋಗನಿರೋಧಕ ಶಕ್ತಿಯನ್ನು ಹೊಂದಿದ್ದು, ಈ ಅವಧಿಯಲ್ಲಿ ಬಿಸಿಲು ಹೆಚ್ಚಾಗಿರುವುದರಿಂದ ನಾವು ಬಳಸುವ ಬೆಲ್ಲ ಆರೋಗ್ಯವನ್ನು ಸಮ ಸ್ಥಿತಿಯಲ್ಲಿಡುತ್ತದೆ.

ಈ ಹಬ್ಬದ ಮತ್ತೊಂದು ವಿಶೇಷತೆ ಎಂದರೆ ಪಂಚಾಂಗ ಶ್ರವಣ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ರಾಶಿ ಫಲ ವರ್ಷದ ಮಳೆ ಬೆಳೆ ಕಷ್ಟ ನಷ್ಟ ಹಾಗೂ ಶುಭಫಲಗಳ ಕುರಿತಾಗಿ ತಿಳಿದುಕೊಳ್ಳಲಾಗುತ್ತದೆ. ಹಬ್ಬದ ದಿನ ಸಂಜೆ ಚಂದ್ರ ದರ್ಶನ ಮಾಡುವುದಕ್ಕೂ ಪೌರಾಣಿಕ ಕಾರಣವಿದೆ. ಗಣಪತಿಯು ತನ್ನ ವಾಹನವಾದ ಇಲಿಯನ್ನು ಹತ್ತಿಕೊಂಡು ಹೋಗುತ್ತಿರುವಾಗ ಆಯತಪ್ಪಿ ಬಿದ್ದನು.ಇದನ್ನು ಕಂಡ ಚಂದ್ರ ಗಹಗಹಿಸಿ ನಕ್ಕನು. ಈ ಅಪಮಾನ ಸಹಿಸದ ಗಣೇಶ ತನ್ನ ಒಂದು ದಂತವನ್ನು ಮುರಿದು ಅವನ ಮೇಲೆಸೆದನು. ಅಂದಿನಿಂದ ಗಣೇಶನಿಗೆ ಏಕದಂತ ಎನ್ನುವ ಹೆಸರು ಬಂದಿತು. ಗಣೇಶ ಚತುರ್ಥಿಯ ದಿನ ಯಾರಾ ದರೂ ಚಂದ್ರನನ್ನು ನೋಡಿದರೆ ಅವರಿಗೆ ಅಪವಾದ ತಪ್ಪಿದ್ದಲ್ಲ ಎಂಬ ಶಾಪವನ್ನು ಕೊಟ್ಟನು. ಚಂದ್ರ ಏಕದಂತನ ಬಳಿ ಬಂದು ಕ್ಷಮೆಯನ್ನು ಕೇಳಿಕೊಂಡ ಮೇಲಿನ ಶಾಪ ವಿಮೋಚನೆಗಾಗಿ ಯುಗಾದಿ ಹಬ್ಬದ ದಿನ ಚಂದ್ರನ ದರ್ಶನದಿಂದ ಪಾಪ ಪರಿಹಾರವಾಗುತ್ತದೆ ಎಂಬ ಅಭಯವನ್ನು ನೀಡಿದನು. ಇವೆಲ್ಲವೂ ನಂಬಿಕೆಗಳು ಹಬ್ಬದಾಚರಣೆಗೆ ಸೇರಿಕೊಂಡಿವೆ.

ಬಿಸಿಲಿನಿಂದ ಶಕ್ತಿ!

ಯುಗಾದಿ ಸಂದರ್ಭದಲ್ಲಿ ನಾವು ಮಾಡುವ ಎಣ್ಣೆಯ ಸ್ನಾನ ದೇಹವನ್ನು ತಂಪಾಗಿಸಿ ಚರ್ಮದ ಕಾಂತಿಯನ್ನು ಹೆಚ್ಚಿಸಿ, ದೇಹದ ನೋವುಗಳನ್ನು ಕಡಿಮೆ ಮಾಡುತ್ತದೆ. ವಿಶೇಷವೆಂದರೆ, ಮೈಗೆ ಎಣ್ಣೆ ಹಚ್ಚಿಕೊಂಡು, ಬಿರುಬಿಸಿ ಲಿನಲ್ಲಿ ಓಡಾಡಿದರೆ, ಸಾಕಷ್ಟು ಪ್ರಮಾಣದ ಡಿ ವಿಟ ಮಿನ್ ದೇಹವನ್ನು ಸೇರುತ್ತದೆ ಎಂದು ತಜ್ಞರು ಹೇಳಿ ದ್ದಾರೆ! ಇದೇ ಕೆಲಸವನ್ನು ಹಬ್ಬದ ದಿನ, ಆಚರಣೆಯ ನೆಪದಲ್ಲಿ ನಮ್ಮ ರಾಜ್ಯದವರು ಮಾಡುವುದು ವಿಸ್ಮಯದ ವಿಚಾರ ಎಂದೇ ಹೇಳಬಹುದು!

ವಿಶ್ವಾವಸು ನಾಮ ಸಂವತ್ಸರ

ಈ ಸಲದ ವಿಶ್ವಾವಸು ನಾಮ ಸಂವತ್ಸರದ ಯುಗಾದಿಯನ್ನು ವಿಶಿಷ್ಟವಾಗಿ ಆಚರಿಸಲು, ನಾವೆಲ್ಲರೂ ಮನಸ್ಸು ಮಾಡಬೇಕು! ನಗರಗಳಲ್ಲಿ ಹಬ್ಬದಾಚರಣೆಯು ಕಳೆದ ಒಂದೆರಡು ದಶಕಗಳಲ್ಲಿ ತನ್ನ ಸ್ವರೂಪವನ್ನು ಬದಲಿಸಿಕೊಂಡು, ಆನ್‌ಲೈನ್ ಸಿಹಿತಿನಿಸುಗಳ ಆಚರಣೆಯಾಗುತ್ತಿದೆ; ಪ್ಲಾಸ್ಟಿಕ್ ತೋರಣ, ಸ್ವಿಗಿ ಮೂಲಕ ಊಟ, ಅಂಗಡಿಗಳಲ್ಲಿ ಕೃತಕ ರಾಸಾಯನಿಕ ಬೆರೆಸಿ ತಯಾರಾದ ಹೋಳಿಗೆ, ಸಿಹಿತಿನಿಸುಗಳನ್ನು ತಿನ್ನುವುದು ಮಾಮೂಲಿ ಎನಿಸಿದೆ. ಕೊನೆಯ ಪಕ್ಷ ಹಬ್ಬದ ದಿನವಾದರೂ, ಮನೆಯಲ್ಲೇ ಸರಳವಾಗಿ ತಯಾರಿಸಿದ ಅಡುಗೆ, ಹಳೆಯ ಕಾಲದ ಸಿಹಿ ತಿನಿಸು, ಒಬ್ಬಟ್ಟುಗಳನ್ನು ಸೇವಿಸುವ ಸಂಕಲ್ಪ ಮಾಡಿ, ಪುರಾತನ ಕಾಲದಿಂದ ಆಚರಣೆಗೊಳ್ಳುತ್ತಾ ಬಂದಿರುವ ಯುಗಾದಿ ಹಬ್ಬವನ್ನು ಸಾಕರಿಸಕೊಳ್ಳೋಣ, ಯುಗಾದಿಯ ಪರಂಪರೆಗೆ ಅಳಿಲು ಸೇವೆ ಮಾಡಿ, ಜನಪದ ಪದ್ಧತಿಯನ್ನು ರೂಢಿಸಿಕೊಳ್ಳೋಣ, ಅಲ್ಲವೆ!

ಸಹೃದಯರ ಬೆಂಬಲ

ನಿನ್ನ ಜೀವಿತವೆಲ್ಲ ನಿನ್ನ ಕೈ ಮಾಳ್ಕೆಯೇಂ?
ಅನ್ಯಶಕ್ತಿಗಳೆನಿತೊ ಬೆರೆತಿರುವುವಲ್ಲಿ?
ಅನ್ನವಿಡುವರು, ತಿಳಿವನೀವರ್, ಒಡನಾಡುವರು
ನಿನ್ನ ಬಾಳ್ಗಿವರಿರರೆ? - ಮಂಕುತಿಮ್ಮ॥

ನಿನ್ನ ಜೀವನದಲ್ಲಿ ನೀನು ಅದೆಷ್ಟು ಸ್ವತಂತ್ರವಾಗಿ ನೀನು ಜೀವನ ಮಾಡಿರುವೆ? ನೀನೇದರೂ ಸ್ವಯಂಭುವಾಗಿರುವೆಯಾ? ಎಂದಿಗೂ ನೀನು ಸ್ವತಂತ್ರವಾಗಿ ಬೆಳೆದಿರುವುದಿಲ್ಲ. ನಿನ್ನ ಬೆಳವಣಿಗೆಯಲ್ಲಿ ಅದೆಷ್ಟೋ ಅನ್ಯಶಕ್ತಿಗಳು ಬೆರೆತು ಹೋಗಿವೆ. ನೀನು ಜಗಕೆ ಬಂದುದೇ ತಂದೆ ತಾಯಿಯವರ ಭಿಕ್ಷೆ, ಪ್ರಕೃತಿ ನಿನಗೆ ಅನ್ನ ನೀಡಿ ಸಲಹಿದ್ದು, ಗುರು ಎಂಬುವನು ಅರಿವನ್ನು ಮೂಡಿಸಿ ಜ್ಞಾನಿಯಾಗಿಸಿದವರು, ವ್ಯವಸ್ಥೆಯು ಒಡನಾಡಿಯಾಗಿ ಬೆನ್ನಿಗೆ ನಿಂತಿತು, ಹೀಗೆ ಎಲ್ಲರ ಕೃಪೆಯಿಂದ ನೀನು ಇಂದು ಈ ಜಗದಲ್ಲಿದ್ದೀಯೆ ಹೊರತು ನೀನು ಎಂದಿಗೂ ಸ್ವತಂತ್ರನಲ್ಲ.

ನಮಗೆ ನಾವೇ ನಾವೆಷ್ಟು ಸ್ವತಂತ್ರರು ? ಈ ಭುವಿಗೆ ಕಾಲಿಡುವಾಗ ಯಾರ ಸಹಾಯವಿಲ್ಲದೆ, ಯಾರ ಹಂಗೂ ಇಲ್ಲದೆ ನಮಗೆ ನಾವೇ ರೂಪುಗೊಂಡಿದ್ದೇವೆಯೇ ? ಎಂಬ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರ ಹುಡುಕಲು ಹೋದರೆ ನಾವು ಎಂದಿಗೂ ಸ್ವತಂತ್ರರಲ್ಲವೇ ಅಲ್ಲ. ನಾವು ಹಿಂದೆಯೂ, ಇಂದಿಗೂ, ಮುಂದಕ್ಕೂ ಪರಾವಲಂಬಿಗಳೇ ಹೌದು. ನಾವುಗಳೇನು ಸ್ವಯಂಭುಗಳಂತೂ ಅಲ್ಲವೇ ಅಲ್ಲ. ತಂದೆ ತಾಯಿಯವರ ಮಿಲನದ ಫಲವಾಗಿ, ನಂತರ ತಾಯಿಯ ಗರ್ಭದಲ್ಲಿ ಭ್ರೂಣವಾಗಿ, ತಾಯಿಯ ನೆರವಿನಿಂದ ಭ್ರೂಣ ಬೆಳೆದು ಈ ಜಗತ್ತಿಗೆ ಕಾಲಿರಿಸುತ್ತೇವೆ. ಇದು ತಂದೆ ತಾಯಿಯವರ ಕೃಪೆಯಾಗಿಯೇ ಇರುತ್ತದೆ. ನಂತರ ಮಗುವಾಗಿದ್ದಾಗ ತಂದೆ ತಾಯಿಯವರ ಹಾರೈಕೆಯಲ್ಲಿ ಬೆಳೆಯುತ್ತೇವೆ. ಪ್ರೌಢಾವಸ್ಥೆಗೆ ಬಂದಾಗ ಗುರು ಹಿರಿಯರ, ಮಾರ್ಗದರ್ಶಕರ ಮಾರ್ಗದರ್ಶನದಲ್ಲಿ, ಈ ಪ್ರಕೃತಿ ಪರಿಸರ ನೋಡುತ್ತಾ ಅರಿವು ಎಂಬ ಜ್ಞಾನವನ್ನು ಸಂಪಾದಿಸುತ್ತೇವೆ. ನಂತರದೆ ಯೌವ್ವಾನವಸ್ಥೆ ತಲುಪುವಷ್ಟರಲ್ಲಿ ಅದೆಷ್ಟು ಒಡನಾಡಿಗಳು ಸ್ನೇಹಿತರಾಗಿ, ಹೆಂಡತಿ ಯಾಗಿ, ಮಕ್ಕಳಾಗಿ, ನಮ್ಮನ್ನು ಹರಸುವವರಾಗಿ ನಮ್ಮ ಜೀವನದಲ್ಲಿ ಬಂದು ನಮ್ಮ ಬೆನ್ನಿಗೆ ನಿಂತು ನಮ್ಮ ಕಷ್ಟ ಸುಖಗಳಲ್ಲಿ ನಮಗೆ ಸಹಾಯ ಮಾಡುತ್ತಾ ಇರುತ್ತಾರೆ. ನಂತರ ಮುಪ್ಪಿನ ಕಾಲದಲ್ಲಿ ನಮ್ಮುದರದಲ್ಲಿ ಹುಟ್ಟಿದ ಮಕ್ಕಳೋ ಅಥವಾ ಬೇರೆಯಾರೋ ನಮ್ಮನ್ನು ಮರಣಿಸುವವರೆಗೆ ನಮ್ಮನ್ನು ಸಲಹುತ್ತಾರೆ. ಹೀಗೆ ಹುಟ್ಟಿನಿಂದ ಸಾಯುವವರೆಗೂ ನಾವು ಪರಾವಲಂಬಿಗಳೇ ಹೊರತು ನಾವು ಎಂದಿಗೂ ಸ್ವಯಂಭುಗಳಾಗಿ ಜನಿಸಿ, ಬೆಳೆದು, ಮರಣಿಸುವವರಲ್ಲ. ನಾವುಗಳು ಕೆಲವೊಮ್ಮೆ ಅರಿವಿದ್ದೋ ಇಲ್ಲದೆಯೋ ನಾನು ಸರ್ವ ಸ್ವತಂತ್ರ, ನಾನು ಯಾರ ಸಹಾಯವೂ ಇಲ್ಲದೆ ಈ ಜಗದೊಳಗೆ ಜೀವಿಸುತ್ತಿದ್ದೇನೆ ಎಂದು ಕೊಳ್ಳುತ್ತೇವೆ. ಇದು ತಪ್ಪು. ಸೂಕ್ಷ್ಮವಾಗಿ ನಾವು ಯೋಚಿಸಿದಾಗ ನಿಜವೇನೆಂದು ನಮ್ಮ ಅರಿವಿಗೆ ಬರುತ್ತದೆ. ಆದುದರಿಂದ ನಮ್ಮ ಮನದಲ್ಲಿ ನಾನು, ನನ್ನದು, ನನ್ನಿಂದಲೇ, ಎಂಬ ದುರಾವರ್ತನೆಯನ್ನು ತೋರದೆ, ವಾಸ್ತವತೆಯ ಅರಿವಿನಲ್ಲಿ ಬದುಕುವುದು ಸೂಕ್ತ. ಈ ಜಗದಲ್ಲಿ ಹುಟ್ಟಿದ ಪ್ರತಿಯೊಬ್ಬರನ್ನೂ ಯಾವುದೋ ಕಾಣದ ಒಂದು ಸೂತ್ರವು ನಮ್ಮ ಅರಿವಿಗೆ ಬಾರದಂತೆ ನಮ್ಮನ್ನು ಬಂಧಿಸಿ ನಮ್ಮನ್ನು ಪರಾವಲಂಬಿಯಾಗಿ ಮಾಡಿ, ನಮ್ಮ ಜೀವನವನ್ನು ನಡೆಸುತ್ತಲಿದೆ. ಇದು ನಮ್ಮ ಜೀವನದ ಕಥೆಯಾದರೆ ವೈಯಕ್ತಿಕವಾಗಿ ಹೇಳುವುದಾದರೆ, ರುಚಿಯು ನಾಲಿಗೆಯ ಎಂಜಲು, ಶಬ್ದ ಕಿವಿಯ ಎಂಜಲು, ನೋಟ ಕಣ್ಣಿನೆಂಜಲು, ಸ್ಪರ್ಶ ಚರ್ಮದೆಂಜಲು, ವಾಸನೆಯು ಮೂಗಿನೆಂಜಲೇ ಆಗಿದೆ. ಮೊದಲಿಗೆ ರುಚಿ, ಸ್ಪರ್ಶ, ನೋಟ, ಶಬ್ದ, ವಾಸನೆಗಳನ್ನು ನಮ್ಮ ಪಂಚೇಂದ್ರಿಯಗಳು ಸವಿದ ನಂತರವಷ್ಟೇ ನಮ್ಮ ಮನಸ್ಸಿಗೆ ತಿಳಿಯುವುದು. ಇಲ್ಲಿಯೂ ಸಹ ವೈಯಕ್ತಿಕವಾಗಿ ನಾವುಗಳು ಪರಾವಲಂಬಿಗಳೇ ಎನ್ನುವುದೂ ಸಹ ನಗ್ನ ಸತ್ಯವೇ ಆಗಿದೆ. ಪಾಲ್ಕುರಿಕೆ ಸೋಮನಾಥ ಕವಿಯು ತನ್ನ ಸೋಮೇಶ್ವರ ರಗಳೆಯಲ್ಲಿ:

ಕೆಲವಂ ಬಲ್ಲವರಿಂದ ಕಲ್ತು,
ಕೆಲವಂ ಶಾಸ್ತ್ರಂಗಳಂ ಕೇಳುತಂ,
ಕೆಲವಂ ಮಾಳ್ಪವರಿಂದ ಕಂಡು,
ಕೆಲವಂ ಸುಜ್ಞಾನದಿಂ ನೋಡುತಂ ॥
ಕೆಲವಂ ಸಜ್ಜನಸಂಗದಿಂದಲರಿಯಲ್
ಸರ್ವಜ್ಞನಪ್ಪಂ ನರಂ । ಪಲವುಂ ಪಳ್ಳ ಸಮುದ್ರವೈ
ಹರಹರಾ ಶ್ರೀ ಚೆನ್ನಸೋಮೇಶ್ವರಾ

ಎಂದು ಹೇಳಿರುವುದು ಬಹಳವೇ ಆಪ್ತವಾಗುತ್ತದೆ. ಹಾಗಾಗಿ ಮನುಷ್ಯನು ಎಂದಿಗೂ ತನ್ನನ್ನು ತಾನೇ ರೂಪಿಸಿಕೊಂಡವನಲ್ಲ, ಈತನು ಎಂದಿಗೂ ಪರಾವಲಂಬಿಯಾಗಿಯೇ ತನ್ನ ಜೀವನವನ್ನು ಕಳೆಯುತ್ತಾನೆ ಎಂಬುದು ಈ ಕಗ್ಗದಲ್ಲಿ ಕಾಣುತ್ತದೆ.

ಶುಭೋದಯಕ್ಕೊಂದು ಕಗ್ಗ

● ರವೀ ಚಿಕ್ಕನಾಯಕನಹಳ್ಳಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

ಎಡದಿಂದ ಬಲಕ್ಕೆ

1. ಶ್ರೀರಾಮನ ತಂದೆ (4)
3. ದೃಷ್ಟಿ ಪರಿಹಾರಕ್ಕೆ ಆರತಿ ಮಾಡು (4)
5. ಲೋಹದ ಪಟ್ಟಿ (2)
6. ಲಲಿತಕಲೆಗಳನ್ನು ತಿಳಿದವನೀತ (4)
7. ಇದೊಂದು ಬಗೆಯ ಚರ್ಮ ವಾದ್ಯ (4)
10. ಮೃತ್ಯು ದೇವತೆ (2)
12. ಮಾನಿನಿಯ ಸಂಶಯ (3)
13. ದಂಡೆ, ಅಂಚು (2)
16. ಮರ್ಯಾದೆ, ಮರ್ಯಾದೆ (4)
18. ಅಡ್ಡಿ, ಆಕ್ಷೇಪಣೆ (4)
19. ನೀರು ಎರಡಕ್ಷರದಲ್ಲಿ (2)
20. ಗುಮಾಸ್ತ, ಲೆಕ್ಕ ಬರೆಯುವವನು (4)
21. ಅರಳುವಿಕೆ (4)

ಮೇಲಿನಿಂದ ಕೆಳಕ್ಕೆ

2. ಕ್ಷುದ್ರಲೋಹಗಳನ್ನು ಚಿನ್ನವನ್ನಾಗಿ ಮಾರ್ಪಡಿಸುವ ವಿದ್ಯೆ (4)
3. ದಟ್ಟವಾದ, ತುಂಬಿದ (3)
4. ನೆಲ ಅಥವಾ ಬೆಟ್ಟವನ್ನು ಕೊರೆದು ಮಾಡಿದ ದಾರಿ (3)
6. ಗಿಡಮೂಲಿಕೆಗಳಿಂದ ತೆಗೆದ ರಸ (3)
8. ದುಃಖದಿಂದ ಕೂಡಿದ ಎಂದರ್ಥ (3)
9. ಮತ್ತೊಂದು ದೋಷ ಅಥವಾ ತಪ್ಪು (3)
11. ನವಿಲಿಗೆ ಮತ್ತೊಂದು ಹೆಸರು (3)
14. ಗಂಡು ಕುರಿ (3)
15. ತಿಳಿಯದೆ ನಡೆದ (4)
17. ಬಟ್ಟೆ ಒಗೆದು ಶುಚಿಮಾಡಿಕೊಡುವವನು (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ದಶರಥ 3. ನಿವಾಳಿಸು 5. ಕಂಬಿ 6. ಕಲಾವಿದ 7. ಡಮರುಗ 10. ಯಮ 12. ಗುಮಾನಿ 13. ತಟ 16. ಪುರಸ್ಕಾರ 18. ತಕರಾರು 19. ಜಲ 20. ಕರಣಿಕ 21. ವಿಕಸನ

ಮೇಲಿನಿಂದ ಕೆಳಕ್ಕೆ: 2. ರಸವಿದ್ಯೆ 3. ನಿಬಿಡ 4. ಸುರಂಗ 6. ಕಷಾಯ 8. ರುದಿತ 9. ಪ್ರಮಾದ 11. ಮಯೂರ 14. ಟಗರು 15. ಆಕಸ್ಮಿಕ 17. ರಜಕ

ಸಂತೋಷವಾಗಿರಲು ಏನು ಮಾಡಬೇಕು?

ತಮ್ಮ ಪ್ರಥಮ ಸಂಚಾರ ಕಾಲದಲ್ಲಿ ಶ್ರೀ ಶ್ರೀ ಚಂದ್ರಶೇಖರ ಸ್ವಾಮಿಗಳು ತಂಗಿದ್ದ ಒಂದು ಗ್ರಾಮದಲ್ಲಿ ಅಲ್ಲಿನ ಮುಖ್ಯಸ್ಥರು ಗುರುದೇವರ ದರ್ಶನಕ್ಕಾಗಿ ಬಂದರು. ಅವರಲ್ಲಿ ಆ ಸ್ಥಳದ ಎಲ್ಲಾ ಪ್ರಮುಖರೂ ಇದ್ದರು. ಅವರು ಗುರುಗಳಿಗೆ ಫಲ ಪುಷ್ಪಗಳನ್ನರ್ಪಿಸಿ, ಸಾಷ್ಟಾಂಗ ವಂದನೆಗಳನ್ನು ಸಮರ್ಪಿಸಿ, ತಮ್ಮ ಗ್ರಾಮದಲ್ಲಿ ಇರುವ ಎಲ್ಲರಿಗೂ ಸುಖ ನೆಮ್ಮದಿಗಳು ದೊರಕುವಂತೆ ಆಶೀರ್ವದಿಸಬೇಕೆಂದು ಗುರುವನ್ನು ಪ್ರಾರ್ಥಿಸಿದರು.

ಶ್ರೀ ಶ್ರೀಗಳವರು ಅವರನ್ನೆಲ್ಲಾ ಕುಳಿತುಕೊಳ್ಳುವಂತೆ ಸೂಚಿಸಿ, ಅವರ ವೇಷಭೂಷಣಗಳನ್ನು ನೋಡಿ ಪ್ರಶ್ನಿಸಿದರು.

''ಏಕೆ? ನೀವೆಲ್ಲರೂ ಸುಖವಾಗಿ ಇರಲೇಬೇಕಲ್ಲ ?''

''ಇಲ್ಲಾ ಸ್ವಾಮೀ, ಏನೋ ಅತೃಪ್ತಿ, ಆತಂಕ ಚಿಂತೆಗಳು ನಮ್ಮನ್ನು ಕಾಡುತ್ತಿವೆ ''

''ಏಕೆ? ನಿಮ್ಮ ಪೂರ್ವಿಕರು. ನಿಮ್ಮ ಹಿಂದಿನ ತಲೆಮಾರಿನವರು ಸುಖ ಸಂತೋಷದಿಂದ ಇರಲಿಲ್ಲವೇ?''

''ಇದ್ದರು ಸ್ವಾಮೀ, ಎಲ್ಲರೂ ಸಾಮಾನ್ಯವಾಗಿ ಸಂತೋಷ, ಶಾಂತಿಯಿಂದಲೇ ಇದ್ದರು''

''ಇದೇ ಗ್ರಾಮದಲ್ಲಿದ್ದ ನಿಮ್ಮ ತಂದೆ, ಅಜ್ಜ ಇತ್ಯಾದಿ ಪೂರ್ವಿಕರು ನಿಮಗಿಂತ ತೃಪ್ತರಾಗಿದ್ದು ಸಂತೋಷವಾಗಿದ್ದರು. ಈಗ ನಿಮಗಿರುವ ನಾಗರಿಕ ಸೌಲಭ್ಯಗಳಿಗೆ ಹೋಲಿಸಿದರೆ, ನಿಮ್ಮ ಹಿರಿಯರ ಕಾಲದಲ್ಲಿ ಈ ಗ್ರಾಮ ಹೀಗಿರಲಿಲ್ಲ. ತುಂಬಾ ಹಿಂದುಳಿದಿತ್ತು. ಚೆನ್ನಾದ ರಸ್ತೆಗಳು ಇರಲಿಲ್ಲ. ವಿದ್ಯುತ್ ದೀಪದ ಸೌಕರ್ಯ ಇರಲಿಲ್ಲ. ಮಣ್ಣಿನ ಹೆಂಚಿನಮನೆಗಳಲ್ಲಿ ಅವರು ವಾಸಿಸುತ್ತಿದ್ದರು. ನೀರಿಗಾಗಿ ಅವರು ದೂರದ ಕೆರೆಕಟ್ಟೆಗಳಿಗೆ ಹೋಗಬೇಕಾಗುತ್ತಿತ್ತು. ಅಂಗಡಿ ಮುಂಗಟ್ಟುಗಳ ಸೌಕರ್ಯ ಹೀಗಿರಲಿಲ್ಲ. ಈಗಿನಂತೆ ಶಾಲೆಗಳಿರಲಿಲ್ಲ. ಇಷ್ಟೆಲ್ಲಾ ಅನಾನುಕೂಲಗಳಿದ್ದರೂ ಅವರು ತೃಪ್ತರಾಗಿದ್ದರು. ಈಗ ನಿಮಗೆ ಇವೆಲ್ಲ ಸುಖ ಸಾಧನಗಳು ಇದ್ದೂ, ಇನ್ನೂ ಅಧಿಕ ತರವಾದ ಸಾಧನ ಸೌಕರ್ಯಗಳಿದ್ದೂ ನೀವು ಸುಖವಾಗಿಲ್ಲ ಎನ್ನುತ್ತೀರಿ ಏಕೆ?''

''ದಿಟ, ಮಹಾ ಸ್ವಾಮೀ, ನಾವು ನಮ್ಮ ಹಿಂದಿನವರಿಗಿಂತ ಹೆಚ್ಚು ಲೌಕಿಕ ಸೌಲಭ್ಯಗಳನ್ನು ಪಡೆದಿದ್ದೇವೆ. ಸಂಪಾದನೆಯನ್ನು ಮಾಡುತ್ತಿದ್ದೇವೆ. ಆದರೂ ಅವರ ಮುಖದಲ್ಲಿದ್ದ ಸಂತೋಷಭಾವ, ತೃಪ್ತಭಾವ ನಮಗೆ ದೊರಕುತ್ತಿಲ್ಲ'.

'ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಲೌಕಿಕ ಸುಖ ಸಾಧನಗಳು ಎಷ್ಟೇ ಇದ್ದರೂ, ಅವು ಸುಖವನ್ನು, ಶಾಂತಿಯನ್ನೂ ತರಲಾರವು. ಇವಾವುವೂ ಅಗತ್ಯವಾದಷ್ಟು ಮಟ್ಟದಲ್ಲಿ ಇಲ್ಲದಿದ್ದರೂ, ಅವರು ಸುಖ ಸಂತೋಷದಿಂದ ಇದ್ದರು. ಹೇಗೆ? ಅವರು ಸದಾ ತಮ್ಮ ಮನಸ್ಸನ್ನು ಅಂಕುಶದಲ್ಲಿ ಇಟ್ಟಿದ್ದರು. ತಮ್ಮ ಬಾಳಿನ ಗುರಿಯೇನು, ಅದನ್ನು ಸಾಧಿಸುವ ಬಗೆ ಹೇಗೆ ಎಂಬುದು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು. ಪುರುಷಾರ್ಥಗಳಲ್ಲಿ ಮೊದಲನೆಯದಾದ ಧರ್ಮವನ್ನು ಅವಲಂಬಿಸಿದ್ದರು. ಕಾಮ ಕ್ರೋಧಗಳನ್ನು ದೂರವಿಟ್ಟಿದ್ದರು. ಧರ್ಮ ಸಮ್ಮತವಾದ ಅರ್ಥ ಸಂಪಾದನೆ, ಆಸೆಗಳನ್ನು ಆರಿಸಿಕೊಂಡಿದ್ದರು. ಅವು ಅವರಿಗೆ ತೃಪ್ತಿ ಸಂತೋಷಗಳನ್ನು ಕೊಡುತ್ತಿದ್ದವು'.

'ಈಗ ನೀವು ಲೌಕಿಕ ಸುಖಾನ್ವೇವೇಷಣೆಯಲ್ಲಿ ಇಂದ್ರಿಯ ತೃಪ್ತಿಯೇ ಸುಖವೆಂದು ಭ್ರಮಿಸಿದ್ದೀರಿ, ಆಂತರಿಕ ನೆಮ್ಮದಿಯನ್ನು ಕೆಡೆಸಿಕೊಂಡಿದ್ದೀರಿ. ಪ್ರಾಪಂಚಿಕ ವಸ್ತುಗಳು ಸುಖವನ್ನು ಕೊಡಲಾರದು. ಅವುಗಳ ಸಂಗ್ರಹವು ಹೆಚ್ಚಿದಷ್ಟು ಇನ್ನೂ ಬೇಕೆಂಬ ಹಾಹಾಕಾರ ಉಂಟಾಗುತ್ತದೆ. ಹಣವಾಗಲಿ, ವಸ್ತುಗಳಾಗಲೀ ತಕ್ಕಮಟ್ಟಿನ ಪ್ರಾಪಂಚಿಕ ಸೌಲಭ್ಯವನ್ನು ತರಬಲ್ಲವೇ ವಿನಾ ಸುಖ ಶಾಂತಿಗಳನ್ನು ತರಲಾರವು. ಅವುಗಳ ಸಂಗ್ರಹ ಮಿತಿಮೀರಿದಾಗ ಮನಸ್ಸು ಕ್ಷೋಭೆಗೆ ಒಳಗಾಗಿ ಇದ್ದ ನೆಮ್ಮದಿಯೂ ನಾಶವಾಗುತ್ತದೆ.'

'ನಿಮ್ಮ ಪೂರ್ವಿಕರು ಈ ಗುಟ್ಟನ್ನು ಅರಿತಿದ್ದರು. ಅವರು ಕಾಮ ಕ್ರೋಧಗಳನ್ನು ದೂರವಿರಿಸಿ ತೃಪ್ತಿ, ಪ್ರೀತಿಗಳ ಸ್ನೇಹವನ್ನು ಸಂಪಾದಿಸಿದ್ದರು. ಸುಖ ನೆಮ್ಮದಿಗಳು ಅವರನ್ನು ಎಡಬಿಡದೆ ಅನುಸರಿಸುತ್ತಿವೆ. ನೀವೂ ಅವರಂತೆಯೇ ''ಧರ್ಮ''ವನ್ನು ಅವಲಂಬಿಸಿದರೆ, ಆ ಸುಖ ನೆಮ್ಮದಿಗಳು ನಿಮಗೂ ಲಭ್ಯವಾಗುತ್ತವೆ' ಎಂದು ಉಪದೇಶವಿತ್ತರು.

ನಿಜವೇ ಅಲ್ಲವೇ? ಇಂದು ಎಲ್ಲಾ ಸೌಲಭ್ಯಗಳಿದ್ದರೂ ನಾವು ಒಳಗಿನಿಂದ ಸಂತೋಷವಾಗಿಲ್ಲ. ಅದೆಷ್ಟು ಹೊಸ ಬಟ್ಟೆ, ಹೊಸ ವಸ್ತುಗಳು, ಊಟ, ಓಡಾಟ ಯಾವುದರಿಂದಲೂ ನಮಗೆ ಸಂತೃಪ್ತಿ ಇಲ್ಲ. ಆದ್ದರಿಂದಲೇ ನಮ್ಮ ಮನಸ್ಸನ್ನು ಹಿಡಿತದಲ್ಲಿರಿಸಿಕೊಂಡು ಧ್ಯಾನ, ಯೋಗ, ಒಳ್ಳೆಯ ಓದುವಿಕೆ, ಸಜ್ಜನರ ಸಹವಾಸ

ಇವುಗಳಿಂದ ಆಂತರಿಕವಾಗಿ ಹದಗೊಳ್ಳಬೇಕು. ಸಂತೃಪ್ತಿ ಸಮಾಧಾನ ನಮಗೆ ಹೊರಗೆಲ್ಲೋ ಸಿಗುವ ವಸ್ತುವಲ್ಲ. ಅದು ನಮ್ಮೊಳಗೆ ಹುಟ್ಟಿಬಿಡಬೇಕು ಆಗ ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ಸಂತೋಷವಾಗಿರುತ್ತೇವೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯುಟ್ಯೂಬ್ ಚಾನೆಲ್‌ನಲ್ಲಿ!

ಕಮಲದೆಲೆಯ ಉದಾಹರಣೆ

ಜೀವನವನ್ನು ಒಳಗೊಂಡಂತೆ ಪ್ರತಿ ಭೌತಿಕ ವ್ಯವಸ್ಥೆಯು ವಿವಿಧ ಆವಕವನ್ನು ಪಡೆಯುತ್ತದೆ ಹಾಗೂ ಉತ್ಪಾದನೆಯನ್ನು ಮಾಡುತ್ತದೆ. ನಾವು ಆಡುವ ಮಾತು ಹಾಗೂ ಮಾಡುವ ಕೃತ್ಯಗಳನ್ನು ಸದಾ ಅಳೆಯುತ್ತಿರುತ್ತೇವೆ. ಅಲ್ಲದೆ ಉಳಿದವರ ಕೃತ್ಯಗಳ ಬಗ್ಗೆ ಹಾಗೂ ನಮ್ಮ ಸುತ್ತಲಿನ ವಿವಿಧ ಸಂದರ್ಭದ ಬಗ್ಗೆ ನಾವು ನಿರ್ಣಯಿಸುತ್ತೇವೆ. ನಿಜವಾಗಿ ನೋಡಿದರೆ ವಿಕಾಸದ ಪ್ರಕ್ರಿಯೆಯಲ್ಲಿ ನಿರ್ಣಯದ ಭಯವು ಅಸ್ತಿತ್ವಕ್ಕೆ ತುಂಬಾ ಅವಶ್ಯವಿದೆ. ಸಮಸ್ಯೆ ಎಂದರೆ ಆ ನಿರ್ಣಯಕ್ಕೆ ಯಾವುದೇ ಅಳತೆ ಗೋಲು ಇಲ್ಲ. ಬಹಳ ಸಾರಿ ನಾವು ಕೇವಲ ಗ್ರಹಿಕೆ ಮತ್ತು ನಂಬಿಕೆಯ ಅಜ್ಞಾನದ ಮೇಲೆ ಆಧಾರಿತರಾಗುತ್ತೇವೆ. ನಮ್ಮ ನಂಬಿಕೆಗೆ ಅನುಗುಣವಾಗಿ ಯಾವುದಾದರೂ ಕೃತ್ಯ ನಡೆದರೆ ನಾವು ತೃಪ್ತಿ ಹೊಂದುತ್ತೇವೆ. ಹಾಗೂ ಸಂತೋಷ ಪಡುತ್ತೇವೆ.

ಈ ಸಂದರ್ಭದಲ್ಲಿ ಕೃಷ್ಣ ಹೇಳುತ್ತಾನೆ -ಯಾರು ಯೋಗದಿಂದ ಒಂದಾಗಿರುತ್ತಾರೋ, ತನ್ನನ್ನು ತಾನು ಶುದ್ಧಗೊಳಿಸಿ ಗೆದ್ದಿರುತ್ತಾನೋ, ಇಂದ್ರಿಯಗಳನ್ನು ನಿಗ್ರಹಿಸಿರುತ್ತಾನೋ, ತನ್ನಲ್ಲಿರುವ ಆತ್ಮವೇ ಎಲ್ಲಾ ಜೀವಿಗಳಲ್ಲಿಯೂ ಇರುತ್ತದೆ ಎಂದು ತಿಳಿಯುತ್ತಾನೋ, ಅಂತಹವನು ಕಾರ್ಯ ಮಾಡುತ್ತಿದ್ದರೂ ಅವನಿಗೆ ಯಾವುದೇ ಕಳಂಕ ತಟ್ಟುವುದಿಲ್ಲ. ಯಾವಾಗ ನಮ್ಮ ಕೃತ್ಯಗಳಿಗೆ ಕಳಂಕ ತಗಲುವದಿಲ್ಲ ಎಂಬುದಕ್ಕೆ ಕೃಷ್ಣ ನೀಡಿರುವ ಭರವಸೆಇದು.

ಕೃಷ್ಣನ ಪ್ರಕಾರ ಶುದ್ಧ ವ್ಯಕ್ತಿಯು ಮಾಡಿದ ಕೃತ್ಯಗಳಿಗೆ ಕಳಂಕ ತಟ್ಟುವುದಿಲ್ಲ. ಉದಾಹರಣೆ ದ್ವೇಷ ಮತ್ತು ಆಸೆಗಳಿಂದ ಮುಕ್ತನಾದ ವ್ಯಕ್ತಿ ಹಾಗೂ ತನ್ನಲ್ಲಿರುವ ಆತ್ಮವೇ ಎಲ್ಲಾ ಜೀವಿಗಳಲ್ಲಿಯೂ ಇದೆ ಎಂದು ತಿಳಿದ ವ್ಯಕ್ತಿ (5.3) ತನ್ನಲ್ಲಿರುವ ಆತ್ಮವನ್ನೇ ಎಲ್ಲ ಜೀವಿಗಳಲ್ಲಿಯೂ ಗುರುತಿಸಿರುವ ವ್ಯಕ್ತಿ ಕಳಂಕಿತ ಕೃತ್ಯಗಳನ್ನಾಗಲಿ, ಅಪರಾಧಗಳನ್ನಾಗಲಿ ಮಾಡುವ ಸಂದರ್ಭದಲ್ಲಿ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ನಮ್ಮಲ್ಲಿ ಹಾಗೂ ಇತರರಲ್ಲಿ ಭೇದವೆಣಿಸಿ ಮಾಡಿದ ಎಲ್ಲಾ ಕರ್ಮಗಳೂ ಕಳಂಕ ಪೂರ್ಣವಾಗಿರುತ್ತವೆ.

ನಮ್ಮ ಸುತ್ತಲಿನ ಸಂದರ್ಭಗಳ ಬಗ್ಗೆ ನಾವು ನ್ಯಾಯ ನಿರ್ಣಯ ಕೊಡುವ ಪ್ರಸಂಗ ಬಂದಾಗ ಕೃಷ್ಣ ಹೇಳುತ್ತಾನೆ - ಯಾರು ತಮ್ಮ ಕರ್ಮಗಳನ್ನು ಬ್ರಹ್ಮನಿಗೆ ಅರ್ಪಿಸುತ್ತಾರೋ, ಯಾರು ಮೋಹರಹಿತ ಕರ್ಮ ಮಾಡುತ್ತಾರೋ ಅವರಿಗೆ ಕಮಲದೆಲೆಯ ಮೇಲಿನ ನೀರಿನಂತೆ ಯಾವ ಪಾಪದ ಕಳಂಕವೂ ಇರುವುದಿಲ್ಲ. (5.10)

ನಮ್ಮ ಕರ್ಮಗಳನ್ನು ಹಾಗೂ ಇತರರ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿದಾಗ ಭಿನ್ನ ಭಾವಕ್ಕೆ ಅವಕಾಶವೇ ಇಲ್ಲ. ಆಗ ನಾವು ಎದುರಿಸುವ ಸಂದರ್ಭಗಳು ನಾಟಕದಂತೆ ಇರುತ್ತವೆ. ಅಲ್ಲಿ ನಾವು ಕೇವಲ ಪಾತ್ರಧಾರಿಗಳಾಗಿರುತ್ತೇವೆ. ಇದನ್ನು ಕೃಷ್ಣ ಕಮಲದ ಎಲೆಗೆ ಹೋಲಿಸುತ್ತಾನೆ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸುದ್ದಿವಾಹಿನಿಯಲ್ಲಿ ಒಂದು ಸುತ್ತು

ಸುದ್ದಿಗೂ ಸೈ, ಸೆನ್ಸೇಷನ್‌ಗೂ ಜೈ!

ಒಂದು ಕಾಲಕ್ಕೆ ಪತ್ರಿಕೆಗಳು ಮತ್ತು ರೇಡಿಯೋ ವಾರ್ತೆಗಳು ಮಾತ್ರವೇ ಓದುಗರ/ಕೇಳುಗರ ಪಾಲಿನ ಸುದ್ದಿವಾಹಕಗಳಾಗಿದ್ದವು. ಕಳೆದ ಕೆಲ ವರ್ಷಗಳಲ್ಲಿ ಭಾರತದ ಮಾಧ್ಯಮ ಕ್ಷೇತ್ರದಲ್ಲಾದ ಕ್ರಾಂತಿಯಿಂದಾಗಿ ಈ ಪಟ್ಟಿಗೆ ಸುದ್ದಿವಾಹಿನಿಗಳೂ ಸೇರಿಕೊಂಡಿವೆ. ಅಂತೆಯೇ, 'ಬ್ರೇಕಿಂಗ್ ನ್ಯೂಸ್', 'ನ್ಯೂಸ್ ಟಿಕರ್', 'ಫ್ಲ್ಯಾಷ್ ನ್ಯೂಸ್', 'ಟಿಆರ್‌ಪಿ', 'ಆ್ಯಂಕರಿಂಗ್', 'ಲೈವ್ ಟೆಲಿಕಾಸ್ಟ್' ಮುಂತಾದ ವೃತ್ತಿಪರ ಪರಿಭಾಷೆಗಳು ಜನಸಾಮಾನ್ಯರ ಬಾಯಲ್ಲಿ ಸರಾಗವಾಗಿ ನಲಿಯುವಂತಾಗಿದೆ. ಈ ಹಿನ್ನೆಲೆಯಲ್ಲಿ ಸುದ್ದಿವಾಹಿನಿಯ ಸುತ್ತಮುತ್ತಲ ಸಣ್ಣ-ಪುಟ್ಟ ಸಂಗತಿಗಳನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ.

■ ಯಗಟಿ ರಘು ನಾಡಿಗ್

ಸಮಾಜದ ವಿವಿಧ ಸ್ತರದ, ವಯೋಮಾನದ ವೀಕ್ಷಕರನ್ನು ತನ್ನೆಡೆಗೆ ಸೆಳೆದಿರುವಂಥದ್ದು ದೃಶ್ಯಮಾಧ್ಯಮ. ಕಾರಣ, ಇಂದು ನಡೆದ ಘಟನೆಯನ್ನು ತಿಳಿಯಲು ನಾಳೆಯವರೆಗೆ ಕಾಯಬೇಕಾದ ಅನಿವಾರ್ಯತೆಯನ್ನು ತೊಡೆದು, ಘಟನೆ ಘಟಿಸಿದ ಕ್ಷಣಮಾತ್ರದಲ್ಲಿ ಪರದೆಯ ಮೇಲೆ ಒಡಮೂಡಿಸಬಲ್ಲ ತಾಕತ್ತು ಇದಕ್ಕಿದೆ. ಕೆಲವೊಮ್ಮೆ ಇಲ್ಲಿ 'ಅವಸರದ ಅಡುಗೆ' ತಯಾರಿಸಬೇಕಾದ ಅನಿವಾರ್ಯತೆಗೆ ಸುದ್ದಿಜೀವಿಗಳು ಸಿಲುಕುತ್ತಾರಾದರೂ, ಅದರಲ್ಲೇ ಉತ್ತಮಿಕೆಯನ್ನು ಮೊಗೆದು ಕೊಡುವುದು ಅವರ ಸಾಮರ್ಥ್ಯದ ಸತ್ವಪರೀಕ್ಷೆಯಾಗುತ್ತದೆ. ಇಂಥ ಸುದ್ದಿವಾಹಿನಿಗಳ ಒಳಾವರಣದ ಸಂಗತಿಗಳು ಯಾವುದೇ 'ಬ್ರೇಕಿಂಗ್ ನ್ಯೂಸ್' ಅನ್ನೂ ಮೀರಿಸುವಷ್ಟು ಕುತೂಹಲಕಾರಿ!

ರೋಚಕತೆಯೇ ಜೀವಾಳ: ಭಾರತದಲ್ಲಿಂದು 400ಕ್ಕೂ ಹೆಚ್ಚಿನ ಸುದ್ದಿ ವಾಹಿನಿಗಳಿವೆ. ಸಾಕಷ್ಟು ಅವಧಿಯವರೆಗೆ ವೀಕ್ಷಕರನ್ನು ಹಿಡಿದಿಟ್ಟುಕೊಳ್ಳಬೇಕಾದ 'ಅನಿವಾರ್ಯತೆಯ ಶಿಶು'ಗಳಾದ ಈ ವಾಹಿನಿಗಳು 'ಸುದ್ದಿಗೆ ರೋಚಕತೆಯ ಲೇಪ ಕೊಡಲೇಬೇಕು' ಎಂದು ಕಟ್ಟುಬೀಳುವಷ್ಟರ ಮಟ್ಟಿಗೆ ಸುದ್ದಿ ಪ್ರಸ್ತುತಿಯ ಪರಿಕಲ್ಪನೆ ಬದಲಾಗಿದೆ. ಈ ನಿಟ್ಟಿನಲ್ಲಿ ಸುದ್ದಿವಾಹಿನಿಯ 'ಹೃದಯಭಾಗ' ಎನ್ನಬಹುದಾದಂಥದ್ದು 'ಬ್ರೇಕಿಂಗ್ ನ್ಯೂಸ್' ಅಡ್ಡಾ! ಸುದ್ದಿ ವಾಹಿನಿಯೊಂದಕ್ಕೆ ವೀಕ್ಷಕರು ಅಂಟಿಕೊರುವಂತೆ ಮಾಡುವಲ್ಲಿ ಈ 'ಅಡ್ಡಾ'ದ ಪಾತ್ರ ಅಖಂಡ!

ಏನಿದು ಬ್ರೇಕಿಂಗ್ ನ್ಯೂಸ್?: ಪೂರ್ವಭಾವಿ ಊಹೆಗೆ ಆಸ್ಪದವಿಲ್ಲದ, ಹಠಾತ್ತನೆ ಅಪ್ಪಳಿಸುವ, ಈವರೆಗೂ ಗೊತ್ತಿಲ್ಲದ ಹಾಗೂ ಪೂರ್ತಿ ವಿವರ

ಸಿಗುವುದಿನ್ನೂ ಬಾಕಿ ಇರುವಂಥ ಸುದ್ದಿಯ ತುಣುಕೇ ಬ್ರೇಕಿಂಗ್ ನ್ಯೂಸ್. ದೇಶ-ವಿದೇಶಗಳಲ್ಲಿನ ರಾಜಕೀಯ ಬೆಳವಣಿಗೆಗಳು, ಕೊಲೆ-ಅವಘಡ-ಅಪಘಾತಗಳು, ಪ್ರಾಕೃತಿಕ ವಿಕೋಪಗಳು, ಪ್ರಶಸ್ತಿ-ಪುರಸ್ಕಾರಗಳ ಘೋಷಣೆ- ಹೀಗೆ ನೋಡುಗರಲ್ಲಿ ಅಚ್ಚರಿ-ಅನುಕಂಪ-ಆಘಾತ-ಆಮೋದ ಇತ್ಯಾದಿ ವಿಭಿನ್ನ ಭಾವಗಳು ಹುಟ್ಟುವುದಕ್ಕೆ ಕಾರಣವಾಗುವಂಥ ಸುದ್ದಿ ತುಣುಕುಗಳು ಈ ವರ್ಗಕ್ಕೆ ಸೇರುತ್ತವೆ. ವಾಹಿನಿಯ ವರದಿಗಾರರು ಮತ್ತು ನಿಗದಿತ ಮಾಹಿತಿದಾರರು ಫೋನ್ ಕರೆ, ಇ-ಮೇಲ್, ವಾಟ್ಸಾಪ್ ಸಂದೇಶದ ಮೂಲಕ ಕಳಿಸುವ ಮಾಹಿತಿ ಆಧರಿಸಿ ಇಂಥ 'ಬ್ರೇಕಿಂಗ್ ನ್ಯೂಸ್' ಸಿದ್ಧವಾಗುತ್ತವೆ.

ಹಿಂಗಿದ್ರೆ ಚೆನ್ನ 'ಸುದ್ದಿಜೀವಿ'ಗಳು'!: ವಿವಿಧ ಕ್ಷೇತ್ರಗಳ ರೋಚಕ ವಿದ್ಯಮಾನಗಳನ್ನು ಹೆಕ್ಕಿಕೊಡುವ ವಾಹಿನಿಯ 'ಸುದ್ದಿ' ವಿಭಾಗ ಮತ್ತು 'ಬ್ರೇಕಿಂಗ್ ನ್ಯೂಸ್' ವಿಭಾಗದಲ್ಲಿ ಕಾರ್ಯನಿರ್ವಹಿಸುವವರು ಅಕ್ಷರಶಃ 'ಕೆಲಸಗಾರ ಜೇನುನೊಣ'ದಂತೆ ಗೇಯಬೇಕಾಗುತ್ತದೆ. ''ದಿನಕ್ಕೆ 8 ಗಂಟೆ ಮಾತ್ರವೇ ಕೆಲಸ ಮಾಡುವೆ, ಇಂಥದೇ ಪಾಳಿ ಬೇಕು'' ಎಂದು ಆಗ್ರಹಿಸುವವರಿಗೆ ಇಲ್ಲಿ ಜಾಗವಿರುವುದಿಲ್ಲ. ರಾಜಕಾರಣ, ಸಾಹಿತ್ಯ, ಸಿನಿಮಾ, ಕೃಷಿಯಂಥ ವಿಭಿನ್ನ ಕ್ಷೇತ್ರಗಳ ಜ್ಞಾನ, ಉತ್ತಮ ಪದಸಂಪತ್ತು, ಗ್ರಹಿಸಿದ ಸುದ್ದಿಯನ್ನು ಕಾಗುಣಿತ/ವ್ಯಾಕರಣ ದೋಷಗಳಿಲ್ಲದೆ ಕ್ಷಿಪ್ರವಾಗಿ ಬೆರಳಚ್ಚಿಸಬಲ್ಲ ಚಾಕಚಕ್ಯತೆ, ಭಾಷಾಂತರದ ಪರಿಣತಿ ಅವರಲ್ಲಿರಬೇಕಾಗುತ್ತದೆ. ಯಾವುದೇ ಹೊಸ ಸುದ್ದಿಯನ್ನು 'ಬ್ರೇಕ್' ಮಾಡಿ ವೀಕ್ಷಕರಿಗೆ ಮೊದಲು ಮುಟ್ಟಿಸಿದ್ದು ತಮ್ಮ ವಾಹಿನಿಯೇ ಎಂಬ ಕಿರೀಟ ಧರಿಸಬೇಕಾದ 'ಸ್ಪರ್ಧಾತ್ಮಕತೆ'ಯೂ ಇಲ್ಲಿ ಗುಪ್ತಗಾಮಿನಿಯಾಗಿರುತ್ತದೆ. ಹೀಗಾಗಿ, ಸುದ್ದಿ/ಬ್ರೇಕಿಂಗ್ ನ್ಯೂಸ್ ವಿಭಾಗದ ಸಿಬ್ಬಂದಿ ಇಂಥ 'ಸುದ್ದಿಬೇಟೆ'ಗಾಗಿ 'ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು' ಕಟ್ಟೆಚ್ಚರದಲ್ಲಿ ಕಾಯುತ್ತಿರಬೇಕಾಗುತ್ತದೆ, ಜತೆಜತೆಗೆ ಮೇಲೆ ಉಲ್ಲೇಖಿಸಿದ ಉತ್ತಮಿಕೆಯನ್ನೂ ನೀಡಬೇಕಾಗುತ್ತದೆ! ಸಿಬ್ಬಂದಿಯ ಇಂಥ ಚುರುಕು ವೃತ್ತಿಪರತೆಯೇ ಆಯಾ ವಾಹಿನಿಯ ಯಶಸ್ಸಿಗೂ, ಪರಿಧಿಯ ವಿಸ್ತರಣೆಗೂ ಅನುವುಮಾಡಿಕೊಡುತ್ತದೆ.

ಆವರಣ-ಅನಾವರಣದ ಸಂಗಮ: ಸುದ್ದಿಮನೆಯಲ್ಲೇ ಕೂತಿದ್ದು, ಬಂದ ಸುದ್ದಿಗಳನ್ನು ಪರಿಷ್ಕರಿಸಿ, ಒಪ್ಪ ಓರಣವಾಗಿಸುವ 'ಡೆಸ್ಕ್ ಪತ್ರಕರ್ತರು' ಹಾಗೂ ಹೊರಗಡೆ ಸುತ್ತಾಡಿ ಸುದ್ದಿ ಸಂಗ್ರಹಿಸುವ 'ವರದಿಗಾರರು' ಪತ್ರಿಕೆಗಳಲ್ಲಿ ಇರುವಂತೆಯೇ ಸುದ್ದಿವಾಹಿನಿಗಳಲ್ಲೂ ಸಿಬ್ಬಂದಿ ವೈವಿಧ್ಯವಿರುತ್ತದೆ. ಇದು ವಾಹಿನಿಯ 'ಆವರಣ'ದೊಳಗೇ ಇದ್ದುಕೊಂಡು ಹೊರಪ್ರಪಂಚದ ಅರಿವಿಗೆ ಬಾರದ ಉಪಸಂಪಾದಕರು, ಸುದ್ದಿ ಸಂಪಾದಕರು ಮುಂತಾದ ಎಲೆ ಮರೆಯ ಕಾಯಿಗಳು ಹಾಗೂ ತೆರೆಯ ಮೇಲೆ 'ಅನಾವರಣ'ಗೊಳ್ಳುವ ಆ್ಯಂಕರ್‌ಗಳು, ವಾರ್ತಾವಾಚಕರು, ಲೈವ್ ವರದಿಗಾರರು, ಸಂದರ್ಶಕರು, ಪ್ಯಾನಲ್ ಚರ್ಚೆಯ ಸಮನ್ವಯಕಾರರ ಒಂದು ಸಂಗಮವಾಗಿರುತ್ತದೆ. ಈ ಪೈಕಿ, 'ಅನಾವರಣ'ಗೊಂಡವರು ತಮ್ಮ ಮಾತುಗಾರಿಕೆ, ಸುದ್ದಿ ಪ್ರಸ್ತುತಿಯಲ್ಲಿನ ಕೌಶಲ-ಕಸುಬುಗಾರಿಕೆ, ಪ್ರಭಾವಿಗಳ ಸಂಪರ್ಕದಿಂದಾಗಿ ವೈಯಕ್ತಿಕ ನೆಲೆಯಲ್ಲೂ ವೃತ್ತಿ ಬದುಕಿನಲ್ಲೂ ಹಲವರ 'ಕಣ್ಮಣಿ'ಗಳಾಗಿಬಿಡುತ್ತಾರೆ; ಆದರೆ ಸುದ್ದಿಮನೆಯ ಕುಲುಮೆಯೊಳಗೇ ಇದ್ದುಕೊಂಡು, ದಿಢೀರ್ ಅಡುಗೆಯ ಬೆಂಕಿಗೆ ಮೈಯೊಡ್ಡಿಕೊಂಡ 'ಡೆಸ್ಕ್ ಪತ್ರಕರ್ತ'ರನ್ನು ಅವರ ಸಾಮರ್ಥ್ಯಕ್ಕೆ ತಕ್ಕಂತೆ ಆಯಾ ಸುದ್ದಿಸಂಸ್ಥೆಗಳೇ ಗುರುತಿಸಬೇಕಾಗುತ್ತದೆಯೇ ಹೊರತು, ಹೊರಪ್ರಪಂಚದಲ್ಲಿ ಇವರು ಮಿಂಚುವುದು ಕಮ್ಮಿಯೇ. ಹೀಗಾಗಿ, ''ನನ್ನಾವರಣವೆ ಸೆರೆಮನೆಯಾದರೆ ಜೀವಕೆ ಎಲ್ಲಿಯ ಮುಕ್ತಿ?'' ಎಂಬ ಅಳಲನ್ನು ಇಂಥ ಕೆಲವರು ತೋಡಿಕೊಳ್ಳುವುದೂ ಉಂಟು. ಆದರೆ ಆ ಕಾರ್ಯಶೈಲಿಯೇ ಹಾಗೆ, ಅದು ಅನಿವಾರ್ಯ!

ಗ್ರಹಕ್ಕೊಂದು 'ಉಪಗ್ರಹ': ವಾಹಿನಿಯ ತೆರೆಯ ಮೇಲೆ ವಾರ್ತೆ, ಪ್ಯಾನೆಲ್ ಚರ್ಚೆ, ಸಂದರ್ಶನ ಹೀಗೆ ಯಾವುದೇ 'ಪ್ರಧಾನ ಪ್ರಸ್ತುತಿ' ಬಿತ್ತರವಾಗುತ್ತಿರುವ ವೇಳೆಯಲ್ಲೇ, ತೆರೆಯ ಕೆಳಭಾಗದಲ್ಲಿ (ಇದನ್ನು 'Lower Third' ಎನ್ನುತ್ತಾರೆ) 2-3 ಪದರಗಳಲ್ಲಿ ಪಟ್ಟಿಗಳು ಚುರುಕಾಗಿ ಓಡಾಡುವುದುಂಟು! ವಿವಿಧ ವಿಷಯಕ್ಕೆ ಸಂಬಂಧಿಸಿದ ಸುದ್ದಿ/ಮಾಹಿತಿಗಳನ್ನು ಮೈಗೆ ಮೆತ್ತಿಕೊಂಡು, ತೆರೆಯ ಒಂದೆಡೆಯಿಂದ ಇನ್ನೊಂದೆಡೆಗೆ ಸಂಚರಿಸುವ ಈ ಪಟ್ಟಿಗಳನ್ನು ಮಾಧ್ಯಮದ ಪರಿಭಾಷೆಯಲ್ಲಿ News Ticker ಎನ್ನಲಾಗುತ್ತದೆ. ಇವು ತೆರೆಯ ಮೇಲೆ ಬಿತ್ತರಗೊಳ್ಳುತ್ತಿರುವ 'ಪ್ರಧಾನ ಪ್ರಸ್ತುತಿ' ಎಂಬ ಗ್ರಹಕ್ಕೆ 'ಉಪಗ್ರಹ'ಗಳಿದ್ದಂತೆ! ಏಕಕಾಲದಲ್ಲಿ ವಿಭಿನ್ನ ವಿಷಯಗಳೆಡೆಗೆ ವೀಕ್ಷಕರನ್ನು ಸೆಳೆಯುವ ಸುದ್ದಿತಂತ್ರದ ಭಾಗವಿದು.

'ಪ್ರೈಮ್ ಟೈಮ್' ಎಂಬ ಭೂಮಿಕೆ: ಸುದ್ದಿ ವಾಹಿನಿಗೆ ಹೆಚ್ಚಿನ ಗತ್ತು-ಗೈರತ್ತು ತಂದುಕೊಡುವ ವೀಕ್ಷಣಾವಧಿಯನ್ನು 'ಪ್ರೈಮ್ ಟೈಮ್' ಎನ್ನುವುದು ವಾಡಿಕೆ. ಹಿಂದೆಲ್ಲಾ, ನಿಗದಿತ ಅವಧಿಗೆ ಪ್ರಸಾರವಾಗುವ ದೂರದರ್ಶನ ಸುದ್ದಿಯನ್ನಷ್ಟೇ ವೀಕ್ಷಕರು ನೆಚ್ಚಿಕೊಳ್ಳಬೇಕಾಗಿತ್ತು ಮತ್ತು ರಾತ್ರಿ 8ರಿಂದ 10ರವರೆಗಿನ ಅವಧಿ ಅದಕ್ಕೆ ಮೀಸಲಾಗಿರುತ್ತಿತ್ತು. ಆದರೆ ಸುದ್ದಿಗೆಂದೇ ವಾಹಿನಿಗಳು ಹುಟ್ಟಿಕೊಂಡು, ದಿನಪೂರ್ತಿ ಸುದ್ದಿ ಪ್ರಸಾರವೇ ಅವುಗಳ ಬಾಬತ್ತಾಗಿಬಿಟ್ಟ ನಂತರ ವೀಕ್ಷಕರ ಆದ್ಯತೆಗಳೂ ಬದಲಾದವು. ಈಗ ಸಂಜೆ 5ರಿಂದ ರಾತ್ರಿ 12 ಗಂಟೆಯವರೆಗಿನ ಪ್ರಸಾರದ ಅವಧಿಯನ್ನು 'ಪ್ರೈಮ್ ಟೈಮ್' ಎನ್ನಲಾಗುತ್ತಿದೆ. ವಿವಿಧ ಕಾರ್ಯಕ್ಷೇತ್ರಗಳಲ್ಲಿ ದುಡಿಯುತ್ತಿರುವವರು ಸಂಜೆ ಮನೆಗೆ ಮರಳಿದ ನಂತರ, ನಿರಾಳವಾಗಿ ಕೂತು ಅಂದಿನ ವಿದ್ಯಮಾನಗಳ ವೀಕ್ಷಣೆಗೆ ಮುಂದಾಗುವುದರಿಂದ ಅಂಥವರನ್ನು ಸೆಳೆಯಲು ವಿಶೇಷ ವಿಶ್ಲೇಷಣೆ, ಸುದ್ದಿ-ಸಂಯೋಜನೆ ಮತ್ತು ಸಂದರ್ಶನಗಳನ್ನು ಈ ಸಮಯದಲ್ಲಿ ಬಿತ್ತರಿಸಲಾಗುತ್ತದೆ. ಜನಮನ ಸೆಳೆಯಬಲ್ಲ ಮಾತುಗಾರರು/ಚರ್ಚಾಪಟುಗಳನ್ನು ಒಳಗೊಂಡ 'ಪ್ಯಾನೆಲ್ ಡಿಸ್ಕಷನ್' ನಡೆಯುವುದೂ ಬಹುತೇಕ ಇಂಥ ಅವಧಿಯಲ್ಲಿಯೇ. ಹೀಗಾಗಿ, ಗಟ್ಟಿಹೂರಣದ ಪ್ರಸ್ತುತಿಯಿರುವ ಪ್ರೈಮ್ ಟೈಮ್‌ನಲ್ಲಿ ವಾಣಿಜ್ಯಕ ಜಾಹೀರಾತುಗಳ ಪ್ರಸಾರಕ್ಕೆ ಸಾಕಷ್ಟು ಪೈಪೋಟಿ ಇರುತ್ತದೆ.

ಪಬ್ಲಿಕ್ ಟಿವಿಯ ಮುಖ್ಯಸ್ಥ ಎಚ್.ಆರ್.ರಂಗನಾಥ್ ಅವರು ರಾತ್ರಿ ತಾವು ತೊಡಗಿಸಿಕೊಳ್ಳುವ ಸುದ್ದಿಪ್ರಸ್ತುತಿ ಅಥವಾ ವಿಶ್ಲೇಷಣೆಯಿಂದಾಗಿ ಸದರಿ ಪ್ರೈಮ್

ಟೈಮ್‌ಗೆ ಒಂದು ತೂಕ ಮತ್ತು ಘನತೆಯನ್ನು ತಂದುಕೊಟ್ಟಿದ್ದಾರೆ. ಯಾರ ಮುಖ-ಮೂತಿ ನೋಡದೆ, ಮುಲಾಜಿಲ್ಲದೆ ಕೆತ್ತಿಬಿಡುವ 'ಕ್ಯಾಪ್ಟನ್ ರಂಗಣ್ಣ' ಅವರ ಈ ವಿಶ್ಲೇಷಣೆಯನ್ನು ಕಣ್ತುಂಬಿಕೊಳ್ಳಲೆಂದೇ ಸಾಕಷ್ಟು ವೀಕ್ಷಕರು ಕಾದಿರುತ್ತಾರೆ, ಇದು ಪಬ್ಲಿಕ್ ಟಿವಿಯ 'ಟ್ರಂಪ್ ಕಾರ್ಡ್' ಕೂಡ ಹೌದು!

ಟಿಆರ್‌ಪಿ ಎಂಬ 'ಮಾಯಾಮೃಗ'!: ''ವಾಹಿನಿಗಳು ತಮ್ಮ ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಯಾವ ಕಸರತ್ತನ್ನು ಬೇಕಿದ್ದರೂ ಮಾಡಿಬಿಡುತ್ತವೆ'' ಎಂಬುದು ಸಮಾಜದ ವಿವಿಧ ಸ್ತರಗಳಿಂದ ಸರ್ವೇಸಾಮಾನ್ಯವಾಗಿ ಕೇಳಿಬರುವ ಮಾತು. Telivison Rating Point ಅಥವಾ Target Rating Point ಎಂಬ ಪರಿಭಾಷೆಯ ಹ್ರಸ್ವರೂಪವೇ ಟಿಆರ್‌ಪಿ. ಇದು ಯಾವುದೇ ವಾಹಿನಿಯ ಪಾಲಿನ 'ಉಸಿರು' ಎನ್ನಲಡ್ಡಿಯಿಲ್ಲ. ವಾಹಿನಿಯೊಂದರ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಯಾವುದನ್ನು, ಎಷ್ಟು ಜನ ವೀಕ್ಷಿಸಿದ್ದಾರೆ ಎಂಬುದನ್ನು ಲೆಕ್ಕಿಸುವುದಕ್ಕಿರುವ ಮಾನದಂಡವೇ ಟಿಆರ್‌ಪಿ. ಈ ಮಾನದಂಡಕ್ಕೂ ವಾಹಿನಿಗೆ ಹರಿದುಬರುವ ಆದಾಯಕ್ಕೂ 'ಅವಿನಾಭಾವ ಸಂಬಂಧ' ಇರುತ್ತದೆ. ಹೀಗಾಗಿ ಟಿಆರ್‌ಪಿ ಕುಸಿಯದಂತೆ ನೋಡಿಕೊಳ್ಳುವುದು ವಾಹಿನಿಯ ಪ್ರತಿಯೊಬ್ಬರ ಹೆಗಲ ಮೇಲಿನ ನೊಗವಾಗಿರುತ್ತದೆ.

ಟಿಆರ್‌ಪಿ ಮಾಪನಕ್ಕೆಂದೇ ಹಲವು ಸಂಸ್ಥೆಗಳಿವೆ. ಅವು ರೂಪಿಸಿದ ವಿಶಿಷ್ಟ ಉಪಕರಣಗಳನ್ನು ಆಯ್ದ ಮನೆಗಳಲ್ಲಿನ ಟಿವಿ ಸಾಧನಗಳೊಂದಿಗೆ ಜೋಡಿಸಲಾಗುತ್ತದೆ. ಜತೆಗೆ ಪ್ರತ್ಯೇಕವಾದೊಂದು ರಿಮೋಟ್ ನೀಡಲಾಗುತ್ತದೆ. ಮಗು, ಅಪ್ಪ-ಅಮ್ಮ, ಅಜ್ಜ-ಅಜ್ಜಿ ಹೀಗೆ ವಿವಿಧ ವಯೋಮಾನದವರು ತಮ್ಮಿಷ್ಟದ ಕಾರ್ಯಕ್ರಮಗಳನ್ನು ವೀಕ್ಷಿಸುವಾಗ ಪದೇ ಪದೆ ರಿಮೋಟ್‌ನ ಗುಂಡಿ ಒತ್ತುತ್ತಾ ಬದಲಿಸುತ್ತಾರಲ್ಲವೇ? ಹೀಗೆ ವಾಹಿನಿಯೊಂದರ ನಿರ್ದಿಷ್ಟ ಕಾರ್ಯಕ್ರಮವನ್ನು ಕನಿಷ್ಠಪಕ್ಷ 30 ಸೆಕೆಂಡುಗಳವರೆಗಾದರೂ ಅವರು ವೀಕ್ಷಿಸಿದಲ್ಲಿ ಆಯಾ ವಾಹಿನಿಗೆ ಅದರ 'ವೀಕ್ಷಣಾ ಶ್ರೇಯ' ಸಲ್ಲುತ್ತದೆ. ಹೀಗೆ ಅತಿಹೆಚ್ಚು ಅವಧಿಯವರೆಗೆ ವೀಕ್ಷಣೆಗೊಂಡ ವಿವಿಧ ಕಾರ್ಯಕ್ರಮಗಳ ಅಂಕಿ-ಅಂಶಗಳನ್ನು ಕ್ರೋಡೀಕರಿಸಿ ವೀಕ್ಷಣೆಯ ಅವಧಿಯನ್ನು ದೃಢೀಕರಿಸಲಾಗುತ್ತದೆ, ಅದುವೇ ಟಿಆರ್‌ಪಿ ಆಗಿ ಹೊರಹೊಮ್ಮುತ್ತದೆ. ಟಿಆರ್‌ಪಿ ಉತ್ತಮವಾಗಿದ್ದರೆ ಅದು ಆಯಾ ವಾಹಿನಿಯ ಜನಪ್ರಿಯತೆಯ ಅಳತೆಗೋಲಾಗುತ್ತದೆ, ವಾಹಿನಿಗೆ ವಾಣಿಜ್ಯಕ ಜಾಹೀರಾತುಗಳನ್ನು ದಕ್ಕಿಸಿಕೊಡುವ ಪ್ರವೇಶ ದ್ವಾರವಾಗುತ್ತದೆ.

ಟಿಆರ್‌ಪಿ ಮಾಪಕಗಳು: ದೃಶ್ಯಮಾಧ್ಯಮಗಳ ಕಾರ್ಯಕ್ರಮಗಳ ಸಂಖ್ಯೆ, ವೈಖರಿ, ವೈಶಿಷ್ಟ್ಯ, ಪ್ರಸಾರ ತಂತ್ರಜ್ಞಾನ ಬದಲಾದಂತೆ ಟಿಆರ್‌ಪಿಯನ್ನು



ಅಳೆಯುವ ಮಾಪಕಗಳೂ ಬದಲಾಗುತ್ತಾ ಹೋದದ್ದು ವಿಶೇಷ. ಸಾಕಷ್ಟು ವರ್ಷಗಳ ಹಿಂದೆ ದೂರದರ್ಶನದವರು DART ಎಂದು ಸಂಕ್ಷಿಪ್ತವಾಗಿ ಕರೆಯಲ್ಪಡುತ್ತಿದ್ದ Doordarshan Audience Research TV Rating ಪದ್ಧತಿಯ ಮೂಲಕ ಟಿಆರ್‌ಪಿಯನ್ನು ಲೆಕ್ಕಿಸುತ್ತಿದ್ದರು. ಟಿವಿ ಸೆಟ್ಟುಗಳು ಇರುವ ಮನೆಯವರಿಗೆ ಫೋನ್ ಮಾಡಿ ಅವರು ವೀಕ್ಷಿಸುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆಯುವ ವಿಧಾನ ಇದಾಗಿತ್ತು. ತರುವಾಯ, ಈ ವಿಧಾನದಲ್ಲಿ ಕೊಂಚ ಸುಧಾರಣೆ ಯಾಗಿ, ಇಂಥ ಮನೆಯವರಿಗೆ ಒಂದು ಪುಟ್ಟ ಡೈರಿಯನ್ನು ನೀಡಲಾಗುತ್ತಿತ್ತು ಹಾಗೂ ಕುಟುಂಬದ ಸದಸ್ಯರು ತಾವು ವೀಕ್ಷಿಸುವ ಕಾರ್ಯಕ್ರಮಗಳನ್ನು ಅದರಲ್ಲಿ ನಮೂದಿಸಬೇಕಿತ್ತು. ವಾರಕ್ಕೊಮ್ಮೆ ಈ ಡೈರಿಗಳನ್ನು ಸಂಗ್ರಹಿಸಿ, ಅಂಕಿ-ಅಂಶಗಳನ್ನು ಒಟ್ಟುಮಾಡಿ ಕಾರ್ಯಕ್ರಮಗಳ ಟಿಆರ್‌ಪಿಯನ್ನು ನಿರ್ಧರಿಸಲಾಗುತ್ತಿತ್ತು. ಕಾಲಾನುಕ್ರಮದಲ್ಲಿ ಇದೂ ಬದಲಾವಣೆಗೆ ಒಳಪಟ್ಟು, ವಿಭಿನ್ನ ವಿಧಾನಗಳು/ಸಾಧನಗಳು ಚಾಲ್ತಿಗೆ ಬಂದವು. ಅಂಥ ಕೆಲವು ಹೀಗಿವೆ:

- People Meter ಸಾಧನ
- Freqency Monitoring ತಂತ್ರಜ್ಞಾನ
- Picture Matching ತಂತ್ರಜ್ಞಾನ
- BARC ಸಂಸ್ಥೆ ರೂಪಿಸಿರುವ Audio Water Marking ತಂತ್ರಜ್ಞಾನ
- New Consumer Classification System (NCCS)

ಮಾಹಿತಿಗೆ ಹಣ ನೀಡಬೇಕು: ತಮ್ಮ ಟಿಆರ್‌ಪಿ ಎಷ್ಟು ಎಂದು ಅರಿಯಲು ಬಯಸುವ ವಾಹಿನಿಗಳು ಮೊದಲಿಗೆ Broadcast Audience Research Council (BARC) ಸಂಸ್ಥೆಯ ಚಂದಾದಾರಿಕೆಯನ್ನು ಪಡೆಯಬೇಕಾಗುತ್ತದೆ. ವಾಹಿನಿಗಳು ತಮಗೆ ಹರಿದುಬರುವ ಜಾಹೀರಾತು ಆದಾಯದ ಶೇಕಡಾ ಇಂತಿಷ್ಟು ಭಾಗ ಅಥವಾ ವರ್ಷಕ್ಕೆ ಇಂತಿಷ್ಟು ಮೊತ್ತವನ್ನು BARC ಸಂಸ್ಥೆಗೆ ಶುಲ್ಕವಾಗಿ ನೀಡಬೇಕಾಗುತ್ತದೆ.

ಚಾನೆಲ್‌ನ ಚಡ್ಡಿ ಕಳಚಿಕೊಳ್ತು!

'ಮುಖ್ಯ ಪ್ರಸ್ತುತಿ' ಬಿತ್ತರವಾಗುತ್ತಿರುವಾಗಲೇ ವಾಹಿನಿಯ ತೆರೆಯ ಕೆಳಭಾಗದಲ್ಲಿ 'ನ್ಯೂಸ್ ಟಿಕರ್' ಎನ್ನಲಾಗುವ ಸುದ್ದಿಪಟ್ಟಿಗಳು ಒಂದು ಬದಿಯಿಂದ ಇನ್ನೊಂದು ಬದಿಗೆ ಎರೆಹುಳುವಿನಂತೆ ಸಂಚರಿಸುತ್ತವೆಯಲ್ಲವೇ? ಈ 'ನ್ಯೂಸ್ ಟಿಕರ್' ಭಾಗಕ್ಕೆ ವಾಹಿನಿಯ ಸಿಬ್ಬಂದಿಗಳು ತಮಾಷೆಯಾಗಿ 'ಚಾನೆಲ್‌ನ ಚಡ್ಡಿ' ಎನ್ನುವುದುಂಟು. ಕೆಲವೊಮ್ಮೆ ಸಿಬ್ಬಂದಿಯ ಮೈಮರೆವಿನಿಂದಲೋ, ಅಚಾತುರ್ಯದಿಂದಲೋ, ತಾಂತ್ರಿಕ ಎಡವಟ್ಟಿನಿಂದಲೋ ಈ ಪಟ್ಟಿಗಳು ತೆರೆಯ ಮೇಲಿಂದ ಹಠಾತ್ತನೆ ಮಾಯವಾಗಿಬಿಡುವುದುಂಟು. ಮುಖ್ಯ ಪ್ರಸ್ತುತಿಯ ಜತೆಗೆ ಈ ತುಣುಕುಗಳ ವೀಕ್ಷಣೆಗೂ ಒಗ್ಗಿಕೊಂಡಿದ್ದ ವೀಕ್ಷಕರು ಆಗ ಏನನ್ನೋ ಕಳಕೊಂಡವರಂತೆ ಒದ್ದಾಡುವುದುಂಟು! ಹೀಗೆ 'ನ್ಯೂಸ್ ಟಿಕರ್'ಗಳು ಮುಖ್ಯತೆರೆಯಿಂದ ಅಚಾನಕ್ಕಾಗಿ ಕಳಚಿಕೊಂಡಾಗ, ಆ ವಿಭಾಗವನ್ನು ನಿರ್ವಹಿಸುತ್ತಿರುವ ಸಿಬ್ಬಂದಿ ಅಂಥ ಬಿಕ್ಕಟ್ಟಿನಲ್ಲೂ, ''ಅಯ್ಯೋ, ಚಾನೆಲ್‌ನ ಚಡ್ಡಿ ಬಿದ್ಹೋಯ್ತು ಗುರೂ..'' ಎಂಬುದಾಗಿ ತಮ್ಮತಮ್ಮಲ್ಲೇ ತಮಾಷೆ ಮಾಡಿಕೊಳ್ಳುವುದುಂಟು!

ಅವರ ಮಗು, ಇವರ ತೊಟ್ಟಿಲು!

ಕೆಲವೊಮ್ಮೆ 'ಬ್ರೇಕಿಂಗ್ ನ್ಯೂಸ್'ಗೂ ಬರಗಾಲ ಬರುವುದುಂಟು. ಆಗೆಲ್ಲ, ''ವಿಶೇಷ ಕ್ಷಣಗಳು ಸಿಗಲಿಲ್ಲವೆಂದರೆ, ಇರುವ ಕ್ಷಣವನ್ನೇ ವಿಶೇಷವಾಗಿಸಿಕೊಂಡು ಸಂಭ್ರಮಿಸಬೇಕು'' ಎಂಬರ್ಥದ ಜಾಣನುಡಿಯನ್ನು ಕೆಲ ಸುದ್ದಿಜೀವಿಗಳು ಅತಿರೇಕವಾಗಿ ಗ್ರಹಿಸಿಕೊಂಡು ಲಭ್ಯ ಸುದ್ದಿಗೇ 'ಬ್ರೇಕಿಂಗ್' ಲೇಪ ಮೆತ್ತಿ ಉತ್ಪ್ರೇಕ್ಷಿಸಲು ಹರಸಾಹಸ ಪಡುವುದುಂಟು, ಅದು 'ಕ್ಲಿಕ್' ಆಗದಿದ್ದಾಗ ಆ ವಾಹಿನಿಯವರು ನಗೆಪಾಟಲಿಗೆ ಈಡಾಗುವುದೂ ಉಂಟು. ಚಿತ್ರನಟಿಯೊಬ್ಬರಿಗೆ ಅವಳಿ ಮಕ್ಕಳಾದಾಗ, ''ಇಡೀ ಕರ್ನಾಟಕವೇ ಸಂಭ್ರಮಪಡುವ ಸುದ್ದಿ'' ಎಂಬ ಬ್ರೇಕಿಂಗ್ ನ್ಯೂಸ್ ವಾಹಿನಿಯೊಂದರಿಂದ ಬಿತ್ತರವಾಗಿದ್ದು ಇಂಥ ಎಡವಟ್ಟಿಗೆ ಸಾಕ್ಷಿ!!

'ಹೈಟೆಕ್ ಸ್ಪರ್ಶ'ಕ್ಕೆ ಕಾದಿದೆ ಹಾಸನ

ಕೇಂದ್ರದಿಂದ ಹಾಸನಕ್ಕೆ ಬರಲಿದೆ ನೆರವಿನ ಹಸ್ತ | ವರ್ತುಲ ರಸ್ತೆಗಾಗಿ ಕೇಂದ್ರ ಸಚಿವರಿಗೆ ಪ್ರಸ್ತಾವನೆ | ಹಾಸನ ಸುತ್ತ ಭೂಮಿಗೆ ಬಂಗಾರದ ಬೆಲೆ ನಿರೀಕ್ಷೆ

■ ಬೊಮ್ಮೇಗೌಡ, ಹಾಸನ

ಹಾಸನ ಹೊರ ವರ್ತುಲ ರಸ್ತೆ ನಿರ್ಮಾಣದ ಪ್ರಸ್ತಾಪವನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದ ನಿಯೋಗ ಕೇಂದ್ರ ಹೆದ್ದಾರಿ-ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರ ಬಳಿ ಇಡುತ್ತಿದ್ದಂತೆ ನಗರ ನಿವಾಸಿಗಳಲ್ಲಿ ಹೊಸ ಬಗೆಯ ಉತ್ಸಾಹ ಮೂಡಿದೆ.

ಮಹಾನಗರ ಪಾಲಿಕೆ

ಇಷ್ಟು ಕಾಲ ನಗರಸಭೆಯಾಗಿದ್ದ ಹಾಸನ ನಗರಸಭೆ ಆಡಳಿತ ಈಗ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದೆ. ಹೀಗಾಗಿ ಹಾಸನ ಅತೀ ವೇಗವಾಗಿ ಮಹಾನಗರವಾಗಿ ಬೆಳೆಯುತ್ತಿದೆ. ಇದಕ್ಕೆ ಬೇಕಾದ ಮೂಲ ಸೌಲಭ್ಯಗಳು ಕೂಡ ನಗರಕ್ಕೆ ಹರಿದು ಬರಬೇಕಿದೆ. ಪಾಲಿಕೆ ಆದ ಬಳಿಕ ನಗರದ ಸುತ್ತಮುತ್ತ ಭೂಮಿ ಬೆಲೆ ದುಪ್ಪಟ್ಟಾಗುತ್ತಿದೆ.

35 ಗ್ರಾಮಗಳು ಪಾಲಿಕೆಗೆ

ನಗರಸಭೆ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ್ದು 35 ಗ್ರಾಮಗಳು ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿವೆ. ಇದರಿಂದ ನಿವೇಶನ, ಭೂಮಿ ಬೆಲೆ ದುಪ್ಪಟ್ಟಾಗಿದೆ. ಇದರ ಜೊತೆಗೆ ರಿಂಗ್ ರೋಡ್ ನಿರ್ಮಾಣವಾಗುವುದರಿಂದ ನಗರಕ್ಕೆ ಸಮೀಪ ಇರುವ ಗ್ರಾಮಗಳು ಕೂಡ ಕೆಲವೇ ವರ್ಷಗಳಲ್ಲಿ ನಗರದ ಪ್ರದೇಶದ ತೆಕ್ಕೆಗೆ ಸಿಕ್ಕು ಅಭಿವೃದ್ಧಿ ಹೊಂದಲಿವೆ.

ರಿಂಗ್ ರಸ್ತೆ ಪಾತ್ರ

ಹಾಸನ ಬಹಳ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಕರಾವಳಿ ಮತ್ತು ಒಳನಾಡು ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಕೊಂಡಿ ನಗರ. ಹೀಗಾಗಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಅಗತ್ಯವಿದ್ದು, ವರ್ತುಲ ರಸ್ತೆ ತುರ್ತು ಅಗತ್ಯ. ಈ ಯೋಜನೆಗೆ ಅದಷ್ಟು ಬೇಗ ಅನುಮೋದನೆ ಮುದ್ರೆ ಬಿದ್ದರೆ ಹಾಸನದ ವಾಹನ ದಟ್ಟಣೆ ಕಡಿಮೆ ಮಾಡುವಲ್ಲಿ, ಸಂಪರ್ಕ ಸುಧಾರಿಸುವಲ್ಲಿ, ಆರ್ಥಿಕ ಚಟುವಟಿಕೆ ಹೆಚ್ಚಿಸುವಲ್ಲಿ, ಪ್ರಸ್ತಾವಿತ ರಿಂಗ್ ರಸ್ತೆ ನಿರ್ಣಾಯಕ ಪಾತ್ರ ವಹಿಸಲಿದೆ.

2ನೇ ಹಂತದ ಸಿಟಿ

ರಾಜ್ಯದಲ್ಲಿ ವೇಗವಾಗಿ ಅಭಿವೃದ್ಧಿ ಯಾಗುತ್ತಿರುವ ಎರಡನೇ ಹಂತದ ನಗರಗಳ ಪೈಕಿ ಹಾಸನ ಕೂಡ ಒಂದು. ನಗರದ ವಿಸ್ತರಣೆಯಿಂದ ಹೆಚ್ಚುತ್ತಿರುವ ವಾಹನ ದಟ್ಟಣೆ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಹೀಗಾಗಿ ಹೊರ ವರ್ತುಲ ರಸ್ತೆ ಜರೂರತ್ತಿದೆ. ಈ ರಿಂಗ್ ರೋಡ್ ಆದ ಬಳಿಕ ಸಂಚಾರ ದಟ್ಟಣೆ ಕಡಿಮೆಯಾಗುವುದು ನಿಶ್ಚಿತ. ಜೊತೆಗೆ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಿಗೆ ಸಂಪರ್ಕ ಒದಗಿಸುತ್ತದೆ.

ಹಲವು ಹೆದ್ದಾರಿಗೆ ಕನೆಕ್ಟ್

ಪ್ರಸ್ತಾವಿತ ಹೊರ ವರ್ತುಲ ರಸ್ತೆಯು ಬೆಂಗಳೂರು-ನೆಲಮಂಗಲ-ಮಂಗಳೂರು ರಸ್ತೆ (ಎನ್‌ಹೆಚ್-75), ಹಾಸನ ವಿಮಾನ ನಿಲ್ದಾಣ, ಹಾಸನ-ಅರಸೀಕೆರೆ ರಸ್ತೆ (ಎನ್‌ಹೆಚ್-71), ಹಾಸನ-ಹಳೇಬೀಡು-ಹಾಸನ ರಸ್ತೆ ಮತ್ತು ಹಾಸನ-ಬೆಲೂರು ರಸ್ತೆ (ಎನ್-373) ಗೆ ಸಂಪರ್ಕಿಸುತ್ತದೆ. ಇದು ಸುಗಮ ಸಾರಿಗೆಗೆ ಅನುಕೂಲವಾಗಲಿದೆ.

ಪ್ರವಾಸಿ ಸರ್ಕ್ಯೂಟ್

ಹಾಸನ ಜಿಲ್ಲೆಯುನೆಸ್ಕೊ ಪಟ್ಟಿಯ ವಿಶ್ವಪಾರಂಪರಿಕ ತಾಣಗಳ ಪ್ರವಾಸಿ ಸರ್ಕ್ಯೂಟ್ ಕೂಡ ಹೌದು. ಹಾಸನ ಕೇವಲ ಒಂದು ಜಿಲ್ಲಾ ಕೇಂದ್ರದ ನಗರವಲ್ಲ. ಇಲ್ಲಿನ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ತಾಣಗಳ ಜತೆ ಆಸುಪಾಸಿನ ಚಿಕ್ಕಮಗಳೂರು,ಮೈಸೂರು, ಮಡಿಕೇರಿ ಮತ್ತು ಮಂಗಳೂರಿನ ಕರಾವಳಿಯ ಸುಂದರ ತಾಣಗಳ ಪ್ರವಾಸೋದ್ಯಮಕ್ಕೂ ಕೊಂಡಿ ಬೆಸೆಯುವ ಜಿಲ್ಲೆ ಕೂಡ..!

ಅವಕಾಶದ ವರ್ತುಲ

ಪ್ರಸ್ತಾವಿತ ವರ್ತುಲ ರಸ್ತೆ ಒಟ್ಟು ಉದ್ದ 21.950 ಕಿ.ಮೀ. ದೂರ ಹೊಂದಿದ್ದು, ಯೋಜನೆಗೆ ಸುಮಾರು 120 ಹೆಕ್ಟೇರ್ ಭೂಮಿ ಅಗತ್ಯವಿದೆ. ಜಿಎಸ್‌ಟಿ, ಭೂಸ್ವಾಧೀನ ಮತ್ತು ಸ್ಥಳಾಂತರ ಸೇರಿ ಯೋಜನೆ ಅಂದಾಜು ವೆಚ್ಚ ಸುಮಾರು 750 ಕೋಟಿ ರು.ಆಗಲಿದೆ. ಈ ವರ್ತುಲ ರಸ್ತೆ ಪ್ರಯಾಣದ ಅವಧಿ ಕಡಿಮೆ ಮಾಡುವ ಜತೆ ಹಾಸನದ ಜನರಿಗೆ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುತ್ತದೆ.

ವಿಮಾನ ನಿಲ್ದಾಣ

ಕುಂಟುತ್ತಾ ಸಾಗುತ್ತಿರುವ ವಿಮಾನ ನಿಲ್ದಾಣ ಕಾಮಗಾರಿಗೂ ವೇಗ ದೊರಕಿರುವುದರಿಂದ ಹಾಸನ ನಗರದಲ್ಲಿ ಕೆಲ ವರ್ಷಗಳಲೇ ಲೋಹದ ಹಕ್ಕಿಗಳ ಹಾರಾಟ ಆರಂಭವಾಗಲಿದೆ. ಇದರಿಂದ ನೇರವಾಗಿ ಅಂತರಾಷ್ಟ್ರೀಯ ಸಂಪರ್ಕ ಹಾಸನ ಜಿಲ್ಲೆಗೆ ದೊರೆಯಲಿದೆ.

ವಿಮಾನ ನಿಲ್ದಾಣ ಕಾಮಗಾರಿಗೆ ಸ್ಥಳೀಯರು, ರೈತರಿಂದ ಇದ್ದ ಅಡೆತಡೆ ನಿವಾರಣೆ ಮಾಡಿ, ರೈತರ ಭೂಮಿ ಸ್ವಾಧೀನಕ್ಕೆ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಭೆ ಉತ್ತಮ ಬೆಲೆ ಕೂಡ ನಿಗದಿ ಪಡಿಸಿದೆ. ಅಲ್ಲದೇ ವಿಮಾನ ನಿಲ್ದಾಣ ಸುತ್ತ ರಸ್ತೆ ನಿರ್ಮಾಣಕ್ಕೂ ಒಪ್ಪಿಗೆ ಸಿಕ್ಕಿದ್ದು ಹೊಸ ಹೊಸ ಉದ್ದಿಮೆ, ಕೈಗಾರಿಕೆಗಳು ಸ್ಥಾಪನೆಗೊಂಡು ಈ ಕಾಫಿನಾಡಿನ ನಗರ ಪ್ರಗತಿಯತ್ತ ಸಾಗಲಿದೆ.

ಹೊಸ ಎಕ್ಸ್‌ಪ್ರೆಸ್ ವೇ

ಬೆಂಗಳೂರು - ಮಂಗಳೂರು ಮಧ್ಯೆ ಹಾಸನ ಮಾರ್ಗವಾಗಿ ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಕೇಂದ್ರ ಹೆದ್ದಾರಿ ಸಚಿವಾಲಯ ಮುಂದಾಗಿದೆ. ಹಾಸನದ ಮೂಲಕ ಇದು ಹಾದು ಹೋಗಲಿದೆ. ನಾಲ್ಕು ಅಥವಾ ಆರು ಪಥಗಳನ್ನು ಒಳಗೊಂಡಿರುವ ಈ ಮಾರ್ಗ ನಿರ್ಮಾಣವಾದರೆ ಪ್ರಯಾಣ, ಸಮಯ ಅರ್ಧಕ್ಕರ್ಧ ಕಡಿಮೆಯಾಗಲಿದೆ.

ಟೆಂಡರ್‌ಗೆ ಬಿಡ್

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖೆ ಕೈಗೆತ್ತಿಕೊಂಡಿವೆ. ಎಲ್ಲವೂ ನಿಗದಿಯಂತೆ ನಡೆದರೆ 2028 ರಿಂದ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ. ಸಮಗ್ರ ಯೋಜನಾ ವರದಿಗಾಗಿ ಸರಕಾರ ಜುಲೈನಲ್ಲಿ ಟೆಂಡರ್ ಆಹ್ವಾನಿಸಿತ್ತು. ನವೆಂಬರ್ ವೇಳೆಗೆ ಒಟ್ಟು 9 ಕಂಪನಿಗಳು ಬಿಡ್ ಸಲ್ಲಿಸಿದ್ದು ಈ ಪೈಕಿ ಒಂದು ಕಂಪನಿಯನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದ ಕಂಪನಿಗೆ ಡಿಪಿಆರ್ ಪೂರ್ಣಗೊಳಿಸಲು 540 ದಿನಗಳ ಸಮಯ ನೀಡಲಾಗುತ್ತದೆ. ಡಿಪಿಆರ್ ಮುಗಿದ ಬಳಿಕ ಎಕ್ಸ್‌ಪ್ರೆಸ್ ವೇ ವರ್ಕ್ ಆರಂಭವಾಗಲಿದೆ. ಇದಲ್ಲದೇ ಶಿರಾಡಿಘಾಟ್‌ನಲ್ಲಿ ಸುರಂಗ ಮಾರ್ಗ ನಿರ್ಮಾಣಕ್ಕೂ ಡಿಪಿಆರ್ ಸಿದ್ಧವಾಗಿದ್ದು ಹಾಸನ ಟೈರ್ ಒನ್ ಸಿಟಿಯಾಗಿ ರೂಪುಗೊಳ್ಳಲಿದೆ.

ಮೇಲ್ಸೇತುವೆ ಅಭಿವೃದ್ಧಿ

ದಶಕಗಳ ಬೇಡಿಕೆಯಾಗಿರುವ ಮೇಲ್ಸೇತುವೆ ಕಾಮಗಾರಿಗೆ ರಾಜ್ಯ ಸರಕಾರ ತನ್ನ ಪಾಲಿನ ಅನುದಾನ ಬಿಡುಗಡೆಗೆ ತೀರ್ಮಾನಿಸಿದೆ. ಇದರಿಂದ ಚತುಷ್ಪಥ ಮೇಲ್ಸೇತುವೆ ಕಾಮಗಾರಿ ಶೀಘ್ರ ಮುಗಿಯಲಿದೆ. ಇದರಿಂದಲೂ ನಗರದೊಳಗಿನ ಸಂಚಾರ ಸುಗಮಗೊಳ್ಳಿದೆ. ಸದ್ಯ ಎರಡು ಪಥ ಸಂಚಾರಕ್ಕೆ ಮುಕ್ತಗೊಂಡಿದ್ದು, ಇನ್ನೆರೆಡು ಪಥ ಮುಕ್ತಗೊಂಡರೆ ದಟ್ಟಣೆ ಸಾಕಷ್ಟು ಕಡಿಮೆಯಾಗಲಿದೆ.

ನೀರು ಪೂರೈಕೆಗೆ ಒತ್ತು

ನಗರದ ಅಭಿವೃದ್ಧಿಗೆ ರಸ್ತೆ, ಕಟ್ಟಡ, ಹೊಸ ಯೋಜನೆಗಳ ಜೊತೆಗೆ ಕುಡಿಯುವ ನೀರು ಪೂರೈಕೆಯೂ ಮಹತ್ವದ ಪಾತ್ರ ವಹಿಸುತ್ತದೆ. ಹೀಗಾಗಿ ಜೆಜೆಎಂ ಸೇರಿ ವಿವಿಧ ಯೋಜನೆಯಡಿ ದಿನದ 24 ಗಂಟೆಗಳ ಕಾಲ ಕುಡಿಯುವ ನೀರು ಪೂರೈಕೆಗಾಗಿ ಯೋಜನೆ ರೂಪಿಸಲಾಗುತ್ತಿದೆ. ಗೊರೂರಿನ ಹೇಮಾವತಿ ಜಲಾಶಯದಿಂದ ನಗರಕ್ಕೆ ನೀರು ಕೊಡಲಾಗುತ್ತಿದೆ. ಹಾಗೇ ಸ್ಥಳೀಯ ಕೆರೆಗಳ ಜಲಮೂಲ ಬಳಸಿಕೊಂಡು ನೀರು ಪೂರೈಕೆಗೂ ಕ್ರಮ ವಹಿಸಬೇಕಿದೆ ಎನ್ನುತ್ತಾರೆ ಹಾಸನದ ನಾಗರಿಕರು.

ಜಿಲ್ಲಾ ಕೇಂದ್ರ ಕೊಪ್ಪಳ ಬಳಿ ಮತ್ತೆ ಬಲ್ದೋಟ ಸಪ್ಪಳ | ಜನಪ್ರತಿನಿಧಿಗಳಿಗೆ ಬೇಕಾಯಿತೇ ಕಾರ್ಖಾನೆ? | ಟ್ರೋಲ್ ಪೇಜ್‌ಗಳಲ್ಲಿ ಕಾರ್ಖಾನೆ ಪರ ಪೋಸ್ಟ್!

ಸದ್ಯ ಸದ್ದಡಗಿದ ಹೋರಾಟ

■ ಶರಣಬಸವ ಹುಲಿಹೈದರ್, ಕೊಪ್ಪಳ

ಒಂದು ತಿಂಗಳ ಹಿಂದಿನ ಮಾತು. ಜಿಲ್ಲಾ ಕೇಂದ್ರ ಕೊಪ್ಪಳ ಸೇರಿ ಜಿಲ್ಲಾದ್ಯಂತ ಒಂದೇ ಚರ್ಚೆ. ಬಲ್ದೋಟ ಕಾರ್ಖಾನೆ ಶುರುವಾಗುತ್ತಾ? ಅಥವಾ ಕಾಲು ಕೀಳುಬಹುದಾ? ಎಂಬ ಮಾತಿನದೇ ಅಬ್ಬರ ನಡೆದಿತ್ತು. ಆದರೆ, ಹೋಳಿ ಹಬ್ಬದ ನಂತರ ಕಾರ್ಖಾನೆ ವಿರೋಧಿ ಹೋರಾಟ ಒಂದಷ್ಟು ತಣ್ಣಗಾದಂತೆ ಭಾಸವಾಗುತ್ತಿದೆ. ಜನಾಂದೋಲನದಂತೆ ಕಂಡು ಬಂದ ಹೋರಾಟ ಸದ್ಯ ತಣ್ಣಗಾಗಿದೆ.

ಮುಂದಾಳುಗಳಿಗೆ ಮಾತ್ರ

ಫೆ.24 ರಂದು ಕೊಪ್ಪಳ ಬಂದ್ ಗೆ ಕರೆ ನೀಡಿದ್ದ ಕೊಪ್ಪಳ ಪರಿಸರ ಹಿರ ರಕ್ಷಣಾ ವೇದಿಕೆ ಸದ್ಯ ಅಷ್ಟಾಗಿ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿಲ್ಲ. ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನದ ಮುಂದಾಳುಗಳಿಗೆ ಮಾತ್ರ ಸೀಮಿತವಾಗಿದೆ. ಈ ಎಲ್ಲ ಬೆಳವಣಿಗೆ ಕಾರ್ಖಾನೆ ಆಡಳಿತಕ್ಕೆ ವರವಾಗುವ ಎಲ್ಲ ಸಾಧ್ಯತೆಗಳು ಇದ್ದು, ಶೀಘ್ರದಲ್ಲೇ ಕಾರ್ಖಾನೆ ಪ್ರಮುಖ ನಿರ್ಣಯ ಕೈಗೊಂಡರೂ ಅಚ್ಚರಿ ಇಲ್ಲ ಎಂಬ ಮಾತುಗಳು ಕೇಳಿ ಬಂದಿವೆ.

ಸಿಎಂ ಭೇಟಿ, ಮನವಿ

ಮತ್ತೊಂದೆಡೆ ಕಾರ್ಖಾನೆ ಪರವಾದ ಧ್ವನಿ ಒಂದಷ್ಟು ಗಟ್ಟಿಗೊಳ್ಳುತ್ತಿದೆ. ಇತ್ತೀಚೆಗಷ್ಟೇ ಹಾಲವರ್ತಿ ಗ್ರಾಮದ ಕೆಲವರು ಸಿಎಂ ಭೇಟಿ ಮಾಡಿ, ಬಲ್ದೋಟ ಉಕ್ಕು ಕಾರ್ಖಾನೆ ಆರಂಭಿಸಬೇಕು ಎಂದು ಮನವಿ ಮಾಡಿದ್ದಾರೆ. ಜೊತೆಗೆ ಸಾಮಾಜಿಕ ಜಾಲತಾಣದ ಮೂಲಕವೂ ಕಾರ್ಖಾನೆ ಪರ ಧ್ವನಿ ಎತ್ತುವ ಕೆಲಸಗಳು ನಡೆಯುತ್ತಿವೆ. ಈ ಹಿಂದೆ ಕೊಪ್ಪಳದ ಒಬ್ಬಿಬ್ಬರು ಮಾತ್ರ ಫೇಸ್ ಬುಕ್ ನಲ್ಲಿ ಪರವಾಗಿ ಬ್ಯಾಟಿಂಗ್ ಮಾಡುತ್ತಿದ್ದರು. ಇದೀಗ ಉತ್ತರ ಕರ್ನಾಟಕದ ಮಂದಿಯ ಟ್ರೋಲ್ ಪೇಜ್ ಮೂಲಕವೂ ಕಾರ್ಖಾನೆ ಪರ ಪೋಸ್ಟ್ ಹಾಕಿಸಲಾಗುತ್ತಿದೆ. ಈ ಎಲ್ಲ ಬೆಳವಣಿಗೆಯಿಂದ ಹೋರಾಟ ನೆಲ ಕಚ್ಚಿರುವುದಕ್ಕೆ ಸಾಕ್ಷಿಯಂತಿವೆ.

ನಿಯೋಗಕ್ಕೆ ಸೀಮಿತ

ಕೊಪ್ಪಳ ಬಂದ್‌ನಲ್ಲಿ ಭಾಗವಹಿಸಿದ್ದ ಶ್ರೀಗವಿಸಿದ್ದೇಶ್ವರ ಸ್ವಾಮೀಜಿ ಕೊಪ್ಪಳ ಜಿಲ್ಲೆಯ ಎಲ್ಲ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳಿಗೆ ಜವಾಬ್ದಾರಿ ನೀಡಿದ್ದರು. ಕಾರ್ಖಾನೆಗೆ ನೀಡಿರುವ ಪರವಾನಗಿ ರದ್ದು ಆದೇಶದೊಂದಿಗೆ ಕೊಪ್ಪಳಕ್ಕೆ ಬರುವಂತೆ ತಾಕೀತು ಮಾಡಿದ್ದರು. ಇದರಿಂದ ಕಾರ್ಖಾನೆ ವಿರೋಧಿ ಮನಸ್ಸುಗಳಿಗೆ ಒಂದಷ್ಟು ಸಮಾಧಾನವೂ ಆಗಿತ್ತು. ಇದಕ್ಕೆ ಪೂರಕ ಎನ್ನುವಂತೆ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಮುಂದಾಳತ್ವದಲ್ಲಿ ಕೊಪ್ಪಳ ಜಿಲ್ಲೆಯ ಸರ್ವ ಪಕ್ಷಗಳ ನಿಯೋಗ, ಸಿಎಂ, ಡಿಸಿಎಂ ಮತ್ತು ಬೃಹತ್ ಕೈಗಾರಿಕೆ ಸಚಿವರನ್ನು ಭೇಟಿ ಮಾಡಿದ್ದರು. ಈ ವೇಳೆ ಸಿಎಂ ಸಿದ್ದರಾಮಯ್ಯ ಕೊಪ್ಪಳ ಜಿಲ್ಲಾಧಿಕಾರಿಗೆ ಕರೆ ಮಾಡಿ ಕೂಡಲೇ ಕೆಲಸ ನಿಲ್ಲಿಸುವಂತೆ ಸೂಚನೆ ನೀಡಿದ್ದರು. ಆದರೆ, ಮುಂದಿನ ಬೆಳವಣಿಗೆ ಅಷ್ಟಾಗಿ ಆಶಾದಾಯಕ ಆಗಿಲ್ಲ.

ಬಿತ್ತು ಬ್ಯಾರಿಕೇಡ್

ಸಿಎಂ ಮೌಖಿಕ ಆದೇಶ ಮಾಡಿದ್ದರೂ,ಕೊಪ್ಪಳ ಜಿಲ್ಲಾಧಿಕಾರಿ ಕೆಲಸ ನಿಲ್ಲಿಸುವ ಗೋಜಿಗೆ ಹೋಗಿರಲಿಲ್ಲ. ಆದರೆ, ಕಾರ್ಖಾನೆ ವಿರುದ್ಧ

ಹೋರಾಟ ಮಾಡುತ್ತಿರುವ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಮತ್ತು ದಲಿತ ಸಂಘಟನೆಗಳು ಬಲ್ದೋಟ ಆಕ್ರಮಿತ ಬಸಾಪೂರ ಕೆರೆ ಬಳಿಗೆ ತೆರಳಿ ಕೆಲಸ ನಿಲ್ಲಿಸಿದ್ದರು. ಮುಖಂಡರು ಬಲ್ದೋಟದ ಮುಖ್ಯದ್ವಾರದ ಮುಂದಿನ ಬ್ಯಾರಿಕೇಡ್ ಕಿತ್ತು ಬಿಸಾಡಿ ಆಕ್ರೋಶ ವ್ಯಕ್ತಪಡಿಸಿದ್ದರು. ಆದರೆ, ಇದೀಗ ಮತ್ತೇ ಮುಖ್ಯದ್ವಾರದ ಮುಂದೆ ಬ್ಯಾರಿಕೇಡ್ ಅಳವಡಿಕೆ ಮಾಡಲಾಗಿದ್ದು, ಸ್ವತಃ ಹೈಕೋರ್ಟ್ ಬಸಾಪೂರ ಕೆರೆ ಸಾರ್ವಜನಿಕರ ಬಳಕೆಗೂ ಲಭ್ಯವಾಗಬೇಕು ಎಂಬ ಆದೇಶ ಗಾಳಿಗೆ ತೂರಲಾಗಿದ್ದು, ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ. ಇಷ್ಟಾದರೂ ಹೋರಾಟಗಾರರು ಮಾತ್ರ ಕೈಕಟ್ಟಿ ಕುಳಿತಿದ್ದಾರೆ.

ಸದನದಲ್ಲಿ ಚರ್ಚೆ ಇಲ್ಲ

ಶ್ರೀಗವಿಸಿದ್ದೇಶ್ವರ ಸ್ವಾಮೀಜಿ ತಾಕೀತು ಮಾಡಿದ ಒಂದೇ ವಾರದಲ್ಲಿ ವಿಧಾನಸಭೆ ಅಧಿವೇಶನವೂ ಆರಂಭವಾಯಿತು. ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಆದಿಯಾಗಿ ಜಿಲ್ಲೆಯ ನಾಲ್ವರು ಶಾಸಕರು ಒಗ್ಗಟ್ಟಾಗಿ ಸದನದಲ್ಲಿ ಹೋರಾಟ ಮಾಡುವ ಮೂಲಕ ಕೊಪ್ಪಳ ಜನರಿಗೆ ಆಗುವ ತೊಂದರೆ ಬಗ್ಗೆ ರಾಜ್ಯದ ಗಮನ ಸೆಳೆಯುತ್ತಾರೆ ಎಂದು ಅಂದುಕೊಂಡಿದ್ದರು.

ಜನಪ್ರತಿನಿಧಿಗಳು ಮೌನಕ್ಕೆ ಶರಣು

ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ ಮಾತ್ರ ಪಟ್ಟು ಹಿಡಿದು ಅರ್ಧ ಗಂಟೆ ಸದನದಲ್ಲಿ ಚರ್ಚೆ ಮಾಡಿದರು. ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಒಂದಷ್ಟು ಮಾತನಾಡಿದ್ದು ಬಿಟ್ಟರೆ ಜಿಲ್ಲೆಯ ಜನಪ್ರತಿನಿಧಿಗಳು ಮೌನಕ್ಕೆ ಶರಣಾಗಿದ್ದಾರೆ. ಮುಖ್ಯವಾಗಿ ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಇತ್ತ ಹೋಳಿ ಹಬ್ಬದಲ್ಲಿ ಬ್ಯುಸಿ ಆಗಿದ್ದರು. ಯಾದಗಿರಿ ಜಿಲ್ಲೆಯ ಶರಣಗೌಡ ಕಂದಕೂರ ಸದನದಲ್ಲಿ ಈ ಬಗ್ಗೆ ಮಾತನಾಡಿದರು. ಆದರೆ, ಕಾರ್ಖಾನೆಯಿಂದ ದೂಳು ತಿನ್ನಬೇಕಾದ ಜನಪ್ರತಿನಿಧಿಯೇ ಮೌನವಾಗಿದ್ದು ನೋಡಿದರೆ ಕೇವಲ ಜನಪ್ರತಿನಿಧಿಗಳಿಗೆ ಬೇಕಾಯಿತೇ ಬಲ್ದೋಟ? ಎಂಬ ಅನುಮಾನ ಹುಟ್ಟದೇ ಇರದು.

ಗವಿಸಿದ್ದೇಶ್ವರ ಶ್ರೀಗಳೂ ಮೌನ

ಕಳೆದ ಫೆ.24 ರಂದು ನಡೆದ ಕೊಪ್ಪಳ ಬಂದ್‌ನಲ್ಲಿ ಭಾವುಕರಾಗಿ, ಜನಪರವಾಗಿ ಕೊಪ್ಪಳ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳಿಗೆ ತಾಕೀತು ಮಾಡಿದ್ದ ಶ್ರೀಗವಿಸಿದ್ದೇಶ್ವರ ಸ್ವಾಮೀಜಿ ನಂತರ ಈ ವಿಷಯದ ಬಗ್ಗೆ ಮೌನಕ್ಕೆ ಜಾರಿದ್ದಾರೆ. ಹೋರಾಟದಲ್ಲಿ ಭಾಗಿಯಾದ ಬಗ್ಗೆ ಪರ- ವಿರೋಧ ಚರ್ಚೆ ಆಗಿವೆ. ಇದರಿಂದ ಬೇಸರಿಸಿಕೊಂಡು ಶ್ರೀಗಳು ಮೌನ ವಹಿಸಿದ್ದಾರೆ ಎನ್ನಲಾಗಿದೆ. ಶ್ರೀಗಳು ಹೋರಾಟದ ನೇತೃತ್ವ ವಹಿಸಿಕೊಂಡರೆ ಮಾತ್ರ ಹೋರಾಟ ತಾರ್ಕಿಕ ಅಂತ್ಯ ಕಾಣಬಹುದು ಎನ್ನುತ್ತಾರೆ ಜನ.

ಕ್ಲೀನ್ ಬೌಲ್ಡ್

ಸಾಶಾಗೆ ಫಿದಾ ಆಗಿದ್ದ ಕ್ವಿಂಟನ್

ದೆಹಲಿ: ಅದು 2012, ಚಾಂಪಿಯನ್ಸ್ ಲೀಗ್ ಟ್ವೆಂಟಿ-20 ಪಂದ್ಯಗಳಲ್ಲಿ, ನಾಲ್ಕು ಭಾರತೀಯ ತಂಡಗಳು ಮತ್ತು ಎರಡು ದಕ್ಷಿಣ ಆಫ್ರಿಕಾ ತಂಡಗಳು ಭಾಗವಹಿಸಿದ್ದವು. ಆ ತಂಡಗಳಲ್ಲಿ ಕ್ವಿಂಟನ್‌ನ ಹೈವೆಲ್ಡ್ ಲಯನ್ಸ್ ಕೂಡ ಒಂದು. ಆ ಸ್ಪರ್ಧೆಯಲ್ಲಿ ಸಾಶಾ ಚಿಯರ್ ಲೀಡರ್ ಆಗಿದ್ದರು. ಕ್ವಿಂಟನ್ ನೇತೃತ್ವದ ಲಯನ್ಸ್ ತಂಡ ಮುಂಬೈ ಇಂಡಿಯನ್ಸ್ ವಿರುದ್ಧ ಗೆದ್ದಿತು. ಎಲ್ಲರೂ ಕ್ವಿಂಟನ್ ಅವರನ್ನು ಹೊಗಳಿದಾಗ, ಸಾಶಾ ಕೂಡ ಬಂದು ಕ್ವಿಂಟನ್ ಅವರನ್ನು ಪ್ರಶಂಸಿದ್ದರು. ಆಗಲೇ ಕ್ವಿಂಟನ್‌ಗೆ ಸಾಶಾ ಮೇಲೆ ಪ್ರೀತಿ ಚಿಗುರು ಹೊಡೆದಿತ್ತು. ಡಿಕಾಕ್ ಫೇಸ್‌ಬುಕ್‌ನಲ್ಲಿ ಸಶಾಳನ್ನು ಹುಡುಕಲು ಪ್ರಾರಂಭಿಸಿದರು. ಅಲ್ಲಿಂದ ಅವರ ಮಾತುಕತೆಗಳು ಆರಂಭವಾಗಿ, ಕ್ರಮೇಣ ಪ್ರೇಮಕಥೆ ಪ್ರಾರಂಭವಾಯಿತು. ಕೆಲ ತಿಂಗಳುಗಳ ನಂತರ, ಕ್ವಿಂಟನ್ ತಮ್ಮ ಪ್ರೀತಿಯನ್ನು ಹೇಳಿಕೊಳ್ಳುವ ಧೈರ್ಯ ಮಾಡಿದರು. ನಂತರ ಅವರು ಮದುವೆಯಾದರು. ಪ್ರಸ್ತುತ, ಡಿಕಾಕ್-ಸಾಶಾ ತಮ್ಮ ಮಗು ವಿನೊಂದಿಗೆ ಸಂತೋಷದ ದಾಂಪತ್ಯ ಜೀವನ ನಡೆಸುತ್ತಿದ್ದಾರೆ.

ಸ್ಕೋರ್ ಬೋರ್ಡ್

196/7 (20 ಓವರ್)

ರಾಯಲ್ ಚಾಲೆಂಜರ್ಸ್ ಬೆಂಗಳೂರು		ರನ್	ಎಸೆತ
ಸಾಲ್ಟ್	ಬೌಲರ್ ▸▸ ಅಹ್ಮದ್, ಸ್ಟಂಪ್ ▸▸ ಧೋನಿ	32	16
ಕೊಹ್ಲಿ	ಬೌಲರ್ ▸▸ ಅಹ್ಮದ್, ಕ್ಯಾಚ್ ▸▸ ರಚಿನ್	31	30
ಪಡಿಕ್ಕಲ್	ಬೌಲರ್ ▸▸ ಅಶ್ವಿನ್, ಕ್ಯಾಚ್ ▸▸ ಗಾಯಕ್ವಾಡ್	27	14
ಪಾಟಿದಾರ್	ಬೌಲರ್ ▸▸ ಪತಿರಾನ, ಕ್ಯಾಚ್ ▸▸ ಕರಾನ್	51	32
ಲಿವಿಂಗ್‌ಸ್ಟೋನ್	ಬೌಲರ್ ▸▸ ಅಹ್ಮದ್	10	9
ಶರ್ಮಾ	ಬೌಲರ್ ▸▸ ಅಹ್ಮದ್, ಕ್ಯಾಚ್ ▸▸ ಜಡೇಜಾ	12	6
ಡೇವಿಡ್	ನಾಟೌಟ್★	22	8
ಕೃನಾಲ್	ಬೌಲರ್: ಪತಿರನ, ಕ್ಯಾಚ್: ಹೂಡಾ	0	3
ಭುವನೇಶ್ವರ್	ನಾಟೌಟ್★	0	2

ಚೆನ್ನೈ	ಓವರ್	ರನ್	ವಿಕೆಟ್
ಅಹ್ಮದ್	4	28	1
ಅಶ್ವಿನ್	2	22	1
ಕರನ್	3	34	0
ಅಹ್ಮದ್	4	36	3
ಜಡೇಜಾ	3	37	0
ಪತಿರಣ	4	36	2

ಬೆಂಗಳೂರು	ಓವರ್	ರನ್	ವಿಕೆಟ್
ಭುವನೇಶ್ವರ್	3	20	1
ಹ್ಯಾಝುಲ್‌ವುಡ್	4	21	3
ದಯಾಳ್	3	18	2
ಲಿವಿಂಗ್‌ಸ್ಟೋನ್	4	28	2
ಶರ್ಮಾ	4	32	0
ಕೃನಾಲ್	2	26	0

146/8 (20 ಓವರ್)

ಚೆನ್ನೈ ಸೂಪರ್ ಕಿಂಗ್ಸ್		ರನ್	ಎಸೆತ
ರಚಿನ್	ಬೌಲರ್ ▸▸ ದಯಾಳ್	41	31
ತ್ರಿಪಾಠಿ	ಬೌಲರ್ ▸▸ ಹೇಜಲ್‌ವುಡ್, ಕ್ಯಾಚ್ ▸▸ ಸಾಲ್ಟ್	5	3
ಗಾಯಕ್ವಾಡ್	ಬೌಲರ್ ▸▸ ಹೇಜಲ್‌ವುಡ್, ಕ್ಯಾಚ್ ▸▸ ಭಂಡಗೆ	0	4
ಹೂಡಾ	ಬೌಲರ್ ▸▸ ಭುವನೇಶ್ವರ್, ಕ್ಯಾಚ್ ▸▸ ಶರ್ಮಾ	4	9
ಕರನ್	ಬೌಲರ್ ▸▸ ಬಿ ಲಿವಿಂಗ್‌ಸ್ಟೋನ್, ▸▸ ಕ್ಯಾಚ್: ಪಾಂಡ್ಯ	8	13
ದುಬೆ	ಬೌಲರ್ ▸▸ ದಯಾಳ್	19	15
ಜಡೇಜಾ	ಬೌಲರ್ ▸▸ ಹೇಜಲ್‌ವುಡ್, ಕ್ಯಾಚ್: ಸಾಲ್ಟ್	25	19
ಅಶ್ವಿನ್	ಬೌಲರ್ ▸▸ ಲಿವಿಂಗ್‌ಸ್ಟೋನ್, ಕ್ಯಾಚ್: ಸಾಲ್ಟ್	11	8
ಧೋನಿ	ನಾಟೌಟ್★	30	16
ಅಹ್ಮದ್	ನಾಟೌಟ್★	0	2

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	02	02	00	04
ಲಖನೌ	02	01	01	02
ಪಂಜಾಬ್	01	01	00	02
ಡೆಲ್ಲಿ	01	01	00	02
ಹೈದರಾಬಾದ್	02	01	01	02
ಕೋಲ್ಕತ್ತಾ	02	01	01	02
ಚೆನ್ನೈ	02	01	01	02
ಮುಂಬೈ	01	00	01	00
ಗುಜರಾತ್	01	00	01	00
ರಾಜಸ್ಥಾನ್	02	00	02	00

ಕೋಪ-ತಾಪ

ಟಿ.ವಿ ಒಡೆದ ನಿರೂಪಕ

ವಿಶಾಖಪಟ್ಟಣ: ಐಪಿಎಲ್ ಮೆಗಾ ಹರಾಜಿನಲ್ಲಿ 27 ಕೋಟಿ ರು.ಗಳ ಬೃಹತ್ ಮೊತ್ತಕ್ಕೆ ಲಕ್ನೋ ಸೂಪರ್ ಜೈಂಟ್ಸ್ ತಂಡಕ್ಕೆ ಮಾರಾಟವಾಗಿದ್ದ

ರಿಷಭ್ ಪಂತ್ ಆಡಿದ ಎರಡೂ ಪಂದ್ಯಗಳಲ್ಲಿಯೂ ಕಳಪೆ ಪ್ರದರ್ಶನ ತೋರಿದ್ದಾರೆ. ಅವರ ಈ ಪ್ರದರ್ಶನ ಕಂಡು ನಿರಾಶೆಗೊಂಡ ನಿರೂಪಕ ಸಿಟ್ಟಿನಿಂದ ಟೆಲಿವಿಷನ್ ಸೆಟ್ ಅನ್ನು ಒಡೆದು ಹಾಕಿದ ಘಟನೆಯೊಂದು ನಡೆದಿದೆ. ಗುರುವಾರ ನಡೆದ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಲಕ್ನೋ ಗೆಲುವು ಸಾಧಿಸಿದರೂ ಪಂತ್ ನಿರೀಕ್ಷಿತ ಬ್ಯಾಟಿಂಗ್ ನಡೆಸಿರಲಿಲ್ಲ. ಪಂದ್ಯದ ಬಳಿಕ ಹಿರಿಯ ಕ್ರೀಡಾ ಪತ್ರಕರ್ತ ವಿಕ್ರಾಂತ್ ಗುಪ್ತಾ ಮತ್ತು ಕೆಲ ಕ್ರಿಕೆಟ್ ತಜ್ಞರು ಚರ್ಚೆ ನಡೆಸುತ್ತಿದ್ದ ವೇಳೆ ಘಟನೆ ನಡೆದಿದೆ.

ಗೆದ್ದು ಬೀಗಿದ ಬೆಂಗಳೂರು

ಚೆನ್ನೈ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶುಕ್ರವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ 50 ರನ್ ಅಂತರದ ಭರ್ಜರಿ ಗೆಲುವು ದಾಖಲಿಸಿದ್ದು, ಆ ಮೂಲಕ ಚೆಪಾಕ್ ಮೈದಾನದಲ್ಲಿ 17 ವರ್ಷಗಳಲ್ಲಿ ಮೊದಲ ಗೆಲುವು ದಾಖಲಿಸಿದೆ. ನಾಯಕ ರಜತ್ ಪಾಟೀದಾರ್ ಮುಂದಾಳತ್ವದಲ್ಲಿ ಆರ್‌ಸಿಬಿ ಈ ಸಲದ ಟೂರ್ನಿಯಲ್ಲಿ ತನ್ನ ಪ್ರಾಬಲ್ಯ ಮೆರೆಯುತ್ತಿದ್ದು, ಟೂರ್ನಿಯಲ್ಲಿ ಸತತ ಎರಡನೇ ಗೆಲುವು ದಾಖಲಿಸಿದೆ.

ಮೊದಲು ಬ್ಯಾಟಿಂಗ್ ಆರ್‌ಸಿಬಿ ನಾಯಕ ಪಾಟೀದಾರ್ ಬಿರುಸಿನ ಅರ್ಧಶತಕದ (51) ನೆರವಿನಿಂದ 196 ರನ್‌ಗಳ ಸವಾಲಿನ ಮೊತ್ತ ಪೇರಿಸಿತು. ಫಿಲ್ ಸಾಲ್ಟ್ (31), ವಿರಾಟ್ ಕೊಹ್ಲಿ (31), ದೇವದತ್ತ ಪಡಿಕ್ಕಲ್ (27) ಹಾಗೂ ಟಿಮ್ ಡೇವಿಡ್ (22 ಅಜೇಯ) ಉಪಯುಕ್ತ ಇನಿಂಗ್ಸ್ ಕಟ್ಟಿದರು.

ಈ ಗುರಿ ಬೆನ್ನಟ್ಟಿದ ಚೆನ್ನೈ, 20 ಓವರ್‌ಗಳಲ್ಲಿ ಎಂಟು ವಿಕೆಟ್ ನಷ್ಟಕ್ಕೆ 146 ರನ್ ಗಳಿಸಲಷ್ಟೇ ಸಾಧ್ಯವಾಯಿತು. ರಚಿನ್ ರವೀಂದ್ರ ಗರಿಷ್ಠ 41 ರನ್ ಗಳಿಸಿದರು. ಮಹೇಂದ್ರ ಸಿಂಗ್ ಧೋನಿ 16 ಎಸೆತಗಳಲ್ಲಿ 30 ರನ್ ಗಳಿಸಿ ಔಟಾಗದೆ ಉಳಿದರು. ಆರ್‌ಸಿಬಿ ಪರ ಜೋಶ್ ಹ್ಯಾಝುಲ್‌ವುಡ್ ಮೂರು ಮತ್ತು ಯಶ್ ದಯಾಳ್ ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ ತಲಾ ಎರಡು ವಿಕೆಟ್ ಗಳಿಸಿದರು.

ಆರ್‌ಸಿಬಿ ನೆರವಿಗೆ ಬಂದ ಪಾಟೀದಾರ್: ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 20 ಓವರ್‌ಗಳಲ್ಲಿ ಏಳು ವಿಕೆಟ್ ನಷ್ಟಕ್ಕೆ 196 ರನ್ ಕಲೆ ಹಾಕಿತು.

ಫಿಲ್ ಸಾಲ್ಟ್ ಅವರ ಅಬ್ಬರ ಆರಂಭ ಮತ್ತು ನಾಯಕ ರಜತ್ ಪಾಟಿದಾರ್ ಅವರ ಉಪಯುಕ್ತ ಅರ್ಧಶತಕದ ನೆರವಿನಿಂದ (32 ಬಾಲ್, 51 ರನ್) ತಂಡವು ಆರಂಭದಲ್ಲಿ ಬೃಹತ್ ಮೊತ್ತದ ಭರವಸೆ ಮೂಡಿಸಿತ್ತು.

30 ಎಸೆತಗಳಲ್ಲಿ 31 ರನ್ ಕಲೆ ಹಾಕಿದ ಕೊಹ್ಲಿ, 14 ಎಸೆತಗಳಲ್ಲಿ 27 ರನ್ ಬಾರಿಸಿದ ದೇವದತ್ತ ಪಡಿಕಲ್, ಅಂತಿಮವಾಗಿ 8 ಎಸೆತಗಳಲ್ಲಿ ಮೂರು ಸಿಕ್ಸರ್‌ಗಳೊಂದಿಗೆ 22 ರನ್ ಬಾರಿಸಿದ ಟಿಮ್ ಡೇವಿಡ್ ಆರ್‌ಸಿಬಿ ತಂಡಕ್ಕೆ ಉತ್ತಮ ಮೊತ್ತ ಪೇರಿಸುವಲ್ಲಿ ನೆರವಾದರು. ಉಳಿದಂತೆ ಲಿಯಾಮ್ ಲಿವಿಂಗ್‌ಸ್ಟಾನ್ (10), ಜಿತೇಶ್ ಶರ್ಮಾ (12) ತಮ್ಮ ಕೊಡುಗೆ ನೀಡಿದರು.

ಚೆನ್ನೈ ಪರ ಸ್ಪಿನ್ನರ್ ನೂರ್ ಅಹ್ಮದ್ 36 ರನ್ ನೀಡಿ ಮೂರು ವಿಕೆಟ್ ಕಬಳಿಸಿದರು. ವೇಗಿ ಮತೀಶಾ ಪತಿರನ ಅವರು 36 ರನ್ ನೀಡಿ 2 ವಿಕೆಟ್ ಪಡೆದರು. ರವಿಚಂದ್ರನ್ ಅಶ್ವಿನ್ ಹಾಗೂ ಖಲೀಲ್ ಅಹ್ಮದ್ ತಲಾ ಒಂದು ವಿಕೆಟ್ ಪಡೆದು, ಭಾರೀ ಮೊತ್ತ ಪೇರಿಸುವ ಉಮೇದಿನಲ್ಲಿದ್ದ ಆರ್‌ಸಿಬಿಗೆ ತಡೆಯೊಡ್ಡಿದರು.





ಚೆಪಾಕ್‌ನಲ್ಲಿ ಆರ್‌ಸಿಬಿ ಚಮತ್ಕಾರ

ಕೊಹ್ಲಿ ಹೊಸ ದಾಖಲೆ

ಆರ್‌ಸಿಬಿ-ಚೆನ್ನೈ ನಡುವಿನ ಪಂದ್ಯದಲ್ಲಿ ಆರಂಭಿಕರಾಗಿ ಕಣಕ್ಕಿಳಿದ ವಿರಾಟ್ ಕೊಹ್ಲಿ 31 ರನ್ ಸಿಡಿಸಿದರು, ಈ ವೇಳೆ ಅವರು ಚೆನ್ನೈ ವಿರುದ್ಧ ವಿಶೇಷ ದಾಖಲೆಯೊಂದನ್ನು ಮಾಡಿದ್ದಾರೆ. ಪಂದ್ಯದಲ್ಲಿ ವಿರಾಟ್ ಕೊಹ್ಲಿ 5 ರನ್ ಗಳಿಸಿದ್ದ ವೇಳೆ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಅತೀ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ಖ್ಯಾತಿಗೆ ಪಾತ್ರರಾಗಿ, ಟೀಂ ಇಂಡಿಯಾದ ಮಾಜಿ ಆಟಗಾರ ಶಿಖರ್ ಧವನ್ ಅವರ ದಾಖಲೆ ಮುರಿದಿದ್ದಾರೆ.

ಇದಕ್ಕೂ ಮೊದಲು ಸಿಎಸ್‌ಕೆ ವಿರುದ್ಧ 1057 ರನ್ ಗಳಿಸಿದ್ದ ಶಿಖರ್ ಧವನ್ ಸಿಎಸ್‌ಕೆ ವಿರುದ್ಧ ಅತೀ ಹೆಚ್ಚು ರನ್ ಗಳಿಸಿದ್ದ ಆಟಗಾರ ಎಂಬ ಖ್ಯಾತಿ ಹೊಂದಿದ್ದರು. ಆದರೆ ಶುಕ್ರವಾರದ ಪಂದ್ಯದಲ್ಲಿ ಕೊಹ್ಲಿ 31 ರನ್ ಗಳಿಸುವ ಮೂಲಕ ಶಿಖರ್ ಧವನ್ ದಾಖಲೆ ಮುರಿದಿದ್ದಾರೆ.

ಪತಿರಾನ ಬೌನ್ಸರ್

ಚೆನ್ನೈ: ಶುಕ್ರವಾರದ ಪಂದ್ಯದಲ್ಲಿ ಸಿಎಸ್‌ಕೆ ಬೌಲರ್‌ಗಳು ಮತ್ತು ಆರ್‌ಸಿಬಿ ಬ್ಯಾಟ್ಸ್‌ಮನ್‌ಗಳ ನಡುವೆ ತೀವ್ರ ಪೈಪೋಟಿ ಕಂಡುಬಂದಿತು. ಚೆನ್ನೈ ಬೌಲರ್‌ಗಳು ವಿರಾಟ್ ಕೊಹ್ಲಿಯನ್ನು ವಿಶೇಷವಾಗಿ ಗುರಿಯಾಗಿಸಿಕೊಂಡಿದ್ದರು. ಹೀಗಾಗಿ ಕೊಹ್ಲಿಗೆ ಆರಂಭ ದಿಂದಲೂ ಮುಕ್ತವಾಗಿ ಬ್ಯಾಟಿಂಗ್ ಮಾಡಲು ಸಾಧ್ಯವಾಗಲಿಲ್ಲ. ಇದೇ ಒತ್ತಡದಲ್ಲಿದ್ದ ಕೊಹ್ಲಿಗೆ 11 ನೇ ಓವರ್‌ನ ಮೊದಲ ಎಸೆತದಲ್ಲಿ ಮತಿಶಾ ಪತಿರಾನ ಎಸೆದ ಬೌನ್ಸರ್ ಆಘಾತ ನೀಡಿತು. ಮುಂದಿನ ಎಸೆತದಲ್ಲಿ, ಅವರು ಬೌನ್ಸರ್ ಎಸೆಯುವ ಮೂಲಕ ಕೊಹ್ಲಿಯನ್ನು ಮತ್ತೊಮ್ಮೆ ಕೆಣಕಿದರು. ಆದರೆ ಈ ಬೌನ್ಸರ್‌ಗೆ ಸಿದ್ಧರಾಗಿದ್ದ ಕೊಹ್ಲಿ ಆ ಎಸೆತವನ್ನು ಬೌಂಡರಿಯ ಆಚೆಗೆ ಸಿಕ್ಸರ್‌ಗೆ ಕಳುಹಿಸಿದರು, ಇದಾದ ನಂತರ ಕೊಹ್ಲಿ ಮುಂದಿನ ಎಸೆತವನ್ನು ಬೌಂಡರಿ ಬಾರಿಸಿ ಪತಿರಾನಗೆ ಪ್ರತ್ಯುತ್ತರ ನೀಡಿದರು.

ಇಂದಿನ ಪಂದ್ಯ

7.30 PM

ಗುಜರಾತ್ ಟೈಟಾನ್ಸ್ VS ಮುಂಬೈ ಇಂಡಿಯನ್ಸ್

ನರೇಂದ್ರ ಮೋದಿ ಕ್ರೀಡಾಂಗಣ ಗುಜರಾತ್

ಪಡಿಕ್ಕಲ್ ಬ್ಯಾಟಿಂಗ್‌ಗೆ ಮೆಚ್ಚುಗೆ

ಚೆನ್ನೈ: ಶುಕ್ರವಾರದ ಪಂದ್ಯದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಯುವ ಬ್ಯಾಟ್ಸ್‌ಮನ್ ದೇವದತ್ ಪಡಿಕ್ಕಲ್ ಅವರನ್ನು ಅಭಿಮಾನಿಗಳು ಮುಕ್ತ ಕಂಠದಿಂದ ಗುಣಗಾನ ಮಾಡಿದ್ದಾರೆ. ಕಳೆದ ಎರಡು ಆವೃತ್ತಿಗಳಲ್ಲಿ ಸತತ ವೈಫಲ್ಯ ಅನುಭವಿಸಿದ ಹೊರತಾಗಿಯೂ ಈ ಬಾರಿ ಟೂರ್ನಿಯಲ್ಲಿ ದೇವದತ್ ಪಡಿಕ್ಕಲ್ ತಮ್ಮ ಬ್ಯಾಟಿಂಗ್‌ನಲ್ಲಿ ತುಂಬಾ ಸುಧಾರಣೆಯನ್ನು ಕಂಡಿದ್ದಾರೆಂದು ಹೊಗಳಿದ್ದಾರೆ.

3ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ದೇವದತ್ ಪಡಿಕ್ಕಲ್ ತಮ್ಮ ಬ್ಯಾಟಿಂಗ್‌ನಲ್ಲಿ ವಿಭಿನ್ನವಾಗಿ ಕಂಡರು. 27 ರನ್ ಗಳಿಸಿ ವಿಕೆಟ್ ಒಪ್ಪಿಸಿದರೂ ದೇವದತ್ ಪಡಿಕ್ಕಲ್ ಅವರು 192.86ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳನ್ನು ಸಿಡಿಸಿದ್ದರು. ಈ ಹಿಂದೆ ಆರ್‌ಸಿಬಿ ಪರ ಆಡುವಾಗ ದೇವದತ್ ಪಡಿಕ್ಕಲ್ ಕಡಿಮೆ ಸ್ಟ್ರೈಕ್ ರೇಟ್ ಬಗ್ಗೆ ಸಾಕಷ್ಟು ಟೀಕೆಗಳಿಗೆ ಗುರಿಯಾಗಿದ್ದರು. ಇದೇ ಕಾರಣದಿಂದ ಅವರನ್ನು ಆರ್‌ಸಿಬಿ ತಂಡ 2022ರ ಐಪಿಎಲ್ ಟೂರ್ನಿಯ ಆಟಗಾರರ ಮೆಗಾ ಹರಾಜಿನಲ್ಲಿ ಖರೀದಿಸಿರಲಿಲ್ಲ, ನಂತರ ರಾಜಸ್ಥಾನ್ ರಾಯಲ್ಸ್ ಹಾಗೂ ಲಖನೌ ಸೂಪರ್ ಜಯಂಟ್ಸ್ ತಂಡಗಳ ಪರ ಆಡಿದ್ದ ದೇವದತ್ ಪಡಿಕ್ಕಲ್, ಈ ಬಾರಿ ಆರ್‌ಸಿಬಿ ಪರ ಆಡಿದ ಎರಡೂ ಪಂದ್ಯಗಳಲ್ಲಿ ಉತ್ತಮ ಸ್ಟ್ರೈಕ್ ರೇಟ್‌ನಲ್ಲಿ ರನ್ ಗಳಿಸಿದ್ದಾರೆ, ಈ ಹಿನ್ನೆಲೆಯಲ್ಲಿ ಅಭಿಮಾನಿಗಳು ದೇವದತ್ ಪಡಿಕ್ಕಲ್ ಅವರನ್ನು ಗುಣಗಾಣ ಮಾಡಿದ್ದಾರೆ.

ಧೋನಿ ಅದ್ಭುತ ಸ್ಟಂಪಿಂಗ್

ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಸೂರ್ಯ ಕುಮಾರ್ ಯಾದವ್ ಅವರನ್ನು 0.12 ಸೆಕೆಂಡ್‌ನಲ್ಲಿ ಅದ್ಭುತ ವಾಗಿ ಸ್ಟಂಪ್ ಮಾಡಿದ್ದ ಧೋನಿ, ಶುಕ್ರವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧವೂ ತಮ್ಮ ಪ್ರತಿಭೆ ಮೆರೆದಿದ್ದಾರೆ. ಆರ್‌ಸಿಬಿ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಅವರನ್ನು ಧೋನಿ ಅದ್ಭುತ ರೀತಿಯಲ್ಲಿ ಸ್ಟಂಪ್ ಮಾಡಿದರು. 5ನೇ ಓವರ್‌ನ ಕೊನೆಯ ಎಸೆತದಲ್ಲಿ ಚೆನ್ನೈ ಕೀಪರ್ ಧೋನಿಯಿಂದಾಗಿ ಸಾಲ್ಟ್‌ರ ವಿಕೆಟ್ ಪತನವಾಯಿತು.

ಏ.8ಕ್ಕೆ ಪಂದ್ಯ ಮುಂದೂಡಿಕೆ

ದೆಹಲಿ: ಐಪಿಎಲ್ 2025ರ ವೇಳಾಪಟ್ಟಿಯಲ್ಲಿ ಹಠಾತ್ ಬದಲಾ ವಣೆಯಾಗಿದೆ. ಹಲವು ದಿನಗಳಿಂದ ಕೇಳಿಬರುತ್ತಿದ್ದ ವದಂತಿ ಇದೀಗ ನಿಜವಾಗಿದ್ದು, ಎರಡು ಬಲಿಷ್ಠ ತಂಡಗಳ ನಡುವಿನ ಹೈವೋಲ್ಟೇಜ್ ಪಂದ್ಯದ ದಿನಾಂಕವನ್ನು ಬದಲಾಯಿಸಿರುವುದಾಗಿ ಬಿಸಿಸಿಐ ಅಧಿಕೃತ ಮಾಹಿತಿ ನೀಡಿದೆ. ವಾಸ್ತವವಾಗಿ ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ನಡುವಿನ ಪಂದ್ಯದ ವೇಳಾಪಟ್ಟಿಯಲ್ಲಿ ದಿನಾಂಕವನ್ನು ಬದಲಾಯಿಸಲಾ ಗಿದೆ. ಪೂರ್ವ ನಿಗದಿಯಂತೆ, ಏಪ್ರಿಲ್ 6ರಂದು ನಡೆಯಬೇಕಿದ್ದ ಪಂದ್ಯವನ್ನು ಏಪ್ರಿಲ್ 8ರಂದು ನಡೆಸುವುದಾಗಿ ಬಿಸಿಸಿಐ ತಿಳಿಸಿದೆ. ಅಂದರೆ ಪಂದ್ಯದ ದಿನಾಂಕವನ್ನು ಬದಲಾಯಿಸಲಾಗಿದೆ ಯಾದರೂ ಸ್ಥಳದಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಪಂದ್ಯದ ದಿನಾಂಕದಲ್ಲಿ ಬದಲಾವಣೆ: ಆ ಪಂದ್ಯ ಏಪ್ರಿಲ್ 6ರಂದು ಕೋಲ್ಕತ್ತಾದ ತವರು ಮೈದಾನ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಬೇಕಿತ್ತು. ಆದರೆ ಏ.6ರಂದು ರಾಮನವಮಿ ಹಬ್ಬದ ಹಿನ್ನೆಲೆಯಲ್ಲಿ, ಈ ಪಂದ್ಯದ ವೇಳಾಪಟಿ ಬದಲಾಯಿಸುವಂತೆ ಕೋಲ್ಕತ್ತಾ ಪೊಲೀಸರು ಬಿಸಿಸಿಐಗೆ ಕೇಳಿ ಕೊಂಡಿದ್ದರು.

ಇತರೆ ಸುದ್ದಿ

ಬಿಸಿಸಿಐ ಸಭೆ: ರೋಹಿತ್, ಕೊಹ್ಲಿ ಟೆಸ್ಟ್ ಭವಿಷ್ಯ ನಿರ್ಧಾರ

ದೆಹಲಿ: ಶನಿವಾರ ನಡೆಯುವ ಬಿಸಿಸಿಐ ಸಭೆಯಲ್ಲಿ ಕೆಲ ಪ್ರಮುಖ ವಿಚಾರಗಳ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆ ಇದೆ. ಸಭೆಯಲ್ಲಿ ಮುಖ್ಯವಾಗಿ ವಾರ್ಷಿಕ ಗುತ್ತಿಗೆ ಪಟ್ಟಿ, ರೋಹಿತ್ ಮತ್ತು ವಿರಾಟ್ ಟೆಸ್ಟ್ ಭವಿಷ್ಯದ ಬಗ್ಗೆ ಪ್ರಮುಖ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ. ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ, ಆಯ್ಕೆಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್, ತಂಡದ ಮುಖ್ಯ ತರಬೇತುದಾರ



ಗೌತಮ್ ಗಂಭೀರ್ ಸಭೆಯಲ್ಲಿ ಸೇರಲಿದ್ದಾರೆ ಎಂದು ಮೂಲಗಳು ಹೇಳಿವೆ.

ರೋಹಿತ್ ಶರ್ಮಾ ಟೆಸ್ಟ್ ತಂಡದ ನಾಯಕರಾಗಿ ಮುಂದುವರಿಸುವ ಬಗ್ಗೆ ಬಿಸಿಸಿಐ ಅಧಿಕಾರಿಗೆ ಒಲವಿಲ್ಲ ಎನ್ನಲಾಗಿದೆ. ಈ ವರದಿಗಳ ಬೆನ್ನಲ್ಲೇ ರೋಹಿತ್ ಇಂಗ್ಲೆಂಡ್ ಸರಣಿಯಿಂದ ಹೊರಗುಳಿಯಲಿದ್ದಾರೆ ಎಂಬ ಮಾತುಗಳು ಕೂಡ ಕೇಳಿಬಂದಿದೆ. ಒಂದೊಮ್ಮೆ ರೋಹಿತ್ ಟೆಸ್ಟ್ ಆಡದಿರಲು ನಿರ್ಧರಿಸಿದರೆ, ಶುಭಮನ್ ಗಿಲ್ ಟೆಸ್ಟ್ ತಂಡದ ನಾಯಕನಾಗುವ ಸಾಧ್ಯತೆ ಇದೆ. ಅನುಭವಿ ಜಸ್‌ಪ್ರೀತ್ ಬುಮ್ರಾ ಇದ್ದರೂ ಕೂಡ ಅವರು ಆಗಾಗ ಬೆನ್ನುನೋವಿಗೆ ಸಿಲುಕುತ್ತಿರುವುದು ಬಿಸಿಸಿಐಗೆ ಚಿಂತೆಗೀಡು ಮಾಡಿದೆ. ಜಡೇಜಾ ಮತ್ತು ಕೊಹ್ಲಿ ಟೆಸ್ಟ್ ಭವಿಷ್ಯ ಕೂಡ ನಿರ್ಧಾರವಾಗುವ ಸಾಧ್ಯತೆ ಇದೆ.

ಶ್ರೇಯಸ್ ಅಯ್ಯರ್ ಅವರನ್ನು ಮತ್ತೆ ಬಿಸಿಸಿಐ ವಾರ್ಷಿಕ ಗುತ್ತಿಗೆ ಪಟ್ಟಿಗೆ ಸೇರ್ಪಡೆಗೊಳಿಸುವ ಸಾಧ್ಯತೆ ಇದೆ. ಕಳೆದ ವರ್ಷ ಗುತ್ತಿಗೆ ಪಟ್ಟಿಯಿಂದ ಶ್ರೇಯಸ್ ಹೊರಬಿದ್ದಿದ್ದರು. ಆದರೆ ಚಾಂಪಿಯನ್ಸ್ ಟ್ರೋಫಿ ಯಲ್ಲಿ ಶ್ರೇಯಸ್ ಭಾರತದ ಪರ ಗರಿಷ್ಠ ರನ್ ಬಾರಿಸಿ ದ್ದರು. ಹೀಗಾಗಿ ಅವರನ್ನು ಮತ್ತೆ ಗುತ್ತಿಗೆ ಪಟ್ಟಿಗೆ ಸೇರಿಸಲು ಬಿಸಿಸಿಐ ಚಿಂತನೆ ನಡೆಸುತ್ತಿದೆ ಎಂದು ತಿಳಿದು ಬಂದಿದೆ. ದೇಶೀಯ ಕ್ರಿಕೆಟ್ ಆಡದ ಹಿನ್ನೆಲೆಯಲ್ಲಿ ಈ ಬಾರಿಯೂ ಇಶಾನ್ ಕಿಶನ್ ಬಿಸಿಸಿಐ ಗುತ್ತಿಗೆ ಕಳೆದು ಕೊಳ್ಳಲಿದ್ದಾರೆ ಎನ್ನಲಾಗಿದೆ.

ಇದೇ ವೇಳೆ ಅಂತಾರಾಷ್ಟ್ರೀಯ ಟಿ20ಗೆ ನಿವೃತ್ತಿ ಘೋಷಿಸಿದ ಹೊರತಾಗಿಯೂ ರೋಹಿತ್, ಕೊಹ್ಲಿ, ಜಡೇಜಾರನ್ನು ಎ+ ದರ್ಜೆಯಲ್ಲೇ ಮುಂದುವರಿಸಲು ಸಾಧ್ಯತೆಯಿದೆ. ಅಕ್ಷರ್ ಪಟೇಲ್‌ಗೆ ಭಡ್ತಿ ಸಿಗಲಿದ್ದು, ನಿತೀಶ್ ರೆಡ್ಡಿ, ವರುಣ್ ಚಕ್ರವರ್ತಿ ಹಾಗೂ ಅಭಿಷೇಕ್ ಶರ್ಮಾ ಮೊದಲ ಬಾರಿ ಗುತ್ತಿಗೆ ಪಟ್ಟಿ ಸೇರಲಿದ್ದಾರೆ ಎನ್ನಲಾಗುತ್ತಿದೆ. ಬಿಸಿಸಿಐ ಗುತ್ತಿಗೆ ಪಟ್ಟಿಯನ್ನು ಎ+, ಎ, ಬಿ, ಸಿ ಎಂದು ವಿಂಗಡಿಸಲಾಗುತ್ತದೆ. ಪಟ್ಟಿಯಲ್ಲಿದ್ದವರಿಗೆ ಕ್ರಮವಾಗಿ 7 ಕೋಟಿ, 5 ಕೋಟಿ, 3 ಕೋಟಿ ಹಾಗೂ 1 ಕೋಟಿ ವಾರ್ಷಿಕ ಸಂಭಾವನೆ ಲಭಿಸುತ್ತದೆ.

ಅಹಮದಾಬಾದ್‌ನಲ್ಲಿ ಇಂದು ಗುಜರಾತ್-ಮುಂಬೈ ಪಂದ್ಯ
ಎರಡೂ ತಂಡಗಳಿಗೂ ಅಂಕಪಟ್ಟಿ ಖಾತೆ ತೆರೆಯಲು ತವಕ

ಗಿಲ್‌ಗೆ ಪಾಂಡ್ಯ ಸವಾಲು

ಅಹಮದಾಬಾದ್: ಇಲ್ಲಿನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಅತಿಥೇಯ ಗುಜರಾತ್ ಟೈಟನ್ಸ್ ತಂಡವು ಶನಿವಾರ ನಡೆಯಲಿರುವ ಐಪಿಎಲ್ ಪಂದ್ಯಾವಳಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದೆ. ಈಗಾಗಲೇ ಟೂರ್ನಿಯಲ್ಲಿ ಈ ಎರಡೂ ತಂಡಗಳು ತಲಾ ಒಂದು ಪಂದ್ಯವನ್ನಾಡಿದ್ದು ಅಂಕ ಪಟ್ಟಿಯಲ್ಲಿ ಇನ್ನೂ ಖಾತೆ ತೆರೆಯುವಲ್ಲಿ ವಿಫಲವಾಗಿವೆ.

ಮಾರ್ಚ್ 25ರಂದು ಇದೇ ಮೈದಾನದಲ್ಲಿ ಗುಜರಾತ್ ತಂಡವು ಪಂಜಾಬ್ ತಂಡವನ್ನು ಎದುರಿಸಿತ್ತು. ಪಂಜಾಬ್ ತಂಡದ 243 ರನ್‌ಗಳ ಗುರಿ ಪಡೆದಿದ್ದ ಗುಜರಾತ್ ತಂಡವು 232 ರನ್‌ಗಳನ್ನಷ್ಟೇ ಗಳಿಸಲಷ್ಟೇ ಶಕ್ತವಾಗಿ 11 ರನ್‌ಗಳ ಸೋಲನ್ನೊಪ್ಪಿಕೊಂಡಿತ್ತು. ಆ ಪಂದ್ಯದಲ್ಲಿ ಗುಜರಾತ್ ತಂಡದ ಪರ ಸಾಯಿ ಸುದರ್ಶನ್ 31 ಬಾಲ್‌ಗಳಲ್ಲಿ 74 ರನ್ ಗಳಿಸಿದ್ದರೆ, ಜೋಸ್ ಬಟ್ಲರ್ 33 ಬಾಲ್‌ಗಳಲ್ಲಿ 54 ರನ್ ಹಾಗೂ ರುಥರ್‌ಫೋರ್ಡ್ 28 ಬಾಲ್‌ಗಳಲ್ಲಿ 46 ರನ್ ಕಲೆ ಹಾಕಿದ್ದರು. ಮುಂಬೈ ಎದುರಿನ ಆ ಪಂದ್ಯದಲ್ಲಿ ಸಾಯಿ ಕಿಶೋರ್ 3 ವಿಕೆಟ್‌ಗಳನ್ನು ಮತ್ತು ಕಗಿಸೊ ರಬಡ ಹಾಗೂ ರಶೀದ್ ಖಾನ್ ತಲಾ ಒಂದು ವಿಕೆಟ್ ಪಡೆದಿದ್ದರು. ಆದರೆ ಆ ಪಂದ್ಯದಲ್ಲಿ ನಾಯಕ ಶುಭ್‌ನಮ್ ಗಿಲ್, ಗ್ಲೆನ್ ಫಿಲಿಫ್ಸ್ ನಿರೀಕ್ಷಿತ ನಿರ್ವಹಣೆ ತೋರುವಲ್ಲಿ ವಿಫಲರಾಗಿದ್ದರು.

ಬೌಲರ್‌ಗಳೂ ಅಂದು ಕಳಪೆ ಪ್ರದರ್ಶನ ತೋರಿದ ಕಾರಣ, ತಂಡವು ಪಂಜಾಬ್ ಎದುರಿಗೆ ಮಣಿಯ ಬೇಕಾಯಿತು. ಆದರೆ ತವರಿನಲ್ಲೇ ನಡೆಯುವ ಈ ಪಂದ್ಯದಲ್ಲಿ ಗುಜರಾತ್ ತಂಡವು ಸರ್ವಾಂಗೀಣ ಪ್ರದರ್ಶನವನ್ನು ತೋರಿ ಅಂಕ ಪಟ್ಟಿಯಲ್ಲಿ ಖಾತೆ ತೆರೆಯಬೇಕಿದೆ.

ಚೆನ್ನೈ ವಿರುದ್ಧ ಸೋತಿರುವ ಮುಂಬೈ ತಂಡವು ಈ ಎರಡನೇ ಪಂದ್ಯದಲ್ಲಿ ಹೇಗಾದರೂ ಗುಜರಾತ್ ತಂಡವನ್ನು ಸೋಲಿಸಿ ಅಂಕಪಟ್ಟಿಯಲ್ಲಿ ಖಾತೆ ತೆರೆಯಬೇಕೆಂಬ ನಿರೀಕ್ಷೆಯಲ್ಲಿದೆ. ಚೆನ್ನೈ ವಿರುದ್ಧದ ಪಂದ್ಯದಲ್ಲಿ ಮುಂಬೈ ತಂಡದ ಪರವಾಗಿ ತಿಲಕ್ ವರ್ಮಾ 25 ಬಾಲ್‌ಗಳಲ್ಲಿ 31 ರನ್, ಸೂರ್ಯ ಕುಮಾರ್ ಯಾದವ್ 26 ಬಾಲ್‌ಗಳಲ್ಲಿ 29 ರನ್ ಮತ್ತು ದೀಪಕ್ ಚಾಹರ್ 15 ಬಾಲ್‌ಗಳಲ್ಲಿ 28 ರನ್ ಗಳಿಸಿದ್ದರು. ಮುಂಬೈ ತಂಡದ ಬೌಲರ್‌ಗಳ ಪೈಕಿ ಕೇರಳ ಮೂಲದ ವಿಘ್ನೇಶ್ ಪುತ್ತೂರ್ 32 ರನ್ ನೀಡಿ 3 ವಿಕೆಟ್ ಪಡೆದು ಕ್ರಿಕೆಟ್‌ಪ್ರೇಮಿಗಳನ್ನು ನಿಬ್ಬೆರಗಾಗಿಸಿದ್ದರು. ಉಳಿದಂತೆ ದೀಪಕ್ ಚಾಹರ್, ವಿಲ್ ಜಾಕ್ಸ್ ಆ ಪಂದ್ಯದಲ್ಲಿ ತಲಾ ಒಂದು ವಿಕೆಟ್ ಪಡೆದಿದ್ದರು. ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯಗೆ ಒಂದು ಪಂದ್ಯದ ನಿಷೇಧ ಇದ್ದ ಕಾರಣಕ್ಕಾಗಿ ಚೆನ್ನೈ ವಿರುದ್ಧ ಆಡಲು ಸಾಧ್ಯವಾಗಿರಲಿಲ್ಲ. ಆದರೆ ಇದೀಗ ಗುಜರಾತ್ ವಿರುದ್ಧದ ಪಂದ್ಯಕ್ಕೆ ಪಾಂಡ್ಯ ನಾಯಕತ್ವವನ್ನು ವಹಿಸಿಕೊಳ್ಳಲಿದ್ದಾರೆ. ತಂಡ ದಲ್ಲಿರುವ ರೋಹಿತ್ ಶರ್ಮಾ, ಬೆವನ್ ಜೇಕಬ್ಸ್, ರ್‍ಯಾನ್ ರಿಕೆಲ್ಟನ್ ಮುಂತಾದವರು ಬ್ಯಾಟಿಂಗ್‌ನಲ್ಲಿ ಮುಂಬೈ ಪರ ಉತ್ತಮ ಪ್ರದರ್ಶನ ನೀಡಬೇಕಾಗುತ್ತದೆ.

ಅತಿಥೇಯ ತಂಡವಾದ ಗುಜರಾತ್ ತನ್ನ ಅಭಿಮಾನಿಗಳಿಗೆ ಮತ್ತೆ ನಿರಾಸೆಗೊಳಿಸಲು ಸಿದ್ಧವಿಲ್ಲದ ಕಾರಣ ಮುಂಬೈ ವಿರುದ್ಧದ ಗುಜರಾತ್ ಪಂದ್ಯ ತೀವ್ರ ಹಣಾಹಣಿಯಿಂದ ಕೂಡಿರಲಿದೆ ಎಂಬುದರಲ್ಲಿ ಸಂದೇಹವಿಲ್ಲ.

ಗುಜರಾತ್

- ಶುಭ್‌ಮನ್ ಗಿಲ್ ▸▸ ನಾಯಕ
- ಜೋಸ್ ಬಟ್ಲರ್
- ಎಸ್.ರುಥರ್‌ಫೋರ್ಡ್
- ಗ್ಲೆನ್ ಫಿಲಿಫ್ಸ್
- ಹರ್ಷದ್ ಖಾನ್
- ವಾಷಿಂಗ್ಟನ್ ಸುಂದರ್
- ಜಯಂತ್ ಯಾದವ್
- ಕಗಿಸೋ ರಬಡಾ
- ಮೊಹಮ್ಮದ್ ಸಿರಾಜ್
- ಪ್ರಸಿದ್ಧ ಕೃಷ್ಣ
- ರಶೀದ್ ಖಾನ್
- ಶಾರೂಕ್ ಖಾನ್
- ಸಾಯಿ ಕಿಶೋರ್
- ನಿಶಾಂತ್ ಎಸ್.



ಮುಂಬೈ

- ಹಾರ್ದಿಕ್ ಪಾಂಡ್ಯ ▸▸ ನಾಯಕ
- ರೋಹಿತ್ ಶರ್ಮಾ
- ಸೂರ್ಯಕುಮಾರ್ ಯಾದವ್
- ರ್‍ಯಾನ್ ರಿಕೆಲ್ಟನ್
- ಶ್ರೀಜಿತ್ ಕೃಷ್ಣ
- ತಿಲಕ್ ವರ್ಮಾ
- ನಮನ್ ಧೀರ್
- ವಿಲ್ ಜಾಕ್ಸ್
- ವಿಘ್ನೇಶ್ ಪುತ್ತೂರ್
- ಕರ್ಣ್ ಶರ್ಮಾ
- ದೀಪಕ್ ಚಹಾರ್
- ಅಶ್ವನಿ ಕುಮಾರ್
- ಅರ್ಜುನ್ ತೆಂಡೂಲ್ಕರ್
- ಜಸ್ಪ್ರಿತ್ ಬೂಮ್ರಾ